ಕಸ್ತೂರಿ

ಜೂನ್, ೧೯೭೬



ಕಪ್ಪು ಕಪ್ಪಿಗೂ 100% ಶುದ್ಧವಾದ ಕಾಫಿ ನೀಡುವ ಇನ್‌ಸ್ಟೆಂಟ್ ಕಾಫಿ ಇದೊಂದೇ

ಇದು



ಏತಕ್ಕೆಂದರೆ ನೆಸ್‌ಕಾಫೆ-
ಇದೊಂದೇ 100%
ಶುದ್ಧವಾದ ಇನ್‌ಸ್ಟೆಂಟ್ ಕಾಫಿ.
ಒಳ್ಳೇ ದಕ್ಷಿಣ ಭಾರತದ ಕಾಫಿ
ಬೀಜಗಳಿಂದ ತಯಾರಿಸಿದ್ದು.
ಸಂತೃಪ್ತಿಕರವಾದ ಪರಿಮಳ
ಮತ್ತು ರುಚಿಯನ್ನು ಕೊಡುವ
ಶುದ್ಧ ಕಾಫಿ ನೆಸ್‌ಕಾಫೆ
ಸೇವಿಸಿರಿ.

ಪ್ರಪಂಚದಲ್ಲೆಲ್ಲಾ
ಇದೊಂದೇ ಹೆಚ್ಚು
ಮಾರಾಟವಾಗುವ
ಇನ್‌ಸ್ಟೆಂಟ್ ಕಾಫಿ.

ನೆಸ್‌ಕಾಫೆ

—100% ಶುದ್ಧವಾದ ಕಾಫಿಯಿಂದ ತಯಾರಿಸಿದ

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು :
ತಾದ್ರಿ ಶಾಮಣ್ಣ

ಸಂಪಾದಕರು :
ಪ. ಅ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :
ಬ್ಯಾಂಕಾಕಿನ ನಿದ್ರಿಸುವ
ಬುದ್ಧನ ಮಂದಿರ
ಕಲೆ : ಡಾ. ವಾಮನ ಆಕಾಶವಾಣಿ

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	"	ರೂ. ೨೫-೦೦
೧ ವರ್ಷ	"	ರೂ. ೧೪-೦೦
ಅರ್ಧ ವರ್ಷ	"	ರೂ. ೭-೫೦

KASTURI June 1976

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗುಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖನಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೇಕಾಗುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಬೇಕು. 'ಇದುವೆ ಜೀವ' ಎಂಬ ಬಗೆಯ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ನಡೆಸಲು ಸಾಧ್ಯವಿಲ್ಲ. ಲೇಖನ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಅಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಚೇರಿಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ

ಈ ಸಂಚಿಕೆಯಲ್ಲಿ

ಸಹಚಿಂತನ

ವಸಂತ ಸಂಚಿಕೆ

ಸುಮಾರು ೧೫ ವರ್ಷಗಳಿಂದ 'ಕಸ್ತೂರಿ'ಯ ವಾಚಕನಾಗಿದ್ದೇನೆ. ನನ್ನ ನೆಚ್ಚಿನ ಈ ಮಾಸಪತ್ರಿಕೆಯಲ್ಲಿ ಪ್ರತಿ ತಿಂಗಳೂ ಹೊಸತು, ಹೊಸತು. ಮೇ ತಿಂಗಳಿನ 'ವಸಂತ ಸಂಚಿಕೆ'ಯಂತೂ ನವನವೀನ, ಅನರ್ಘ್ಯ ಸಂಗ್ರಹಾರ್ಹ. ಅಂತೇ ಈ ಬಾರಿಯೂ ಮೇ ಸಂಚಿಕೆಯನ್ನು ಅದೇ ರೀತಿಯ ಕುತೂಹಲದಿಂದ ನಿರೀಕ್ಷಿಸಿದೆ. ಅದು ನಿರೀಕ್ಷೆಯ ಮಟ್ಟದಲ್ಲಿಲ್ಲ.

ಈ ಸಂಚಿಕೆಯ 'ಒಳ್ಳೆಯವ' ಕಥೆ ನನಗೆ ತುಂಬ ಹಿಡಿಸಿತು.

'ಕಸ್ತೂರಿ'ಯು ತನ್ನ ಮಟ್ಟವನ್ನು ಉಳಿಸಿಕೊಂಡು ಕನ್ನಡ ಜನತೆಯ 'ಆಶಾ' ಪತ್ರಿಕೆಯಾಗಿ– 'ಕಸ ತೂರಿ' ರಸ ಹೀರಿ ಪರಿಮಳಿಸಲಿ.

ಮಂಡಕೋಲು –ಶ್ರೀಮುಗು

[ಕೆಲವು ವರ್ಷಗಳಿಂದ ವಸಂತ ಸಂಚಿಕೆಗಳನ್ನು ಪ್ರಕಟಿಸುತ್ತ ಬಂದಿದ್ದ 'ಕಸ್ತೂರಿ'ಗೆ ಕಳೆದ ಎರಡು ವರ್ಷ ಆ ಪರಿಪಾಠವನ್ನು ಮುಂದುವರಿಸಿಕೊಂಡು ಬರಲು ಸಾಧ್ಯವಾಗಲಿಲ್ಲ. ಇದರಿಂದಾಗಿ ನಿಮಗಾದ ನಿರಾಶೆಯಲ್ಲಿ ನಮ್ಮ ಪಾಲೂ ಇದೆ. ಸಂ.]

ಶಿವರುದ್ರಪ್ಪನವರು

'ಶಿವರುದ್ರಪ್ಪನವರ ವಿಚಾರಗಳು' ಎಂಬ ಸಂದರ್ಶನ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಮೇ ಸಂಚಿಕೆಯಲ್ಲಿ ಬರೆದ ಶ್ರೀ ಶಂಕರ ಮೊಕಾಶಿ ಪುಣೇಕರ ಅವರ ಪತ್ರವು ಒಕ್ಕೂಟಕ್ಕೆ ಇರುವ ವಿರೋಧ ಹೇಗೆ ತಿರಸ್ಕಾರಕ್ಕೆ ಯೋಗ್ಯ ಎಂಬುದಕ್ಕೆ ಮತ್ತೊಂದು ಸಾಕ್ಷಿಯಾಗಿದೆ. ಶ್ರೀ ಪುಣೇಕರರು ತಮ್ಮ ಎಂದಿನ ಕುಯುಕ್ತಿ ಭಾಷೆಯಲ್ಲಿ ನಿಗುರಿದ ತಮ್ಮ ಹೆಡೆಯನ್ನು ಸಿಟ್ಟಿನಿಂದ ಬಂಡೆಗೆ ಝಾಡಿಸಿ ಝಾಡಿಸಿ ಬೆವರಿದ್ದಾರೆ. ಹೊಸದಾಗಿ ವಿಕಾಸವಾದುದೆಲ್ಲಾ ತಮ್ಮ ವಿರುದ್ಧವೇ ಎಂದು ಗುಪ್ತಭಯ ಪಡುವ ಪಾಪ ಪ್ರಜ್ಞಾ ಪೀಡಿತರಂತೆ ಶ್ರೀ ಪುಣೇಕರರು ಡಾ. ಶಿವರುದ್ರಪ್ಪನವರ ಮೇಲೆ ತಮ್ಮ ನಂಜು ಕಾರಿದ್ದಾರೆ. ಎಲ್ಲಾ ಹೊಸ ಸಂಘಟನೆಗಳೊಳಕ್ಕೂ ಸೇರಿಬಿಡುವಂತೆ ಒಕ್ಕೂಟದೊಳಕ್ಕೂ ಕೆಲವು ಸ್ವಾರ್ಥಿಗಳು ಸೇರಿರಬಹುದು. ಆ ಒಂದು ಕಾರಣದಿಂದಲೇ ಸಂಘಟನೆಯನ್ನು ಅಲ್ಲಗಳೆಯುವವರು ಊಳಿಗ ಮಾನ್ಯತೆಯನ್ನು ಉಳಿಸಿಕೊಳ್ಳಲು ಹೆಣಗಾಡುವವರು ಮಾತ್ರ. ಒಕ್ಕೂಟ ಯಾವ ಯಾವ ಗಟ್ಟಿ ಕೆಲಸ ಮಾಡಿದೆ ಎಂಬುದು ನನಗೆ ಗೊತ್ತಿಲ್ಲ; ಆದರೆ, ಅದು, ಹುಟ್ಟಿನಿಂದಲೇ ಕೀಳರಿಮೆಯನ್ನು ಹೊತ್ತು ಬಾಳಬೇಕಾದ ಸಂದರ್ಭಕ್ಕೆ ತುತ್ತಾಗಿದ್ದ ಒಂದು ಜನಾಂಗದ ಕೆಲವರ

ಯೋಚಿಸುವಂತೆ ಮಾಡಿದೆ. ಅಪ್ರಜ್ಞಾಪೂರ್ವಕವಾಗಿ ತುಳಿಯುವ ಕೆಲಸ ಮಾಡುತ್ತಿದ್ದ ಕೆಲವರಲ್ಲಾದರೂ ತಮ್ಮ ಕೃತ್ಯಗಳ ಬಗ್ಗೆ ಅಸಹ್ಯ ಮತ್ತು ಪಶ್ಚಾತ್ತಾಪವನ್ನು ಹುಟ್ಟಿಸಿದೆ. ಅಷ್ಟರ ಮಟ್ಟಿಗೆ ಒಕ್ಕೂಟ ಕೃತಜ್ಞತೆಗೆ ಮಾನ್ಯ.

ಹೊಸ ದಹಲಿ –ಡಿ. ಎಸ್. ನಾಗಭೂಷಣ

ಪುಸ್ತಕ ಸಂಗ್ರಹ

ನಾನು 'ಕಸ್ತೂರಿ'ಯನ್ನು ಅನೇಕ ವರ್ಷಗಳಿಂದ ತಪ್ಪದೆ ಓದುತ್ತ ಮೆಚ್ಚಿಕೊಂಡವನಾಗಿದ್ದು ಅದರಿಂದ ಪ್ರಯೋಜನ ಪಡೆದವನೂ ಆಗಿದ್ದೇನೆ. ಓದುಗರ ದೃಷ್ಟಿಯಿಂದ ನನ್ನ ಒಂದೆರಡು ಸಲಹೆಗಳಿವೆ. (೧) ಪುಸ್ತಕ ವಿಭಾಗದಲ್ಲಿ ಬರುವ ಲೇಖನಗಳನ್ನು ಪ್ರತಿ ಆರು ತಿಂಗಳು ಅಥವಾ ವರ್ಷಕ್ಕೊಮ್ಮೆ ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಪ್ರಕಟಿಸಿದರೆ ಇಟ್ಟುಕೊಂಡು ಓದಲು ಅನುಕೂಲವಾಗುವುದು. (೨) 'ಕಸ್ತೂರಿ'ಯಲ್ಲಿ ಆದಷ್ಟು ಮಟ್ಟಿಗೆ ಕಥೆಗಳನ್ನು ಕಡಿಮೆ ಮಾಡಿ ಲೋಕ ಜ್ಞಾನ, ವಿಜ್ಞಾನ, ಆಧುನಿಕ ಪ್ರಗತಿ, ಮುಂತಾದ ವಿಷಯಗಳ ಬಗ್ಗೆ ವಿವಿಧ ಲೇಖನಗಳನ್ನು ಪ್ರಕಟಿಸುವುದು ಸೂಕ್ತ. ಕಥೆಗಳನ್ನು ದಿನಪತ್ರಿಕೆಗಳ ಸಾಪ್ತಾಹಿಕ ಸಂಚಿಕೆಗಳು, ವಾರಪತ್ರಿಕೆಗಳು ಹಾಗೂ ಇನ್ನೂ ಅನೇಕ ಮಾಸಿಕಗಳು ಧಾರಾಳವಾಗಿ ಪ್ರಕಟಿಸುತ್ತಿವೆ. 'ಕಸ್ತೂರಿ'ಯಿಂದ ನಾವು ನಿರೀಕ್ಷಿಸುವುದು ಅವೆಲ್ಲವುಗಳಿಂದ ಭಿನ್ನವಾದುದನ್ನು.

ಮಂಗಳೂರು -ಬಿ. ಪಿ. ಕಾವ

ಓದುಗರೊಡನೆ

ನಮ್ಮ ಎಪ್ರಿಲ್ ಸಂಚಿಕೆಯಲ್ಲಿ ಬಂದ ಕಥೆ 'ರಥಚಕ್ರ' ಪ್ರಸಿದ್ಧ ಹಿಂದೀ ಕತೆಗಾರ ಶ್ರೀ ಹಿಮಾಂಶು ಜೋಶಿಯವರದು. ಕಣ್ಣು ತಪ್ಪಿನಿಂದಾಗಿ ಅವರ ಹೆಸರು ಉಳಿದುಹೋದುದಕ್ಕೆ ವಿಷಾದಿಸುತ್ತೇವೆ.

ಇದೇ ಮೇ ಸಂಚಿಕೆಯ ೧೦೩ ಪುಟದ ಮೊದಲನೆಯ ಕಾಲಮ್ಮಿನ ಕೊನೆಯ ಸಾಲಿನಲ್ಲಿ 'ಸಪ್ಟಂಬರ್ ೧೯೬೬' ಎಂದಿರುವುದನ್ನು 'ಸಪ್ಟಂಬರ್ ೧೯೬೭' ಎಂದು ಓದಿಕೊಳ್ಳಬೇಕು. ಸಂ.

ಶಬರಿಮಲೈ ಯಾತ್ರಿಕ

ಏಪ್ರಿಲ್ 'ಕಸ್ತೂರಿ' ರಕ್ಷಾ ಪುಟದ ನನ್ನ ಚಿತ್ರದ ಬಗ್ಗೆ ಜಗದಲ್‌ಪುರದ ಶ್ರೀ ಹೆಚ್. ಶ್ರೀನಿವಾಸರಾವ್ ಅವರು ಮೇ ಸಂಚಿಕೆಯಲ್ಲಿ ಬರೆದದ್ದನ್ನು ನಾನೂ ಅನುಮೋದಿಸುತ್ತೇನೆ. ತಮಗೆ ವರ್ಣಚಿತ್ರ ಕಳಿಸುವಾಗ 'ಶಬರಿಮಲೈ ಯಾತ್ರಿಕ' ಎಂಬ ತಲೆಬರಹವನ್ನು ಕೊಟ್ಟ ನೆನಪು ನನಗಿಲ್ಲ.

ಬೆಂಗಳೂರು -ಎಂ. ವಿಶ್ವನಾಥ

ಚಿಕ್ಕವನೇ ಇವನು?

ಮೇ ತಿಂಗಳ ಸಂಚಿಕೆಯಲ್ಲಿ 'ಚಿಕ್ಕವನೇ ಇವನು?'

ಶ್ರೀ ಚೌಡಯ್ಯನವರನ್ನು ನೆನಪಿಗೆ ತರುವ ತರುಣ ಕಲಾವಿದ ಶ್ರೀ ನಾಗರಾಜು ೧೯೭೬ ಫೆಬ್ರವರಿ ತಿಂಗಳಲ್ಲಿ ಅನಂತಪುರದಲ್ಲಿ ಧರ್ಮವರಂ ಕಲಾಜ್ಯೋತಿಯವರು ಏರ್ಪಡಿಸಿದ ಕಚೇರಿಯಲ್ಲಿ ಶ್ರೀ ಮಹಾರಾಜಪುರಂ ಸಂತಾನಂ ಅವರೊಂದಿಗೆ ಪಿಟೀಲು ಬಾರಿಸಿ ಶ್ರೋತೃಗಳ ಮೆಚ್ಚುಗೆ ಪಡೆದರು. ಆ ಕಚೇರಿಯಲ್ಲಿ ಶ್ರೋತೃವಾಗಿದ್ದ ನಾನು ನಾಗರಾಜರ ಪ್ರತಿಭೆಗೆ ಮುಗ್ಧನಾದೆ. ಕರ್ನಾಟಕ ಸರಕಾರ ನಾಗರಾಜರಿಗೆ ಸಾಕಷ್ಟು ಪ್ರೋತ್ಸಾಹ ನೀಡಲಿ.

ಕಡಪ -ಜಾನಮದ್ದಿ ಹನುಮಚ್ಛಾಸ್ತ್ರಿ

ನಿಮ್ಮ ಮೇ ಸಂಚಿಕೆಯಲ್ಲಿ 'ಅಗ್ಗದ ಪುಸ್ತಕದಿಂದಾದ ಕೋಲಾಹಲ' ಓದಿದೆ. ಆದರೆ ಕೊನೆಗೂ ಆದರಿಂದ ಕೋಲಾಹಲ ಏನಾಯಿತೆಂಬುದು ನನಗಂತೂ ತಿಳಿಯಲಿಲ್ಲ. 'ಚಿಕ್ಕವನೇ ಇವನು..?' ಓದಿದೆ. ಸದ್ಯ ಸುಮಾರು ಹದಿನಾರರ ಪ್ರಾಯದವನಾದ ನಾಗರಾಜನ ಬಗ್ಗೆ ಓದುತ್ತಿದ್ದಂತೆಯೇ ಮನಸ್ಸಿನಲ್ಲಿ ಇನ್ನೂ ಚಿಕ್ಕವರಾದರೂ ಪ್ರತ್ಯೇಕವಾಗಿ ಸಂಗೀತ ಕಚೇರಿ ನಡೆಸುವಷ್ಟು ಸಾಮರ್ಥ್ಯವುಳ್ಳ ಕೆಲವರು ನನ್ನ ಕಣ್ಮುಂದೆ ಬರುತ್ತಾರೆ. ಖ್ಯಾತ ಹಿಂದೂಸ್ತಾನಿ ಗಾಯಕ ಶ್ರೀ ಅರ್ಜುನಸಾ ನಾಕೋಡರವರ ತಮ್ಮನ ಮಕ್ಕಳಾದ ಇವರು ನಡೆಸಿದ ಕಚೇರಿಯೊಂದು ಇನ್ನೂ ನನ್ನ ಮನಸ್ಸಿನಲ್ಲಿ ಹಸುರಾಗಿದೆ. ಇಂಥ ಎಳೆ ಹರೆಯ ಕಾಯಿಗಳನ್ನು ಬೆಳಕಿಗೆ ತರುವುದು ಅತ್ಯವಶ್ಯ.

ಇನ್ನು ಒಟ್ಟಾರೆ 'ಕಸ್ತೂರಿ'ಯ ಬಗ್ಗೆ ಬರೆಯಬೇಕೆಂದರೆ- ಪ್ರತಿ ತಿಂಗಳೂ ಕಸ್ತೂರಿಯು ನಾಲ್ಕೈದು ಕಥೆಗಳನ್ನು ಒಳಗೊಂಡಿರುತ್ತದೆ. ಎಲ್ಲ ಕಥೆಗಳೂ ಬೋಗಸ್ ಮತ್ತು ಅಷ್ಟೇ ನೀರಸ. ಕಥೆಯನ್ನೊದಗಿಸುವ ಪತ್ರಿಕೆಗಳು ಸಾಕಷ್ಟಿವೆ; ಆದರೆ ಲೇಖನ ಪ್ರಧಾನವಾದವುಗಳು ಇಲ್ಲ. ಮೊದ ಮೊದಲು ನಾನು 'ಕಸ್ತೂರಿ'ಯನ್ನು ತರಿಸುತ್ತಿದ್ದುದು ಕೇವಲ ಪುಸ್ತಕ ವಿಭಾಗಕ್ಕಾಗಿಯೇ. ಇದೀಗ ಪುಸ್ತಕ ವಿಭಾಗವನ್ನು ಓದುವಂತೆಯೇ ಇಲ್ಲ. ಕಾದಂಬರೀಪ್ರಧಾನ ಪುಸ್ತಕ ವಿಭಾಗವನ್ನು ನೋಡಿದರೆ 'ಕಸ್ತೂರಿ'ಯು ಲೇಖನಾಭಾವದಿಂದ ಬಳಲುತ್ತಿದ್ದು 'ಕಸ್ತೂರಿ'ಯ ಪ್ರೇಮಿಗಳಿಗೆ ಅತ್ಯಂತ ನಿರಾಶೆಯನ್ನುಂಟುಮಾಡುತ್ತಿದೆ. ಸಂಪಾದಕರೂ ಲೇಖಕರೂ 'ಕಸ್ತೂರಿ'ಯು ವಿಚಾರಪ್ರಧಾನ ಲೇಖನಗಳೇ ಪ್ರಮುಖ ಲಕ್ಷಣವಾಗಿ ಹೊರಬರುವಂತೆ ನೋಡಿಕೊಳ್ಳುವುದು ಅಗತ್ಯವೆಂದು ನನ್ನ ಅನಿಸಿಕೆ

ಮಸೂರು -ಟಿ. ಎಚ್. ಮಿಸ್ಕಿನ್

ಶುಭ ಶುಕ್ರವಾರ

ಶ್ರೀ ಟಿ. ಎಸ್. ಸಾಮನಗೌಡರ "ಶುಭ ಶುಕ್ರವಾರ'' ಶ್ರೀಯುತರು- "ನೀವು ಸ್ವರ್ಗದ ಬಾಗಿಲನ್ನೇ ಮುಚ್ಚುವ ಜನ; ನೀವು ಕುರುಡು ನಾಯಕರು, ಕಪಟಿಗಳು, ಪಾಪಿಗಳು' ಎಂದು ಕ್ರಿಸ್ತ ಯಾರನ್ನಾದರೂ ಎಂದಾದರೂ ಜರಿದನೆ?'' ಎಂದು ಕೇಳಿದ್ದಾರೆ. ಇವೇ ಪದಗಳನ್ನು ಉಪಯೋಗಿಸದಿದ್ದರೂ, ಯೇಸುವು "ನೀವು ಜ್ಞಾನಕ್ಕೆ ಸಾಧನವಾದ ಬೀಗದ ಕೈಯನ್ನು ತೆಗೆದುಬಿಟ್ಟಿರಿ; ನೀವೂ ಒಳಕ್ಕೆ ಹೋಗಲಿಲ್ಲ, ಒಳಕ್ಕೆ ಹೋಗುತ್ತಿರುವವರಿಗೂ ಅಡ್ಡಿ ಮಾಡಿದಿರಿ,'' (ಲೂಕ, ೧೧-೫೨) "ನೀವು ಕುರುಡರಾಗಿದ್ದರೆ ನಿಮ್ಮ ಕಣ್ಣು ಕಾಣುತ್ತವೆ ಎನ್ನುತ್ತೀರಾದ್ದರಿಂದ ನಿಮ್ಮ ಪಾಪವು ಉಳಿದಿದೆ'' (ಯೋಹಾನ, ೯-೪೧) ಎಂದು ಮುಂತಾಗಿ ಅವೇ ಅರ್ಥ ಬರುವಂತಹ ಅನೇಕ ಮಾತುಗಳನ್ನು ಆಡಿರುವುದು ನಿಜ. ಹಾಗೂ, ಕ್ರಿಸ್ತನು ದುಷ್ಟರೂ ಸನ್ಮಾರ್ಗಕಂಟಕರೂ ಆದ ಪುರೋಹಿತವರ್ಗವನ್ನು ಜರಿದ ಮಾತ್ರಕ್ಕೇ ಆತನ ಘನತೆಗೆ ಯಾವುದೇ ರೀತಿಯಲ್ಲಿ ಧಕ್ಕೆಯುಂಟಾಗಬಹುದೆಂದು ನಾನೆಣಿಸುವುದಿಲ್ಲ.

ಬೆಂಗಳೂರು -ಬಿ. ಶಂಕರ ಅತ್ತಿಮಠ

೫೦೦-೬೦೦ ಏಕೆ?

ಏಪ್ರಿಲ್ ಸಂಚಿಕೆಯಲ್ಲಿ ಶ್ರೀ ಬಿ. ಸುಬ್ರಾಯ ಅಡಿಗರು ಬರೆದಿರುವ '೫೦೦. ೬೦೦ ಏಕೆ?' ಎಂಬ ಲೇಖನ ಪ್ರಕಟವಾಗಿದೆ. ಇದರ ಕೊನೆಗೆ 'ಆಧಾರದಿಂದ' ಎಂದು ಬರೆಯಲಾಗಿದೆ. ಆದರೆ ಯಾವ ಆಧಾರದಿಂದ ಬರೆದಿದ್ದಾರೆ ಎನ್ನುವುದನ್ನು ಮಾತ್ರ ತಿಳಿಸಿಲ್ಲ. ಕನ್ನಡದಲ್ಲಿ 'ಕಸ್ತೂರಿ'ಯಂಥ ಪತ್ರಿಕೆಯಲ್ಲಿ ಬರೆಯುವ ಲೇಖಕರಿಗೆ 'ಆಧಾರ' ಹಾಗೂ 'ಅನುವಾದ' ಈ ಎರಡು ಪದಗಳ ನಡುವೆ ಇರುವ ವ್ಯತ್ಯಾಸ ತಿಳಿಯದಿರುವುದು ತೀರ ಶೋಚನೀಯ. ಯಾಕೆಂದರೆ, ಈ ಲೇಖನವು ಹೆಸರಾಂತ ಹಿಂದೀ ಸಾಹಿತಿ ಶ್ರೀ ಕನ್ಹಯ್ಯಾಲಾಲ ಮಿಶ್ರ (ಕಾವ್ಯನಾಮ 'ಪ್ರಭಾಕರ') ಅವರು ಬರೆದಿರುವ 'ಪಾಂಚ ಸೌ ಛೇಸೌ ಕ್ಯೋ' ಎಂಬುದರ ನೇರ ಅನುವಾದವಾಗಿದೆ. ಇದರ ಶೀರ್ಷಿಕೆಯನ್ನು ಕೂಡ ಬದಲು ಮಾಡಲು ಪ್ರಯತ್ನಿಸಿಲ್ಲವಾದರೂ, ಪ್ರಾರಂಭದಲ್ಲಿ ಕೆಲವೊಂದು ಸ್ವಂತ ವಾಕ್ಯಗಳನ್ನು ಸೇರಿಸಿ (ಮೊದಲ ಪ್ಯಾರಾಗ್ರಾಫ್ ಒಂದೇ) ನಂತರದಲ್ಲಿ ಸಂಪೂರ್ಣ ಲೇಖನ ಮೂಲದ ಅಕ್ಷರಶಃ ಅನುವಾದವಾಗಿದೆ. ಯಾವುದೇ ಶಬ್ದವನ್ನು ಕೂಡ ಹಿಂದು-ಮುಂದೆ ಮಾಡದೆ ಇದ್ದ ಹಾಗೆಯೇ ಭಟ್ಟಿ ಇಳಿಸಿದ್ದಾಗಿದೆ. ಪ್ರಭಾಕರರ ಈ ಲೇಖನವು ಈಗ ಮಹಾರಾಷ್ಟ್ರ ರಾಜ್ಯ ಶಿಕ್ಷಣ ಮಂಡಳವು ಹತ್ತನೆಯ ತರಗತಿಗಾಗಿ ಹಚ್ಚಿರುವ ಹಿಂದಿ 'ಗದ್ಯ-ಪದ್ಯ ಸಂಗ್ರಹ'ದ ಮೊದಲನೆಯ ಪಾಠದಲ್ಲಿದೆ. ಈ ಬಗೆಯ ಕೃತಿಚೌರ್ಯ ಎಷ್ಟು ಮಾತ್ರಕ್ಕೂ ಸಲ್ಲದು

ಕಸ್ತೂರಿ

ಸಂಚಿಕೆ : ೧೦ ಕಸ್ತೂರಿ, ಜೂನ್ ೧೯೭೬ ವರ್ಷ : ೨೦

ನಮ್ಮಲ್ಲಿ ಏತಕ್ಕೆ ಒಮ್ಮತವಿಲ್ಲ?

— ಸ್ವಾಮಿ ವಿವೇಕಾನಂದ

ನಾನೊಂದು ಸಣ್ಣ ಕತೆಯನ್ನು ನಿಮಗೆ ಹೇಳುತ್ತೇನೆ. "ಒಬ್ಬರು ಇನ್ನೊಬ್ಬರನ್ನು ದೂರುವದನ್ನು ನಿಲ್ಲಿಸೋಣ," ಎಂದು ಈಗ ತಾನೇ ಮುಗಿಸಿದ ವಾಗ್ಮಿಗಳ ಮಾತುಗಳನ್ನು ಕೇಳಿರುವಿರಿ. ಇಷ್ಟೊಂದು ಭಿನ್ನಾಭಿಪ್ರಾಯಗಳಿರುವದರಿಂದ ಅವರಿಗೆ ತುಂಬ ವ್ಯಥೆಯಾಯಿತು.

ಈ ಭಿನ್ನಾಭಿಪ್ರಾಯಗಳಿಗೆ ಕಾರಣವನ್ನು ಉದಾಹರಿಸುವ ಒಂದು ಕಥೆಯನ್ನು ನಿಮಗೆ ಹೇಳಬೇಕೆಂದು ಬಯಸುತ್ತೇನೆ. ಒಂದು ಕಪ್ಪೆಯು ಬಾವಿಯೊಂದರಲ್ಲಿ ವಾಸವಾಗಿತ್ತು. ಅದು ಅಲ್ಲಿ ಬಹುಕಾಲದಿಂದಲೂ ಇತ್ತು. ಅದು ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆಯಿತು. ಆದರೂ ಅದು ಇನ್ನೂ ಸಣ್ಣ ಕಪ್ಪೆ. ಆ ಕಪ್ಪೆಗೆ ಕಣ್ಣು ಇತ್ತೋ ಇಲ್ಲವೋ ಎಂದು ಹೇಳುವದಕ್ಕೆ ಇಂದಿನ ವಿಕಾಸವಾದಿಗಳು ಅಲ್ಲಿ ಇರಲಿಲ್ಲ. ಆದರೆ ನಮ್ಮ ಕಥೆಗಾಗಿ, ಅದಕ್ಕೆ ಕಣ್ಣುಗಳು ಇದ್ದವು ಎಂದು ಭಾವಿಸೋಣ. ಅದು ಪ್ರತಿ ದಿನವೂ ಕ್ರಿಮಿಕೀಟಗಳನ್ನು ಶುದ್ಧಿ ಮಾಡುತ್ತಿರುವದನ್ನು ನೋಡಿದರೆ ಇಂದಿನ ಕ್ರಿಮಿಶಾಸ್ತ್ರಜ್ಞರಿಗೂ ಕೀರ್ತಿ ತರುವಂತೆ ಇತ್ತು. ಹೀಗೆಯೇ ಅದು ಬೆಳೆಯುತ್ತ ನುಣ್ಣಗೆ ದಪ್ಪಗಾಯಿತು. ಹೀಗಿರುವಾಗ ಒಂದು ದಿನ ಸಮುದ್ರದಲ್ಲಿದ್ದ ಮತ್ತೊಂದು ಕಪ್ಪೆ ಬಾವಿಗೆ ಬಂದು ಬಿತ್ತು.

ಬಾವಿ ಕಪ್ಪೆ– ನೀನು ಎಲ್ಲಿಂದ ಬಂದೆ?

ಸಮುದ್ರ ಕಪ್ಪೆ– ನಾನು ಸಮುದ್ರದಿಂದ ಬಂದೆ.

ಬಾವಿ ಕಪ್ಪೆ– "ಸಮುದ್ರ! ಅದು ಎಷ್ಟು ದೊಡ್ಡದು? ಅದು ನನ್ನ ಬಾವಿಯಷ್ಟು ದೊಡ್ಡದೆ?" ಎಂದು ಹೇಳಿ ಬಾವಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೆಗೆಯಿತು.

ಸಮುದ್ರ ಕಪ್ಪೆ– ಅಯ್ಯಾ ಸ್ನೇಹಿತನೆ, ಸಮುದ್ರವನ್ನು ಬಾವಿಯೊಂದಿಗೆ ಹೇಗೆ ಹೋಲಿಸಬಲ್ಲೆ?

ಬಾವಿಯ ಕಪ್ಪೆಯು ಇನ್ನೊಂದು ಸಲ ನೆಗೆದು "ನಿನ್ನ ಸಮುದ್ರವು ಇಷ್ಟು ದೊಡ್ಡದೋ?" ಎಂದು ಕೇಳಿತು.

ಸಮುದ್ರ ಕಪ್ಪೆಯು "ಎಂಥ ಹುಚ್ಚುತನ ನಿನ್ನದು! ಸಮುದ್ರವನ್ನು ಬಾವಿಗೆ ಹೋಲಿಸುವೆಯಲ್ಲ?" ಎಂದಿತು.

ಬಾವಿ ಕಪ್ಪೆ– "ಹಾಗಾದರೆ ಆಗಲಿ. ನನ್ನ ಬಾವಿಗಿಂತ ದೊಡ್ಡದು ಯಾವದೂ ಇಲ್ಲ. ಇದಕ್ಕಿಂತ ದೊಡ್ಡದು ಯಾವದೂ ಇರಲಾರದು. ಇವನೊಬ್ಬ ಸುಳ್ಳುಗಾರ. ಇವನನ್ನು ಹೊರಗೆ ನೂಕಿ," ಎಂದಿತು.

ಇದೇ ಯಾವಾಗಲೂ ನಾವಿರುವ ಸ್ಥಿತಿ. ನಾನೊಬ್ಬ ಹಿಂದು. ನಾನು ನನ್ನ ಸಣ್ಣ ಬಾವಿಯಲ್ಲಿ ಕುಳಿತುಕೊಂಡು, ಜಗತ್ತೆಲ್ಲ ಈ ನನ್ನ ಬಾವಿಯೊಂದೇ ಎಂದು ಯೋಚಿಸುತ್ತಿರುವೆನು. ಕ್ರೈಸ್ತರು ತಮ್ಮ ಸಣ್ಣ ಬಾವಿಯಲ್ಲಿ ಕುಳಿತುಕೊಂಡು ಪ್ರಪಂಚವೆಲ್ಲ ಇಷ್ಟೇ ಎಂದು ತಿಳಿಯುವರು. ನಮ್ಮ ಈ ಸಣ್ಣ ಸಣ್ಣ ಪ್ರಪಂಚದ ಮೇರೆಯನ್ನು ಒಡೆದು ಹಾಕುವದಕ್ಕೆ ಪ್ರಯತ್ನಿಸುತ್ತಿರುವ ಅಮೇರಿಕ ದೇಶೀಯರೇ ನಿಮಗೆ ನನ್ನ ಕೃತಜ್ಞತೆಗಳು. ಈ ಗುರಿಯನ್ನು ಮುಂದೆ ಸಾಧಿಸುವದಕ್ಕೆ ಭಗವಂತನು ಸಹಾಯ ಮಾಡುವನೆಂದು ಆಶಿಸುತ್ತೇನೆ.

*

ಧಾರ್ಮಿಕ ಏಕತೆಯ ಸರ್ವಸಾಮಾನ್ಯ ವಿಷಯವಾಗಿ ಎಷ್ಟೋ ಹೇಳಿ ಆಗಿದೆ. ಅದರ ವಿಷಯವಾಗಿ ಈಗ ನನ್ನ ಸಿದ್ಧಾಂತವನ್ನು ಹೇಳುವದಕ್ಕೆ ಹೊರಟಿಲ್ಲ. ಯಾವದಾದರೂ ಒಂದು ಧರ್ಮದ ಜಯದಿಂದ ಅಥವಾ ಉಳಿದ ಧರ್ಮಗಳ ನಾಶದಿಂದ ಅದು ಬರುತ್ತದೆ ಎಂದು ಇಲ್ಲಿ ಇರುವವರಲ್ಲಿ ಯಾರಾದರೂ ಆಶಿಸಿದರೆ ಅವರಿಗೆ, "ನನ್ನ ಸಹೋದರನೇ, ನಿನ್ನದು ಅಸಾಧ್ಯವಾದ ಬಯಕೆ" ಎನ್ನುತ್ತೇನೆ. ಕ್ರೈಸ್ತನು ಹಿಂದುವಾಗುವದಕ್ಕೆ ನಾನು ಬಯಸುವೆನೆ? ಭಗವಂತ ಅದನ್ನು ವಿರೋಧಿಸಲಿ. ಹಿಂದುಗಳು ಅಥವಾ ಬೌದ್ಧರು ಕ್ರೈಸ್ತರಾಗಬೇಕೆಂದು ನಾನು ಬಯಸುವೆನೆ? ಭಗವಂತ ಅದನ್ನು ವಿರೋಧಿಸಲಿ.

ಕ್ರೈಸ್ತನು ಹಿಂದೂ ಅಥವಾ ಬೌದ್ಧನಾಗಬೇಕಿಲ್ಲ. ಪ್ರತಿಯೊಬ್ಬರು ಕೂಡ ಮತ್ತೊಬ್ಬರ ಭಾವವನ್ನು ಹೀರಿಕೊಂಡು, ಸ್ವಂತ ವ್ಯಕ್ತಿತ್ವವನ್ನು ಹಾಳುಮಾಡಿಕೊಳ್ಳದೆ ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು.

ಜಗತ್ತಿಗೆ ವಿಶ್ವಧರ್ಮ ಸಮ್ಮೇಳನವು ಏನಾದರೂ ತೋರಿದ್ದರೆ ಅದು ಇದು. ಪವಿತ್ರತೆ, ದಯೆ ಮುಂತಾದ ಸದ್ಗುಣಗಳು ಜಗತ್ತಿನ ಯಾವ ಒಂದು ಚರ್ಚಿನ ಮೀಸಲೂ ಅಲ್ಲ. ಪ್ರತಿಯೊಂದು ಧರ್ಮವು ಕೂಡ ಅತ್ಯುತ್ತಮರಾದ ಸ್ತ್ರೀ ಪುರುಷರನ್ನು ಕೊಟ್ಟಿರುವದು. ಇಷ್ಟೊಂದು ನಿದರ್ಶನಗಳು ಇರುವಾಗಲೂ ಯಾರಾದರೂ ತಮ್ಮ ಧರ್ಮ ಒಂದೇ ಬಾಳುವದು, ಉಳಿದ ಧರ್ಮಗಳಾವವೂ ಇರುವದಿಲ್ಲ ಎಂದು ತಿಳಿದುಕೊಂಡರೆ ನಾನು ಅವರಿಗಾಗಿ ಹೃತ್ಪೂರ್ವಕವಾಗಿ ವ್ಯಸನಪಡುವೆನು. ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಅವರು ಎಷ್ಟು ವಿರೋಧಿಸಿದರೂ "ಹೋರಾಟವಲ್ಲ ಸೌಹಾರ್ದ, ನಾಶವಲ್ಲ ಅಂಗೀಕಾರ. ಶಾಂತಿ ಮತ್ತು ಸಮನ್ವಯ, ವೈಮನಸ್ಯವಲ್ಲ," ಎಂಬುದನ್ನು ಬೇಗ ಬರೆಯುವರು.

(ಸ್ವಾಮಿ ವಿವೇಕಾನಂದರ ಸುಪ್ರಸಿದ್ಧ ಚಿಕಾಗೋ ಭಾಷಣದ ಅವತರಣಿಕೆಗಳು.)

ಕೇಶವಚಂದ್ರ ಗುಪ್ತಾ

ನ್ಯಾಯಾಧೀಶರನ್ನು 'ಪಾಪ'ದಿಂದ ಉಳಿಸಿದೆ!

ನ್ಯಾಯಾಧೀಶರಲ್ಲೂ ಹಲವು ವಿಧಗಳುಂಟು. ಪ್ರಾಮಾಣಿಕರೂ ತಮ್ಮ ಮೇಲಿನ ಹೊಣೆಯ ಅರಿವುಳ್ಳವರೂ ಆಗಿದ್ದರೆ ತಮ್ಮ ನಿರ್ಣಯಗಳಲ್ಲಿ ನ್ಯಾಯವೇ ಸಿಕ್ಕಬೇಕೆಂಬ ಬಗ್ಗೆ ಅವರು ಅತ್ಯಂತ ಮನಃಪೂರ್ವಕವಾಗಿ ಪ್ರಯತ್ನಿಸುತ್ತಿರುತ್ತಾರೆ. ಆದರೆ ಇನ್ನೂ ಕೆಲವರ ಉದ್ದೇಶ ಬೇರೆಯೇ ಆಗಿರುತ್ತದೆ. ಅಪೀಲ್ ನ್ಯಾಯಾಲಯದಲ್ಲಿ ತಮ್ಮ ನಿರ್ಣಯ ಬದಲಿಸಲ್ಪಡಬಾರದೆಂಬುದಷ್ಟೇ ಅವರ ಧ್ಯೇಯವಾಗಿರುತ್ತದೆ. ನ್ಯಾಯಾನ್ಯಾಯಗಳ ವಿಚಾರ ಅವರಿಗೆ ಗೌಣ. ನನ್ನ ಅನುಭವದಲ್ಲಿ ನಾನು ಎರಡೂ ಬಗೆಯ ಜನರನ್ನು ಕಂಡಿದ್ದೇನೆ. ನ್ಯಾಯದಾನವೇ ತಮ್ಮ ಆದ್ಯ ಕರ್ತವ್ಯವೆಂದು ನಂಬಿದ್ದ ಹಲವು ನ್ಯಾಯಾಧೀಶರ ಬಗ್ಗೆ ನಾನಿಲ್ಲಿ ಹೇಳಬಯಸುವೆ.

ಕಲಕತ್ತಾ ಪೋರ್ಟ್ ಕಮಿಶನರರ ಕಚೇರಿಯಲ್ಲಿ ನೌಕರಿಗಿದ್ದ ಒಬ್ಬ ಬಡಪಾಯಿಯ ಮೇಲೆ ಆಮದಾದ ಕೆಲ ಸರಕುಗಳನ್ನು ಧಕ್ಕೆಯಿಂದ ಕಳವು ಮಾಡಲು ಸಹಾಯ ಮಾಡಿದನೆಂದು ಆರೋಪವಿರಿಸಲಾಗಿತ್ತು. ಅವನ

ಮೇಲೆ ಹೊರಿಸಲಾಗಿದ್ದ ಅಪರಾಧವನ್ನು ಸಿದ್ಧಗೊಳಿಸುವಂತಹ ನೇರವಾದ ಹಾಗೂ ಪ್ರತ್ಯಕ್ಷ ಸಾಕ್ಷಿ ಪುರಾವೆಗಳು ಇರಲೇ ಇಲ್ಲ. ಆದರೆ ಪ್ರಾಸಂಗಿಕ ಪುರಾವೆಗಳು ಮಾತ್ರ ಅಪರಾಧದೊಂದಿಗೆ ಅವನ ಸಂಬಂಧವನ್ನು ಕಲ್ಪಿಸುವಷ್ಟು ಪ್ರಬಲವಾಗಿದ್ದವು. ಸರಕಾರಿ ವಕೀಲರು ಒಂದಾದ ಮೇಲೊಂದರಂತೆ ಅನೇಕ ಪುಸ್ತಕ ಹಾಗೂ ಕಾಗದಗಳನ್ನು ಲಿಖಿತ ಪುರಾವೆಗಳೆಂದು ನ್ಯಾಯಾಲಯದಲ್ಲಿ ಹಾಜರು ಪಡಿಸಿದರು. ವಿಚಾರಣೆ ನಡೆದುದು ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಶ್ರೀ "ಕ್ಷ" ಅವರ ಎದುರಿನಲ್ಲಿ.

ನನ್ನ ಪಕ್ಷಕಾರ ತಾನು ನಿರಪರಾಧಿಯೆಂದೂ ಅಪರಾಧದ ವಿಷಯ ತನಗೆಷ್ಟೂ ತಿಳಿಯದೆಂದೂ ನನ್ನೆದುರು ಹೇಳಿದ್ದಲ್ಲದೆ "ಸಿ" ಎಂದು ಗುರುತಿಸಲಾದ ಒಂದು ಪುಸ್ತಕವನ್ನು ತೆರೆದು ಅಲ್ಲಿ ಬರೆದುದನ್ನು ನನಗೆ ತೋರಿಸಿದನು. ಅದು ಸರಕು ಡೆಲಿವರಿ ಪುಸ್ತಕವಾಗಿತ್ತು. ಅದರಲ್ಲೊಂದೆಡೆ ದೇವನಾಗರಿ ಲಿಪಿಯಲ್ಲಿ ಸಹಿಯಿತ್ತು. ಹಾಗೂ ಅದರೆದುರು ಆ ಸಹಿ ಮಾಡಿದವನಿಗೆ ಡೆಲಿವರಿ ಕೊಟ್ಟ ಸರಕುಗಳ ವಿವರ

ಲಾದ ಸರಕುಗಳ ವಿವರಕ್ಕೆ ಈ ದೇವನಾಗರಿ ಸಹಿಯೆದುರಿಗಿನ ಸರಕುಗಳ ವಿವರ ಸರಿ ಹೋಗುತ್ತಿತ್ತು.

ಈ ಸರಕುಗಳ ಒಡೆಯನು ಅವು ತನಗೆ ಮುಟ್ಟಿಲ್ಲವೆಂದು ನ್ಯಾಯಾಲಯದಲ್ಲಿಯೇ ನುಡಿದಿದ್ದನು. ಆದರೆ ಈ ಪುಸ್ತಕದಲ್ಲಿಯ ದೇವನಾಗರಿ ಸಹಿಯನ್ನೂ ಅದರೆದುರಿಗಿನ ವಿವರವನ್ನೂ ಸರಕಾರಿ ವಕೀಲರು ಕೊಟ್ಟ ಕಾಗದಗಳಲ್ಲಿಯೇ ಒಂದೆಂದು ನಿರ್ಧರಿಸಿ ಅದಕ್ಕೆ ವಿಶೇಷ ಲಕ್ಷ ಕೊಟ್ಟಿರಲೇ ಇಲ್ಲ; ಕಡೆಗಣಿಸಿಬಿಟ್ಟಿದ್ದರು.

ಅದನ್ನೇ ನನ್ನ ವಾದಕ್ಕಾಗಿ ನಾನು ಉಪಯೋಗಿಸಿಕೊಂಡೆ. ಈ ಪುಸ್ತಕದಲ್ಲಿಯ ದೇವನಾಗರಿ ಸಹಿ ಹಾಗೂ ಅದರೆದುರಿಗೆ ಬರೆಯಲಾಗಿದ್ದ ಸರಕುಗಳ ವಿವರಗಳು ಖೊಟ್ಟಿಯೆಂದು ಸರಕಾರಿ ಪಕ್ಷವು ಸಿದ್ಧ ಮಾಡಿರಲಿಲ್ಲ. ಯಾರೋ ಒಬ್ಬ ಆ ಸರಕುಗಳ ಒಡೆಯನಿಂದ ರಶೀದಿಯನ್ನು ಕದ್ದು ಅವುಗಳನ್ನು ಪಡೆದುಕೊಂಡಿರಬಹುದು. ಆದರೆ ಆ ಸರಕುಗಳನ್ನೊಯ್ದ ಮನುಷ್ಯ ಖೊಟ್ಟಿ ಮನುಷ್ಯ ಎಂದು ನನ್ನ ಪಕ್ಷಕಾರನಿಗೆ ಗೊತ್ತಾಗುವದಾದರೂ ಹೇಗೆ ಶಕ್ಯ? ಇಂತಿರುವಾಗ ನನ್ನ ಪಕ್ಷಕಾರ ನಿರಪರಾಧಿಯೆಂದು ನಾನು ವಾದಿಸಿದ್ದೆನು.

ಮ್ಯಾಜಿಸ್ಟ್ರೇಟರು ತಮ್ಮ ನಿರ್ಣಯ ಹೇಳಲು ಒಂದು ದಿನವನ್ನು ಗೊತ್ತುಪಡಿಸಿದರು. ಆದರೆ ಆ ದಿನ ನಾವು ಬಂದಾಗ ನಿರ್ಣಯ ಹೇಳುವ ಸ್ಥಿತಿಯಲ್ಲೂ ಅವರಿರಲಿಲ್ಲ. ದಿನವನ್ನು ಮುಂದೆ ಹಾಕಿದರು. ಆ ಸಮಯ ಸಾಧಿಸಿ ನಾನು ಎದ್ದು ನಿಂತು "ಸಿ" ಎಂದು ಗುರುತಿಸಲಾಗುವ ಪುರಾವೆಯನ್ನು ಇನ್ನೊಮ್ಮೆ ಪರಿಶೀಲಿಸಿದಲ್ಲಿ ನನ್ನ ಬಡ ಪಕ್ಷಕಾರನಿಗೆ ಅನುಕೂಲವಾಗುವದೆಂದು ಮ್ಯಾಜಿಸ್ಟ್ರೇಟರನ್ನು ಬಿನ್ನವಿಸಿದೆನು.

ಅವರಾಗ ನನ್ನ ಮೇಲೆ ತುಂಬಾ ರೇಗಿದ್ದರೆನ್ನುವುದು ಸ್ಪಷ್ಟವಿತ್ತು. "ಆಗಲಿ ಮಿ|| ಗುಪ್ತಾ ನಾನು ಎಲ್ಲ ಪುರಾವೆಗಳನ್ನೂ ಲಕ್ಷ್ಯಪೂರ್ವಕವಾಗಿಯೇ ನೋಡುತ್ತೇನೆ. ಅದಕ್ಕಾಗಿಯೇ ನಾನಿಲ್ಲಿರುವದು," ಎಂದರು.

ನನಗೆ ಮುಖದ ಮೇಲೆ ಹೊಡೆದಂತಾಯಿತು. ಕೆಳಗೆ ಕುಳಿತುಕೊಂಡೆ. ಅಲ್ಲಿಯೇ ಇದ್ದ ನನ್ನ ವಕೀಲ ಮಿತ್ರರು ಈ ಪ್ರಕರಣದಲ್ಲಿ ನನ್ನ ಪಕ್ಷಕಾರನ ಹಣೆಯಬರಹವನ್ನು ಊಹಿಸಿ ಪುನರ್ವಿಚಾರಣೆಗಾಗಿ ಹೈಕೋರ್ಟಿಗೆ ಅರ್ಜಿ ಮಾಡಲು ಸಿದ್ಧತೆಯಲ್ಲಿರಲು ನನಗೆ ಹೇಳಿದರು.

ಈ ಪ್ರಕರಣದ ನಿರ್ಣಯವನ್ನು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೇಳಲಿದ್ದ ದಿನ ನಾನು ಬೇರೊಂದು ನ್ಯಾಯಾಲಯದಲ್ಲಿ ವಾದಿಸುತ್ತಿದ್ದೆ. ಆಗ ನನ್ನ ಪಕ್ಷಕಾರನು ಧಾವಿಸಿ ನನ್ನೆಡೆಗೆ ಬಂದ.

"ಏನು, ಮತ್ತೆ ಮುಂದೆ ಹಾಕಿದರೆ?" ನಾನು ಕೇಳಿದೆ.

"ಇಲ್ಲ ಸ್ವಾಮಿ ನನ್ನ ಬಿಡುಗಡೆಯಾಗಿದೆ," ಎಂದು ಹೇಳಿ ನನಗೆ ಕೃತಜ್ಞತೆಗಳನ್ನರ್ಪಿಸಿದನು.

ನಾನು ನನ್ನ ವಾದವನ್ನು ಮತ್ತೆ ಮುಂದುವರಿಸಿದೆ. ನಾನಿನ್ನೂ ಮಾತಾಡುತ್ತಿರುವಾಗಲೇ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಚಪರಾಸಿ ಬಂದು ನನ್ನ ಹಿಂಬದಿಗೆ ನಿಂತ. ನ್ಯಾಯಾಲಯದ ಕ್ಷಮೆ ಕೋರಿ ನಾನು ಹಿಂದಿರುಗಿ ಚಪರಾಸಿಯನ್ನೂ "ಚಂದನ, ನನಗೇನಾದರೂ ಹೇಳುವುದಿದೆಯೇ," ಎಂದು ಕೇಳಿದೆ.

"ಸಲಾಮು ಸಾಹೇಬ. ಬಡಾ ಸಾಹೇಬರು ನಿಮಗೆ ಬರಲು ಹೇಳಿದ್ದಾರೆ. ಚೇಂಬರಿನಲ್ಲಿ ಅವರನ್ನು ಬಂದು ಕಾಣಬೇಕಂತೆ".

ಈ ನ್ಯಾಯಾಲಯದಲ್ಲಿಯ ನನ್ನ ಕೆಲಸವನ್ನು ಮುಗಿಸಿದ ನಂತರ ನಾನು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಶ್ರೀ "ಕ್ಷ" ರ ಚೇಂಬರಿಗೆ ಹೋದೆ. ಆಗ ಅವರು ಏನೋ ಬರೆಯುವದರಲ್ಲಿ ಮಗ್ನರಾಗಿದ್ದರು. ನಾನು ಒಳಗೆ ಹೋದೊಡನೆಯೇ ಎದ್ದು ನನ್ನನ್ನು ಸ್ವಾಗತಿಸಿ ಹಸ್ತಲಾಘವವನ್ನಿತ್ತರು.

"ಮಿ. ಗುಪ್ತಾ ನನ್ನನ್ನು ಪಾಪಕಾರ್ಯದಿಂದ ಉಳಿಸಿದಿರಿ. 'ಸಿ' ಎಂದು ಗುರುತಿಸಿದ ಪುರಾ

ವೆಯ ಬಗ್ಗೆ ನೀವು ಹೇಳಿದ್ದು ಸುಮ್ಮನೆ ನನ್ನ ನಿರ್ಧಾರ ಬದಲಿಸಲು ವಕೀಲರು ಒಗೆದು ನೋಡಿದ ಒಂದು ಕಲ್ಲು ಎಂದು ನಾನು ತಿಳಿದಿದ್ದೆ. ಆದರೆ ನಿಜವಾಗಿಯೂ ಅದನ್ನು ನೋಡಿದಾಗ ಅದರ ಮಹತ್ವ ನನಗೆ ಹೊಳೆಯಿತು. ನಾನು ಅಲಕ್ಷ್ಯ ಮಾಡಿದ್ದರೆ ಎಂಥ ಪಾಪ ಕಾರ್ಯ ನನ್ನಿಂದ ಆಗಿ ಹೋಗುತ್ತಿತ್ತು! ನಾನಾಗಲೇ ಅವನಿಗೆ ಶಿಕ್ಷೆಕೊಡುವುದೆಂದು ನಿರ್ಧರಿಸಿಬಿಟ್ಟಿದ್ದೆ. ನಿರಪರಾಧಿಯನ್ನು ಸುಮ್ಮನೆ ಶಿಕ್ಷಿಸುತ್ತಿದ್ದೆನಲ್ಲ! ತುಂಬ ಉಪಕಾರವಾಯಿತು," ಎಂದರು.

ಅವರ ದೊಡ್ಡ ಮನಸ್ಸನ್ನು ತಿಳಿದು ನಿಜವಾಗಿಯೂ ನನ್ನ ಹೃದಯ ತುಂಬಿಬಂದಂತಾಯಿತು.

*

ಇಂಥದೇ ಇನ್ನೊಂದು ಘಟನೆಯೂ ನನ್ನ ನೆನಪಿಗೆ ಬರುತ್ತಿದೆ. ಅದು ಶ್ರೀ ತಿನ್ವೆ ಎಂಬ ಮ್ಯಾಜಿಸ್ಟ್ರೇಟರಿಗೆ ಸಂಬಂಧಿಸಿದುದು. ಅವರು ನನ್ನ ಪಕ್ಷಕಾರನೊಬ್ಬನಿಗೆ ಸಂಬಂಧಿಸಿದ ಪ್ರಕರಣದ ನಿರ್ಣಯ ಸಾರುವದಕ್ಕೆಂದು ಗೊತ್ತುಮಾಡಿದ್ದ ದಿನಕ್ಕೆ ಒಂದೇ ದಿನ ಮೊದಲು ನನ್ನ ವಕೀಲ ಮಿತ್ರರೊಬ್ಬರು ನನಗೊಂದು ಪತ್ರಬರೆದು ಈ ಪ್ರಕರಣದಲ್ಲಿ ನನಗೆ ಅನುಕೂಲವಾಗುವಂತಹ ರೂಲಿಂಗ್ ಒಂದನ್ನು ತಿಳಿಸಿದ್ದರು. ಆಗ ನಾನು ಒಂದು ಕಲ್ಲೊಗೆಯುವದೆಂದು ನಿರ್ಧರಿಸಿ ಪೋಲೀಸ್ ಪ್ರಾಸಿಕ್ಯೂಟರರನ್ನು ಕರೆದುಕೊಂಡು ಮ್ಯಾಜಿಸ್ಟ್ರೇಟರ ಚೇಂಬರಿಗೆ ಹೋದೆ. ಅಲ್ಲಿ ಆ-ಈ ಮಾತಾಡುತ್ತಿರುವಾಗ ಅವರ ಮನವೊಲಿಸುವ ರೀತಿಯಲ್ಲಿ ರೂಲಿಂಗನ್ನು ಅವರೆದುರಿಗಿಟ್ಟೆ.

ಆದರೆ ಅದರಿಂದ ಅವರೊಮ್ಮೆಲೆ ಸಿಟ್ಟಿಗೆದ್ದರು. "ತರುಣ ವಕೀಲರಾದ ನೀವು ನ್ಯಾಯಾಲಯಕ್ಕೆ ಬರುವಾಗ ಪೂರ್ಣ ತಯಾರಿಯನ್ನೇ ಮಾಡಿಕೊಂಡು ಬರುವದಿಲ್ಲ. ನಿಮಗೆ ಬೇಕಾದರೆ ಈ ಪುಸ್ತಕವನ್ನಿಲ್ಲಿ ಬಿಟ್ಟು ಹೋಗಬಹುದು. ಆದರೆ ನಿಮ್ಮ ಈ ನಡವಳಿಗೆ ನನಗೆ ಸರಿಬರುವುದಿಲ್ಲ", ಎಂದುಬಿಟ್ಟರು. ಮುಖ ಒಣಗಿಸಿಕೊಂಡು ಹೊರಬಂದೆ. ಆದರೆ ಪುಸ್ತಕವನ್ನು ಮಾತ್ರ ಅಲ್ಲಿಯೇ ಬಿಟ್ಟಿದ್ದೆ.

ಆದರೆ ಮರುದಿನ ನ್ಯಾಯಾಲಯಕ್ಕೆ ಬಂದಾಗ ನನ್ನ ಪಕ್ಷಕಾರನ ಬಿಡುಗಡೆಯಾದದ್ದು ಕಂಡು ನನಗೆ ಆಶ್ಚರ್ಯವಾಯಿತು. ಮಧ್ಯಾಹ್ನದ ರಜೆಯಲ್ಲಿ ಮ್ಯಾಜಿಸ್ಟ್ರೇಟರು ನನ್ನನ್ನು ತಮ್ಮ ಚೇಂಬರಿಗೆ ಕರೆಸಿದರು. ಅಲ್ಲಿ ಹಿಂದಿನ ದಿನ ಅವರಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ನಾನು ಕ್ಷಮೆ ಕೇಳಿಕೊಂಡೆ: ಅವರು ಕೂಡಲೇ ತಮ್ಮ ಹಸ್ತಾಕ್ಷರಗಳಲ್ಲಿದ್ದ ಐದು ಕಾಗದಗಳನ್ನು ನನ್ನೆದುರು ಸರಿಸಿ "ಇಲ್ಲಿ ನೋಡಿರಿ ಮಿ. ಗುಪ್ತಾ ನಾನೇ ಬರೆದ ಕಾಗದಗಳನ್ನು ನಾನು ಹರಿದು ಹಾಕುವದಿಲ್ಲ. ಮೈಗಳ್ಳರಾದ ನೀವೇ ಇದನ್ನು ಮಾಡಬೇಕು", ಎಂದರು. ಅದು ಈ ಪ್ರಕರದಲ್ಲಿ ಮೊದಲು ಬರೆದ ನಿರ್ಣಯವಾಗಿತ್ತು. ಅದರ ಪ್ರಕಾರ ನನ್ನ ಪಕ್ಷಕಾರನಿಗೆ ಮೂರು ತಿಂಗಳ ಶಿಕ್ಷೆಯಾಗಿತ್ತು! ಅವರಿಗೆ ಧನ್ಯವಾದಗಳನ್ನರ್ಪಿಸುತ್ತ ನಾನು ಆ ಕಾಗದಗಳನ್ನೆಲ್ಲಾ ಹರಿದು ಹಾಕಿದೆ.

"ಇನ್ನು ಮುಂದೆ ನಿಮ್ಮ ಪ್ರಕರಣಗಳಲ್ಲಿ ಇಷ್ಟು ಅಲಕ್ಷತನ ಸಲ್ಲದು," ಅವರು ನಗುತ್ತ ನುಡಿದರು. ✡

ಕೃತಜ್ಞತೆಯೆಂದರೆ ಹೃದಯದ ಸ್ಮರಣೆ. — ಜೆ. ಮ್ಯಾಸಿಯೂ

ಬಡವರಾಗಿರಬೇಕಾದರೆ ಶ್ರೀಮಂತರ ಹಾಗೆ ನಟಿಸಿ — ಜೆನ್ನಿ ಗೆಜ್ಲರ್

ಸಭಾ ನಿರ್ಣಯಗಳು: ಅವು ಒಂದು ಬದಿಯಿಂದ ಬಂದು ಮತ್ತೊಂದು ಬದಿಗೆ ಹೋಗುವಂತಹವು. — ಡ್ಯಾನಿ ಕೇಯ್

ಹೀಗಿದ್ದರು ನಮ್ಮ ಮಾಳವೀಯರು !

ಸಿ. ಎಫ್. ಆ್ಯಂಡ್ರ್ಯೂಜ್

೧೯೧೨ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ದಕ್ಷಿಣ ಆಫ್ರಿಕದಿಂದ ವಾಪಸ್ಸಾದ ದಿನ ಇನ್ನೂ ಜ್ಞಾಪಕದಲ್ಲಿದೆ. ಅವರಾಗ ವ್ಯಾಧಿಗ್ರಸ್ತರಾಗಿದ್ದರು, ಅವಿಶ್ರಾಂತ ದುಡಿಮೆಯ ಫಲವಾಗಿ ಅವರ ಮನಸ್ಸೂ ಅಸ್ತವ್ಯಸ್ತವಾಗಿತ್ತು. ದಕ್ಷಿಣ ಆಫ್ರಿಕದ ಬಿಳಿಯರು ಭಾರತೀಯರನ್ನು ದುರ್ದಮವಾಗಿ ನಡೆಸಿಕೊಳ್ಳುವುದರ ವಿರುದ್ಧ ಆಂದೋಲನ ಏರ್ಪಟ್ಟಾಗ ಭಾರತೀಯರ ಪರವಾಗಿ ಅದರಲ್ಲಿ ಭಾಗವಹಿಸಬೇಕೆಂದು ನಾನು ನಿರ್ಧರಿಸಿದೆ. ಅದಕ್ಕಾಗಿ ಮೊದಲು ದಿಲ್ಲಿಯನ್ನು ಸೇರಬೇಕಾಗಿತ್ತು. ಹೇಗೂ ದಾರಿಯಲ್ಲಿ ಅಲಹಾಬಾದ ಹತ್ತುವುದು; ಅಲ್ಲಿ ಗಾಡಿಯನ್ನು ಬದಲಿಸುವ ಮೊದಲು ಪಂಡಿತ ಮದನ ಮೋಹನ ಮಾಳವೀಯರನ್ನು ಏಕೆ ಭೇಟಿಯಾಗಬಾರದು? ಎಂಬ ವಿಚಾರ ತಲೆಯಲ್ಲಿ ಬಂತು. ಈ ವಿಚಾರವನ್ನು ನಾನು ಗೋಪಾಲಕೃಷ್ಣ ಗೋಖಲೆಯವರಿಗೆ ತಿಳಿಸುವುದೇ ತಡ, ಅವರು ನಾನು ಬರುವ ಗಾಡಿಯನ್ನು ಸೂಚಿಸಿ ಮಾಳವೀಯರಿಗೆ ತಂತಿಯನ್ನು ಕೊಟ್ಟೇಬಿಟ್ಟರು. ಸಮಯಕ್ಕೆ ಸರಿಯಾಗಿ ಮಾಳವೀಯರು ಸ್ಟೇಶನ್ನಿನಲ್ಲಿ ಹಾಜರಿದ್ದರು. ಪರಸ್ಪರ ಕುಶಲ ಸಂಭಾಷಣೆಯಾದ ನಂತರ ಅವರು ನನ್ನನ್ನು ತಮ್ಮ ಮನೆಗೆ ಊಟಕ್ಕೆ ಕರೆದರು. ಅವರನ್ನು ಬಹಳ ವರ್ಷಗಳಿಂದ ಬಲ್ಲ ನನಗೆ ಇದನ್ನು ಕೇಳಿ ಆಶ್ಚರ್ಯವೇ ಆಶ್ಚರ್ಯ. ಒಬ್ಬ ಹಿಂದು, ಅದರಲ್ಲೂ ಬಹು ಧಾರ್ಮಿಕವಾದ ಹಿಂದುವು ಕ್ರಿಶ್ಚಿಯನ್ನನನ್ನು ತನ್ನ ಮನೆಗೆ ಊಟಕ್ಕೆ ಕರೆಯುವುದೆಂದರೆ! ಮನೆಗೆ ಹೋದರೆ ಗಾಡಿ ತಪ್ಪಿ ಹೋದೀತೆಂಬ ಕಾರಣದಿಂದ ಅವರ ಆಮಂತ್ರಣವನ್ನು ಒಪ್ಪಿಕೊಳ್ಳದೆ ಕ್ಷಮೆಯನ್ನು ಯಾಚಿಸಿದೆ.

ಆದರೆ ಪಂಡಿತಜಿ ಹಾಗೆಯೆ ಬಿಡುವವರೆ? “ಹಾಗಾದರೆ ಉಪಾಹಾರವನ್ನಾದರೂ ತೆಗೆದುಕೊಳ್ಳಿರಲ್ಲ," ಎಂದು ನನ್ನನ್ನು ಆಗ್ರಹಪೂರ್ವಕವಾಗಿ ರೆಸ್ಟೋರೆಂಟಿಗೆ ಕರೆದುಕೊಂಡು ಹೋಗಿಯೇಬಿಟ್ಟರು. ಅದು ಅಗ್ಗದ ರೆಸ್ಟೋರೆಂಟಾಗಿರಲಿಲ್ಲ ಅಲ್ಲದೆ ಸಾಮಾನ್ಯವಾಗಿ ಅಲ್ಲಿ ಶಾಕಾಹಾರದ ಪದಾರ್ಥಗಳೂ ದೊರೆಯುತ್ತಿರಲಿಲ್ಲ. ಆದರೂ ಮಾಳವೀಯರು ಶಾಕಾಹಾರದ ಪದಾರ್ಥಗಳನ್ನು ತರಿಸಿಯೇಬಿಟ್ಟರು. ನಾವು ರೆಸ್ಟೋರೆಂಟಿನಲ್ಲಿರುವವರೆಗೆ ಅಪ್ಪಟ ಯುರೋಪಿಯನ್ ಡ್ರೆಸ್ಸಿನಲ್ಲಿದ್ದ ಸಾಹೇಬರುಗಳು ಶಾಲು ಧರಿಸಿ ಪೇಟಾ ಹೊತ್ತಭಾರತೀಯ ಇಲ್ಲಿಗೆ ಹೇಗೆ ಬಂದ ಎಂದು ಬೆರಗುಗಣ್ಣುಗಳಿಂದ ನೋಡುತ್ತಲೇ ಇದ್ದರು.

ಪಂಡಿತ ಮಾಳವೀಯರಿಗೆ ಹಿಂದೂಧರ್ಮದ ಬಗ್ಗೆ ಅಪಾರ ಅಭಿಮಾನ, ಗೌರವ, ಅದಕ್ಕಾಗಿ ಎಂತಹ ತ್ಯಾಗಮಾಡಲೂ ಅವರು ಸಿದ್ಧರಾಗಿರುತ್ತಿದ್ದರು. ಧರ್ಮಕ್ಕೆ ಸಂಬಂಧಿಸದ ಯಾವ ಕೆಲಸವನ್ನಾದರೂ ಮಾಡಿದರೆ ಅದು ಧರ್ಮಕ್ಕೆ ದ್ರೋಹ ಬಗೆದಂತೆಯೆ ಸರಿ ಎಂದು ಭಾವಿಸುವ ಮಟ್ಟಿಗೆ ನಿಷ್ಠುರ ಧಾರ್ಮಿಕರಾಗಿದ್ದರವರು. ಆದ್ದರಿಂದಲೇ ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತೆಯ ವಿರುದ್ಧ ಆಂದೋಲನ ಹೂಡಿದಾಗ ಹಿಂದುಗಳ ಯಾವ ಧಾರ್ಮಿಕ ಗ್ರಂಥವೂ ಅಸ್ಪೃಶ್ಯತೆಯನ್ನು ಸಮರ್ಥಿಸುವುದಿಲ್ಲವೆಂದು ಅದರಲ್ಲಿ ಭಾಗವಹಿಸಿದರು. ಹಿಂದುಳಿದ ಜಾತಿಗಳ ಜನ ತಮ್ಮ ಸಚ್ಚಾರಿತ್ರ್ಯ ಹಾಗೂ ಸುಂದರ ಜೀವನದಿಂದಾಗಿ ಮೇಲ್ವರ್ಗದ ಜನರಿಗೆ ಮಾರ್ಗದರ್ಶಕರಾಗಿದ್ದಾರೆ. ಇಂತಹ ಒಳ್ಳೆಯ ಜನರು ಅಸ್ಪೃಶ್ಯರೆಂದು ನನ್ನ ಮನಸ್ಸು ಹೇಗೆ ತಾನೆ ಒಪ್ಪಿಕೊಂಡೀತು? ಎಂದು ಮಾಳವೀಯರು ಮೇಲಿಂದ ಮೇಲೆ ಅನ್ನುತ್ತಿದ್ದರು. ಕಠೋರ ಧಾರ್ಮಿಕರಾಗಿದ್ದರೂ ಅವರ ಮನಸ್ಸು ಬೆಣ್ಣೆಯಂತೆ ಮೃದುವಾಗಿತ್ತು. ಧಾರ್ಮಿಕ ವಿಶ್ವಾಸ ಅವರ ದೃಷ್ಟಿಯನ್ನೆಂದೂ ಸಂಕುಚಿತಗೊಳಿಸ

ವೈದ್ಯಕೀಯ ವರದಿಗಳು

ಜೋಕೆ! 'ಸಿ' ಜೀವಸತ್ವ ದಾರಿ ತಪ್ಪಿಸೀತು

ಜಠರದ ಕ್ಯಾನ್ಸರ್, ಕೆಲವು ಬಗೆಯ ಅನೀಮಿಯ, ಜಠರ ವ್ರಣಗಳು, ದೊಡ್ಡ ಕರುಳಿನ ಊತ ಮುಂತಾದವುಗಳನ್ನು ಕಂಡು ಹಿಡಿಯಲು ಕೆಲವು ವೇಳೆ ಮಲಮೂತ್ರಗಳಲ್ಲಿ ರಕ್ತವಿದೆಯೋ ಹೇಗೆ ಎಂಬುದನ್ನು ನಿರ್ಧರಿಸುವುದು ಅಗತ್ಯವಾಗುತ್ತದೆ. ಇಂತಹ ಪ್ರಸಂಗಗಳಲ್ಲಿ ಇವು ಮಾನವನ ಕಣ್ಣಿಗೆಟುಕದಷ್ಟು ಅಲ್ಪ ಪ್ರಮಾಣದಲ್ಲಿರುವುದರಿಂದ ರೋಗ ನಿದಾನ ತಜ್ಞರು ಮಲಮೂತ್ರಗಳ ಮಾದರಿಯನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿ ಅವುಗಳ ಅಸ್ತಿತ್ವವನ್ನು ಕಂಡು-ಹಿಡಿಯಬೇಕಾಗುತ್ತದೆ.

ಇಂತಹ ಪ್ರಸಂಗಗಳು ವೈದ್ಯಕೀಯ ರಂಗದಲ್ಲಿ ದಿನನಿತ್ಯ ಎದುರಾಗುವಂತಹವೇ; ಆದರೆ ಅಮೇರಿಕದ ರಾಷ್ಟ್ರೀಯ ಸ್ವಾಸ್ಥ್ಯ ಸಂಸ್ಥೆಯಲ್ಲಿ ಈಚೆಗೆ ಬೆಳಕಿಗೆ ಬಂದ ಪ್ರಕರಣವೊಂದು ಹೊಸ ಸಂಶೋಧನೆಗೆ ಅನುವು ಮಾಡಿಕೊಟ್ಟಿದೆ. ಅನೀಮಿಯದಿಂದ ಬಳಲುತ್ತಿದ್ದ ಮಹಿಳೆಯೊಬ್ಬಳು ಈ ಸಂಸ್ಥೆಯ ಆಸ್ಪತ್ರೆಗೆ ಬಂದಾಗ ಅವಳ ಮಲದಲ್ಲಿ ರಕ್ತದ ಅಂಶ ಅಧಿಕವಾಗಿದ್ದುದು ವ್ಯಕ್ತವಾಯಿತು. ಆದರೆ ವಾಡಿಕೆಯಂತೆ ಮಲವನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿದಾಗ ರಕ್ತ ಹಾಗೂ ರಾಸಾಯನಿಕಗಳ ನಡುವೆ ಸ್ವಾಭಾವಿಕವಾಗಿ ನಡೆಯಬೇಕಾದ ಕ್ರಿಯೆ ನಡೆಯಲಿಲ್ಲ.

ಹೀಗೇಕಾಯಿತೆಂಬುದನ್ನು ಪರಿಶೀಲಿಸಿದಾಗ ಅವಳು ದಿನನಿತ್ಯ ಒಂದರಿಂದ ಎರಡು ಗ್ರಾಮುಗಳಷ್ಟು ಸಿ ಜೀವಸತ್ವದ ಮಾತ್ರೆಗಳನ್ನು ಸೇವಿಸುತ್ತಿದ್ದಳೆಂಬುದು ಗೊತ್ತಾಯಿತು. ನಮ್ಮ ಶರೀರ ಐನೂರು ಮಿಲಿಗ್ರಾಮುಗಳಿಗಿಂತ ಹೆಚ್ಚು ಜೀವಸತ್ವವನ್ನು ಹೀರಿಕೊಳ್ಳುವುದಿಲ್ಲ. ಒಂದು ವೇಳೆ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಿ ಜೀವಸತ್ವವನ್ನು ಸೇವಿಸಿದ್ದೇ ಆದರೆ ಹೆಚ್ಚಾದ ಪ್ರಮಾಣ ಮೂತ್ರದ ಮೂಲಕವಾಗಿ ಹೊರಬಿದ್ದು ಹೋಗುತ್ತದೆ. ಅವಳು ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಿ ಜೀವಸತ್ವವನ್ನು ಸೇವಿಸುತ್ತಿದ್ದುದಕ್ಕೂ ಸರಿಯಾದ ರಾಸಾಯನಿಕ ಕ್ರಿಯೆ ಏರ್ಪಡದಿದ್ದುದಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಅಲ್ಲಿನ ವಿಜ್ಞಾನಿಗಳು ಪರಿಶೀಲಿಸಿದಾಗ ಅವರ ಸಂಶಯ ಸರಿಯಾಗಿದ್ದುದು ದೃಢಪಟ್ಟಿತು. ಆದ್ದರಿಂದ ನೀವು ಸಿ. ಜೀವನಸತ್ವದ ಮಾತ್ರೆಗಳನ್ನು ಸೇವಿಸುತ್ತಿದ್ದರೆ ಇಂತಹ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕಿಂತ ಕನಿಷ್ಟ ಮೂರು ದಿನ ಮೊದಲಾದರೂ ಮಾತ್ರೆಗಳನ್ನು ಸೇವಿಸಬಾರದೆಂದು ಅಲ್ಲಿನ ರೋಗ ನಿದಾನ ತಜ್ಞರು ಹೇಳುತ್ತಾರೆ.

ಶರೀರದ ಆರೋಗ್ಯಕ್ಕೆ ಸಿ ಜೀವಸತ್ವ ಅಗತ್ಯ. ಆದರೆ ಅದು ಮಿತಿಯನ್ನು ಮೀರಬಾರದಷ್ಟೆ. ಹೀಗೆ ಈ ಜೀವ ಸತ್ವದ ಮಿತಿ

ಮೀರಲು ಮಾತ್ರೆಗಳ ಸೇವನೆಯೊಂದೇ ಕಾರಣವಲ್ಲ. ಸಿ ಜೀವಸತ್ವದಿಂದ ಸಮೃದ್ಧವಾದ ಆಹಾರ ಪದಾರ್ಥಗಳನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸುವುದೂ ಈ ಜೀವನಸತ್ವದಿಂದ ಯುಕ್ತವಾದ ಔಷಧಿಗಳನ್ನು ತೆಗೆದುಕೊಳ್ಳುವುದೂ ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅದು ಶರೀರದಲ್ಲಿ ಸಂಚಿತವಾಗಲು ಅವಕಾಶ ಮೀಯುತ್ತದೆ,

ಸಿ. ಜೀವಸತ್ವಗಳನ್ನು ಸೇವಿಸುತ್ತಿದ್ದಾಗಲೂ ಸರಿಯಾದ ಫಲಿತಾಂಶಗಳನ್ನು ತೋರಿಸುವಂತಹ ವಿಧಾನಗಳನ್ನು ಅಮೇರಿಕದ ರಾಷ್ಟ್ರೀಯ ಸ್ವಾಸ್ಥ್ಯ ಸಂಸ್ಥೆಯ ವಿಜ್ಞಾನಿಗಳು ಇತ್ತೀಚೆ ಕಂಡುಹಿಡಿದ್ದಾರೆ. ಅದು ನಮ್ಮಲ್ಲಿ ಬಳಕೆಗೆ ಬರಲು ಇನ್ನೂ ಕೆಲಕಾಲ ಬೇಕಾಗಬಹುದು. ಅಲ್ಲಿಯವರೆಗೆ ನೀವು ರೋಗ ನಿದಾನತಜ್ಞರಿಂದ ಇಂತಹ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕಾದಾಗ ಕನಿಷ್ಠ ಮೂರು ದಿನಗಳ ಮೊದಲು ಈ ಜೀವಸತ್ವದಿಂದ ದೂರವಿರುವುದು ಒಳ್ಳೆಯದು.

ಪಕ್ಷಿಗಳು ಹಾಗೂ ಹೃದಯ ರೋಗ

ಸುಂದರವಾದ ಪಕ್ಷಿಗಳಿಗೆ ನಿಮ್ಮ ಹೃದಯ ಮಾರು ಹೋಗಬಹುದು. ಆದರೆ ಆ ಪಕ್ಷಿಗಳ ಸಂತತ ಸಹವಾಸದಿಂದ ಹೃದಯಕ್ಕೆ ರೋಗ ತಗಲೀತೆಂಬ ಮಾತು ಮಾತ್ರ ಸದಾ ಲಕ್ಷ್ಯದಲ್ಲಿರಲಿ.

ಪಕ್ಷಿಗಳು ಹೃದಯ ಕವಾಟಕ್ಕೆ ಸಂಬಂಧಿಸಿದ ರೋಗವಾದ ಸಿಟಕೋಸಿಸ್ (Psittacosis) ಅನ್ನು ಹಬ್ಬಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹೀಗಾಗಿ ಪಕ್ಷಿಗಳನ್ನು ಮಾರುವವರಿಗೆ ವೃತ್ಯಾತ್ಮಕವಾಗಿ ಈ ರೋಗ ತಗಲುವ ಸಾಧ್ಯತೆ ಹೆಚ್ಚು. ಸಿಟಕೋಸಿಸ್ ಅನುವಂಶಿಕವಾಗಿಯೂ ಬರಬಹುದು. ಸಾಮಾನ್ಯವಾಗಿ ಅಂಥ ಪ್ರಸಂಗದಲ್ಲಿ ಪೂರ್ವಭಾವಿಯಾಗಿ ಸಂಧಿವಾತದ ಜ್ವರ ಕಾಣಿ[illegible]ಕೊಳ್ಳುವುದಿಲ್ಲ. ಆದರೆ, ಎ. ಎಮ್. ವಾರ್ಡ್ ಹಾಗೂ ಎಸ್. ಸಿ. ವಾರ್ಡ್ ಎಂಬಿಬ್ಬರು ಬ್ರಿಟಿಶ್ ವಿಜ್ಞಾನಿಗಳು ಹೊಸದಾಗಿ ಸಿಟಕೋಸಿಸ್ ತಗುಲಿದ ಅನೇಕ ಜನರನ್ನು ಪರಿಶೀಲಿಸಿದಾಗ ಅವರ ಪೈಕಿ ಶೇಕಡಾ ಐವತ್ತರಷ್ಟು ಜನರು ಹಿಂದೆಂದೂ ಸಂಧಿವಾತ ಜ್ವರದಿಂದ ಪೀಡಿತರಾಗಿರಲಿಲ್ಲ, ಈ ಜನರ ಪೈಕಿ ಶೇಕಡಾ ಅರುವತ್ತುಮೂರರಷ್ಟು ಜನರು ಒಂದಿಲ್ಲೊಂದು ಬಗೆಯಲ್ಲಿ ಪಕ್ಷಿಗಳ ಸಂಪರ್ಕದಲ್ಲಿದ್ದರೆಂಬುದು ವಾರ್ಡರ ಪರಿಶೀಲನೆಯಿಂದ ವ್ಯಕ್ತವಾಯಿತು. ಇವರಲ್ಲಿ ಕೆಲವರನ್ನು ವೈಜ್ಞಾನಿಕ ಪರೀಕ್ಷೆಗಳಿಗೊಳಪಡಿಸಿದಾಗ ಅವರಿಗೆ ಪಕ್ಷಿಗಳಿಂದ ಸಿಟಕೋಸಿಸ್ ರೋಗ ತಗುಲಿತ್ತೆಂಬುದಕ್ಕೆ ಜೀವ ರಸಾಯನ ಆಧಾರಗಳೂ ದೊರೆತವು. ಈ ವರೆಗೆ ಲಭ್ಯವಾದ ಮಾಹಿತಿಯ ಪ್ರಕಾರ ಸಿಟಕೋಸಿಸ್ ಅನ್ನು ಉಂಟು ಮಾಡುವ ರೋಗಾಣುಗಳ ಪ್ರತಿವಿಷಕಣಗಳು ಹೃದಯ ಕವಾಟವನ್ನು ಪ್ರವೇಶಿಸುತ್ತವೆಂಬುದು ಸ್ಪಷ್ಟವಾಗಿದ್ದರೂ ಅವೇ ಸಿಟಕೋಸಿಸ್‌ಗೆ ಕಾರಣವಾಗಿವೆಯೋ ಹೇಗೆಂಬ ಬಗ್ಗೆ ಇನ್ನು ನಿಖರವಾದ ಆಧಾರಗಳು ದೊರೆಯಬೇಕಾಗಿದೆ. ಆದರೆ ಸಿಟಕೋಸಿಸ್‌ಗೆ ಕಾರಣವಾಗುವ ರೋಗಾಣುಗಳನ್ನು ಮುಖ್ಯವಾಗಿ ಪಕ್ಷಿಗಳೇ ಪ್ರಸಾರ ಮಾಡುತ್ತವೆಂಬುದರಲ್ಲಿ ಈಗ ಯಾವ ಸಂಶಯವೂ ಉಳಿದಿಲ್ಲ.

ಹಿಮಜಲ ಸ್ನಾನ

ಯಾವಾಗಲೂ ಉಗುರು ಬೆಚ್ಚನ್ನ ನೀರಿನಲ್ಲಿ ಸ್ನಾನ ಮಾಡುವದು ಉತ್ತಮ. ಸುಡು ನೀರಲ್ಲಿ ಸ್ನಾನ ಮಾಡಿದರೆ ಶಕ್ತಿ ಹ್ರಾಸವಾಗುತ್ತದೆ ಎಂದು ಹೇಳುತ್ತಾರೆ. ಇನ್ನು ತಣ್ಣೀರು ಸ್ನಾನವೇ ಎಲ್ಲದಕ್ಕೂ ಶ್ರೇಷ್ಠ ಎಂದು ಉಪದೇಶಿಸುವವರೂ ಇದ್ದಾರೆ.

ಅವರ ಮಾತಿನಲ್ಲಿಯೂ ತಥ್ಯ ಇದೆ. ಆದರೆ ಮೈಕೊರೆವಂಥ ತಣ್ಣೀರಿನಲ್ಲಿ ಸ್ನಾನ ಮಾಡುವದು ತುಂಬಾ ಅಪಾಯಕರ. ನಮ್ಮ ಮಲೆನಾಡುಗಳಲ್ಲಿ ಇಂಥ ಸ್ನಾನದ ಅನುಭವ ಬರಬಹುದಾಗಿದೆ. ಚಳಿಗಾಲದಲ್ಲಿ ಮಲೆನಾಡಿನಲ್ಲಿ ಹಿರಿಯರೊಂದಿಗೆ ಚಿಕ್ಕವರು ಕೆರೆತೊರೆಗಳಿಗೆ ನಸುಕಿನಲ್ಲಿ ಸ್ನಾನಕ್ಕೆಂದು ಹೋದಾಗ ಮೈಕೊರೆವಂಥ ಹಿಮಜಲದಲ್ಲಿ ಮಕ್ಕಳು ಕಾಲಿಡಲು ಹಿಂಜರಿಯುತ್ತಾರೆ. 'ಒಂದು ಮುಳುಗು ಹಾಕು, ಎಲ್ಲ ಹೆದರಿಕೆ ಓಡಿಹೋಗುತ್ತದೆ' ಎಂದು ಹಿರಿಯರು ಉಪದೇಶಿಸುತ್ತಾರೆ. ಅವರು ಮುಳುಗು ಹಾಕುತ್ತಾರೆ. ಆದರೆ ಆ ಸ್ನಾನದಿಂದ ಒಂದು ಕಾಟ ತೀರಿಸಿದಂತಾಗುವದೇ ಹೊರತು ಸ್ನಾನದ ನಿಜವಾದ ಆನಂದ ದೊರೆಯಲಾರದು.

ಈಜುಗೊಳದಲ್ಲಿ ಬರ್ಫದ ಗಡ್ಡೆಗಳನ್ನು ಕರಗಿಸಿ ಆ ಮೈಕೊರೆವ ನೀರಲ್ಲಿ ಸ್ನಾನ ಮಾಡುವ ಚಟ ವಿದೇಶೀಯರಲ್ಲಿ ಕೆಲವರಿಗೆ ಇದೆ. ಇಂಥ ಹಿಮಜಲದಲ್ಲಿ ಸ್ನಾನ ಮಾಡುವದೂ ಒಂದು ಪೌರುಷ ಎಂದು ಅವರ ಭಾವನೆ. ಆದರೆ ಅದೆಲ್ಲ ತಪ್ಪು. ಸ್ನಾನದ ನೀರಿನ ಉಷ್ಣತೆ ೭೦ ಡಿಗ್ರಿ ಫ್ಯಾರನ್‌ಹೈಟ್‌ದಷ್ಟಿದ್ದರೆ ಮನುಷ್ಯನ ರಕ್ತ ಸಂಚಲನಕ್ಕೆ ವ್ಯತ್ಯಯವಾಗಿ ದೇಹಕ್ಕೆ ಅಪಾಯ ಉಂಟಾಗುವದು.

ಶಸ್ತ್ರಚಿಕಿತ್ಸೆಯ ಕಾಲಕ್ಕೆ ಕೆಲವೊಮ್ಮೆ ಇಂಥ ಹಿಮಜಲ ಸ್ಪರ್ಶದ ಸಹಾಯದಿಂದ ಶರೀರದ ಭಾಗವನ್ನು ಮರಕಟ್ಟಿಸಿ ಶಸ್ತ್ರ ಚಿಕಿತ್ಸೆ ನಡೆಸುವದುಂಟು. ಇಷ್ಟೇ ಇದರ ಉಪಯೋಗ ಹೊರತಾಗಿ ಎಂಥಲ್ಲಿಯೂ ಯಾವ ಕಾಲದಲ್ಲಿಯೂ ಹಿಮಜಲವು ಸ್ನಾನದ ಆನಂದವನ್ನು ಹೆಚ್ಚಿಸುವದು ಎಂದು ಹೇಳಲಿಕ್ಕಾಗದು.

ಹೆಚ್ಚು ಒತ್ತಡ, ಕ್ರಾಂತಿ ಹತ್ತಿರ

ಜೇನ್ನೊಣದಷ್ಟು ರಾಣಿಗೆ ವಿಧೇಯವಾದ ಮತ್ತೊಂದು ಕೀಟ ಬಹುಶಃ ಕೀಟಪ್ರಪಂಚದಲ್ಲಿಯೇ ದೊರೆಯಲಾರದು. ಆದರೆ ಹೆಚ್ಚು ಒತ್ತಡದಿಂದ ವಿದ್ಯುತ್ತನ್ನು ಹರಿಸಿ ಈ ಕೀಟಗಳ ಸುತ್ತ ಪ್ರಬಲವಾದ ಕಾಂತ ಕ್ಷೇತ್ರವನ್ನು ನಿರ್ಮಿಸಿದರೆ ವಿಧೇಯತೆ ಮಾಯವಾಗಿ ಅವು ರೌದ್ರಾವತಾರವನ್ನು ತಾಳುವುದೆಂಬುದು ಪಶ್ಚಿಮ ಜರ್ಮನಿಯ ಪ್ರೊ. ಗೆರಹಾ ಆಲ್ಟ್‌ಮನ್ನರ ಪ್ರಯೋಗಗಳಿಂದ ಇತ್ತೀಚೆ ಅಕಸ್ಮಾತ್ತಾಗಿ ಬೆಳಕಿಗೆ ಬಂತು. ಜೇನ್ನೊಣಗಳನ್ನವರು ಪ್ರಬಲವಾದ ಕಾಂತಕ್ಷೇತ್ರಕ್ಕೊಳಪಡಿಸಿದಾಗ ಅವು ಪರಸ್ಪರ ಕಚ್ಚಾಡಿದವಲ್ಲದೆ ರಾಣಿಯನ್ನು ಕೊಂದು ಹಾಕಿದವು. ಅನಂತರ ಅವು ವರ್ತಿಸಿದ ರೀತಿ ತುಸು ವಿಚಿತ್ರವೇ ಎನ್ನಬೇಕು. ಪ್ರಯೋಗಕ್ಕೊಳಪಟ್ಟ ಈ ಜೇನ್ನೊಣಗಳು ಅವಸರದಿಂದ ಗೂಡನ್ನು ಸೇರಿ ದ್ವಾರವನ್ನು ಮೇಣದಿಂದ ಮುಚ್ಚಿದವು. ತತ್ಪರಿಣಾಮವಾಗಿ ಉಸಿರಾಟಕ್ಕೆ ಗಾಳಿ ಸಾಕಾಗದೆ ಅವು ಪಟಪಟ ಒದ್ದಾಡಿ ಗೂಡಿನಲ್ಲಿ ಪ್ರಾಣಬಿಟ್ಟವು. ಪ್ರೊ. ಆಲ್ಟಮನ್ನರು ಪ್ರಯೋಗಕೊಳಪಡಿಸಿದ ಒಟ್ಟು ಹದಿನಾರು ಸಾವಿರ ಜೇನ್ನೊಣಗಳ ಪೈಕಿ ಒಂದಾದರೂ ಬದುಕುಳಿಯಲಿಲ್ಲ. ಜೇನ್ನೊಣಗಳ ಈ ಅಸ್ವಾಭಾವಿಕ ವರ್ತನೆಗೆ ಬಹುಶಃ ಕಾಂತ ಕ್ಷೇತ್ರವೇ ಕಾರಣವಾಗಿರಬೇಕು ಎನ್ನುತ್ತಾರೆ ಪ್ರೊ. ಗೆರಹಾ ಆಲ್ಟಮನ್. ಕಾಂತ ಕ್ಷೇತ್ರವು ಮಾನವನ ವರ್ತನೆಯಲ್ಲೂ ಮಾರ್ಪಾಟುಗಳನ್ನುಂಟು ಮಾಡಬಹುದೆಂದು ಆಲ್ಟಮನ್ನರು ಹೇಳುವುದಿಲ್ಲವಾದರೂ ವಿಜ್ಞಾನಿಗಳು ಈ ವಿಷಯದತ್ತ ತಮ್ಮ ಗಮನವನ್ನು ಹರಿಸಬೇಕೆಂದು ಅಭಿಪ್ರಾಯಪಡುತ್ತಾರೆ.

ಪಂಚೇಂದ್ರಿಯಗಳು ಮತ್ತು ಮನಸ್ಸು

ಎಸ್. ವಿ.
ಶೆಟ್ಟಿಗಾರ

ಮನುಷ್ಯನಾದವನು ಪಂಚೇಂದ್ರಿಯಗಳನ್ನು ಗೆಲ್ಲಬೇಕು. ಆಗ ಆತನ ಜನ್ಮ ಸಾರ್ಥಕವೆನಿಸುತ್ತದೆ; ಆತ ಮಹಾತ್ಮನೆನಿಸುತ್ತಾನೆ; ಬದಲಾಗಿ ಮನುಷ್ಯನಾದವನು ಪಂಚೇಂದ್ರಿಯಗಳಿಗೆ ಸೋತರೆ ಆತನ ಜನ್ಮ ನಿರರ್ಥಕವೆನಿಸುತ್ತದೆ—" ಗುರುಗಳು ಪ್ರವಚನ ನೀಡುತ್ತಾ ಹೇಳಿದರು.

ಶಿಷ್ಯ ವಿನಮ್ರನಾಗಿ ಪ್ರಶ್ನಿಸಿದ: "ಗುರುಗಳೇ! ಪಂಚೇಂದ್ರಿಯಗಳಿಗೆ ಸೋಲುವುದು ಅಥವಾ ಅವುಗಳನ್ನು ಗೆಲ್ಲುವುದು ಎಂದರೇನು? ಪಂಚೇಂದ್ರಿಯಗಳಿಗೆ ಸೋತ ಮನುಷ್ಯನಿಗೂ ಅವುಗಳನ್ನು ಗೆದ್ದವನಿಗೂ ಯಾವ ಅಂತರ ಕಂಡು ಬರುತ್ತದೆ?"

ಇನ್ನೊಂದು ದಿನ ತಿಳಿಸುವುದಾಗಿ ಹೇಳಿ ಗುರುಗಳು ಅಂದಿನ ಪ್ರವಚನವನ್ನು ಮುಕ್ತಾಯಗೊಳಿಸಿದರು.

ಮರುದಿನ ಶಿಷ್ಯನೊಡನೆ ಗುರುಗಳು ರಾಜವೀಧಿಗೆ ಬಂದರು. ರಾಜನು ತನ್ನ ಐವರು ರಾಜಭಟರನ್ನು ಸುತ್ತ ಇರಿಸಿಕೊಂಡು ಮುಂದೆ ಸಾಗುತ್ತಿರುವುದನ್ನು ಗುರುಗಳು ಶಿಷ್ಯನಿಗೆ ತೋರಿಸಿದರು. ಸ್ವಲ್ಪ ಹೊತ್ತಿನಲ್ಲಿ ರಾಜವೀಧಿಯ ಮತ್ತೊಂದು ಕಡೆಯಲ್ಲಿ ಐವರು ರಾಜಭಟರ ಮಧ್ಯೆ ಕೊಲೆಪಾತಕಿಯೊಬ್ಬನು ಸಾಗುತ್ತಿರುವುದನ್ನು ಗುರುಗಳು ಶಿಷ್ಯನಿಗೆ ತೋರಿಸಿದರು.

"ಈ ಎರಡೂ ದೃಶ್ಯಗಳಲ್ಲಿ ಐವರು ರಾಜಭಟರ ಮಧ್ಯೆ ಓರ್ವ ವ್ಯಕ್ತಿ ಸಾಗುತ್ತಿರುವುದನ್ನು ನೀನು ನೋಡಿದಿಯಷ್ಟೆ! ಏನಾದರೂ ಈ ದೃಶ್ಯಗಳೊಳಗೆ ವ್ಯತ್ಯಾಸ ಕಾಣಿಸುತ್ತಿದೆಯೇ?" ಗುರುಗಳು ಪ್ರಶ್ನಿಸಿದರು.

ಶಿಷ್ಯನೆಂದ: "ಹೌದು; ಒಂದನೆಯ ದೃಶ್ಯದಲ್ಲಿ ರಾಜಭಟರ ಮಧ್ಯೆ ಇದ್ದ ವ್ಯಕ್ತಿ ನರೋತ್ತಮನಾಗಿದ್ದಾನೆ ಮತ್ತು ಅವನ ಕೈಗಳು ಮುಕ್ತವಾಗಿವೆ. ಆದರೆ ಎರಡನೆಯ ದೃಶ್ಯದಲ್ಲಿ ರಾಜಭಟರ ಮಧ್ಯೆ ಕಂಡು ಬಂದ ವ್ಯಕ್ತಿ ನರಾಧಮನಾಗಿದ್ದಾನೆ ಮತ್ತು ಅವನ ಕೈಗಳು ಬಂಧಿತವಾಗಿವೆ."

"ಇನ್ನೇನಾದರೂ ವ್ಯತ್ಯಾಸ ತೋರುತ್ತಿದೆಯೆ? ಐವರು ರಾಜಭಟರ ಮತ್ತು ಕೇಂದ್ರದಲ್ಲಿರುವ ವ್ಯಕ್ತಿಯು

ಏನಾದರೂ ಹೇಳಬಲ್ಲೆಯಾ?" ಗುರುಗಳು ವಿಚಾರಿಸಿದರು. ಶಿಷ್ಯ ಸಲ್ಪ ಹೊತ್ತು ಆಲೋಚಿಸಿ ಬೇರೇನೂ ವ್ಯತ್ಯಾಸ ಇಲ್ಲವೆಂಬಂತೆ ತಲೆಯಾಡಿಸಿದನು.

ಗುರುಗಳು ವಿವರಿಸಿದರು: "ನಿನ್ನ ಮೇಲ್ನೋಟಕ್ಕೆ ನೀನು ಹೇಳಿರುವ ಎರಡು ವ್ಯತ್ಯಾಸಗಳನ್ನು ಕಂಡಿರುವುದು ಸಹಜವೇ! ಆದರೆ ಅವೆರಡಕ್ಕಿಂತಲೂ ಪ್ರಾಮುಖ್ಯವಾದ ಮತ್ತೊಂದು ವ್ಯತ್ಯಾಸವಿದೆ. ಅದೇನೆಂದರೆ ಮೊದಲನೆ ದೃಶ್ಯದಲ್ಲಿ ಕೇಂದ್ರದಲ್ಲಿರುವ ವ್ಯಕ್ತಿಯು ಅಂಕೆಯಲ್ಲಿ ಐವರು ರಾಜಭಟರಿದ್ದಾರೆ. ಮಧ್ಯದಲ್ಲಿರುವ ವ್ಯಕ್ತಿ ಆಜ್ಞೆ ನೀಡಿದಂತೆ ಆ ಐವರೂ ರಾಜಭಟರು ನಡೆದುಕೊಳ್ಳಬೇಕಾಗಿದೆ. ಆದರೆ ಎರಡನೆಯ ದೃಶ್ಯದಲ್ಲಿ ಹಾಗಲ್ಲ. ಸುತ್ತಲಿನ ಆ ಐವರು ರಾಜಭಟರು ಹೇಳಿದಂತೆ ಅವರ ಅಂಕೆಯಲ್ಲಿ ಮಧ್ಯದಲ್ಲಿರುವ ವ್ಯಕ್ತಿ ಇದ್ದಾನೆ."

ಶಿಷ್ಯ ಹೌದೆಂಬಂತೆ ತಲೆಯಾಡಿಸಿದನು.

ಗುರುಗಳು ಮುಂದೆ ಹೇಳಿದರು: "ನಿನ್ನೆಯ ನಿನ್ನ ಪ್ರಶ್ನೆಗಳಿಗೆ ಇಗೋ ಇದೇ ಉತ್ತರ. ಎರಡೂ ದೃಶ್ಯಗಳಲ್ಲಿ ಕಂಡು ಬಂದ ರಾಜಭಟರನ್ನು ಪಂಚೇಂದ್ರಿಯಗಳೆಂದು ತಿಳಿದುಕೊ. ಕೇಂದ್ರದಲ್ಲಿರುವ ವ್ಯಕ್ತಿಯೇ ಮನಸ್ಸು. ವ್ಯಕ್ತಿಯ ಮನಸ್ಸು ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಅವುಗಳನ್ನು ತನ್ನ ಆಜ್ಞಾಪಾಲಕರಾಗಿ ನಡೆಸಿಕೊಂಡು ಹೋಗಬೇಕು. ಬದಲಾಗಿ ಮನಸ್ಸನ್ನು ಪಂಚೇಂದ್ರಿಯಗಳ ಹತೋಟಿಗೆ ಬಿಟ್ಟಲ್ಲಿ ಆತ ಪಂಚೇಂದ್ರಿಯಗಳ ದಾಸವಾಗಿ ವರ್ತಿಸಬೇಕಾಗುತ್ತದೆ"

"ಪಂಚೇಂದ್ರಿಯಗಳ ವಾಸನಾ ದೃಷ್ಟಿಗೆ, ಆಶೆ ಆಮಿಷಗಳ ಆಕರ್ಷಣೆಗೆ ಮನಸ್ಸು ಬಗ್ಗಿ ಬಗ್ಗಿ ನಡೆಯುವುದೆಂದರೆ ಪಂಚೇಂದ್ರಿಯಗಳಿಗೆ ಸೋಲುವುದೆಂದರ್ಥ. ಅಂತಹ ಮನುಷ್ಯ ಯಾವಾಗಲೂ ಅಧಃಪತನ ಹೊಂದಿ ನರಾಧಮನೆನಿಸುತ್ತಾನೆ. ಬದಲಾಗಿ ಮನಸ್ಸು ನ್ಯಾಯ ಅನ್ಯಾಯಗಳ ಧರ್ಮ ಅಧರ್ಮಗಳ ತುಲನೆ ಮಾಡಿ ತನ್ನ ಪಂಚೇಂದ್ರಿಯಗಳನ್ನು ನ್ಯಾಯ ಧರ್ಮ ಸಮ್ಮತ ಕಾರ್ಯಗಳಿಗೆ ಮಾತ್ರ ಹಚ್ಚಿದಾಗ ಆತ ಪಂಚೇಂದ್ರಿಯಗಳನ್ನು ಗೆದ್ದವನಾಗಿ ನರೋತ್ತಮನಾಗುತ್ತಾನೆ."

ಅಭಿರುಚಿ

ಜಾರ್ಜ್ ಬರ್ನಾರ್ಡ್‌ಷಾರನ್ನು ಅವರ ಮಿತ್ರರೊಬ್ಬರು, "ನಿಮ್ಮ ಮನೆಯಲ್ಲಿ ಹೂಗಿಡಗಳಿಲ್ಲವಲ್ಲ. ಏಕೆ. ಹೂವೆಂದರೆ ನಿಮಗೆ ಸೇರುವುದಿಲ್ಲವೆ?" ಎಂದು ಕೇಳಿದರಂತೆ.

ಅದಕ್ಕೆ ಷಾ, "ಸೇರುತ್ತದೆ. ಆದರೆ ಸೇರಿದ್ದನ್ನು ಕತ್ತರಿಸಿ ತಂದು ಸಿಂಗರಿಸಿಕೊಳ್ಳುವುದು ನನಗಿಷ್ಟವಿಲ್ಲ," ಎಂದು ಹೇಳಿದರಂತೆ.

—ಎಸ್. ಎ. ಚೆಂಗಾವಿ

ಆಟ

ಏರಿ ನಿಂತ ಕೆರೆಗೆ ಕಲ್ಲನ್ನು
ಬೀಸಿ, ಬೀಸಿ ಎಬ್ಬಿಸಿದ ಅಲೆಗಳ
ಕಣ್ಣು–ಮನಗಳಲ್ಲಿ ತುಂಬಿಕೊಳ್ಳುತ್ತ
ಮನವನ್ನು ಅದರಂತೆ ಸುರುಳಿ ಬಿಚ್ಚಲು
ಬಿಟ್ಟು ಕುಳಿತಾಗ,
ತಟ್ಟನೆ
ಹೊಳೆದದ್ದು
ಇದೇ ಜೀವನವೆಂದು.
ಹೌದಲ್ಲ, ನಾನೇಕೆ ಆಡಬೇಕು?
ಹೀಗೆಲ್ಲ ಆಳದಿಂದ ನೀರಾಳಕ್ಕೆ ಹಾರಿ
ಅಲ್ಲಿಯ ಕೆಸರನ್ನೆಲ್ಲ ಎತ್ತಿ, ಎತ್ತಿ
ಮೈ, ಕೈ, ಮನಸ್ಸೆಲ್ಲ ತೊಡೆದುಕೊಳ್ಳುತ್ತ
ಆಡುವೇಕೆ (ಆಟವಿಲ್ಲದೆ ಇದ್ದು ಬಾರದು)
ಬೇಡ,
ಬೇಡವೇ ಬೇಡ, ಈ ಕೆಸರಿನಾಟ,
ಬಿಡಬೇಕು, ಹೋಗಿಯೇ ಬಿಡಬೇಕು,
ಎಲ್ಲವನ್ನೂ ತೊರೆದು,
......ಆದರೆ
ಇವರೆಲ್ಲರೂ ಬಿಡಲೊಲ್ಲರೇಕೆ?
ಬಂಧುವೆಂಬ ಬಂಧನದಲ್ಲಿ ಬಂಧಿಸಿ,
ಉಸಿರು ಕಟ್ಟಿಸಿ,
ಮೇಲೆ ಸಿಕ್ಕಿಸಿ,
ಸಾಯಲೂ ಬಿಡದೇ,
ಜೀವಿಸಲು ಕೊಡದೇ,
ತ್ರಿಶಂಕುವಿನಾಕಾಶದಲ್ಲಿ ನನ್ನನ್ನು
ಬಿಟ್ಟಾಗ,
ಮನದಲ್ಲಿ ಅಚ್ಚೊತ್ತಿದ್ದು,
To be or not to be–
That is the question,
......ಎಂಬ ಹ್ಯಾಮ್ಲೆಟ್ಟನ ಪ್ರಶ್ನೆ.
ಇದಕ್ಕುತ್ತರ ದಕ್ಕದೇ
ಮತ್ತೆ,
ಮತ್ತೆ ಕೆಸರಿನಾಟಕ್ಕೇ ಇಳಿಯುತ್ತೇನೆ.

ಬಯಕೆ

ಅಬ್ಬ!
ಎಷ್ಟು ಸೊಕ್ಕು
ನನ್ನೀ
ನಿದ್ದೆವೆಣ್ಣಿಗೆ!
ಬೇಸತ್ತಿದ್ದೇನೆ
ಇವಳ
ಕೊಂಡಾಟಕೆ.
ಆ......
ಘಟೋತ್ಕಚನ
ಇರುಳ್ ಕಾಳಗಗಳು
ನಿಂಗಿಲಾಗಿ
ಕಾಣಿಸಿದ್ದೇನೆ
ಇವಳ ಕೂಡೆ.
ನೀನೆಷ್ಟೆ
ಕಾಡಿದರು
ನೀನೆಷ್ಟೆ
ಮುತ್ತಿದರು
ಈ ನನ್ನ
ಪ್ರಿಯಳು
ತೆರೆಯಲೊಲ್ಲೆ
ನಿನಗೆನ್ನ
ರತಿ ಕೂಟದ
ಎಂದು
ಕೊಂಕಿಸಿ
ನಗುವ
ಇವಳನ್ನೆನ್ನ
ಬಾಹುಬಂಧಕೆ
ಸಿಗಿಸಿ
ಹಿಂಡಿಗಿ
ಹೊಸೆದು
ಎಸೆದು
ಬಿಡುವ
ಬಯಕೆ!

ಗೋಪಾಲ ಭಟ

ನನ್ನ ರಾಗಾನುರಾಗ

ರಂ. ಶ್ರೀ. ಮುಗಳಿ

ನಾನು ಸಂಗೀತಗಾರನೂ ಅಲ್ಲ, ಸಂಗೀತ ತಜ್ಞನೂ ಅಲ್ಲ. ಸಂಗೀತ ರಸಿಕನೆಂದು ಹೇಳಿಕೊಳ್ಳುವ ಧೈರ್ಯವೂ ನನಗಿಲ್ಲ. ಸಂಗೀತಕ್ಕೂ ನನಗಿರುವ ನಂಟನ್ನು ಬಣ್ಣಿಸಲು ಯಾವೊಂದು ಶಬ್ದವೂ ಸಾಲದೆಂದು ತೋರುತ್ತದೆ. ಸಂಗೀತ ನನಗೆ ಬೇಕು ಅಂದರೆ ನನಗೆ ಬೇಕಾದ ರೀತಿಯಲ್ಲಿ ಬೇಕಾದ ಸಮಯದಲ್ಲಿ ಬೇಕು. ಸಂಗೀತವೆಂಬ ಹೆಸರಿನಲ್ಲಿ ನಡೆಯುವುದೆಲ್ಲ ನನಗೆ ಬೇಕಿಲ್ಲ. ಅದು ದಕ್ಷಿಣಾದಿ, ಉತ್ತರಾದಿ ಯಾವುದೇ ಇರಲಿ, ಪೂರ್ವದ್ದಿರಲಿ ಪಶ್ಚಿಮದ್ದಿರಲಿ ಅದನ್ನು ನುಡಿಸುವ ಕಂಠ ಅಥವಾ ವಾದ್ಯ ಗಡಸು, ಗೊಗ್ಗರ, ಅಬ್ಬರಗಳಿಂದ ಬೋಯಿಂಗ್ ವಿಮಾನದಂತೆ ಗುಡುಗು ಹಾಕುತ್ತಿದ್ದರೆ ನನಗೆ ಎಷ್ಟೂ ಸರಿಬರುವದಿಲ್ಲ. ಅದರಲ್ಲಿಯು ಕಸರತ್ತಿನ ಭಾಗವಂತೂ ನನ್ನನ್ನು ಕೆಲ ಸಮಯ ಸಂಗೀತಶತ್ರುವನ್ನೇ ಮಾಡಿಬಿಡುತ್ತದೆ. ಆಗ ನಾನು ಅದರಿಂದ ಹರಿದಾರಿ ದೂರ ಹೋಗಿಬಿಡುತ್ತೇನೆ. ಬಾನುಲಿಯು ಮುಂದೆ ಕೂತಿದ್ದರೆ ಅದರ ಕಿವಿ ತಿರುವಿ ನಿಲ್ಲಿಸಿಬಿಡುತ್ತೇನೆ. ನನಗೆ ಬೇಕಾದ ಸಂಗೀತದಲ್ಲಿ ಇಂಪಾದ ದನಿ ಬೇಕು, ಜೊತೆಗೆ ಬಹು ಮುಖ್ಯವಾಗಿ ಈ ಹೊರದನಿಯಲ್ಲಿ ಎದೆಯ ಒಳದನಿ ಕೇಳಬೇಕು, ಜೀವಭಾವ ಹೊಮ್ಮಬೇಕು. ನಮ್ಮ ಸಾಂಗತ್ಯ ಸಮ್ರಾಟನಾದ ಕವಿ ರತ್ನಾಕರ ಬಣ್ಣಿಸಿರುವಂತೆ 'ಒಳಗುಮ್ಮಿದಾನಂದರಸ ತನ್ನ ತನು ತುಂಬಿ ತುಳುಕಿ ಹೊರಸೂಸುವಂತೆ' ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ ಹೊಳೆದು ಮೋಹಿಸಬೇಕು. ಬಹುಶಃ ಒಂದು ಶಬ್ದದಲ್ಲಿ ಅಲ್ಲದಿದ್ದರೂ ಒಂದು ಸೊಗಸಾದ ಹೋಲಿಕೆಯಿಂದ ಕೂಡಿದ ಸಾಂಗತ್ಯದ ಒಂದು ನುಡಿಯಲ್ಲಿ ನನಗೆ ಇಷ್ಟವಾದ ಸಂಗೀತದ ಜೀವಾಳವನ್ನು ಕವಿ ಬಣ್ಣಿಸಿದ್ದಾನೆ. ಇಂಥ ಸಂಗೀತದ ಶೋಧದಲ್ಲಿ ನಾನು ಆಯುಷ್ಯದುದ್ದಕ್ಕೂ ಪರಿಶ್ರಮಿಸಿದ್ದೇನೆ, ನನಗೆ ಪ್ರಿಯವಾದ ರಾಗಗಳನ್ನು ಕಂಡುಹಿಡಿದಿದ್ದೇನೆ. ಅವು ಯಾರ ಕಂಠದಲ್ಲಿಯೇ ಕೇಳಿ ಬರಲಿ ನಾನು ಅವನ್ನು ತಕ್ಷಣ ಗುರುತಿಸುತ್ತೇನೆ. ಹಸಿವು ನೀರಡಿಕೆಗಳನ್ನು ಮರೆತು ಕೇಳುತ್ತ ಕೂಡುತ್ತೇನೆ, ತಲ್ಲೀನನಾಗುತ್ತೇನೆ. ಈ ನನ್ನ ರಾಗಾನುರಾಗವು ನನ್ನ ಜೀವಕ್ಕೆ ಅಂಟಿಕೊಂಡು ಬಂದಿದೆ. ಎಷ್ಟರ ಮಟ್ಟಿಗೆ ಅಂದರೆ ನನಗೆ ಆಗಾಗ ಉಂಟಾಗುವ ಬೇಸರವನ್ನೂ ವೈರಾಗ್ಯವನ್ನೂ ಇದು ತೊಡೆದುಹಾಕುತ್ತದೆ, ಹೊಸ ಚೈತನ್ಯವನ್ನು ನೀಡುತ್ತದೆ. ನಾನು ಬದುಕಿರುವವರೆಗೆ ಹೀಗೇ ಇರಬೇಕು ಎನ್ನಿಸುತ್ತದೆ. ಅಥವಾ ಬದುಕಿರುವವರೆಗೆ ಎಂಬ ಮಾತೇ ಸುಳ್ಳೆನಿಸಿ ನಾನು ಹೀಗೇ ಕೊನೆಯವರೆಗೆ ಸಂತೋಷ ಸಾಗರದಲ್ಲಿ ನಲಿದಾಡುವ ಸನತ್ಕುಮಾರನೆಂದು ಭಾವಿಸುವಂತೆ ಮಾಡುತ್ತದೆ. ಯಾವುದೇ ಅನುರಾಗವಿರಲಿ ಅದು ಸಂಸಾರದಲ್ಲಿ ಮೋಹವನ್ನು ಹೆಚ್ಚಿಸಿ ದುಃಖಕ್ಕೆ ಕಾರಣವಾಗಿ ನೈಜ ಸುಖಕ್ಕೆ ಮಾರಣವಾಗುತ್ತದೆ ಎಂದು ತತ್ತ್ವಜ್ಞಾನಿಗಳು ಬೇಕಾದಷ್ಟು ಹೇಳಲಿ. ನನ್ನ ರಾಗಾನುರಾಗವು ಮಾತ್ರ ನನ್ನೆಲ್ಲ ದುಃಖವನ್ನು ನಿವಾರಿಸಿ ನೈಜ ಸುಖದ ಅಪಾರ ಸಾಗರದಲ್ಲಿ ನನ್ನ ಮುಳುಗಿ ಮುಳ್ಕಾಡಿಸುತ್ತದೆ ಎಂಬುದನ್ನು ಸ್ವಾನುಭವದಿಂದ ಹೇಳಬಲ್ಲೆ.

ಸಂಗೀತದಲ್ಲಿ ನನಗೆ ವಿಶಿಷ್ಟವಾದ ಆಸಕ್ತಿ ಹೇಗೆ ಹುಟ್ಟಿತು, ಹೇಗೆ ಬೆಳೆಯಿತು ಎಂಬುದನ್ನು ನಾನೀಗ ಪೂರ್ತಿಯಾಗಿ ಹೇಳಲಾರೆ. ಅದು ಸ್ವಲ್ಪಮಟ್ಟಿಗೆ ನನಗೆ ಲಭಿಸಿದ ಪಿತ್ರಾರ್ಜಿತ ಆಸ್ತಿ. ಈ ಆಸ್ತಿಯ ಅರಿವನ್ನು ನಾನು ಪ್ರೌಢವಯಸ್ಕನಾದ ಕಾಲೇಜಿನ ವಿದ್ಯಾರ್ಥಿಯಾಗಿ ನವನವೀನ ಸ್ಪಂದನೆಗಳಿಗೆ ಎದೆಯನ್ನು ತೆರೆದಿಟ್ಟ ಕಾಲದಲ್ಲಿ ಹೊಂದಿದೆನು. ಆಗ ಕೇಳಿದ ಶಾಸ್ತ್ರೀಯ ಗಾಯನ, ನಾಟ್ಯಗೀತ, ಸಂಪ್ರದಾಯದ ಹಾಡು ಮತ್ತು ವಿವಿಧ ಪ್ರಕಾರದ ಜನತಾಗೀತ ಇವು ನನ್ನಲ್ಲಿ ಸಂಗೀತದ ಅಭಿರುಚಿಯನ್ನು ಹುಟ್ಟಿಸಿದುವು ಮಾತ್ರವಲ್ಲ, ಅವುಗಳ ಅನುಕರಣಕ್ಕೆ ಮನಸ್ಸು ಮಾರು ಹೋಯಿತು. ಕೇಳಿದ್ದನ್ನು ಮತ್ತೆ ಮತ್ತೆ ಕೇಳುತ್ತಿರುವಂತೆ ಭಾಸವಾಗತೊಡಗಿತು. ಅದನ್ನು ಗುಣುಗುಣಿಸುವ ರೂಢಿ ಮೊದಲಾಯಿತು. ಈ 'ಆತ್ಮಗತ' ಸಂಗೀತಸಾಧನೆಯಿಂದ ನನ್ನ ಕಂಠದಲ್ಲಿ ಏನೋ ಸವಿಯಿದೆ ಎಂಬ ಸಾಕ್ಷಾತ್ಕಾರವಾಯಿತು. ಆದರೆ ಇಷ್ಟರಲ್ಲಿ ಓದಿನಲ್ಲಿ ನಾನು ಸಾಕಷ್ಟು ಆಸಕ್ತಿ ಬೆಳೆಸಿಕೊಂಡಿರುವ ಕಾರಣ ಸಂಗೀತಕ್ಕಾಗಿಯೇ ಬಾಳುವೆಯನ್ನು ಮೀಸಲಾಗಿಡುವ ಹುಮ್ಮಸು ಇರಲಿಲ್ಲ. ಅದಕ್ಕಾಗಿಯೇ ಸರ್ವಸ್ವ ತ್ಯಾಗ ಮಾಡಿ ದೇಶಾಂತರಕ್ಕೆ ಹೋಗುವಷ್ಟು ಹುಚ್ಚು ನನ್ನ ತಲೆಗೇರಲಿಲ್ಲ. ಸಂಗೀತವನ್ನು, ಅದರಲ್ಲಿಯೂ ಕರ್ನಾಟಕ ಸಂಗೀತವನ್ನು ಕಲಿತುಕೊಳ್ಳಬೇಕೆಂದು ಆಸೆಪಟ್ಟೆ, ಅಭ್ಯಾಸಮಾಡಿದೆ. ಮುಂದೆ ಅಧ್ಯಾಪಕ ವೃತ್ತಿಯಲ್ಲಿರುವಾಗ ಸಿತಾರವಾದ್ಯ ವಾದನವನ್ನು ಕಲಿಯುವ ಪ್ರಯತ್ನ ಮಾಡಿದೆ. ಈಗ ನೆನೆದರೆ ಅದರ ಪರಿಣಾಮ ಸೊನ್ನೆಯಲ್ಲದಿದ್ದರೂ ತೀರ ಕಡಿಮೆ. ಆದರೆ ಅಮೆಚೂರ್ ನಾಟಕ ಮಂಡಳಿಯ ಅಭಿನಯದಂತೆ ವಿಶೇಷ ಸಾಧನೆಯಿಲ್ಲದೆಯೂ ನನ್ನ ರಾಗಾನುರಾಗ ಮುಂದರಿದಿತ್ತು. ನನ್ನ ಸ್ವಂತ ಕವನಗಳಿಗೆ ಮತ್ತು ಇತರ ಕವಿಗಳ ಕವನಗಳಿಗೆ ಭಾವಾನುಗುಣವಾದ ರಾಗ ಮತ್ತು ಧಾಟಿಗಳನ್ನು ಗೊತ್ತುಹಚ್ಚಿ ಅವುಗಳನ್ನು ಕನ್ನಡ ಪ್ರಚಾರದ ಮೊದಲ ಹಂತದಲ್ಲಿ ಹಾಡಿ ತೋರಿಸುವುದು ಅಂದಿನ ಕನ್ನಡ 'ಮಿಶನರಿ'ಗಳಲ್ಲಿ ಒಬ್ಬನಾದ ನನ್ನ ಕರ್ತವ್ಯವಾಗಿತ್ತು. ಸಭೆ ಸಮಾರಂಭಗಳಲ್ಲಿ ಈ ರೀತಿ ಕಾವ್ಯಗಾಯನವನ್ನು ನಾನು ಮಾಡತೊಡಗಿದಾಗ ಜನ ಮೆಚ್ಚುತ್ತಿದ್ದರು. ಆದರೆ ಸಾಕಷ್ಟು ಸಾಧನೆಮಾಡದೆ ನಾನು ಹಾಡುತ್ತಿದ್ದ ಕಾರಣ ಒಮ್ಮೆ ಸೋಲು, ಒಮ್ಮೆ ಗೆಲವು ಈ ಪರಿಮಿತ ಅನಿವಾರ್ಯವಾಗಿತ್ತು. ಕೆಲವರಂತೂ ನಾನು ಕಾವ್ಯದ ಅಂತಸ್ಸತ್ವಕ್ಕಿಂತ ಅದರ ಗಾಯನ ಮಾಧುರ್ಯದಿಂದಲೇ ಜನರ ಮೇಲೆ ಪರಿಣಾಮ ಬೀರುತ್ತೇನೆ ಎಂದು ತಿಳಿದರು. ಇದೇನೆ ಇದ್ದರೂ ಸಂಗೀತಶಾಸ್ತ್ರ ಮತ್ತು ಕಲೆ ಎರಡೂ ದೃಷ್ಟಿಯಿಂದ ನಾನು ಅಪೂರ್ಣಪ್ರಜ್ಞನೆಂಬ ಆತ್ಮಜ್ಞಾನವು ನಿಚ್ಚಳವಾಗಿದ್ದ ಕಾರಣ ಯಾವ ಭ್ರಮೆಗೂ ನಾನು ಒಳಗಾಗಲಿಲ್ಲ. ನನ್ನ ರಾಗಾನುರಾಗದಿಂದ ಮಾತ್ರ ಬರಬರುತ್ತ ನಾನು 'ಬಹುಶ್ರುತನಾಗಿ ನನ್ನ ಆಯ್ಕೆಯ ಸಂಗೀತವನ್ನು ಕೇಳುತ್ತ ನನ್ನ ರೀತಿಯಲ್ಲಿ ಅದನ್ನು ನುಡಿಸುತ್ತ ಕವನಗಳಿಗೆ ಸೂಕ್ತ ಸ್ವರ ತಾಳಗಳ ಯೋಜನೆಯನ್ನು ಮಾಡುತ್ತ 'ಅಪೂರ್ಣ ಪ್ರಜ್ಞತ್ವದಲ್ಲಿಯೆ ಬೇರೇನೂ ಬೇಡವೆನ್ನುವಷ್ಟು ಪೂರ್ಣ ತೃಪ್ತಿಯನ್ನು ನಾನು ಪಡೆಯುತ್ತ ಬಂದಿದ್ದೇನೆ. ಬಹುಶ್ರುತತ್ವವೇ ನನ್ನ ಸಂಗೀತಸಾಧನೆಯ ಮುಖ್ಯಾಂಶವೆಂದು ಈಗಲೆ ಹೇಳಿದೆ. ನಾನು ಎಷ್ಟೆಷ್ಟು ತರದ ಸಂಗೀತ ಯಾರ ಯಾರ ಮುಖದಿಂದ ಅಥವಾ ಮುಖರವಾದ ವಾದ್ಯದಿಂದ ಕೇಳಿದ್ದೇನೆ ಎಂಬುದನ್ನು ನೆನಪಿನ ಕೋಶದಿಂದ ಹೊರದೆಗೆದು ಇಂದಿಗೂ ನೋಡಿದರೆ ತಣಿವು ತುಂಬಿ ಬರುತ್ತದೆ, ಮೈ ಜುಮ್ಮೆನ್ನುತ್ತದೆ. ಅಂದಿನ ಕನ್ನಡ ಕಂಪನಿ ನಾಟಕಗಳಲ್ಲಿ ಪುರುಷರು ಪತ್ತೆ ಹತ್ತದಂತೆ ಸ್ತ್ರೀವೇಷ ತಾಳಿ ಹಾಡಿದ ಹಾಡು ಹೆಚ್ಚಿನ ಆಕರ್ಷಣೆಯಾಗಿತ್ತು. ಬರಬರುತ್ತ ಸ್ತ್ರೀಯರೇ ಸ್ತ್ರೀ ಪಾತ್ರ ಧರಿಸಿ ಮಾಡಿದ ಅಭಿನಯ ಮತ್ತು ಹೇಳಿದ ಸಂಗೀತ ಹೆಚ್ಚು ಸ್ವಾಭಾವಿಕವಾಗಿ ತೋರಿತು. ಇಷ್ಟಾದರೂ ಒಬ್ಬ ವ್ಯಕ್ತಿ ತಾನು ಗಂಡಸಾಗಿಯೇ ನಾಟಕದ ಸನ್ನಿವೇಶಕ್ಕೆ

ತಕ್ಕ ಹಾಗೆ ಹೆಣ್ಣಿನ ವೇಷಭೂಷಣಗಳನ್ನು ಧರಿಸಿಕೊಂಡು ಹೆಣ್ಣಿಗೆ ಸಹಜವಾದ ಬಗೆಯಲ್ಲಿಯೇ ಅಭಿನಯ ಮತ್ತು ಸಂಗೀತಗಳ ಸಾಮರಸ್ಯವನ್ನು ಸಾಧಿಸಿ ಅಪ್ರತಿಮವಾದ ಯಶಸ್ಸನ್ನು ಗಳಿಸಬಲ್ಲನೆಂಬುದಕ್ಕೆ ಮಹಾರಾಷ್ಟ್ರ ರಂಗಭೂಮಿಯ ಮೇಲೆ ನಟಸಮ್ರಾಟ ಎಂದು ಬಿರುದು ಪಡೆದು ಮೆರೆದ ಬಾಲಗಂಧರ್ವರನ್ನು ನೆನೆಯಬೇಕು. ಮಹಾರಾಷ್ಟ್ರದಂತೆ ಉತ್ತರ ಕರ್ನಾಟಕದ ಹಲವು ಊರುಗಳಲ್ಲಿ ಅವರ ನಾಟಕ ಕಂಪನಿ ಆಗಾಗ ಬಂದು ನಾಟಕ ಪ್ರಯೋಗಗಳನ್ನು ಮಾಡಿ ಕನ್ನಡ ಜನತೆಯನ್ನು ಮರುಳುಗೊಳಿಸಿತ್ತು. ಮರಾಠೀ ಭಾಷೆ ತಿಳಿಯದೆ ಇದ್ದವರು ಕೂಡ ಬಾಲಗಂಧರ್ವರನ್ನು ನೋಡಬೇಕು, ಅವರ ಹಾಡು ಕೇಳಬೇಕು ಎಂಬ ಹುಚ್ಚಿನಿಂದ ಮತ್ತೆ ಮತ್ತೆ ರಂಗಮಂದಿರಗಳಲ್ಲಿ ಕಿಕ್ಕಿರಿದು ಸೇರುತ್ತಿದ್ದರು. ನನ್ನ ಉಚ್ಚ ವಿದ್ಯಾಭ್ಯಾಸದ ಅವಧಿಯಲ್ಲಿ ನಾನೂ ಅಂದಿನ ಹಲವಾರು ಯುವಕರಂತೆ ಈ ಹುಚ್ಚಿಗೆ ಒಳಗಾಗಿ ಬಾಲಗಂಧರ್ವರು ಅಭಿನಯ ಮತ್ತು ನಾಟ್ಯಸಂಗೀತ ಎರಡರ ಮಧುರ ಮಿಲನದಿಂದ ಉನ್ನತವಟ್ಟದ ಕಲೆಯನ್ನು ಪ್ರದರ್ಶಿಸುತ್ತಿರುವ ಕಾಲದಲ್ಲಿ ಅವರನ್ನು ನೋಡಿದ್ದೇನೆ, ಕೇಳಿದ್ದೇನೆ. ತಲೆಯಲ್ಲಿ ಅವರು ಅಭಿನಯಿಸಿದ ಪಾತ್ರಗಳ ಚಿತ್ರಗಳನ್ನು ತುಂಬಿಕೊಂಡು ಕಿವಿಯಲ್ಲಿ ಅಭಿನಯ ಸಹಿತವಾಗಿ ಅವರು ಹಾಡಿದ ಹಾಡುಗಳನ್ನು ಧ್ವನಿ ಮುದ್ರಿಸಿಕೊಂಡು ಓದಿನ ಪರಿವೆಯಿಲ್ಲದೆ ಅಲೆದಿದ್ದೇನೆ. ಅವರು ಕೆಲವೊಂದು ಸಲ ಒಂದೇ ಒಂದು ಹಾಡಿನ ಪಲ್ಲವಿಯನ್ನು ನುಡಿಯನ್ನು ವಿಧವಿಧವಾದ ರೀತಿಯಲ್ಲಿ ಸುಸ್ವರ ವಾದ್ಯಗಳ ಸಾಥಿಯೊಡನೆ [illegible] ಮಾತೇ ಸುಳ್ಳಾಗುತ್ತಿತ್ತು, ಮತ್ತೆ ಮತ್ತೆ ಕೇಳಬೇಕೆಂಬ ಲವಲವಿಕೆ ಹೆಚ್ಚುತ್ತಿತ್ತು. ಕೆಲವು ನಟ ನಟಿಯರು ಹಾಡುವಾಗ ಹಾಡಬಹುದು, ಅಭಿನಯಿಸುವಾಗ ಅಭಿನಯಿಸಬಹುದು. ಆದರೆ ಸಂಗೀತ

ಗಂಧರ್ವರನ್ನು ಮೀರುವವರೇ ಇಲ್ಲವೆಂದು ನನ್ನ ತಿಳಿವಳಿಕೆ. ಅವರ ಸಂಗೀತ ಶ್ರವಣದಿಂದ ಭಾವವ್ಯಂಜಕವಾದ ಸಂಗೀತದಲ್ಲಿ ನನ್ನ ಆಸಕ್ತಿ ಬೆಳೆಯಿತು. ಭಾವ ವ್ಯಂಜಕವಾಗಿರದ ಆದರೆ ಶಾಸ್ತ್ರಶುದ್ಧವಾದ ಸಂಗೀತದ ವಿಚಾರದಲ್ಲಿ ಉದಾಸೀನಭಾವ ಹೆಚ್ಚಿತು. ನಾಟಕಗಳಲ್ಲಿ ಸಂಗೀತ ಇರುವುದಾದರೆ ಅದು ಬಾಲಗಂಧರ್ವ ಮಾದರಿಯದಾಗಿರಬೇಕು ಎಂದೆನಿಸಿತು. ಆದರೆ ಬಾಲಗಂಧರ್ವರಂಥ ನಟರು ಸಿಗುವುದು ತೀರ ಅಪರೂಪ. ಯಾರಾದರೂ ಅವರ ಪ್ರತಿಭೆ ಸಾಲದೆ ಅನುಕರಣ ಮಾಡ ಹೊರಟರೆ ಅವರಿಗೆ ಅಪಚಾರ ಮಾಡಿದಂತಾದೀತು ಮಾತ್ರವಲ್ಲ, ನಾಟಕದ ಕ್ರಿಯೆಗೆ ಅಡೆತಡೆಗಳನ್ನು ಉಂಟುಮಾಡಿ ಆಭಾಸಕ್ಕೆ ಕಾರಣವಾಗುತ್ತದೆ.

ಭಾವವ್ಯಂಜಕವಾದ ಸಂಗೀತದಲ್ಲಿ ನನಗೆ ಆಸಕ್ತಿ ಎಂದು ಹೇಳಿದೆ, ಹಾಗೆಂದರೇನು ಎಂದು ಯಾರಾದರೂ ಕೇಳಬಹುದು. ಸಂಗೀತ ತನ್ನದೇ ಆದ ನಾದಪ್ರಪಂಚದಲ್ಲಿ ತನ್ಮಯವಾದ ಒಂದು ರಸಸೃಷ್ಟಿ. ಅದು ಸ್ವಯಂಪೂರ್ಣ, ಸ್ವಯಂತೃಪ್ತ. ಯಾವ ಭಾವವನ್ನೂ ಅದು ವ್ಯಂಜನೆ ಮಾಡಲೆಳಸುವದಿಲ್ಲ. ಆದರಿಂದ ಭಾವವ್ಯಂಜಕವಾದ ಸಂಗೀತ ಎಂಬ ಪದ ಪ್ರಯೋಗವೇ ವಿರೋಧಾತ್ಮಕ ಎಂದು ಕೆಲವರಿಗೆ ತೋರಬಹುದು. ಇನ್ನು ಕೆಲವರಿಗೆ ಸಂಗೀತವು ಭಾವವ್ಯಂಜಕವಾಗಿರುವುದು ಸಾಧ್ಯ. ಆದರೆ ಇಂಥ ಸಂಗೀತಕ್ಕೆ ಅಥವಾ ಇಂಥ ರಾಗಕ್ಕೆ ಇದೇ ಭಾವ ಎಂಬ ಗಣಿತ ಸಾಧ್ಯವಿಲ್ಲ; ಬಹುಶಃ ಈ ಭಾವ ಅವರವರ ಸ್ವಭಾವಕ್ಕೆ ಅನುಸರಿಸಿ ಪಲ್ಲಟಗೊಳ್ಳಬಹುದು. ಇಲ್ಲಿ ಕಲೆಗಾಗಿ ಕಲೆ ಇರುವುದೇ ಎಂಬ ಮೂಲಭೂತ ಪ್ರಶ್ನೆಗೆ ಕೈಹಾಕಿ ಸಂಗೀತದಂಥ ಸ್ವಾರಸ್ಯವಾದ ವಿಷಯವನ್ನು ಶುಷ್ಕತರ್ಕದಿಂದ ಬೆಂಡಾಗಿಸಲು ನಾನು ಬಯಸುವದಿಲ್ಲ. ಆದರೆ ಒಳ್ಳೆಯ ಹಾಗೂ ಉತ್ತಮವಾದ ಸಂಗೀತ ಭಾವವ್ಯಂಜಕವಾಗಿರುತ್ತದೆ,

ಗಳನ್ನೂ ಪದರುಗಳನ್ನೂ ಒಂದೊಂದಾಗಿ ಬಿಚ್ಚಿ ಉನ್ನತಭಾವಗಳನ್ನೆಲ್ಲ ಹೊರದೆಗೆದು ಆನಂದದ ನಾಡಿಯನ್ನು ಮೀಟುತ್ತದೆ, ಸಂತಸದ ಕಂಬನಿಯ ಸೋನೆಯಿಂದ ವೈಮನವಿರು ಬೆಳೆಯನ್ನು ನೇಟಾಗಿ ಬೆಳೆಯಿಸಿ ಸುಖದ ಸುಗ್ಗಿಯನ್ನು ತರುತ್ತದೆ ಎಂಬುದನ್ನು ನಾನು ನನ್ನ ಮತ್ತು ಇತರ ಸಂಗೀತಪ್ರೇಮಿಗಳ ಅನುಭವದಿಂದ ಹೇಳಬಲ್ಲೆ. ಯಾವ ಸಂಗೀತರಚನೆ ಯಾವ ವಿಶಿಷ್ಟ ಭಾವವನ್ನು ಅಭಿವ್ಯಕ್ತಗೊಳಿಸುತ್ತದೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಸಾಮಾನ್ಯವಾಗಿ ಸಂಗೀತ, ಜೀವವನ್ನು ಮೇಲೆತ್ತುತ್ತದೆ. ಉನ್ನತ ಭಾವಲೋಕದಲ್ಲಿ ನಿಲ್ಲಿಸಿ ಕ್ಷಣಿಕವಾದರೂ ಒಂದು ವಿಲಕ್ಷಣ ವಿಶ್ವದಲ್ಲಿ ವಿಹಾರಗೊಳಿಸುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ನಾನಂತೂ ಇಂಥ ಅನುಭವವನ್ನು ಪಡೆದಿದ್ದೇನೆ. 'ಹಿಂದುಸ್ತಾನಿ' ಪದ್ಧತಿಯ ಗಾಯಕರೇ ಇರಲಿ 'ಕರ್ನಾಟಕ' ಪದ್ಧತಿಯ ಗಾಯಕರೇ ಇರಲಿ, ಎಲ್ಲೆಲ್ಲಿ ಅವರು ಒಳಗುಮ್ಮಿದಾನಂದರಸ ತನು ತುಂಬಿದಂತೆ ಹಾಡಿದ್ದಾರೆ ಅಲ್ಲಿ ಈ ಅನುಭವ ನನಗೆ ಉಂಟಾಗಿದೆ. ಎಲ್ಲೆಲ್ಲಿ ಆನಂದರಸವನ್ನು ಹೊಡೆದಟ್ಟಿ ತನುಮನಗಳಲ್ಲಿ ಶಾಸ್ತ್ರಪ್ರೌಢಿಮೆಯನ್ನು ತುಂಬಿಕೊಂಡು ಪಕ್ಕದ ವಾದ್ಯದವರೊಡನೆ ಸೆಣಸಾಟದ ಸಂತೆಯನ್ನು ನಡೆಸಿದ್ದಾರೆ ಅಲ್ಲಿ ಈ ಅನುಭವ ದೊರೆತಿಲ್ಲ, ದೊರೆಯಲಾರದು. ನಾನು ಪಡೆದು ಇಂದಿಗೂ ನೆನಸುತ್ತಿರುವ ಸಂಗೀತರಸಾನುಭವಕ್ಕೆ ಅಬ್ದುಲ್ ಕರೀಮುಖಾನರ ಉದಾಹರಣೆಯನ್ನು ಕೊಡಬಹುದು. ಅವರ ತೀರ ಹತ್ತಿರದಲ್ಲಿ ಕುಳಿತು ಇಡೀ ರಾತ್ರಿ ಅವರ ಸಂಗೀತವನ್ನು ಕೇಳಿ ಸಂತಸಪಡೆಯುವ ಭಾಗ್ಯ ನನಗೆ ದೊರೆಯಿತು. ಯಾವ ರಾಗವೇ ಇರಲಿ, ಠುಮರಿಯೇ ಇರಲಿ ಅದನ್ನು ಕಿರಾನಾ ಘರಾಣೆಯ ನಯವಾದ ನಿಧಾನವಾದ ರಾಗ ವಿಸ್ತಾರದಲ್ಲಿ ಅಬ್ದುಲ್ ಕರೀಮರ ಬಾಯಿಂದ ಕೇಳಬೇಕು. ಕಣ್ಣು ಮುಚ್ಚಿ ಕೇಳಿದರಂತೂ

ಧಾರೆಯಿಂದ ನಮ್ಮ ಸ್ನಾನ ಮಾಡಿಸುತ್ತಿರುವಳೆನಿಸಿ ಮುಚ್ಚಿದ ಕಣ್ಣನ್ನು ತೆರೆಯಲು ನಾವು ಇಷ್ಟಪಡುವುದಿಲ್ಲ. ಸಂಗೀತದ ಸ್ವರ್ಗದಲ್ಲಿ ಬಿಡುಗಣ್ಣರಾಗಿ ನಾವು ನಲಿದಾಡುತ್ತೇವೆ. ಆಯ್ದ ಅಪರೂಪ ಸಂಗೀತಕಲಾವಿದರನ್ನು ಮೆಚ್ಚುವ ನನ್ನ ರಸಿಕತೆಯನ್ನು ಹೀಗಳೆಯುವಂಥ ಅದ್ಭುತವಾದ ಆಸ್ವಾದನೆ ಸಾಮರ್ಥ್ಯ ಕೆಲವರಲ್ಲಿ ಉಂಟು. ಎಲ್ಲ ಸಂಗೀತ ಸಭೆಗಳಲ್ಲಿಯೂ ಅವರು ಹಾಜರಾಗುತ್ತಾರೆ, ಕಲಾವಿದರ ಮುಂದಿನ ಸಾಲುಗಳಲ್ಲಿಯೇ ಅವರ ಕಣಿಗೆ ಬೀಳುವಂತೆ, ಕಿವಿಗೆ ಕೇಳುವಂತೆ ಕೂಡುತ್ತಾರೆ. ಸಮಾನತೆಯ ಡಂಗುರ ಹೊಡೆಯುತ್ತಿರುವ ಈ ಕಾಲದಲ್ಲಿ ಕಲಾವಿದರಲ್ಲಿ ಅವರು ಭೇದವೆಣಿಸುವುದಿಲ್ಲ. ಸಂಗೀತ ಪ್ರಾರಂಭವಾಗುವುದೇ ತಡ ಈ ಮಹಾರಸಿಕರ ಗೋಣುಗಳು ಮೆಚ್ಚಿಗೆಯಿಂದ ತೂಗತೊಡಗುತ್ತವೆ, ಬಾಯಿಂದ 'ಭಲೆ, ಶಾಬ್ಬಾಸ, ಖಾಸಿ' ಮುಂತಾದ ಉದ್ಗಾರಗಳು ಹೇರಳವಾಗಿ ಹೊರಬೀಳುತ್ತವೆ. ಅವರಿಗೆ ಸಂಗೀತ ಎಷ್ಟು ತಿಳಿಯುತ್ತದೋ ದೇವರಿಗೂ ತಿಳಿದಿರಲಾರದು. ಆದರೆ ಒಂದು ಆಸ್ವಾದನತಂತ್ರವನ್ನು ಬೆಳೆಸಿಕೊಂಡು ಇವರು ಅದರ ಕೈಗೊಂಬೆಗಳಾಗಿರುತ್ತಾರೆ. ಎಂಥೆಂಥ ಸಂಗೀತಗಾರರಿಗೂ ಅವರು ಮುಂದೆ ಕೂತಿರದಿದ್ದರೆ ಹಾಡಲು ಗಂಟಲೇ ಏಳುವದಿಲ್ಲ. ನಡುನಡುವೆ ಉದ್ಗಾರಗಳನ್ನು ತೂರಿಬಿಡುತ್ತ ತಲೆದೂಗುತ್ತ ಇವರಲ್ಲಿ ಕೆಲವರು ಗೊರಕೆಯ ತಾಳಬದ್ಧ ಸಂಗೀತದೊಡನೆ ನಿದ್ದೆಯನ್ನೂ ಮಾಡುತ್ತಾರೆ. ಅವರ ಈ ಶತಾವಧಾನಕ್ಕೆ ಯಾರೂ ಈವರೆಗೆ ಬಹುಮಾನ ಕೊಡದೆ ಇದ್ದುದು ತುಂಬ ಅಚ್ಚರಿಯ ಸಂಗತಿ. ಜೀವನದಲ್ಲಿ ಎಷ್ಟೇ ಯೋಗ್ಯತೆಯಿಂದ್ದರೂ ಸಲ್ಲತಕ್ಕ ಗೌರವ ಕೆಲವರಿಗೆ ದೊರೆಯುವದಿಲ್ಲ ಎಂಬುದಕ್ಕೆ ಇದು ಉತ್ತಮ ನಿದರ್ಶನ. ಸಂಗೀತ ಕಚೇರಿಗಳು ಇವರಿಂದ ಚಟುವಟಿಕೆ–ಲವಲವಿಕೆಯಿಂದ ಕೂಡಿರುತ್ತವೆ; ಇವರ ಹಿಂದೆ ಕುಳಿತು ಇವರಷ್ಟು ಸಂಗೀತ ಜ್ಞಾನವಿಲ್ಲದೆ ಅಜ್ಞಾನಕ್ಕೆ ಅನುಗುಣವಾದ

ಶ್ರೀಸಾಮಾನ್ಯ ರಸಿಕರಿಗೆ ಇವರು ಮಾದರಿಯಾಗುತ್ತಾರೆ, ಅಂತೇ ಇವರು ಮೆಚ್ಚಿಕೆಯ ಉದ್ಗಾರಗಳೊಂದಿಗೆ ಚಪ್ಪಾಳೆ ತಟ್ಟಿದೊಡನೆ ಕೀಲದ ಗೊಂಬೆಗಳಂತೆ ಸಭೆಯಲ್ಲಿ ಎಲ್ಲ ಕೈಗಳೂ ತಟ್ಟುತ್ತವೆ. ಸಂಗೀತಗಾರರು ಖುಷಿಯಾಗಿ ಇನ್ನಿಷ್ಟು ಚೆನ್ನಾಗಿ ಹಾಡಲೆಂದು ಗಂಟಲನ್ನು ಜೇಕರಿಸಿ ಸರಿಪಡಿಸಿಕೊಳ್ಳುತ್ತಾರೆ ಇಲ್ಲವೆ ಜ್ಞಾನಚೂರ್ಣವನ್ನು ಮೂಗಿಗೇರಿಸುತ್ತಾರೆ. ಸಂಗೀತಕಚೇರಿ ಎಂಬ ಸಮಸ್ತ ಪದವು ವಿಚಿತ್ರವಾದ ಎರಡು ಶಬ್ದಗಳ ಇಜ್ಜೋಡು ಮದುವೆಯೆಂದು ಅನಿಸಿದವರಿಗೆ ಅದರ ಅರ್ಥವತ್ತತೆ ಇಂಥ ಸಂದರ್ಭಗಳಲ್ಲಿ ಮಿಂಚು ಹೊಡೆದಂತೆ ವಿಶದವಾಗುತ್ತದೆ, ಕಚೇರಿಗಳಲ್ಲಿ ಮುಂದು : ಮುಂದಿನ ಸ್ಥಾನಗಳಲ್ಲಿದ್ದ ಹಲವರು ಹೇಳಿಕೊಟ್ಟಂತೆ ಹಿಂದೆ ಹಿಂದಿನ ಭಾಗಗಳಲ್ಲಿದ್ದವರು ತಮ್ಮ ತಲೆಯನ್ನು ಖರ್ಚುಮಾಡದೆ ದನಿಗೂಡಿಸುತ್ತಾರೆ. ಯಾಕೆಂದರೆ ಈ ಕಠೋರವಾದ ಜಗತ್ತಿನಲ್ಲಿ ಇವರಿಗೆ ಮೇಲಿನವರ ಮರ್ಜಿ ಸಂಪಾದಿಸಿ ಸಂಬಳ ಪಡೆಯುವುದು ಮುಖ್ಯ, ಸ್ವತಂತ್ರ ವಿಚಾರವಲ್ಲ. ಸ್ವತಂತ್ರ ವಿಚಾರದ ಬೆನ್ನುಹತ್ತಿ ಸಾಕ್ರೆಟಿಸನಂಥವರು ವಿಷ ಕುಡಿದು ಸತ್ತರು, ಗ್ಯಾಲಿಲಿಯೊ ಹಿಂಸೆಗೀಡಾದ. ಅಂತೇ 'ಸತ್ಯವನ್ನರಿತವನು ಸತ್ತಂತೆ ಇರಬೇಕು' ಎಂಬ ಮುತ್ತಿನಂಥ ಮಾತನ್ನು ಸರ್ವಜ್ಞ ಹೇಳಿದನಲ್ಲವೇ? ಅಂತೂ 'ಸತ್ತಂತೆ ಇರಬೇಕು ಆದರೆ ಸಾಯಬಾರದು' ಇದೇ ನವಯುಗದ ಜೀವನ ಸೂತ್ರವಾಗಿದೆ. ಇದು ಶ್ರೀಸಾಮಾನ್ಯನ ಒಂದು ಮುಖವಾದರೆ ಇನ್ನೊಂದು ಮುಖ ತುಂಬ ವ್ಯವಹಾರ ಚಾತುರ್ಯದ್ದು: ಯಾರದೋ ಬಲುಮೆಗೆ ಹಣ ತೆತ್ತು ಸಂಗೀತಸಭೆಯ ಟಿಕೆಟ್ಟನ್ನು ಪಡೆದ ಕೆಲವರು ತಮ್ಮದೇ ಗುಂಪನ್ನು ಕಟ್ಟಿಕೊಂಡು ಪ್ರಮುಖ ಸ್ಥಳಗಳಲ್ಲಿ ಕುಳಿತುಕೊಂಡು ಸಂಗೀತಕಚೇರಿ ನಡೆದಿರುವಾಗೆಲ್ಲ ತಮ್ಮ ಕಚೇರಿ ಸಂಗೀತವನ್ನು ಗುಣುಗುಣು ತಾನಪಲ್ಲವಿಯಿಂದ ಪ್ರಾರಂಭಿಸಿ ದ್ರುತಲಯದ ತಾರಸಪ್ತಕದ ವರೆಗೆ ಏರಿಸುತ್ತ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಯಾವ ತೀರ್ಮಾನಕ್ಕೂ ಬರದೆ ಆದರೆ ಕೊನೆಯವರೆಗೂ ಯಾರ ಕಿಸುಗಣ್ಣಿಗೂ ಹೆದರದೆ ಸಭೆಯ ದೀಪಗಳನ್ನು ಆರಿಸಿದ ಮೇಲೇ ಹೊರಗೆ ಹೊರಡುತ್ತಾರೆ. 'ಸ್ವಲ್ಪ ಸುಮ್ಮನೆ ಕೂತು ಕೇಳಿರಿ' ಎಂದು ಯಾರಾದರೂ ಎಲ್ಲಿಂದಲೋ ಕೂಗಿ ಹೇಳಿದರೆ, ನೀವು ಮೊದಲು ಬಾಯಿ ಮುಚ್ಚಿರಿ, ಸಂಗೀತಗಾರರಿಗೆ ತೊಂದರೆಯಾಗುತ್ತದೆ, ಎಂದು ಮರು ಉಪದೇಶ ಮಾಡುತ್ತಾರೆ. ಹೀಗಾಗಿ ನಮ್ಮ ದೇಶದಲ್ಲಿ ಸಂಗೀತಕಚೇರಿಯೇನು, ಯಾವ ಸಭೆಯೇನು ವಿವಿಧೋದ್ದೇಶ ಸಂಘದ ಚಟುವಟಿಕೆಗಳಂತೆ ಸಂತೆಯ ಸ್ವರೂಪ ತಾಳುತ್ತವೆ. ಶಾಂತಚಿತ್ತದಿಂದ ಕೂತು ಸಂಗೀತವನ್ನು ಕೇಳಬೇಕಾಗುತ್ತದೆ ಎಂಬುದೇ ಮೂರ್ಖತನವೆಂದು ತೋರುತ್ತದೆ. ಅಂತೇ ಇರಬಹುದು ಬಹುಶಃ ಎಲ್ಲ ಪ್ರತಿಷ್ಠಿತ ಕುಟುಂಬದ ಮದುವೆಗಳ ಆರತಕ್ಷತೆಯ ಹೊತ್ತಿಗೆ ಸಂಗೀತವು ತನ್ನ ಪಾಡಿಗೆ ನಡೆದಿರುತ್ತದೆ, ಅತಿಥಿ–ಆತಿಥೇಯರ ಓಡಾಟ ಮಾತಾಟಗಳೂ ನಡೆದಿರುತ್ತವೆ. ಇದೆಲ್ಲ ನಮ್ಮ ಜನಕ್ಕೆ ಅಭ್ಯಾಸವಾಗಿ ಬಿಟ್ಟಿದೆ. ನಮ್ಮ ಹೊಸ ಪೀಳಿಗೆಯ ಯುವಜನಕ್ಕಂತೂ ಸಂಗೀತಕಚೇರಿಯ ಇದಾವ ಸಮಸ್ಯೆಯೂ ಇಲ್ಲ. ಯಾಕೆಂದರೆ ಅವರು ಇಂಥ ಸಂಗೀತಕಚೇರಿಗೆ ಈಗ ಹೋಗುವದೇ ಕಡಿಮೆ. ಮದುವೆಯ ದಿನ ಕಡ್ಡಾಯವಾಗಿ ಇದನ್ನು ಕೇಳಬೇಕಾಗುವದಲ್ಲ ಎಂದೇನೊ ಅವರು ತಂತಮ್ಮ ಮದುವೆಗಳನ್ನೂ ಮುಂದೂಡುತ್ತಿರಬಹುದು! ಅವರಿಗೆ ಬೇಕಾದ್ದು ಪಾಪ್ ಸಂಗೀತ, ಸಿನೆಮಾ ಸಂಗೀತ, ತರತರದ ಪಾಶ್ಚಾತ್ಯ ಸಂಗೀತ. ಭಾರತೀಯ ಸಂಗೀತದಲ್ಲಿಯ ಗೋಳಾಟ–ಗೊಣಗಾಟ ಅವರಿಗೆ ಸುತರಾಂ ಸೇರುವುದಿಲ್ಲ. ಸೇರದೇ ಇರುವುದನ್ನು ಯಾರು ಕೇಳಲು ಹೋಗುತ್ತಾರೆ? ಈ ಸಿನಿಮಾ ನಿರ್ಮಾಪಕರು ಒಂದೊಂದು ಸಲ ಸಂಗೀತಗಾರರ ಜೀವನ ಚರಿತ್ರೆಯನ್ನು ಮುಖ್ಯ ವಿಷಯವನ್ನಾಗಿ ಇಟ್ಟುಕೊಂಡು (ಇತರ ವಿಷಯಗಳು

ಶಾಸ್ತ್ರೋಕ್ತ ಸಂಗೀತವನ್ನು ಸಿನೆಮಾ ಶೋಕಿಗಳ ಕಿವಿಯಲ್ಲಿ ತೂರಿಬಿಡುತ್ತಾರೆ. ಆ ಸಮಯದಲ್ಲಿ ಅವರಲ್ಲಿ ಅನೇಕರು ಕಿವಿಯಲ್ಲಿ ಅರಳೆ ಸುರಳಿಗಳನ್ನು ಹಾಕಿಕೊಂಡು ಕೂಡಬೇಕಾಗುತ್ತದೆ! ಟಿಕೆಟ್ಟಿನೊಡನೆ ಅದರ ಏರ್ಪಾಡನ್ನು ವಿಮಾನ ಪ್ರವಾಸದಲ್ಲಿಯಂತೆ ಸಿನೇಮಾ ಮಾಲಕರು ಮಾಡುವುದು ಅಪರಿಹಾರ್ಯವಾಗುತ್ತದೆ. ಇಲ್ಲವಾದರೆ ಶೃಂಗಾರರಸಭರಿತವಾದ ಬಹುಸಂಖ್ಯ ಚಿತ್ರಗಳಿಗೆ ಈ ತರುಣ ರಸಿಕರು ಬರದೆ ಹೋದರೆ ಸಿನೆಮಾ ಮಂದಿರಗಳನ್ನು ಮುಚ್ಚಿ ಮಾಲಕರು ಭಾವಿ ಕೆರೆಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ.

ಸಂಗೀತದ ವಿಚಾರದಲ್ಲಿ ಆಧುನಿಕರ ಅಭಿರುಚಿ ಹೇಗೆ ಇರಲಿ, ನನ್ನ ರಾಗಾನುರಾಗ ಅಚಲವಾಗಿದೆ. ನಾನು ಇಷ್ಟಪಡುವ ಗಾಯನ ಯಾವ ರಾಗದಲ್ಲಿಯೇ ಇದ್ದರೂ ನನ್ನ ಮನ ಸೆಳೆಯುತ್ತದೆ. ರಾಗ ಯಾವುದು, ತಾಳ ಯಾವುದು ಎಂಬುದನ್ನು ಆಗ ನಾನು ಯೋಚಿಸುವುದಿಲ್ಲ. ಯಾವಾಗಲೂ ಅದು ನನಗೆ ತಿಳಿಯುತ್ತದೆ ಎಂದೂ ಹೇಳಲಾರೆ. ಆದರೆ ನನಗೆ ವಿಶೇಷವಾಗಿ ಸೇರುವ ಕೆಲವು ರಾಗಗಳಿರುತ್ತವೆ, ಅವುಗಳ ಸ್ಥೂಲ–ಪರಿಚಯವೂ ನನಗುಂಟು. ಅವುಗಳನ್ನು ಸಂಗೀತಗಾರರ ಮುಖದಿಂದಲಾಗಲಿ ಆಕಾಶವಾಣಿಯ ಮೂಲಕವಾಗಲಿ ಕೇಳಿದಾಗ ನಾನು ಪರಿಚಿತ ವ್ಯಕ್ತಿಗಳ ಸಾನ್ನಿಧ್ಯದಲ್ಲಿರುವಂತೆ ಸುಖವಾಗಿ ಕಾಲಕಳೆಯುತ್ತೇನೆ. ಅವನ್ನು ಎಷ್ಟು ಸಲ ಕೇಳಿದರೂ ನನಗೆ ಬೇಸರಿರುವದಿಲ್ಲ. ಹಣ್ಣಿನ ಮಣ್ಣದಿಯಲ್ಲಿ ಕೇಳಿದರಂತೂ ಹನಿಹನಿಯಾಗಿ ಜೇನನ್ನು ಸವಿಯುತ್ತಿರುವಂತೆ ನಾನು ರಸಾನುಭವ ಪಡೆಯುತ್ತೇನೆ. ಅವುಗಳಿಗೆ ವಿಶಿಷ್ಟವಾದ ಒಂದೊಂದು ಭಾವವಿಶ್ವ ನನ್ನಿದಿರು ಕಣ್ದೆರೆಯುತ್ತದೆ. ಅದನ್ನೇ ಒಂದು ನನ್ನ ವೈಯಕ್ತಿಕ ಸಿದ್ಧಾಂತವಾಗಿ ಮಾಡಿಕೊಂಡು ನಾನು ಆಲೋಚಿಸುತ್ತೇನೆ. ನನ್ನ ಮತ್ತು ಇತರರ ಕವನಗಳಿಗೆ ಸೂಕ್ತವೆನಿಸಿದ

ಬಲ್ಲವರು ಮೆಚ್ಚಿದರೆ ನಲಿಯುತ್ತೇನೆ. ಇದೆಲ್ಲವೂ ನನ್ನ 'ಅಶಿಕ್ಷಿತಪಟುತ್ವ'ವೆನ್ನಬೇಕು, ಶಾಸ್ತ್ರಜ್ಞಾನದ ಫಲವಲ್ಲ.

ನನಗೆ ಪ್ರಿಯವಾದ ರಾಗಗಳಲ್ಲಿ ಕೆಲವೆಂದರೆ ಭೂಪ ಅಥವಾ ಮೋಹನ, ಯಮನ, ದೇಸ, ತಿಲಂಗ, ಸಾರಂಗ, ದುರ್ಗಾ, ಭೀಮಪಲಾಸ, ದರ್ಬಾರಿ ಮತ್ತು ಮುಖ್ಯವಾಗಿ ಮಾಲಕಂಸ. ಈ ಎಲ್ಲ ರಾಗಗಳಲ್ಲಿ ನಡೆದ ಗಾಯನವನ್ನು ನಾನು ಎಷ್ಟು ಸಲ ಕೇಳಿದ್ದೇನೋ ಇನ್ನೂ ಕೇಳುತ್ತಿರುವೆನೋ ಅದರ ಲೆಕ್ಕವಿಲ್ಲ. ಈ ರಾಗಗಳ ಹತ್ತಿರವೇ ಇದ್ದು ಸ್ವಲ್ಪ ವ್ಯತ್ಯಾಸದಿಂದ ಬೇರೆಯಾದ ಕೆಲವು ರಾಗಗಳೂ ನನಗೆ ಪ್ರಿಯವಾಗಿವೆ. ಅಂಥವುಗಳಲ್ಲಿ ಭೂಪದ ಹತ್ತಿರದ ದೇಸಕಾರ, ಯಮನದ ಹತ್ತಿರ ಯಮನ ಕಲ್ಯಾಣ, ವೃಂದಾವನ ಸಾರಂಗ ಮುಂತಾಗಿ, ಮಾಲಕಂಸ ರಾಗವಂತೂ, ಮುಚ್ಚುಮರೆಯಿಲ್ಲದೆ ಹೇಳಬೇಕು, ನನಗೆ ಹುಚ್ಚು ಹಿಡಿಸಿಬಿಟ್ಟಿದೆ. ಅದೇಕೋ ನನಗೆ ತಿಳಿಯದು. ರೇಡಿಯೋದಲ್ಲಿ ಅದು ಯಾವ ಕೇಂದ್ರದಿಂದ, ಯಾವ ಸಮಯದಲ್ಲಿಯೋ ಬರಲಿ, ಕಂಠ ಸವಿಯಾಗಿರಲಿ ಇಲ್ಲದಿರಲಿ ಅದನ್ನು ಹುಡುಕಿಕೊಂಡು ನಾನು ಹೋಗುತ್ತೇನೆ. ಬಾನುಲಿಯ ಯಾವ ಗುರುತಿನ ಗೆರೆಯ ಮೇಲೆ ಮಾಲಕಂಸದ ಧ್ವನಿ ಇದ್ದಕಿದ್ದ ಹಾಗೆ ಕೇಳಿ ಬರುತ್ತದೋ ಅಲ್ಲಿ ನಾನು ನಿಂತುಬಿಡುತ್ತೇನೆ, ಕೃಷ್ಣನ ಕೊಳಲ ದನಿಯನ್ನು ಕೇಳಿದ ಗೋಪಿಯಂತೆ.

ಮಾಲಕಂಸ ಎಂಬ ಹೆಸರು ಈ ರಾಗಕ್ಕೆ ಹೇಗೆ ಬಂತೋ ನನಗೆ ಗೊತ್ತಿಲ್ಲ. ಕೆಲವು ರಾಗಗಳಿಗೆ ಪ್ರಾದೇಶಿಕ ಮೂಲವಿರುತ್ತದೆ. ಹಾಗೆ ಇದು ಮಾಲವದೇಶದಲ್ಲಿ ಮೊದಲು ಪ್ರಚಲಿತವಾಯಿತೋ ಏನೋ. ಆದರೆ ಉತ್ತರ ಪದದಲ್ಲಿದ್ದ ಕಂಸ ಯಾರು? ನಮಗೆಲ್ಲಾ ಗೊತ್ತಿರುವ ಕಂಸನು ಇಂಥ ಮಧುರವಾದ ಉದಾತ್ತವಾದ ರಾಗದ ಹೆಸರಿನಲ್ಲಿ ಹೇಗೆ ನುಸುಳಿದನು? ಕೃಷ್ಣನ ವೈರಿಯಾಗಿರು

ಸಂಗೀತಗಾರರು ಅವನ ಹೆಸರನ್ನೇ ಅದಕ್ಕಿಟ್ಟು ಬಿಡುತ್ತಿದ್ದರು ಎನ್ನಬೇಕೇ? ಇಲ್ಲವಾದರೆ ಕೃಷ್ಣನ ತಾಯಿ-ತಂದೆಯಂತೆ ಸೆರೆಮನೆಯಲ್ಲಿ ಕೊಳೆತು ತಾವೂ ತಮ್ಮ ಮಕ್ಕಳೂ ಕಂಸನ ಅಪ್ಪಳಿಕೆಗೆ ತುತ್ತಾಗಿ ನಾಮಶೇಷವಾಗಿ ಬಿಡುತ್ತಿದ್ದರೇನೋ.

ಮಾಲಕಂಸ ರಾಗಕ್ಕೆ ಕರ್ನಾಟಕ ಸಂಗೀತದಲ್ಲಿ ಹಿಂದೋಳವೆಂಬ ಸೊಗಸಾದ ಹೆಸರಿದೆ. ಹಿಂದೋಳವೆಂದರೆ ಉಯ್ಯಾಲೆ. ಉಯ್ಯಾಲೆಯ ಹಾಗೆ ಮೆಲ್ಲಮೆಲ್ಲನೆ ಜೀಕುತ್ತ ಈ ರಾಗ ಲಹರಿಗಳು ನೆಲದಿಂದ ಮೇಲೆ ಮೇಲೆ ಹೋಗಿ ಮತ್ತೆ ಹೊರಳಿ ಬಂದು ನೆಲಮುಗಿಲುಗಳನ್ನು ಒಂದು ಲಯವಿನ್ಯಾಸದಲ್ಲಿ ಒಂದುಗೊಳಿಸುತ್ತವೆ. ರಾಜಾ ರವಿವರ್ಮನು ಬರೆದ ಒಂದು ಚಿತ್ರದಲ್ಲಿ ಚೆಲುವೆಯೊಬ್ಬಳು ಬಹುಶಃ ಅದೇ ಅಭ್ಯಂಗಸ್ನಾನಮಾಡಿ ತನ್ನ ಕೂದಲನ್ನು ಬೀಸಾಗಿ ಹಿಂದೆ ಇಳಿಬಿಟ್ಟು ಉಯ್ಯಾಲೆಯ ಮೇಲೆ ಕುಳಿತು ತೂಗಿಕೊಳ್ಳುತ್ತಿದ್ದಾಳೆ. ಅವಳೇ ಈ ಹಿಂದೋಳ ರಾಗ ಸುಂದರಿಯೇನೊ ಎಂದು ಭಾಸವಾಗುತ್ತದೆ. ನಮ್ಮ ನಾಡೋಜ ಪಂಪನಿಗೆ ಮಾವುಮಲ್ಲಿಗೆ ಮಾತ್ರ 'ಸಂಸಾರ ಸಾರ ಸರ್ವಸ್ವ ಫಲ' ವಾಗಿರಲಿಲ್ಲ, ಈ ಹಿಂದೋಳ ರಾಗವೂ ಪ್ರಿಯವಾಗಿತ್ತೆಂದು ತೋರುತ್ತದೆ. ಇಷ್ಟೇ ಏಕೆ, ಅರ್ಜುನವಿರಹತಾಪದಲ್ಲಿದ್ದ ಸುಭದ್ರೆಗೂ ಈ ರಾಗವು ನೆಮ್ಮದಿಯನ್ನು ಕೊಟ್ಟಿತೆಂದು ಅವನು ಬಣ್ಣಿಸಿರುವಂತಿದೆ. 'ಕಿವಿಯುಂ ಇಂದೋಳದ ಇಂಚರಕೆ ಆಂತುಂ ಇಂತು ಕೋಮಳೆಯುಸಿರುಂ ಮತ್ತುಂ ಈ ಒಡಲೊಳ್ ಇರ್ದುದು ಎಮ್ಮಯ ನೃಪ ಭೂಪತಿ' ಎಂದು ಸುಭದ್ರೆಯು ಕೆಳದಿ ಅರ್ಜುನನಿಗೆ ಹೇಳುತ್ತಾಳೆ. ಇಲ್ಲಿ ಇಂದೋಳ ಎಂದರೆ ಹಿಂದೋಲರಾಗ ಎಂದು ಪಂಪಭಾರತದೀಪಿಕೆ ಅರ್ಥವಿಸಿರುತ್ತದೆ. ಈ ಅರ್ಥದ ವಿಚಾರದಲ್ಲಿ ಚರ್ಚೆಗೆ ಆಸ್ಪದವಿರಬಹುದು. ಆದರೆ ಮಾಲಕಂಸಭಕ್ತರಾದ ನಮ್ಮಂಥವರಿಗೆ ಪಂಪನೂ ಅವನ ಕಥಾನಾಯಕಿ ಸುಭದ್ರೆಯೂ ನಮ್ಮ ಗುಂಪಿಗೆ ಸೇರಿದವರಲ್ಲ ಎಂಬ ಸಮಾಧಾನ ತಾತ್ಪೂರ್ತಿಕವಾದರೂ ಅದನ್ನು ನಾವು ಪಡೆಯುವವರೇ. ಮಾಲಕಂಸರಾಗದ ಆಲಾಪನೆ ವಿಶೇಷವಾಗಿ ನಯನವುರಾದ ಮಂಜುಳವಾದ ಸ್ತ್ರೀಕಂಠದಿಂದ ಮೊದಲಾಯಿತೆಂದರೆ ನಾನು ಈ ಭೂಮಿಯ ಮೇಲಿನ ಜೀವನದ ಎಲ್ಲ ಇತಿಮಿತಿಗಳನ್ನೂ ತೊಡಕುತೊಂದರೆಗಳನ್ನೂ ಮರೆತುಬಿಡುತ್ತೇನೆ, ಈ ರಾಗದ ಜೀವ ಜೀವಾಳದಲ್ಲಿ ಬೆರೆತುಹೋಗುತ್ತೇನೆ. ಅದನ್ನು ಕೇಳುತ್ತಿರುವಂತೆ ನನಗೆ ಸಂತಮೀರಾಬಾಯಿಯ 'ಮೋರೀ ಲಾಗೀ ಲಟಕ ಗುರುಚರನನಕಿ, ಚರನ ಬಿನಾ ಮುಝೆ ಕಛು ನಹಿ ಭಾವೆ' ಎಂಬ ಭಕ್ತಿಗೀತವು ತನ್ನೆಲ್ಲ ಸಮರ್ಪಣ ಭಾವದಿಂದ ಮಾಲ ಕಂಸರಾಗದಲ್ಲಿಯೆ ನನ್ನ ಕಂಠದಿಂದ ಹೊರಹೊಮ್ಮತೊಡಗುತ್ತದೆ. 'ಭವಸಾಗರ ಸಬ ಸೂಖಿಗಯಾ ಹೈ ಫಿಕರ ನಹಿ ಮುಝೆ ತರನನಕಿ' ಎಂದಾಗ ಒಂದು ಕ್ಷಣವಾದರೂ ನಾನೂ ಮೀರಾಬಾಯಿಯ ಆವೇಶದಲ್ಲಿ ನಿಲ್ಲುತ್ತೇನೆ. ಅವಳು ಈ ಹಾಡಿನಲ್ಲಿ ಹೇಳಿದ್ದಾಳೆ, 'ಗುರುಚರಣದಲ್ಲಿ ನನ್ನ ಲಕ್ಷ್ಯವೆಲ್ಲ ಒಮ್ಮೊನೆಯಾಗಿ ನಿಂತಿದೆ, ಚರಣವನ್ನು ಹೊರತು ಬೇರಾವ ಭಾವವೂ ನನ್ನಲ್ಲಿಲ್ಲ ಸಂಸಾರ ಸಾಗರವೆಲ್ಲ ಬತ್ತಿಹೋಗಿದೆ, ಅದನ್ನುದಾಟಿಹೋಗುವ ಕಾಳಜಿಯೇ ನನಗಿಲ್ಲ' ಮಾಲಕಂಸರಾಗವು ಇಂಥ ಸರ್ವಸಮರ್ಪಣ ಭಾವಕ್ಕೆ ಅತ್ಯಂತ ಯೋಗ್ಯವಾದ ನಾದ ಮಾಧ್ಯಮವೆಂದು ನಾನು ನಂಬಿದ್ದೇನೆ. ಎಷ್ಟೇ ಅಲ್ಪವಾದರೂ ಸಮರ್ಪಣದ ಸಾಧನೆಯನ್ನು ಆಯುಷ್ಯದುದ್ದಕ್ಕೂ ಮಾಡುತ್ತಿರುವ ಈ ಜೀವಕ್ಕೆ ಅಂತೇ ಮಾಲಕಂಸವು ಅತ್ಯಂತ ಪ್ರಿಯವಾದ ರಾಗವಾಗಿ ಪರಿಣಮಿಸಿದೆಯೋ ಏನೋ! ✡

ನಾನು ಹಂಸವಾಗಿ ಸಂಗೀತದಲ್ಲೇ ಮುಳುಗಿ ಸಾಯಬಯಸುವೆ.

— ಶೇಕ್ಸ್‌ಪಿಯರ್

ಬಿರುಗಾಳಿಯ ಅವಾಂತರ

ಎಂ. ಆರ್. ಎಸ್. ರಾವ್

೧೯೦೪ ನೆ ಜೂನ್ ೨೯ ರಂದು ಮಾಸ್ಕೊ-ದಲ್ಲಿ ಬೀಸಿದ ಸುಂಟರಗಾಳಿ ಭೀಕರವಾಗಿತ್ತಲ್ಲದೆ ಅದ್ಭುತವೂ ಆಗಿತ್ತು. ಅದನ್ನು ಪ್ರತ್ಯಕ್ಷ-ದರ್ಶಿಯೊಬ್ಬ ಹೀಗೆ ವರ್ಣಿಸಿದ್ದಾನೆ :

"ಎಲ್ಲೆಡೆಯೂ ಮುಸುಕು ಕವಿದಂತಿತ್ತು. ಆಗಾಗ ಆಕಾಶದಲ್ಲಿ ಮಿಂಚು ಮಿಂಚಿ ಪರಿಸರವನ್ನು ಪ್ರಕಾಶಮಾನಗೊಳಿಸುತ್ತಿತ್ತು... ಒಮ್ಮೆಲೆ ಹೀಗಾದದ್ದನ್ನು ಕಂಡು ಭಯಭೀತನಾಗಿ ನಾನು ಬಳಿಯಲ್ಲೆ ಇದ್ದ ಸುರಂಗದಲ್ಲಿ ನುಗ್ಗಿದೆ. ಅಷ್ಟರಲ್ಲೆ ಸುಂಟರಗಾಳಿ ಬಲವಾಗಿ ಬೀಸಲಾರಂಭಿಸಿತು. ಆಕಾಶದಿಂದ ಗುಡುಗು ಒಂದೇ ಸವನೆ ಕೇಳಿ ಬರತೊಡಗಿತು. ಮಾಳಿಗೆಗಳು, ಕಂಬಗಳು, ಹಂಚುಗಳು, ಇಟ್ಟಿಗೆಗಳು ಮುಂತಾದ ಭಾರವಾದ ವಸ್ತುಗಳನ್ನೂ ಸುಂಟರಗಾಳಿ ಹಾರಿಸಿದ್ದರಿಂದ ಅವು ಅಂತರದಲ್ಲಿ ಒಂದಕ್ಕೊಂದು ತಾಗಿ ಕೆಳಗೆ ಬಿದ್ದು ಘೋರವಾದ ಸಪ್ಪಳವನ್ನುಂಟು ಮಾಡುತ್ತಿದ್ದವು. ಇದೆಲ್ಲ ನಡೆದುಹೋದದ್ದು ಎರಡೇ ನಿಮಿಷಗಳಲ್ಲಿ. ಅನಂತರ ಮತ್ತೆ ಎಲ್ಲವೂ ಯಥಾಪ್ರಕಾರ ಶಾಂತವಾಗಿತ್ತು. ನಾನು ಸುರಂಗದಿಂದ ಹೊರಬಂದಾಗ ಎದುರಿಗಿದ್ದ ಇಟ್ಟಿಗೆಯ ಗೋಡೆ ಬಿದ್ದುಹೋಗಿತ್ತು. ಸುಂಟರಗಾಳಿ ದಪ್ಪವಾದ, ಲೋಹದಿಂದ ಮಾಡಿದ, ಉದ್ದವಾದ ಚಿಮಣಿಯನ್ನು ಬಗ್ಗಿಸಿದ್ದರಿಂದ ಅದು ಸಂಪೂರ್ಣವಾಗಿ ಮಣಿದು ಹೋಗಿ ರಸ್ತೆಯ ಮೇಲೆ ಮಲಗಿತ್ತು."

ಮಾಸ್ಕೊದ ಪೂರ್ವಭಾಗದಲ್ಲಿನ ಲೊಫ್ರೊ-ಟೋರ್ವೋದ ಬಳಿ ಪೋಲೀಸನೊಬ್ಬ ನಿಂತಿದ್ದ. ಬಿರುಗಾಳಿ ಬೀಸತೊಡಗಿದರೂ ಅವಿಚಲಿತನಾಗಿ ಆತ ನಿಂತೇ ಇದ್ದ. ಅಷ್ಟರಲ್ಲಿ ಬಿರುಗಾಳಿ ಹೆಚ್ಚು ಶಕ್ತಿಯಿಂದ ಬೀಸಿ, ಆ ಪೋಲೀಸ-ನನ್ನೆತ್ತಿಕೊಂಡು ೩೫೦ ಅಡಿ ದೂರದಲ್ಲಿ ತೋಟವೊಂದರಲ್ಲಿ ಒಗೆಯಿತು. ಆತ ಹೂವಿನ ಸಸಿಗಳ ಮೇಲೆ ಬಿದ್ದುದರಿಂದ ವಿಶೇಷ ಪೆಟ್ಟೇನೂ ತಗುಲಲಿಲ್ಲ.

ಅದೇ ದಿನ ಮಾಸ್ಕೊದಲ್ಲಿ ಇನ್ನೊಂದು ಕಡೆ ಬಿರುಗಾಳಿ ಇನ್ನೊಬ್ಬ ಪೋಲೀಸನನ್ನು ಹಾರಿಸಿಕೊಂಡು ಹೋಗಿತ್ತು. ಜೋರಾಗಿ ಕೆಳಗೆ ಬಿದ್ದಿದ್ದರಿಂದಲೂ ಆಗ ಭಾರವಾದ ಆಣೆಕಲ್ಲುಗಳು ಬೀಳುತ್ತಿದ್ದುದರಿಂದಲೂ ಆ ಬಡಪಾಯಿ ಜರ್ಜರಿತನಾಗಿ ಹೋದ. ಅವನಿಗೆ ಎಚ್ಚರವಾದಾಗ ಇಬ್ಬರು ಪುರುಷರೂ ಒಬ್ಬ ಮಹಿಳೆಯೂ ಒಂದು ಕುದುರೆಯೂ ಆತನ ಮೈಮೇಲೆ ಬಿದ್ದಿದ್ದವು. ಅದೇ ದಿನ ಇಬ್ಬರು ಫೈರ್‌ಮನ್ನರೂ ಇದೇ ರೀತಿ ದೂರಕ್ಕೆ ಹಾರಿ ಹೋಗಿದ್ದರು.

ಆಗ ಒಬ್ಬ ಹುಡುಗ ಬಿರುಗಾಳಿಯ ಪ್ರಕೋಪಕ್ಕೆ ಸಿಕ್ಕು ರೋಡ್ ರೋಲರಿನಂತೆ ಉರುಳತೊಡಗಿದ. ನಂತರ ಒಮ್ಮೆಲೆ ಬಿರುಗಾಳಿ ಆತನನ್ನು ಹಾರಿಸಿಕೊಂಡು ಹೋಗಿ ಎಷ್ಟೋ ಮೈಲುಗಳ ಅಂತರದಲ್ಲಿ ಇಳಿಸಿತು. ಕಣ್ಣುಜ್ಜಿಕೊಂಡು ನೋಡಿದಾಗ ಆ ಬಾಲಕ ಪೈನ್ ಮರ ಬೇರುಸಹಿತ ಕಿತ್ತಲ್ಪಟ್ಟು ಉಂಟಾದ ತಗ್ಗಿನಲ್ಲಿದ್ದ. ಆತನಿಗೇನೂ ಗಾಯವಾಗಿರಲಿಲ್ಲವಾದರೂ ಮನಸ್ಸು ತುಂಬಾ ವ್ಯಗ್ರವಾಗಿತ್ತು.

ಈ ಬಿರುಗಾಳಿ ಅನೇಕ ಅಪರಾಧಿಗಳು ಪಾರಾಗುವುದಕ್ಕೆ ಸಹಕರಿಸಿತೆನ್ನುವುದು ವಿಚಿತ್ರವೇ ಸರಿ. ಅದು ಕೋರ್ಟಿನಲ್ಲಿನ ಫೈಲುಗಳನ್ನು ಹಾರಿಸಿಕೊಂಡು ಹೋಗಿ ದೂರ ದೂರ ಎಸೆದದ್ದರಿಂದ ಅಪರಾಧವನ್ನು ಸಿದ್ಧಪಡಿಸುವ ಕೆಲ ಪುರಾವೆಗಳು ದೊರೆಯಲೇ ಇಲ್ಲ. ಹೀಗಾಗಿ ನ್ಯಾಯಾಧೀಶರು ನಿರುಪಾಯರಾಗಿ ಕೆಲ ಅಪರಾಧಿಗಳನ್ನು ಬಿಟ್ಟುಬಿಡಬೇಕಾಯಿತು. ಪುರಾವೆಗಳೆಲ್ಲವೂ ಗಾಳಿಗೆ ತೂರಲ್ಪಟ್ಟಾಗ ನ್ಯಾಯಾಧೀಶರಾದರೂ ಏನು ಮಾಡಲು ಸಾಧ್ಯ ?

ಕಲಾಪ್ರಪಂಚದ ವಂಚಕ ಶಿಖಾಮಣಿ

ಶ್ರೀಕಾಂತ ಮುಳಗಿ

ದ್ವಿತೀಯ ಮಹಾಯುದ್ಧ ಅದೇ ತಾನೇ ಕೊನೆಗೊಂಡಿತ್ತು. ಮಿತ್ರ ರಾಷ್ಟ್ರಗಳ ದಾಳಿಯಿಂದಾಗಿ ಜರ್ಮನಿಯ ಅನೇಕ ನಗರಗಳು ಉಧ್ವಸ್ತವಾಗಿದ್ದವು. ಹೀಗೆ ಉಧ್ವಸ್ತಗೊಂಡ ನಗರಗಳ ಪೈಕಿ ಜರ್ಮನಿಯ ಉತ್ತರದಲ್ಲಿರುವ ಲ್ಯೂಬೆಕ್ ನಗರವೂ ಒಂದು. ಅಲ್ಲಿನ ಸೇಂಟ್ ಮೇರಿ ಚರ್ಚು ಅನೇಕ ಶತಮಾನಗಳಷ್ಟು ಹಳೆಯದಾಗಿದ್ದು ಪ್ರತಿ ವರ್ಷ ಸಾವಿರಗಟ್ಟಳೆಯಲ್ಲಿ ಭಕ್ತವೃಂದವನ್ನು ಆಕರ್ಷಿಸುತ್ತಿತ್ತು. ಈ ಚರ್ಚು ಬಾಂಬು ದಾಳಿಗೆ ಆಹುತಿಯಾದಾಗ ಭಕ್ತರು ಅದನ್ನು ಸರಿಪಡಿಸುವುದಾಗಿ ನಿಶ್ಚಯಿಸಿದರು.

ರಿಪೇರಿ ಕೆಲಸ ಆರಂಭವಾಯಿತು. ಆದರೆ ಈ ಚರ್ಚು ಕೇವಲ ಧಾರ್ಮಿಕ ಸ್ವಭಾವದವರಿಗಷ್ಟೇ ಅಲ್ಲ, ಕಲಾರಸಿಕರಿಗೂ ಆಕರ್ಷಣೆಯ ಕೇಂದ್ರವಾಗಬಹುದೆಂದು ಯಾರಿಗೆ ಗೊತ್ತು? ರಿಪೇರಿ ನಡೆದು ಅಲ್ಪ ಕಾಲದಲ್ಲಿಯೇ ಜರ್ಮನಿಯ ಕಲಾತಜ್ಞನಾದ ಡಾ. ಡೀಟ್ರಿಚ್ ಫೇ ಈ ಚರ್ಚಿನ ಹಳೆಯ ಗೋಡೆಗಳ ಮೇಲಿನ ಸುಣ್ಣದ ತೆಳುವಾದ ಪದರಿನ ಹಿಂದೆ ಹದಿಮೂರನೇ ಶತಮಾನದಲ್ಲಿ ಬರೆದ ಅಮೂಲ್ಯ ಚಿತ್ರಗಳನ್ನು ತಾನು ಗುರುತಿಸಿ ಸುಣ್ಣವನ್ನು ಅಳಿಸಿದ್ದಾಗಿಯೂ ಈಗ ಆ ಚಿತ್ರಗಳನ್ನು ಯಾರು ಬೇಕಾದರೂ ನೋಡಬಹುದೆಂದೂ ಸಾರಿದ.

ಜರ್ಮನಿಯ ಮೂಲೆ ಮೂಲೆಗಳಿಂದ ಜನ ಸೇಂಟ್ ಮೇರಿ ಚರ್ಚಿಗೆ ಮುತ್ತಲಾರಂಭಿಸಿದರು. ಕಲಾ ವಿಷಯಕ ತಜ್ಞರು ಈ ಚಿತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಇವು ಹದಿ-

ಮೂರನೆಯ ಶತಮಾನದ ಆಸುಪಾಸಿನಲ್ಲಿ ತೆಗೆದ ಚಿತ್ರಗಳೆಂದೂ ಈ ಬಗ್ಗೆ ಯಾವುದೇ ಬಗೆಯ ಸಂದೇಹಕ್ಕೆ ಆಸ್ಪದವಿಲ್ಲವೆಂದೂ ಘಂಟಾಘೋಷವಾಗಿ ಸಾರಿದರು. ೧೯೫೧ ರಲ್ಲಿ ಲ್ಯೂಬೆಕ್ ನಗರ ತನ್ನ ಏಳನೂರನೇ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವಾಗ ಜರ್ಮನಿಯ ಅಧ್ಯಕ್ಷರಾಗಿದ್ದ ಕೋನ್‌ರಾಡ್ ಅಡೆನೂರರು ಈ ಭಿತ್ತಿ ಚಿತ್ರಗಳನ್ನೊಳಗೊಂಡ ಅಂಚೆ ಚೀಟಿಗಳನ್ನು ಹೊರ ತಂದರು. ಜರ್ಮನಿಯಲ್ಲಿ ಕಲಾ ನಿಪುಣನೊಬ್ಬನಿಗೆ ದೊರೆಯಬಹುದಾದ ಅತ್ಯುಚ್ಚ ಗೌರವವನ್ನು ಅವನಿಗೆ ದಯಪಾಲಿಸಿದ್ದಲ್ಲದೆ ಭಾರಿಯಾದ ಬಹುಮಾನವನ್ನೂ ನಗದು ರೂಪದಲ್ಲಿ ಕೊಟ್ಟರು. ಕಲಾ ಪ್ರಪಂಚದ ಅತ್ಯಮೌಲ್ಯ ನಿಧಿಯನ್ನು ದೊರಕಿಸಿ ಕೊಟ್ಟದ್ದಕ್ಕಾಗಿ ಡೀಟ್ರಿಚ್ ಫೇಯ ಕೀರ್ತಿ ದಿಗ್‌ದಿಗಂತಗಳಿಗೂ ಹಬ್ಬಿತು. ಅವನ ಈ ಮಹಾ ಶೋಧದ ಬಗ್ಗೆ ಪ್ರಪಂಚದಾದ್ಯಂತ ಸಾವಿರಾರು ಲೇಖನಗಳು ಪ್ರಕಟವಾದವು.

ಹಾಗೆ ನೋಡಿದರೆ ಡೀಟ್ರಿಚ್ ಫೇ ಕಲಾ ಪ್ರಪಂಚಕ್ಕೆ ಹೊಸಬನೇನಲ್ಲ. ಜರ್ಮನಿಯ ಕಲಾಕೃತಿಗಳ ಬಗೆಗಿನ ಅವನ ಅಭಿಪ್ರಾಯವನ್ನು ಕಲಾ ಪ್ರೇಮಿಗಳು ಇದಮಿತ್ಥಂ ಎಂದು ಒಪ್ಪಿಕೊಳ್ಳುವ ಮಟ್ಟಿಗೆ ಆತ ಕಲಾ ನಿಪುಣನಾಗಿದ್ದ. ಮೇಲಾಗಿ ಆತ ಹಳೆಗಾಲದ ಅನೇಕ ಕಲಾ ಕೃತಿಗಳನ್ನು ಹೊರತಂದು ಕಲಾ ತಜ್ಞರ ಸಾಲಿನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದ.

ಒಮ್ಮೆ ಇವನ ಸನ್ಮಾನಾರ್ಥವಾಗಿ ಒಂದು ಸಭೆಯನ್ನೇರ್ಪಡಿಸಿದಾಗ ಡೀಟ್ರಿಚ್ ಫೇ, "ಸೇಂಟ್ ಮೇರಿ ಚರ್ಚಿನಲ್ಲಿ ದೊರೆತ ಕಲಾ ಕೃತಿಗಳು ೧೨೮೦ ರ ಸುಮಾರಿಗೆ ರೂಪುಗೊಂಡವೆನ್ನುವಲ್ಲಿ ಸಂದೇಹವೇ ಇಲ್ಲ. ಆದರೆ ಇವುಗಳನ್ನು ಯಾರು ಚಿತ್ರಿಸಿದರೆನ್ನುವುದು ಮಾತ್ರ ಇನ್ನೂ ರಹಸ್ಯವಾಗಿಯೇ ಇದೆ. ಅದನ್ನು ಕಂಡುಹಿಡಿಯಲು ನಾವು ತುಂಬಾ ಪ್ರಯತ್ನಿಸುತ್ತಿದ್ದೇವೆ. ಹೀಗಾಗಿ ಇನ್ನು ಯಾದರೆ ಆಶ್ಚರ್ಯವಲ್ಲ," ಎಂದು ಹೇಳಿದ.

ಕೂಡಲೇ ಸಭೆಯಲ್ಲಿದ್ದ ಒಬ್ಬ ಅಮೇರಿಕನ್ ವರದಿಗಾರ ಪ್ರಶ್ನಿಸಿದ, "ಅದು ಸರಿ. ಆದರೆ ಆ ಚಿತ್ರಗಳ ಪೈಕಿ ಒಂದರಲ್ಲಿ ಟರ್ಕಿ ಕೋಳಿಯಿದೆಯಲ್ಲ; ಕೊಲಂಬಸನು ಅಮೇರಿಕವನ್ನು ಕಂಡುಹಿಡಿದ ಮೇಲೆ ತಾನೇ ಅದು ಯುರೋಪನ್ನು ಪ್ರವೇಶಿಸಿದ್ದು? ನೀವು ಹೇಳುವ ಹಾಗೆ ಆ ಚಿತ್ರಗಳು ಹದಿಮೂರನೆಯ ಶತಮಾನದಲ್ಲಿಯೇ ಅಂದರೆ ಕೊಲಂಬಸನು ಅಮೇರಿಕವನ್ನು ಶೋಧಿಸುವುದಕ್ಕಿಂತ ೨೦೦ ವರ್ಷ ಮೊದಲೇ ತೆಗೆಯಲ್ಪಟ್ಟಿದ್ದರೆ ಆ ಟರ್ಕಿ ಕೋಳಿ ಅಲ್ಲಿ ಹೇಗೆ ಬಂತು?"

ಡಾಕ್ಟರ ಫೇಯ ಬಳಿ ಉತ್ತರ ಸಿದ್ಧವಾಗಿಯೇ ಇತ್ತು; "ಟರ್ಕಿ ಕೋಳಿ ಮೂಲತಃ ಅಮೇರಿಕದಿಂದ ಬಂದಿದ್ದೆಂದು ನೀವು ಹೇಳುವುದು ಸರಿ. ಈ ಚಿತ್ರಗಳು ಹದಿಮೂರನೆಯ ಶತಮಾನದಲ್ಲಿ ತೆಗೆದದ್ದವೆನ್ನುವುದೂ ಸರಿ. ಈ ಎರಡೂ ತಥ್ಯಗಳನ್ನು ಪರಿಶೀಲಿಸಿದಾಗ ಇನ್ನೊಂದು ಹೊಸ ಐತಿಹಾಸಿಕ ಸಾಧ್ಯತೆ ನಮ್ಮ ಎದುರು ಬರುತ್ತದೆ. ಬಹುಶಃ ಕೊಲಂಬಸನಿಗಿಂತ ಮೊದಲು ಸಮುದ್ರಗಳ್ಳರು ಆ ದೇಶವನ್ನು ಕೊಳ್ಳೆ ಹೊಡೆಯುತ್ತಿರಬೇಕು. ಅವರ ಮೂಲಕ ಈ ಕೋಳಿ ಯುರೋಪನ್ನು ಪ್ರವೇಶಿಸಿರಬೇಕು. ಇದು ಎಷ್ಟು ಮಟ್ಟಿಗೆ ಸತ್ಯವೆಂಬುದನ್ನು ಇತಿಹಾಸಕಾರರೇ ತಮ್ಮ ಸಂಶೋಧನೆಯ ಮೂಲಕ ಕಂಡುಹಿಡಿಯಬೇಕು. ನನ್ನನ್ನು ಕೇಳಿದರೆ ತಾವು ಜಿಜ್ಞಾಸೆಯಿಂದ ಎತ್ತಿದ ಈ ಪ್ರಶ್ನೆ ಅವರಿಗೆ 'ತಾಜಾ ಮಸಾಲೆ'ಯಾಗಬೇಕು."

ಡೀಟ್ರಿಚ್ ಫೇ ಹೀಗೆ ಕೀರ್ತಿ ಶಿಖರದ ತುದಿಯನ್ನೇರಿದಾಗಲೇ ಲ್ಯೂಥರ್ ಮಸ್ಕಟ್ ಎಂಬ ಅನಾಮಧೇಯ ಪೇಂಟರನೊಬ್ಬ ಅನಿರೀಕ್ಷಿತವಾಗಿ ಗೊಂದಲವೆಬ್ಬಿಸಿದ. ಆತ ೧೯೫೨ ರ ಮೇ ತಿಂಗಳಲ್ಲೊಂದು ದಿನ ಲ್ಯೂಬೆಕ್ ನಗರದ ಪೋಲೀಸು ಸ್ಟೇಶನ್ನಿಗೆ ಹೋಗಿ, ಸೇಂಟ್ ಮೇರಿ ಚರ್ಚಿನ ಎಲ್ಲ ಚಿತ್ರಗಳನ್ನು ತಾನೇ ತೆಗೆದಿದ್ದಾಗಿಯೂ ಅವು

ಡಾ. ಡೀಟ್ರಿಚ್ ಫೇ ಜನರನ್ನು ಮೋಸಗೊಳಿಸುತ್ತಿದ್ದಾರೆಂದು ದೂರುಕೊಟ್ಟ. ವಿಶ್ವವಿಖ್ಯಾತ ಕಲಾತಜ್ಞನ ವಿರುದ್ಧ ಸಾಮಾನ್ಯ ಪೇಂಟರನೊಬ್ಬ ಹೀಗೆ ತಕರಾರು ಮಾಡುವುದು ಪೋಲೀಸ್ ಅಧಿಕಾರಿಗಳಿಗೆ ತಮಾಷೆಯಾಗಿ ಕಂಡಿತೇನೋ. ಅನಾಮಧೇಯ ಭ್ರಮಿಷ್ಟನ ಮಾತಿಗೆ ಯಾರಾದರೂ ಬೆಲೆ ಕೊಟ್ಟಾರೆಯೇ? ಎಂದು ಅವರು ಮುಸ್ಕಟನನ್ನು ತಾಣ್ಯದಿಂದ ಹೊರದಬ್ಬಿದ್ದರು. ಮರುದಿನ ಲ್ಯೂಥರ್ ಮುಸ್ಕಟ್ ಮತ್ತೆ ಪೋಲೀಸ ಸ್ಟೇಶನ್ನಿಗೆ ಬಂದ. ಮತ್ತೆ ಹಿಂದಿನ ದಿನದ್ದೇ ಅನುಭವ ಆತನಿಗೆ ಬಂತು. ಆದರೆ ಮುಸ್ಕಟ್ ಧೃತಿಗೆಡಲಿಲ್ಲ. ಮಾರನೇ ದಿನ ಮತ್ತೆ ಅಲ್ಲಿಗೆ ಹೋದ. ಆದರೆ ಈ ಸಲ ಆತ ಹಾಗೆಯೇ ಅಲ್ಲಿ ಹೋಗಿರಲಿಲ್ಲ. ತಾನು ಹೇಳುವುದು ಸರಿ ಎನ್ನುವುದಕ್ಕೆ ಕೆಲ ಪ್ರಮಾಣಗಳನ್ನು ಒಯ್ದಿದ್ದ.

ಆತ ಪೋಲೀಸ್ ಅಧಿಕಾರಿಗಳಿಗೆ ಕೆಲವು ಚಿತ್ರಗಳನ್ನು ತೋರಿಸುತ್ತಾ ಹೇಳಿದ. "ಈ ಫೋಟೋದಲ್ಲಿ ಸೇಂಟ್ ಮೇರಿ ಚರ್ಚಿನ ಗೋಡೆ ಹೇಗೆ ಕಾಣುತ್ತಿದೆ ನೋಡಿ. ಕಪ್ಪಾಗಿ ಕಾಣುವುದಿಲ್ಲವೆ? ವಿಮಾನುಗಳಿಂದ ಬಾಂಬ್ ದಾಳಿಯಾದಾಗ ಹೀಗಾದದ್ದು. ಗೋಡೆ ಕಪ್ಪಾಗಿ ಕಾಣುತ್ತಿದ್ದರೂ ಹಿಂದೆ ಯಾವುದೋ ಕಾಲದಲ್ಲಿ ತೆಗೆದ ಭಿತ್ತಿಚಿತ್ರಗಳು ಮಸುಕು ಮಸುಕಾಗಿ ಕಾಣುತ್ತಿದ್ದವು. ನಾನು ಗೋಡೆಯನ್ನು ಚೆನ್ನಾಗಿ ಉಜ್ಜಿ ಮೇಲೆ ಹಳೆಗಾಲದ ಶೈಲಿಯಲ್ಲಿ ಚಿತ್ರಗಳನ್ನು ಹೊಸದಾಗಿ ಬರೆದೆ. ಮತ್ತೆ ಈ ಫೋಟೋ ನೋಡಿ, ಹೇಗಿವೆ ಚಿತ್ರಗಳು? ಅಂದವಾಗಿಲ್ಲವೆ? ಇವುಗಳನ್ನೇ ಡಾ. ಫೇ ಅವರು ಹದಿಮೂರನೆಯ ಶತಮಾನದ ಚಿತ್ರಗಳೆಂದು ಪ್ರಚಾರ ಮಾಡುತ್ತಿರುವುದು. ಪುಣ್ಯಾತ್ಮ. ಇದರಿಂದಾಗಿ ಸಾಕಷ್ಟು ಕೀರ್ತಿಯನ್ನು ಗಿಟ್ಟಿಸಿಕೊಂಡ.ದೊಡ್ಡ ಬಹುಮಾನವನ್ನೂ ಹೊಡೆದ. ಆದರೆ ನನಗೆ ಕೊಡಬೇಕಾದ ದುಡ್ಡನ್ನು ಕೊಡಲೇ ಇಲ್ಲ. ನೀನು ಹೇಳಿದ್ದನ್ನು ಹೇಗೆ ನಂಬಬೇಕು ಎನ್ನುತ್ತೀರಾ? ... ನನಗೆ ಗೊತ್ತೇ ಇತ್ತು. ಆದ್ದರಿಂದಲೇ ಚಿತ್ರ ತೆಗೆದ ಮೇಲೆ ಭಾವಣಿಯ ಅಡಿಯಲ್ಲಿ ನನ್ನ ಹೆಸರನ್ನು ಸಣ್ಣದಾಗಿ ಬರೆದೆ. ಸೇಂಟ್ ಮೇರಿ ಚರ್ಚಿಗೆ ಹೋಗಿ ನೋಡಿ ಬೇಕಾದರೆ."

"ಏನೋ, ಏನು ಹೇಳುತ್ತಿದ್ದೀ ನೀನು? ನಿಜವೇನೋ ನೀನು ಹೇಳುವುದು," ಪೋಲೀಸ್ ಅಧಿಕಾರಿ ಆಶ್ಚರ್ಯದಿಂದ ಕುರ್ಚಿಯಲ್ಲಿ ಪುಟಿದು ಬಿದ್ದ.

"ಏಕಿಲ್ಲ ರಾಯರೆ, ನನ್ನಂತಹ ನಕಲಿ ಕಲಾವಿದರು ಹುಡುಕಿದರೂ ನಿಮಗೆ ದೊರೆಯಲಿಕ್ಕಿಲ್ಲ. ಯಾರ ನಕಲಿ ಕಲಾಕೃತಿ ನಿಮಗೆ ಬೇಕು. ಹೇಳಿ ನೋಡೋಣ? ರೆಂಬ್ರಾಂಟ್, ಪಿಕಾಸೋ, ಕೋರಟ್ ಅಥವಾ ರೇನಿಯರ್? ಒಬ್ಬರಲ್ಲ, ಇಬ್ಬರಲ್ಲ. ಇಲ್ಲಿಯ ವರೆಗೆ ನಾನು ೬೧ ಮಹಾನ್ ಕಲಾವಿದರ ೬೦೦ ಕಲಾಕೃತಿಗಳನ್ನು ಯಥಾವತ್ತಾಗಿ ಕಾಪಿಮಾಡಿ ಫೇ ಅವರಿಗೆ ಕೊಟ್ಟಿದ್ದೇನೆ. ಅಸಲಿ ಚಿತ್ರಗಳೆಂದು ಹೇಳುತ್ತಾ ಅವುಗಳೆಲ್ಲವನ್ನು ಅವರು ಭಾರಿ ಬೆಲೆಗೆ ಮಾರಿದ್ದಾರೆ."

ಮುಸ್ಕಟ್ ಹೇಳುತ್ತಿದ್ದುದು ಸತ್ಯವೆಂಬುದು ಮುಂದೆ ದೃಢಪಟ್ಟಿತು. ಆತ ಕಲಾಕೃತಿಗಳನ್ನು ಕಾಪಿಮಾಡುತ್ತಿದ್ದ. ಡೀಟ್ರಿಚ್ ಫೇ ಅದರ ಮೇಲೆ ನಿಜವಾದ ಕಲಾವಿದನ ಖೊಟ್ಟಿ ಸಹಿಮಾಡಿ ಅದು ಕಲಾವಿದನ ಅಪ್ಪಟ ಕೃತಿಯೆಂದು ಹೇಳಿ ಬಹು ದುಬಾರಿಯಾದ ಬೆಲೆಗೆ ಮಾರುತ್ತಿದ್ದರು. ವಿಖ್ಯಾತ ಕಲಾತಜ್ಞರಾದ ಫೇ ಅವರೇ ಅಪ್ಪಟ ಕಲಾಕೃತಿಯೆಂದು ಹೇಳಿದ ಮೇಲೆ ಕೇಳುವುದೇನು? ಅವು ಬಿಸಿದೋಸೆಗಳಂತೆ ಮಾರಾಟವಾಗಿ ಹೋಗುತ್ತಿದ್ದವು.

ಈತ ಹೇಳಿದ್ದು ಎಷ್ಟು ಮಟ್ಟಿಗೆ ನಿಜವೆಂಬುದನ್ನು ಪರಿಶೀಲಿಸಲು ಪೋಲೀಸ್ ಅಧಿಕಾರಿಯೊಬ್ಬ ಡೀಟ್ರಿಚ್ ಫೇಯಲ್ಲಿಗೆ ಹೋದಾಗ ಆತ, "ಮುಸ್ಕಟ್ ನನ್ನಲ್ಲಿ ನೌಕರಿ ಮಾಡುತ್ತಿದ್ದ. ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲವೆಂದು ನಾನು ಅವನನ್ನು ನೌಕರಿಯಿಂದ ತೆಗೆದುಹಾಕಿದ್ದರಿಂದ ಸಿಟ್ಟಿಗೆದ್ದು ಹೀಗೆ ಅಪಪ್ರಚಾರ ಮಾಡುತ್ತಿದ್ದಾನೆ.

ಅದೆಲ್ಲಾ ಬುರುಡೆ. ನೀವು ನಂಬಬೇಡಿ," ಎಂದು ಸಮಾಧಾನ ಹೇಳಿದ.

ಈ ಸುದ್ದಿ ಸಾರ್ವಜನಿಕರಲ್ಲಿ ಹಬ್ಬಿ ಗೊಂದಲ ವುಂಟುಮಾಡೀತೆಂದು ಪೋಲೀಸ್ ಅಧಿಕಾರಿಗಳು ಅದನ್ನು ಆದಷ್ಟು ಗುಪ್ತವಾಗಿಡಲು ಪ್ರಯತ್ನಿಸಿದರು. ಆದರೆ ಸುದ್ದಿ ಹೇಗೋ ಹಬ್ಬಿಬಿಟ್ಟಿತು. 'ಮಸ್ಕಟನ ತಲೆ ಸರಿಯಾಗಿಲ್ಲ. ತಲೆ ಸರಿಯಾಗಿದ್ದವರು ಯಾರಾದರೂ ಡೀಟ್ರಿಚ್ ಫೇ ಅವರಂತಹ ಕಲಾತಜ್ಞರ ಮೇಲೆ ಇಂತಹ ಕ್ಷುಲ್ಲಕ ಆಪಾದನೆಗಳನ್ನು ಮಾಡುತ್ತಾರೆಯೆ ?' ಎಂಬರ್ಥದ ಸುದ್ದಿ ಈ ವೇಳೆಯಲ್ಲಿ ಲ್ಯೂಬೆಕ್ ನಗರದ ಪತ್ರಿಕೆಗಳಲ್ಲಿ ಅಚ್ಚಾಯಿತು.

ಲ್ಯೂಥರ್ ಮಸ್ಕಟ್ ಸುಮ್ಮನೆ ಕೂಡಲಿಲ್ಲ. ಆತ ತನ್ನ ಮಾತನ್ನು ಸಮರ್ಥಿಸಲು ರೇಡಿಯೋ, ಟೆಲಿವಿಜನ್ನುಗಳನ್ನು ಬಳಸಿಕೊಂಡ. ಪತ್ರಿಕಾಕರ್ತರನ್ನು ಭೇಟಿಯಾಗಿ ತನ್ನ ವಾದವನ್ನು ಬಿಂಬಿಸಲು ಯತ್ನಿಸಿದ.

ಜರ್ಮನಿಯಲ್ಲಿ 'ಡೀ ವೇಯ್ಲ್ಟ್' (ಜಗತ್ತು) ಎಂಬ ದಿನಪತ್ರಿಕೆ ಪ್ರಕಟವಾಗುತ್ತದೆ. ಅದರ ಪ್ರಸಾರ ಲಕ್ಷಾಂತರದಷ್ಟು. ಪತ್ರಿಕೆ ಮೊದಲಿನಿಂದಲೂ ಒಳ್ಳೆ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದ್ದರಿಂದ ಅದರಲ್ಲಿ ಬಂದದ್ದೆಲ್ಲವೂ ನಿಜವೆಂದು ಜನ ನಂಬುತ್ತಾರೆ. ಈ ವೇಳೆಯಲ್ಲಿ ಅದು ಒಂಭತ್ತನೆ ಶತಮಾನದ ಒಂದು ಚಿತ್ರವನ್ನೂ ಸೇಂಟ್ ಮೇರಿ ಚರ್ಚಿನ ಭಿತ್ತಿಚಿತ್ರವನ್ನೂ ಒಂದರ ಬದಿಯಲ್ಲೊಂದರಂತೆ ಪ್ರಕಟಿಸಿ ಎರಡರಲ್ಲೂ ಸಾಕಷ್ಟು ಸಾಮ್ಯವಿರುವುದನ್ನು ಎತ್ತಿ ತೋರಿಸಿತು. ಈಗ ಡೀಟ್ರಿಚ್ ಫೇಯ ಮೇಲೆ ಜನರ ಸಂದೇಹ ಬಲವಾಯಿತು.

"ಛಾಗಲಾ ಎಂಬ ಕಲಾವಿದನ ಕಲಾಕೃತಿಯೆಂದು ಡಾ. ಫೇ ನನಗೆ ಒಂದು ಕಲಾಕೃತಿಯನ್ನು ಮಾರಿದ್ದರು. ನಾನು ಅದನ್ನು ಸ್ವತಃ ಛಾಗಲಾನಿಗೆ ತೋರಿಸಿದಾಗ ಆಗ ಅದು ನಕಲಿ ಕಲಾಕೃತಿಯೆಂದು ಸಿಟ್ಟಿಗೆದ್ದು ಅದನ್ನು ಹರಿದುಹಾಕಿದ. ಡಾ. ಫೇ ಹೀಗೆ ಮೋಸ ಕ್ರಮ ಜರುಗಿಸಬೇಕು." ಎಂದು ಕಲಾಕೃತಿಗಳನ್ನು ಮಾರುವ ಪ್ರಖ್ಯಾತ ವ್ಯಾಪಾರಿಯೊಬ್ಬ ಫ್ರಾಂಕ್‌ಫರ್ಟಿನಲ್ಲಿ ಪೋಲೀಸರಿಗೆ ದೂರು ಸಲ್ಲಿಸಿದ.

ಇತ್ತ ಲ್ಯೂಥರ್ ಮಸ್ಕಟ್ ಒಬ್ಬ ವಕೀಲನನ್ನು ನಿಯಮಿಸಿ ಡಾ. ಫೇಯ ಮೇಲೆ ಮೊಕದ್ದಮೆ ಹೂಡಿದ್ದಲ್ಲದೆ ತನ್ನ ಮೇಲೂ ಒಂದು ಮೊಕದ್ದಮೆಯನ್ನು ಹಾಕಿಸಿಕೊಂಡ. ಕೋರ್ಟಿನಲ್ಲಿ ಮೊಕದ್ದಮೆ ನಡೆಯತೊಡಗಿತು. ಒಂದು ದಿನ ಪೋಲೀಸರ ವಿಶೇಷ ಪಡೆಯೊಂದು ಅಕಸ್ಮಾತ್ತಾಗಿ ಡಾ. ಫೇಯ ಮನೆಯ ಮೇಲೆ ದಾಳಿ ನಡೆಸಿದಾಗ ಅನೇಕ ಫ್ರೆಂಚ್ ಕಲಾವಿದರ ನಕಲು ಪ್ರತಿಗಳು ಸಿಕ್ಕಿಬಿದ್ದು ಆತ ಇರುಕಿನಲ್ಲಿ ಸಿಕ್ಕಿಕೊಂಡ.

೧೯೫೪ರ ಕೊನೆಗೆ ಮೊಕದ್ದಮೆ ನ್ಯಾಯಾಲಯದ ಎದುರು ಬಂದಿತು. ಬೌದ್ಧಿಕ ವಲಯಗಳಲ್ಲಿ ಡೀಟ್ರಿಚ್ ಫೇಯ ಪ್ರಭಾವ ಇನ್ನೂ ಬಲವಾಗಿಯೆ ಇತ್ತು. ವಿಚಾರಣೆ ಪ್ರಾರಂಭವಾದಾಗ ಜರ್ಮನಿಯ ಸುವಿಖ್ಯಾತ ಶಿಕ್ಷಣ ತಜ್ಞನೊಬ್ಬ ಮಸ್ಕಟನ ವಿರುದ್ಧ ಸಾಕ್ಷಿ ನೀಡಿದ. ಅವನ ಪ್ರಕಾರ ಸೇಂಟ್ ಮೇರಿ ಚರ್ಚಿನಲ್ಲಿನ ಕಲಾಕೃತಿಗಳು ನಕಲಿಯಾಗಿರದೆ ಹದಿಮೂರನೆಯ ಶತಮಾನದಲ್ಲಿ ಅಜ್ಞಾತ ಕಲಾವಿದನೊಬ್ಬನಿಂದ ತೆಗೆದವುಗಳಾಗಿದ್ದವು. ಶೆಲ್ವಿಗ್ ನಗರದ ಚರ್ಚಿನಲ್ಲಿಯ ಕಲಾಕೃತಿಗಳನ್ನು ಸುಮಾರು ಅದೇ ಕಾಲಕ್ಕೆ ತೆಗೆಯಲಾಗಿದ್ದು ಲ್ಯೂಬೆಕ್‌ನ ಕಲಾಕೃತಿಗಳಿಗೂ ಇವುಗಳಿಗೂ ಸಾಮ್ಯವಿರುವುದರಿಂದ ಒಬ್ಬನೇ ಕಲಾವಿದ ಇವೆರಡನ್ನೂ ತೆಗೆದಿರಬೇಕು ಎಂದಾತ ವಾದಿಸಿದ.

ನ್ಯಾಯಾಧೀಶನಿಗೆ ಇದು ನಿಜವೆಂದೆನಿಸಿತೇನೋ. "ಏನಪ್ಪಾ, ಇವರು ಹೇಳಿದ್ದಕ್ಕೆ ಏನು ಹೇಳುತ್ತೀ?" ಎಂದು ಆತ ಮಸ್ಕಟನನ್ನು ಕೇಳಿದಾಗ, "ಹೌದು ಸ್ವಾಮಿ, ಅವರು ಹೇಳುವುದು ನಿಜ. ಏಕೆಂದರೆ ಎರಡೂ ಕಡೆಗಳಲ್ಲಿ ನಾನೇ ಆ ಚಿತ್ರಗಳನ್ನು ತೆಗೆದಿದ್ದು," ಎಂದು ಹೇಳಿದ. ಮುಂದೆ ಅವನ ಮಾತೇ ನಿಜ

ಕೋನಿಗ್ಸ್‌ಬರ್ಗಿನಲ್ಲಿ ಹುಟ್ಟಿದ ಮಸ್ಕಟನ ಬಾಲ್ಯ ಬಡತನದಲ್ಲಿಯೇ ಕಳೆಯಿತು. ತಂದೆ ಹಳೆಯ ಬಟ್ಟೆಗಳನ್ನು ಹೊತ್ತು ಬೀದಿ ಬೀದಿ ಅಲೆದು ಮಾರಿ ಕಷ್ಟದಿಂದ ಸಂಸಾರ ನಡೆಸುತ್ತಿದ್ದುದರಿಂದ ಲ್ಯೂಥರನಿಗೆ ಅಲ್ಪ ಸ್ವಲ್ಪ ಪೇಯಿಂಟಿಂಗಿನ ಹೊರತು ಹೆಚ್ಚಿನ ಶಿಕ್ಷಣವನ್ನು ಕೊಡಿಸಲು ಅವನಿಂದಾಗಲಿಲ್ಲ. ಲ್ಯೂಥರ್ ಮಸ್ಕಟ್ ಮುಂದೆ ಕಲಾಭ್ಯಾಸಿಯಾಗಿ ಹಳೆಯ ಕಲಾಕೃತಿಗಳಲ್ಲಿ ವ್ಯವಹರಿಸುವ ‘ಫೇ ಆ್ಯಂಡ್ ಸನ್’ದಲ್ಲಿ ತರಬೇತು ಪಡೆಯಲಾರಂಭಿಸಿದ.


೧೯೩೭ ರಲ್ಲೊಮ್ಮೆ ಆತ ತನ್ನ ಕಂಪೆನಿಯ ಪರವಾಗಿ ಶೆಲ್ವಿಗ್ ನಗರದ ಚರ್ಚಿನ ಕಲಾಕೃತಿಗಳನ್ನು ಸ್ವಚ್ಛಗೊಳಿಸುತ್ತಿದ್ದಾಗ ಅಚಾತುರ್ಯದಿಂದಾಗಿ ಕಲಾಕೃತಿಗಳೆಲ್ಲವನ್ನೂ ಅಳಿಸಿಬಿಟ್ಟ. ಸಂಸ್ಥೆಯ ಮಾಲಕನಾದ ಡಾ. ಫೇ ತುಂಬಾ ವ್ಯಗ್ರನಾದ. ಆದರೆ ಮಾಡುವುದೇನು? ಕಾಲ ಮಿಂಚಿ ಹೋಗಿತ್ತು. ಮಸ್ಕಟನು ಕಲಾಕೃತಿಗಳನ್ನು ಯಥಾವತ್ತಾಗಿ ಕಾಪಿ ಮಾಡುವ ಕಲೆಯಲ್ಲಿ ಸಿದ್ಧಹಸ್ತನಾಗಿದ್ದುದು ಫೇಯ ಗಮನಕ್ಕೆ ಆಗಲೇ ಬಂದಿತು. ಸ್ಮರಣ ಶಕ್ತಿಯ ಬಲದಿಂದ ಆ ಎಲ್ಲ ಚಿತ್ರಗಳನ್ನು ಗುಟ್ಟಾಗಿ ಪುನರ್ರಚಿಸುವಂತೆ ಆತ ತನ್ನ ಶಿಷ್ಯಸಿಗೆ ಆದೇಶವಿತ್ತ. ಈಗ ಮಸ್ಕಟ್ ತೆಗೆದ ಚಿತ್ರಗಳು ಹದಿಮೂರನೆಯ ಶತಮಾನದ ಚಿತ್ರಗಳೆಂದು ಡಾ. ಫೇಯೇ ಭ್ರಮೆಗೊಳ್ಳುವಷ್ಟು ನೈಜವಾಗಿ ಕಾಣುತ್ತಿದ್ದವು.

ಮುಂದೆ ದ್ವಿತೀಯ ಮಹಾಯುದ್ಧ ಪ್ರಾರಂಭವಾದಾಗ ಲ್ಯೂಥರ್ ಮಸ್ಕಟ್ ಬ್ರಿಟಿಶರ ಕೈಲಿ ಸಿಕ್ಕುಬಿದ್ದು ಬಂದಿಯಾದ. ಯುದ್ಧ ಮುಗಿದು ಆತ ಕೈದಿಗಳ ಶಿಬಿರದಿಂದ ಹೊರಬಂದಾಗ ಉದರ ನಿರ್ವಹಣೆಗಾಗಿ ಅಷ್ಟಿಷ್ಟು ಚಿತ್ರಗಳನ್ನು ತೆಗೆದರೂ ಅವುಗಳನ್ನು ಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಬಡತನದ ಬವಣೆ ಅವನನ್ನು ಬಿಡಲಿಲ್ಲ.

ಕಲಾತಜ್ಞನೆಂದು ಸಾಕಷ್ಟು ಹೆಸರು ಗಳಿಸಿದ್ದರೂ ಸ್ವತಃ ಡಾ. ಫೇಯ ಸ್ಥಿತಿಯೇನೂ ಈಗ ಮಸ್ಕಟನಿಗಿಂತ ಭಿನ್ನವಾಗಿರಲಿಲ್ಲ. ಮಸ್ಕಟ್ ತನ್ನ ಬವಣೆಯನ್ನು ತೋಡಿಕೊಂಡ. "ಜನರಿಗೆ ಬೇಕಾಗಿದ್ದು ಕಲಾವಿದನ ಹೆಸರೇ ಹೊರತು ಅವನ ಕಲಾಕೃತಿಯಲ್ಲ ತಾನೆ? ಜನರಿಗೆ ಬೇಕಾದದ್ದನ್ನು ಕೊಟ್ಟು ಬಡತನವನ್ನು ಹಿಂಗಿಸಿಕೊಂಡರಾಯಿತು", ಎಂದವರು ಯೋಚಿಸಿದರು.

ಕಾರ್ಯ ಆರಂಭವಾಯಿತು. ಮಸ್ಕಟ್ ಮಹಾ ಮಹಾ ಕಲಾವಿದರ ಕಲಾಕೃತಿಗಳನ್ನು ಕಾಪಿ ಮಾಡುತ್ತಿದ್ದ. ಅವು ಅಸಲಿ ಕಲಾಕೃತಿಗಳೆಂದು ಹೇಳಿ ಡೀಟ್ರಿಚ್ ಫೇ ಹೆಚ್ಚು ಹಣಕ್ಕೆ ಮಾರುತ್ತಿದ್ದ. ಸ್ವತಃ ಡಾ. ಫೇಯೇ ಅಪ್ಪಟ ಕಲಾಕೃತಿಗಳೆಂದು ಹೇಳಿದ ಮೇಲೆ ಸಂಶಯ ಪಡುವವರಾದರೂ ಯಾರು ?

"ಆದರೆ ಇಷ್ಟೆಲ್ಲ ಜನರಿದ್ದಾಗಲೂ ನೀನು ಸೇಂಟ್ ಮೇರಿ ಚರ್ಚಿನಲ್ಲಿ ಚಿತ್ರಗಳನ್ನು ಚಿತ್ರಿಸಿದ್ದು ಹೇಗೆ?" ನ್ಯಾಯಾಧೀಶ ಮಸ್ಕಟನನ್ನು



‘ಕಾಗದದ ಅಭಾವ ಪರಿಹಾರಕ್ಕಾಗಿ, ನಾವು ಯೂನಿಯನ್ನಿನವರು ಈ ವರ್ಷ ನೋಟ್ಸ್, ರೆಕಾರ್ಡ್ಸ್ನ ಬರೆಯೋಲ್ಲ ಎಂದು ನಿರ್ಧರಿ

ಪ್ರಶ್ನಿಸಿದ.

"ಬಹು ಸುಲಭವಾಗಿ. ಚರ್ಚ್ ಮೊದಲೆ ಉಧ್ವಸ್ತಗೊಂಡಿತ್ತು. ಹೀಗಾಗಿ ಅದರ ಬಳಿ ಯಾರೂ ಸುಳಿಯುತ್ತಿರಲಿಲ್ಲ. ಅಕಸ್ಮಾತ್ತಾಗಿ ಯಾರಾದರೂ ಒಳಗೆ ಬಂದಾರೆಂದು, 'ಗೋಡೆ ಬಿದ್ದೀತು, ಅಪಾಯವಿದೆ' ಎಂಬರ್ಥದ ಫಲಕವೊಂದನ್ನು ಚರ್ಚಿನ ಹೊರಗೆ ತೂಗುಹಾಕಿ ನಿರ್ಭಯವಾಗಿ ಕಾರ್ಯ ಪ್ರಾರಂಭಿಸಿದೆ. ಚರ್ಚಿನ ಗೋಡೆಗಳು ಎತ್ತರವಾಗಿದ್ದುದರಿಂದ ಅಷ್ಟು ಮೇಲೆ ಈ ಮೊದಲು ಯಾರಾದರೂ ಏರಿ ನೋಡಿರುವ ಸಂಭವವಂತೂ ಇರಲೇ ಇಲ್ಲ. ಹೀಗಾಗಿ ಅಲ್ಲಿ ಅಳಿಸಿಹೋದ ಚಿತ್ರಗಳನ್ನು ಯಥಾವತ್ತಾಗಿ ತೆಗೆದು ಅವು ಹದಿಮೂರನೆಯ ಶತಮಾನದ ಚಿತ್ರಗಳೆಂದು ಹೇಳಿದರೆ ಯಾರಾದರೂ ವಿರೋಧಿಸುವ ಸಂಭವ ಇರಲಿಲ್ಲ. ಇಷ್ಟೆಲ್ಲ ಲೆಕ್ಕಾಚಾರ ಹಾಕಿಕೊಂಡ ಮೇಲೆಯೇ ಈ ಕೆಲಸಕ್ಕೆ ಕೈ ಹಾಕಿದ್ದು," ಮಸ್ಕಟ್ ಉತ್ತರಿಸಿದ.

ನ್ಯಾಯಾಲಯ ಡಾ. ಫೇಗೆ ಇಪ್ಪತ್ತು ತಿಂಗಳ ಶಿಕ್ಷೆಯನ್ನು ವಿಧಿಸಿತು. ಇದಾದ ನಂತರ ಮಸ್ಕಟನ ವಿಚಾರಣೆ ಪ್ರಾರಂಭವಾಯಿತು. 'ಮಸ್ಕಟನಿಗೆ ಜನರನ್ನು ಮೋಸಗೊಳಿಸುವ ಉದ್ದೇಶವಿರಲಿಲ್ಲ. ಒಂದು ವೇಳೆ ಹಾಗಿದ್ದಿದ್ದೇ ಆದರೆ ಆತ ಸೇಂಟ್ ಮೇರಿ ಚರ್ಚಿನ ಭಿತ್ತಿ ಚಿತ್ರಗಳ ಮೇಲೆ ಏಕಾದರೂ ತನ್ನ ಹೆಸರನ್ನು ಬರೆದುಕೊಳ್ಳುತ್ತಿದ್ದ? ಈ ಪ್ರಕರಣವನ್ನು ಬೆಳಕಿಗೇಕೆ ತರುತ್ತಿದ್ದ? ಆದ್ದರಿಂದ ನ್ಯಾಯಾಧೀಶರು ಆತನನ್ನು ನಿರ್ದೋಷಿಯೆಂದು ಸಾರಬೇಕು' ಎಂದು ವಕೀಲನೊಬ್ಬ ಮಸ್ಕಟನ ಪರವಾಗಿ ವಾದಿಸಿದ. ಪ್ರಯೋಜನವಾಗಲಿಲ್ಲ. ಕೋರ್ಟ್ ಅವನಿಗೆ ಹದಿನಾರು ತಿಂಗಳ ಶಿಕ್ಷೆಯನ್ನು ವಿಧಿಸಿಯೇ ಬಿಟ್ಟಿತು.

ಲ್ಯೂಥರ್ ಮಸ್ಕಟನಿಗೆ ನ್ಯಾಯವಾಗಿ ದೊರಕಬೇಕಾಗಿದ್ದ ಪುರಸ್ಕಾರಗಳೆಲ್ಲವೂ ಡಾ. ಫೇಗೆ ದೊರೆತಿದ್ದರಿಂದ ಅಸೂಯಾಪರನಾಗಿ ಅವನು ಈ ಪ್ರಕರಣ ಬೆಳಕಿಗೆ ತಂದನೆನ್ನುವದು ಸ್ಪಷ್ಟವೇ ಇತ್ತು. ಆದರೆ ಅವನು ತಾನಾಗಿಯೆ ಈ ವಿಪತ್ತನ್ನು ಏಕೆ ತಂದುಕೊಂಡ ಎಂಬ ಪ್ರಶ್ನೆ ಇನ್ನೂ ಜನರನ್ನು ಕಾಡುತ್ತಿತ್ತು. ಉತ್ತರ ದೊರೆಯಲು ಅವರಿಗೇನೂ ಬಹಳ ಕಾಲ ಕಾಯಬೇಕಾಗಲಿಲ್ಲ. ನ್ಯಾಯಾಲಯದ ತೀರ್ಪು ಹೊರಬೀಳುವ ಮೊದಲೇ ಆತ ಜರ್ಮನಿಯಿಂದ ಸ್ವೀಡನ್ನಿಗೆ ಓಡಿಹೋದ.

ಮುಂದೆ ಎಲ್ಲವೂ ಆತನ ಇಚ್ಛೆಯಂತೆಯೆ ನಡೆಯಿತು. ಡಾ. ಡೀಟ್ರಿಚ್ ಫೇ ತನ್ನೆಲ್ಲ ಪ್ರತಿಷ್ಠೆಯನ್ನೂ ಕಳೆದುಕೊಂಡು ಜೈಲು ಸೇರಿದ. ಮಸ್ಕಟನ ಕಲಾಕೃತಿಗಳಿಗೆ ಯುರೋಪಿನ ಮೂಲೆ ಮೂಲೆಗಳಿಂದ ಬೇಡಿಕೆ ಬರತೊಡಗಿತು. ಮೌಲಿಕ ಕಲಾಕೃತಿಗಳನ್ನೂ ಒದಗಿಸುವಂತೆ ಜನರು ಅವನನ್ನು ಆಗ್ರಹಪಡಿಸತೊಡಗಿದರು. ಜೀವನಾದ್ಯಂತ ಬೆಂಬತ್ತಿ ಬಂದ ಬಡತನ ಹೇಳಹೆಸರಿಲ್ಲದಂತೆ ಓಡಿಹೋಯಿತು. ಹೀಗೆ ಕಲಾಪ್ರಪಂಚದ ವಂಚಕ ಶಿಖಾಮಣಿಯೊಬ್ಬ ಜನಪ್ರಿಯತೆಯ ಉತ್ತುಂಗ ಶಿಖರವನ್ನೇರಿ ಕಲ್ಪನಾತೀತವಾದ ಘಟನೆಗಳೂ ಈ ಪ್ರಪಂಚದಲ್ಲಿ ಘಟಿಸಬಹುದೆಂಬುದಕ್ಕೆ ಜೀವಂತ ಸಾಕ್ಷಿಯಾದ. ✡

ಜಾನಪದ ಸಾಹಿತ್ಯ ಸಂಪತ್ತು ರಾಜಾಶ್ರಯದಲ್ಲಿ ಜೀವ ಹಿಡಿದ ಹೂಗಿನರಮನೆಯಲ್ಲ. ಇದು ಸಹಜ ಸಾಹಿತ್ಯ. ಹವೆಯಂತೆ ನೆಲಮುಗಿಲುಗಳನ್ನು ವ್ಯಾಪಿಸಿದ ನಿಸ್ಸೀಮ ಸಾಹಿತ್ಯ. ನಿರಕ್ಷರ ಕುಟೀರದಿಂದ ಹೊರಹೊಮ್ಮಿದ ಮಹಾಮಹಿಮ ಸಾಹಿತ್ಯಶಾಸ್ತ್ರಗಳ ಕಟ್ಟಿನಲ್ಲಿ ಸಿಲುಕದಿದ್ದರೂ ಅಚ್ಚುಕಟ್ಟಾಗಿರುವ ನಿಸ್ಸಂಗ ಸಾಹಿತ್ಯ.

ಪ್ರಾಚೀನ ಕಾವ್ಯ ಸುಧೆ

ಬೋಧ ಒಂದೇ

–ದಲಿತ್

ಶ್ರೀ ಶರೀಫರು ಕಳೆದ ಶತಮಾನದಲ್ಲಿ ಕ್ರಿ. ಶ. ೧೮೧೯ ರಲ್ಲಿ ಶಿಶುನಾಳ ಗ್ರಾಮದಲ್ಲಿ ಜನಿಸಿದರು. ಇವರ ಮನೆತನ ಕೃಷಿಕರದು. ಇವರು ಬೆಳೆದಂತೆಲ್ಲ ಸತ್ಸಂಗದತ್ತ ಒಲವು ಹೆಚ್ಚಿ ಕಳಸದ ಶ್ರೀ ಗೋವಿಂದ ಭಟ್ಟರನ್ನು ಗುರುವಾಗಿ ಆಯ್ದು ಕೊಂಡರು. ಮುಸ್ಲಿಂ ಶಿಷ್ಯ-ಬ್ರಾಹ್ಮಣ ಗುರು ಇಬ್ಬರನ್ನೂ ಸಮಾಜ ಗೌರವದಿಂದ ಕಾಣದೇ ಹೋದರೂ ಇವರ ಆತ್ಮೋನ್ನತಿಗೆ ಯಾವ ಆತಂಕವಾಗಲಿಲ್ಲ. ಶರೀಫ ಸಾಹೇಬರು ಸಿದ್ಧಪುರುಷರಾಗಿ ಸಮಾಜದಲ್ಲಿ ಗಣ್ಯರೆನಿಸಿಕೊಂಡರು ತಮ್ಮ ಜೀವನದ ಉತ್ತರಾರ್ಧದಲ್ಲಿ. ತಿಳಿಗನ್ನಡದಲ್ಲಿ ಹಳ್ಳಿಯ ಮುಕ್ಕರಿಗೂ ತಿಳಿಯುವಂತೆ ಸ್ವಾರಸ್ಯಪೂರ್ಣ ಪದಗಳನ್ನು ರಚಿಸಿ ಶರಣ ಮಾರ್ಗದ ಪ್ರಸಾರ ಮಾಡಿದರು. ಭಾವೈಕ್ಯದ ಜೀವಂತ ಉದಾಹರಣೆ ಆಗಿದ್ದರು ಶರೀಫ ಸಾಹೇಬರು.

ಎಲ್ಲರಂಥವನಲ್ಲ ನನ ಗಂಡ

ಎಲ್ಲರಂಥವನಲ್ಲ ನನ ಗಂಡ
ಬಲ್ಲಿದನು ಪುಂಡ
ಎಲ್ಲರಂಥವನಲ್ಲ ನನ ಗಂಡ ॥ ಪ ॥

ಎಲ್ಲರಂಥವನಲ್ಲ ಕೇಳೆ
ಸೊಲ್ಲು ಸೊಲ್ಲಿಗೆ ಬಯ್ದು ನನ್ನ
ಎಲ್ಲಿಗ್ಹೋಗದ್ಹಂಗ ಮಾಡಿಟ್ಟು
ಕಾಲ್ಮುರಿದು ಬಿಟ್ಟಾ ॥ ೧ ॥

ಮಾತಾಪಿತರು ಮನೆಯೊಳಿರುತಿರಲು
ಮನಸೋತು ಮಾವರು
ಪ್ರೀತಿ ಗೆಳೆತನ ಮಾತಿನೊಳಿರಲು
ನೆಮ್ಮ ಮರೆತು ಮಾಡುದಿ
ಬಾಲತನವಾಯಿತು ಯೌವನವು ಬರಲು
ಹೀಂಗಾಗುತಿರಲು
ದೂತೆ ಕೇಳ್ನಮ್ಮವರು ಶೋಭನೆ
ರೀತಿಚಾರವನೆಲ್ಲ ತೀರಿಸಿ
ಜತನೊಳು ನಮ್ಮ ಹೊಂದಿಕೆಯು ಮಾಡಿ
ಮಮತೆಯಲ್ಲಿ ಕೂಡಿ ॥ ೨ ॥

ಅಕ್ಕತಂಗಿಯರಾರು ಮಂದಿಗಳ
ಅಗಲಿಸಿದನೈವರ
ಕಕ್ಕುಲಾತಿಯು ಅಣ್ಣ ತಮ್ಮಗಳ

ನೋಡಗೊಡದೇ ಹತ್ತು ದಿಕ್ಕುಗಳ
ಮಾಡಿದನೆ ಮರುಳ
ತೆಕ್ಕೆಯೊಳು ಬಿಗಿದಪ್ಪಿ ಸುರತಾ-
ನಂದ ಸುಖ ತಾಂಬೂಲ ರಸಗುಟುಕು
ಕಿಕ್ಕಿ ಅಕ್ಕರತಿಯಲಿ ನಗುವನು ತಾ
ಬಹುಸುಗುಣನೀತಾ ॥ ೩ ॥

ತುಂಟ ಸವತಿಯ ಸೊಂಟ
ಮುರಿಹೊಡೆದಾ ಬಣ-
ತುಂಟಮಾತಿನ ಗಂಟುಗಳ್ಳರ
ಮನೆಗ ಬರಗೊಡದಾ
ಹದಿನೆಂಟು ಮಂದಿ
ಕುಂಟಲೀಯರ ಹಾದಿಯನು ಕಡಿದಾ
ಎನ್ನ ಕರ ಪಿಡಿದಾ
ಕೋಟೆ ಕುರುಡಾರೆಂಟು ಮಂದಿ
ಗಂಟು ಬಿಡ್ಡರ ಅವರ ಕಾಣುತ
ಗಂಟಲಕ ಗಾಣಾಚನೇಳಕ್ಕ
ತಕ್ಕವನೆ ಸಿಕ್ಕ ॥ ೪ ॥

ಅತ್ತೆ ಮಾವರ ಮನೆಯು ಬಿಡಿಸಿದನೆ
ಮತ್ತೈ ಮಾವರ
ಮಕ್ಕಳೈವರ ಮಮತೆ ಕೆಡಸಿದನೆ
ಎನ್ನನ್ನು ತಂದು
ರತ್ನಜ್ಯೋತಿಯ ಪ್ರಭೆಯೊಳಿರಿಸಿದನೆ

ಎನಗೊತ್ತದವನೆ
ಎತ್ತ ಹೋಗದೆ ಚಿತ್ತವಗಲದೆ
ಗೊತ್ತಿನಲ್ಲಿ ಇಟ್ಟು ಎನ್ನನು
ಮುತ್ತಿನಾ ಮೂಗುತಿಯು ಕೊಟ್ಟಾನೆ
ಆವನೇನು ದಿಟ್ಟನೆ ॥ ೫ ॥

ಕಾಂತೆ ಕೇಳೆ ಕರುಣಗುಣದಿಂದ
ಎನಗಿಂಥ ಪುರುಷನು
ಬಂದು ದೊರಕಿದ ಪುಣ್ಯ ಫಲದಿಂದ
ಎನ್ನಂತರಂಗದ
ಕಾಂತ ಶ್ರೀ ಗುರುನಾಥ ಗೋವಿಂದ
ಶಿಶುನಾಳದಿಂದ
ಕಾಂತೆ ಬಾರೆಂತೆಂದು ಕರೆದೀ-
ಕಾಂತ ಮಂದಿರದೊಳಗೆ ಒಯ್ದು
ಭ್ರಾಂತಿಭವದುರಿತವನು ಪರಿಹರಿಸಿ
ಚಿಂತೆಯನು ಮರೆಸಿ ॥ ೬ ॥

ಹಾವು ತುಳಿದೆನೇ

ಹಾವು ತುಳಿದೆನೆ, ಮಾನಿನಿ
ಹಾವು ತುಳಿದೆನೆ ॥ ಪ ॥

ಹಾವು ತುಳಿದು ಹಾರಿಹಿಂತೆ
ಜೀವ ಕಳವಳಿಸಿತು ಗೆಳತಿ
ದೇಹತ್ರಯ ಸ್ಮೃತಿಯು ತಪ್ಪಿ
ದೇವಾ ನೀನೇ ಗತಿಯು ಎಂದು ॥ ೧

ಹರಿಗೆ ಹಾಸಿಗೆಯಾದ ಹಾವು
ಹರನ ತೋಳಿನೊಳಿರುವ ಹಾವು
ಧರೆಯು ಹೊತ್ತು ಮೆರೆವ ಹಾವಿನ
ಶಿರವ ಮೆಟ್ಟಿ ಶಿವನ ದಯದಿ ॥ ೨ ॥

ಬೋಧಾನಂದವಾಗಿ ಬರಲು
ಹಾದಿಯೊಳಗೆ ಮಲಗಿ ಇರಲು
ಪಾದದಿಂದ ಪೊಡವಿಗೊತ್ತಿ
ನಾದಗೊಳಿಸಿತು ನಿಜದಿ ನೋಡಿ ॥ ೩ ॥

ಕಾರಡಗಿ ಊರ ಹೊರಗೆ
ದಾರಿ ಕಟ್ಟಿ ತರುಬಿದಂಥ
ಘೋರತರದ ಉರುಗ ಅದರ
ಕ್ಯಾರಿ ಹಲ್ಲು ಮುರಿದ ತೆರದಿ ॥ ೪ ॥

ಸತ್ಯ ಶಿಶುವಿನಾಳಧೀಶನ
ಉತ್ತಮ ಸೇವಕನಿಗೆ
ಕತ್ತಲೊಳು ಬಂದು ಕಾಲಿಗೆ
ಸುತ್ತಿಕೊಂಡಿತು ಸಣ್ಣ ನಾಗರ ॥ ೫ ॥

ನಾನಾರೆಂಬುದು ನಾನಲ್ಲ

ನಾನಾರೆಂಬುದು ನಾನಲ್ಲ ಈ
ಮಾನುಷ ಜನ್ಮವು ನಾನಲ್ಲ
ನಾರಾಯಣ ಪರಬ್ರಹ್ಮ ಸದಾಶಿವ
ನೀಯೆನಿಸುವ ಗುಣ ನಾನಲ್ಲ ॥ ಪ ॥

ಮಾತಾಪಿತಸುತ ನಾನಲ್ಲ
ಭೂನಾಥನಾದವ ನಾನಲ್ಲ
ಜಾತಿಗೋತ್ರಗಳು ನಾನಲ್ಲ । ಬರು
ಪ್ರೀತಿಯು ಸತಿಸುತ ನಾನಲ್ಲ ॥ ೧ ॥

ವೇದ ಓದುಗಳು ನಾನಲ್ಲ
ವಾದ ಮಾಡಿದವ ನಾನಲ್ಲ
ನಾದ ಬಿಂದು ಕಳೆ ಭೇದ ವಸ್ತು ನಿಜ
ಬೋಧದಲಿದ್ದವ ನಾನಲ್ಲ ॥ ೨ ॥

ನಾನಾಗಿ ನಡೆದವ ನಾನಲ್ಲ, ನಾ
ಶಿಶುನಾಳಧೀಶನ ಬಿಡಲಿಲ್ಲ
ನಾ ಅಳಿಯದೆ ನಾ ತಿಳಿಯಲಾರದು
ನೀಯೆನಿಸುವ ಗುಣ ನಾನಲ್ಲ ॥ ೩ ॥

ಬೋಧ ಬಂದೇ

ಬೋಧ ಬಂದೇ ಬ್ರಹ್ಮ
ನಾದ ಬಂದೇ ॥ ಪ ॥
ಸಾಧನ ಮಾಡುವ ಹಾದಿ ಬಂದೆ
ಆದಿ ಪದ ಬಂದೇ ॥ ಅ. ಪ ॥

ಬಿಂದು ಬಂದೇ ನಿಜಾ-
ನಂದ ಬಂದೇ
ತಂದೆ ಸದ್ಗುರು ಗೋವಿಂದಗ ಬಂದೇ
ಅಂದಿಗಿಂದಿಗೊಂದೆ ॥ ೧ ॥

ದೋಷ ಬಂದೆ ನಿರ್
ದೋಷ ಬಂದೇ
ಶಿಶುನಾಳಧೀಶನ ಭಾಷೆ ಬಂದೇ
ಭವನಾಶ ಬಂದೆ. ॥ ೨ ॥

ಅವರು ಆಯುರ್ವೇದಕ್ಕೆ
ತಮ್ಮನ್ನೇ ಸಮರ್ಪಿಸಿಕೊಂಡಿದ್ದಾರೆ

ಸೇವಾಮನೋಧರ್ಮದ ಡಾ. ಗೋಪಾಲಕೃಷ್ಣರಾಯರು

ಡಾ. ಧನ್ಯಕುಮಾರ ಇಜಾರಿ


ಕೆಲ ತಿಂಗಳುಗಳ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಭಾಂಗಣದಲ್ಲಿ ನಡೆದೊಂದು ಘಟನೆ. ಕನ್ನಡ ನಾಡಿನಲ್ಲಿ ಆಯುರ್ವೇದಕ್ಕೆ ಅಮೋಘ ಸೇವೆ ಸಲ್ಲಿಸಿದ ಡಾ. ಮ. ಗೋಪಾಲಕೃಷ್ಣರಾಯರಿಗೆ ಅವರ ಅಭಿಮಾನಿಗಳೂ ಶಿಷ್ಯರೂ ಸೇರಿ ಹತ್ತು ಸಾವಿರಕ್ಕೂ ಮಿಕ್ಕಿ ನಿಧಿ ಸಂಗ್ರಹಿಸಿ, ಅರ್ಪಿಸಿ ಗೌರವ ಸಲ್ಲಿಸಿದರು. ಉದ್ದೇಶ, ಬಡತನವನ್ನು ನೆರಳಿನಂತೆಯೇ ಅಂಟಿಸಿಕೊಂಡಿರುವ ಗೋಪಾಲಕೃಷ್ಣರಾಯರು ತಮ್ಮ ಶೇಷಾಯುಷ್ಯವನ್ನು ತುಸುವಾದರೂ ನೆಮ್ಮದಿಯಿಂದ ಕಳೆಯಲಿ ಎಂಬುದು. ಆದರೆ ಒಂದು ಕೈಯಿಂದ ಈ ಕಾಣಿಕೆಯನ್ನು ಸ್ವೀಕರಿಸಿದ ರಾಯರು ಅದೇ ಕೈಯಿಂದ ಅಲ್ಲಿಯೇ ದಾನ ಮಾಡಿಬಿಟ್ಟರು. ಈ ಹಣವೆಲ್ಲ ಆಯುರ್ವೇದ ಪ್ರತಿಷ್ಠಾನಕ್ಕೆ ಸಲ್ಲುವುದು ಎಂದರು: "ಈ ಸಂಸ್ಥೆ ಬೆಳೆದರೆ ನಾನು ನಿಶ್ಚಿಂತನಾಗಿರುತ್ತೇನೆ," ಎಂದರು. ಎಪ್ಪತ್ತು ವರ್ಷಗಳ ತಮ್ಮ ಜೀವನದುದ್ದಕ್ಕೂ ಸಮಾಜಕ್ಕೆ ಸ್ವಾಸ್ಥ್ಯ ನೀಡುವ ಒಂದೇ ಗುರಿಯಿಂದ ಹಲವಾರು ನಿಷ್ಠ ಪ್ರಯತ್ನಗಳನ್ನು ಮಾಡುತ್ತ ಬಂದಿರುವ ರಾಯರ ದೃಷ್ಟಿಕೋನ ಅಂದಿಗಿಂದಿಗೂ ಬದಲಾಗದೇ ಉಳಿದಿದೆ.

ಅಜ್ಞಾಪಥಿಯ ಥಳಕಿನಲ್ಲಿ ಆಯುರ್ವೇದಕ್ಕಿದ್ದ ಪ್ರತಿಷ್ಠೆ, ಮನ್ನಣೆಗಳು ಮಾಯವಾಗತೊಡಗಿದಾಗ ಅದನ್ನು ಪುನಃ ಜನಪ್ರಿಯ ಮಾಡಿಸಿ, ಜನಮಾನಸದಲ್ಲಿ ಪ್ರತಿಷ್ಠಿತಗೊಳಿಸಿದವರ ಪೈಕಿ ಡಾ. ಎಂ. ಗೋಪಾಲಕೃಷ್ಣರಾಯರೂ ಒಬ್ಬರು. ಪಂಡಿತ ತಾರಾನಾಥರ ವಿದ್ವತ್ತನ್ನೂ ಅವರ ಅಮೋಘ ವ್ಯಕ್ತಿತ್ವವನ್ನೂ ಕಂಡು ಗೋಪಾಲಕೃಷ್ಣರಾಯರು ಅವರ ಶಿಷ್ಯರಾಗಿದ್ದುದು ಐವತ್ತು ವರ್ಷಗಳ ಹಿಂದೆ. ಅಂದಿನಿಂದಲೂ ಅವರು ಆಯುರ್ವೇದಕ್ಕಾಗಿ ಅಹರ್ನಿಶಿ ದುಡಿಯುತ್ತಿದ್ದಾರೆ. ವೃದ್ಧಾಪ್ಯ ಬರುವುದು ಶರೀರಕ್ಕೇ ಹೊರತು ಮನಸ್ಸಿಗಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಬೇಕಾದರೆ ಗೋಪಾಲಕೃಷ್ಣರಾಯರು ತಮ್ಮ ಕೆಲ ವೈದ್ಯಕೀಯ ಸ್ನೇಹಿತರೊಡನೆ ಪ್ರಾರಂಭಿಸಿದ ಆಯುರ್ವೇದ ಪ್ರತಿಷ್ಠಾನವನ್ನು ನೋಡಬೇಕು. ಬೆಂಗಳೂರಿಗೆ ಆಯುರ್ವೇದ ಕಾಲೇಜು ಇಲ್ಲದುದರ ಕೊರತೆಯನ್ನು ತುಂಬಿಕೊಳ್ಳಲು ಸ್ಥಾಪಿಸಲ್ಪಟ್ಟ ಈ ಸಂಸ್ಥೆಯೊಡನೆ ಧರ್ಮಾರ್ಥ ಚಿಕಿತ್ಸಾಲಯವೂ ಅಂತಃರುಗ್ಣಾಲಯವೂ ಬೆಳೆದುಕೊಂಡು ಬರಲು ಹೆಚ್ಚು ಮಟ್ಟಿಗೆ ಕಾರಣ ಡಾ. ಗೋಪಾಲಕೃಷ್ಣರಾಯರು ಎಂದೇ ಹೇಳಬೇಕು. ಹೊರ ರೋಗಿಗಳ ವಿಭಾಗ, ಅಂತಃರೋಗಿಗಳ ವಿಭಾಗ, ಸ್ತ್ರೀರೋಗ ವಿಭಾಗ, ಪ್ರಯೋಗಾಲಯ, ಸಂಶೋಧನಾಲಯ ಹೀಗೆ ವ್ಯವಸ್ಥಿತ ಆಸ್ಪತ್ರೆಗಿರಬೇಕಾದ ಎಲ್ಲ ವಿಭಾಗಗಳನ್ನೂ ಆಯುರ್ವೇದ ಪ್ರತಿಷ್ಠಾನದ ಆಸ್ಪತ್ರೆ ಒಳಗೊಂಡಿದೆ. ಆದರೂ ಅದು ಇನ್ನೂ ವಿಶಾಲವಾಗಿ ಬೆಳೆಯಬೇಕು. ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣ

ವಾಗಬೇಕು ಎಂಬ ದೃಷ್ಟಿಯಿಂದ ತಮ್ಮ ಈ ಇಳಿವಯಸ್ಸಿನಲ್ಲಿಯೂ ಡಾ. ಗೋಪಾಲಕೃಷ್ಣ ರಾಯರು ಆ ಸಂಸ್ಥೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಗರ್ವದ ಲವಲೇಶವೂ ಇವರಲ್ಲಿ ಕಾಣಸಿಗದು. ಬಿಳಿಪಂಚೆ, ನೆಹರೂ ಶರ್ಟು, ಪಕ್ಕದಲ್ಲಿ ಕೂದಲು ಹೊತ್ತ ಬಕ್ಕತಲೆಯ ಈ ವ್ಯಕ್ತಿಯನ್ನು ಪ್ರಥಮ ಸಲ ಯಾರು ಕಂಡರೂ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರೇ ಇವರು ಎಂಬ ಸಂಶಯವುಂಟಾಗುವಷ್ಟು ಸರಳ ವ್ಯಕ್ತಿತ್ವ ಇವರದು. ಆದರೆ ಒಮ್ಮೆ ಮಾತು ಪ್ರಾರಂಭಿಸಿದರೆ ವಿದ್ವತ್ತಿನ ಪ್ರವಾಹವೇ ಹರಿದಂತೆ ಭಾಸವಾಗುತ್ತದೆ. ನಾವು ಅವರ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಒಂದು ರೀತಿಯಲ್ಲಿ ಅದು ಗುರುಕುಲದಂತೆಯೇ ಇತ್ತು. ರತ್ನವಿಲಾಸ ರಸ್ತೆಯ ಪ್ರಶಾಂತ ವಾತಾವರಣದಲ್ಲಿ ನಾವೆಲ್ಲ ಒಂದೇ ಕುಟುಂಬದವರ ಹಾಗೆ ಇದ್ದೆವು. ಪ್ರಾಚಾರ್ಯರಾಗಿದ್ದ ಡಾ. ಗೋಪಾಲಕೃಷ್ಣರಾಯರು ನಮ್ಮನ್ನು ತಮ್ಮ ಮಕ್ಕಳಂತೆ ನಡೆಸಿಕೊಂಡ ದಿನಗಳು ನೆನಪಿನ ಅಂಗಳದಲ್ಲಿ ಚಿರಸ್ಥಾಯಿಯಾಗಿವೆ.

ಡಾ. ಗೋಪಾಲಕೃಷ್ಣರಾಯರ ಕೈಯಲ್ಲಿ



ಜ್ಞಾನವು ಪ್ರಸಾರದ ಒಂದು ಪರಿಣಾಮಕಾರಿ ಸಾಧನ. ಮುಖ್ಯವಾಗಿ ಆಯುರ್ವೇದದ ಜ್ಞಾನಭಾಂಡಾರವನ್ನು ತಿಳಿಗನ್ನಡದಲ್ಲಿ ಜನಕ್ಕೆ ತಲುಪಿಸಲೋಸುಗ ಅವರು ನಿಜನಾಮದಿಂದಲ್ಲದೆ ಪಂ. ಜಿ. ಪಿ. ಕಿಶನ್, ತಾರಾದಾಸ, ಡಾ. ಜಿ. ಪಿ. ಮಳಿಯೆ, ಪ್ರೊ. ಎಂ. ಜಿ. ರಾವ್ ಮುಂತಾದ ಹೆಸರುಗಳಿಂದಲೂ ಬರೆದ ಲೇಖನಗಳು ಅಸಂಖ್ಯ. ಇವರ ಶೈಲಿಯ ವೈಶಿಷ್ಟ್ಯವೆಂದರೆ ಹೇಳಬೇಕಾಗಿರುವುದನ್ನು ನೇರವಾಗಿ, ಸ್ಪಷ್ಟವಾಗಿ ಹೇಳಿಬಿಡುವುದು. ಮಾತಿನಲ್ಲಿ ಯಾವ ಸಂದಿಗ್ಧಕ್ಕೂ ಎಡೆಯಿಲ್ಲ. ಕೆಲವು ವರ್ಷಗಳ ಹಿಂದೆ 'ಸಂಯುಕ್ತ ಕರ್ನಾಟಕ'ವು 'ನಿಮ್ಮ ಆರೋಗ್ಯ' ಎಂಬ ಸ್ಥಿರಶೀರ್ಷಿಕೆಯನ್ನು ತಮ್ಮ ಭಾನುವಾರದ ಸಂಚಿಕೆಯಲ್ಲಿ ಪ್ರಾರಂಭಿಸಿದಾಗ ಡಾ. ಗೋಪಾಲಕೃಷ್ಣರಾಯರು ಓದುಗರ ಪ್ರಶ್ನೆಗಳಿಗೆ ಆಯುರ್ವೇದದ ದೃಷ್ಟಿಯಿಂದ ಉತ್ತರಗಳನ್ನು ಕೊಡುತ್ತಿದ್ದರು. ಇದರಿಂದ ಪ್ರಯೋಜನ ಪಡೆದವರ ಸಂಖ್ಯೆ ಸಾವಿರಾರು.

'ಶರೀರ ಸಂಪತ್ತು', 'ಸ್ವಸ್ಥ ಜೀವನ', 'ಬಡವರ ವೈದ್ಯ' ಹೀಗೆ ಸುಮಾರು ಹದಿನೈದು ಗ್ರಂಥಗಳನ್ನು ಇವರು ಬರೆದಿರುವರಲ್ಲದೆ ಆಯುರ್ವೇದವನ್ನು ಜನಪ್ರಿಯಗೊಳಿಸುವುದಕ್ಕಾಗಿಯೇ ಮೀಸಲಾದ 'ದೀರ್ಘಾಯು' ಮಾಸಪತ್ರಿಕೆಯನ್ನು ಕಳೆದ ಹದಿನೈದು ವರ್ಷಗಳಿಂದ ಕಷ್ಟ-ನಷ್ಟಗಳನ್ನು ಅನುಭವಿಸಿ ನಡೆಸಿಕೊಂಡು ಬರುತ್ತಿದ್ದಾರೆ.

ಲೈಂಗಿಕ ವಿಷಯಗಳ ಬಗೆಗೆ ಸಮಾಜದಲ್ಲಿ ಇನ್ನೂ ಮಡಿವಂತಿಕೆಯ ಭಾವನೆಯಿದ್ದಾಗ ರಾಯರು ಈ ವಿಷಯದಲ್ಲಿ ಯುವಕರಿಗೆ ಸರಿಯಾದ ಜ್ಞಾನ ಮಾಡಿಕೊಡುವ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು. ಅವರ 'ಪ್ರೇಮಕಲೆ'ಯನ್ನು ಕೋರ್ಟು ಪ್ರತಿಬಂಧಿಸಿದಾಗ ಅವರು ಹೈಕೋರ್ಟಿನ ವರೆಗೂ ಹೋಗಿ, ಪುಸ್ತಕ ಅಶ್ಲೀಲವಾಗಿಲ್ಲವೆಂದೂ ಜನರಿಗೆ ಲೈಂಗಿಕ ವಿಷಯದ ಬಗೆಗೆ ಸರಿಯಾದ ವಿವರಗಳನ್ನೊದಗಿಸುವ ದೃಷ್ಟಿಯಿಂದ

ದರು. ಕೊನೆಗೂ ಅವರ ಪಾದಕ್ಕೆ ಜಯ ದೊರೆಯಿತು. ಪ್ರೇಮಜೀವನದ ಬಗೆಗಿನ ಪ್ರಶ್ನೋತ್ತರಗಳನ್ನೊಳಗೊಂಡ 'ಪ್ರಿಯಾ-ರಾಧನ.' ಪ್ರೇಮಕಥೆಗಳನ್ನು 'ಪ್ರೇಮದ ಸಂಸಾರ', ವಿವಿಧ ಜನಾಂಗಗಳ ಕಾಮ ಜೀವನವನ್ನು ನಿರೂಪಿಸುವ 'ಜನಾಂಗರತಿ', ದಂಪತಿಗಳ ರತಿಜೀವನವನ್ನು ರಸಮಯ ವಾಗಿ ವರ್ಣಿಸುವ 'ಪ್ರೇಮಕಲಾ', ವಿಕೃತಾ ವಿಕೃತ ಕಾಮಗಳ ವಿವೇಚನೆಯನ್ನು ಮಾಡುವ 'ಲೈಂಗಿಕ ಸಮಸ್ಯೆಗಳು', ಗುಹ್ಯ ರೋಗಗಳ ಬಗೆಗೆ ಎಚ್ಚರಿಕೆ ಕೊಟ್ಟು ಅವರ ಕಾರಣ, ಪರಿಣಾಮ, ಉಪಾಯಗಳನ್ನು ಹೇಳುವ 'ಗುಹ್ಯ ರೋಗಗಳು', ಮುಷ್ಟಿಮೈಥುನ ವನ್ನು ಕುರಿತಾದ 'ಸ್ವರತಿ' ಮುಂತಾದ ಗ್ರಂಥಗಳನ್ನು ರಚಿಸಿ ಇವರು ಕನ್ನಡದಲ್ಲಿ ಲೈಂಗಿಕ ವಿಷಯಗಳ ಬಗೆಗಿದ್ದ ಪುಸ್ತಕಗಳ ಕೊರತೆಯನ್ನು ತಕ್ಕ ಮಟ್ಟಿಗೆ ತುಂಬಿದ್ದಾರೆ. ಲೈಂಗಿಕ ವಿಷಯಗಳ ಬಗೆಗೆ ಜನರಿಗೆ ಸರಿಯಾದ ತಿಳುವಳಿಕೆಯನ್ನುಂಟುಮಾಡುವ ಉದ್ದೇಶದಿಂದಲೇ ಅವರು ಅನೇಕ ವರ್ಷಗಳ ವರೆಗೆ 'ಕಲಿಯುಗ' ಮಾಸಿಕವನ್ನು ನಡೆಸಿದರು. ಕದ್ದು ಮುಚ್ಚಿ ಓದುವವರಿಗೆ ಇದು ಒಳ್ಳೇ ಸ್ವಾರಸ್ಯಕರ ಲೇಖನಗಳನ್ನು ಒದಗಿಸಿದರೂ ರಾಯರಿಗೆ ಆರ್ಥಿಕ ಮುಗ್ಗಟ್ಟು ತಪ್ಪಲಿಲ್ಲ. ಕೊನೆಗೆ ಅವರು ಉಪಾಯವಿಲ್ಲದೆ ಪತ್ರಿಕೆಯ ಪ್ರಕಟನೆಯನ್ನೇ ನಿಲ್ಲಿಸಬೇಕಾ-ಯಿತು.

ಆದರೆ ಇವರ ಕಾರ್ಯಕ್ಷೇತ್ರ ಕೇವಲ ಆಯುರ್ವೇದ ಹಾಗೂ ಕಾಮಶಾಸ್ತ್ರಕ್ಕೆ ಮಾತ್ರ ಸೀಮಿತವಾಗಿದೆಯೆಂದು ಯಾರಾದರೂ ಭಾವಿಸಿದರೆ ತಪ್ಪಾದೀತು. 'ಗೀತಾಪ್ರಿಯ', 'ತಾರಾದಾಸ' ಎಂಬ ಹೆಸರುಗಳಿಂದ ಅನೇಕ ಸುಶ್ರಾವ್ಯವಾದ ಭಕ್ತಿಗೀತೆಗಳನ್ನೂ ರಾಯರು ರಚಿಸಿದ್ದಾರೆ.

ಆಯುರ್ವೇದವನ್ನೇನೋ ಪ್ರಚುರಪಡಿಸಿದ್ದಾಯಿತು. ಆದರೆ ತಕ್ಕ ಆಯುರ್ವೇದೀಯ ಔಷಧಗಳು ದೊರೆಯಬೇಕಲ್ಲ? ಪೇಟೆಯಲ್ಲಿ ಲಭ್ಯವಿರುವ ಅನೇಕ ಔಷಧಿಗಳು ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿಲ್ಲವೆಂಬುದು ಲಕ್ಷ್ಯಕ್ಕೆ ಬಂದಾಗ ಡಾ. ಗೋಪಾಲಕೃಷ್ಣರಾಯರು ೧೯೪೭ ರಲ್ಲಿ ಕೃ. ಸು. ಭಟ್ಟರ ನೆರವಿನಿಂದ ಚಿಕ್ಕಮಗಳೂರಿನಲ್ಲಿ ತಾರಾನಾಥ ರಸೌಷಧಿ ಸಂಸ್ಥೆಯನ್ನು ಪ್ರಾರಂಭಿಸಿದರು.

ಬೆಂಗಳೂರಿನ ಜಯನಗರದಲ್ಲಿ ತಲೆಯೆತ್ತಿ ನಿಂತಿರುವ ಆಯುರ್ವೇದ ಪ್ರತಿಷ್ಠಾನ ಸಂಸ್ಥೆಯ ಸಂಸ್ಥಾಪಕರು ಕೂಡ ಇವರೇ. ಬೆಂಗಳೂರಿನಲ್ಲಿ ಆಯುರ್ವೇದದ ಕಾಲೇಜು ಇಲ್ಲದಿರುವ ಕೊರತೆಯನ್ನು ಈ ಸಂಸ್ಥೆ ದೂರ ಮಾಡಿತು. ಸಂಸ್ಥೆಯ ಪ್ರಾರಂಭದಿಂದಲೂ ಇವರು ಅಲ್ಲಿ ಪ್ರಿನ್ಸಿಪಾಲರಾಗಿದ್ದರು. ಈ ಸಂಸ್ಥೆಗೊದಗಿದ ಅನೇಕ ಆರ್ಥಿಕ ಸಂಕಷ್ಟಗಳನ್ನು ಅವರು ತಮ್ಮ ಸ್ನೇಹಿತರ ನೆರವಿನಿಂದ ದೂರಗೊಳಿಸಿದ್ದಾರೆ. ಅದು ಇಂದು ಉಚ್ಛ್ರಾಯಕ್ಕೆ ಬರಲು ಕಾರಣ ಬಹುಮಟ್ಟಿಗೆ ಇವರೇ ಎಂದು ಹೇಳಬಹುದು. ಬೆಂಗಳೂರಿನಲ್ಲಿ ಈಗ ಸರಕಾರಿ ಆಯುರ್ವೇದಿಕ್ ಕಾಲೇ-ಜೊಂದು ಇರುವುದರಿಂದ ಅನಿವಾರ್ಯವಾಗಿ ಈ ಸಂಸ್ಥೆಯನ್ನು ಮುಚ್ಚಬೇಕಾಯಿತು.

ಗೋಪಾಲಕೃಷ್ಣರಾಯರು ಹುಟ್ಟಿದ್ದು ೧೯೦೫ ರಲ್ಲಿ, ದಕ್ಷಿಣ ಕನ್ನಡದ ಕಾರ್ಕಳ ತಾಲೂಕಿನ ಮಾಳಿಯ ಗ್ರಾಮದಲ್ಲಿ. ಹುಟ್ಟಿದಾಗಲೂ ಬಡತನ ಇವರ ಬೆನ್ನು ಬಿಟ್ಟಿರಲಿಲ್ಲ; ಎಷ್ಟೆಂದರೆ ಈ ಇಳಿವಯಸ್ಸಿನಲ್ಲಿಯೂ ಅದು ಇವರನ್ನು ಬಿಟ್ಟಿಲ್ಲ. ಹಣಕ್ಕೆ ಬಡತನವಿದ್ದರೂ ಜಿಗುಟುತನಕ್ಕಾಗಲಿ ಧ್ಯೇಯಸಾಧನೆಗಾಗಲಿ ಎಂದಿಗೂ ಬಡತನ ಬರಲಿಲ್ಲ. ಬರಿಗೈಯಿಂದ ಒಬ್ಬ ವ್ಯಕ್ತಿ ಏನೇನು ಸಾಧಿಸಬಲ್ಲನೆನ್ನುವುದಕ್ಕೆ ಈ ವ್ಯಕ್ತಿ ಒಂದು ಜೀವಂತ ಸಾಕ್ಷಿ.

ಇಂದಿಗೆ ಅರ್ಧಶತಮಾನಕ್ಕೂ ಹಿಂದೆ ಅವರು ಸ್ವಗ್ರಾಮವನ್ನು ತ್ಯಜಿಸಿ ಧಾರವಾಡದಲ್ಲಿ ಹೋಟೆಲು ನಡೆಸುತ್ತಿದ್ದ ಚಿಕ್ಕಪ್ಪನ ಆಶ್ರಯಕ್ಕೆ ವಿದ್ಯಾರ್ಜನೆಗಾಗಿ ಬಂದರು. ಆದರೆ ಆಗ ಅದನ್ನು ಪೂರ್ಣಗೊಳಿಸಲಾಗಲಿಲ್ಲ. ಗಾಂಧೀಜಿಯ ಕರೆಗೆ ಓಗೊಟ್ಟು ೧೯೨೦ ರಲ್ಲಿ ಅಸಹಕಾರ ಚಳುವಳಿಯಲ್ಲಿ ಧುಮುಕಿದರು. ಮುಂದೆ ಒಂದು ವರ್ಷದ ನಂತರ ಪಂಡಿತ

ತಾರಾನಾಥರ ಸಂಪರ್ಕ ಬಂದಾಗ ಅವರ ವಿದ್ವತ್ತು, ಪ್ರತಿಭೆಗಳಿಗೆ ಮಾರುಹೋಗಿ ಅವರ ಅಚ್ಚುಮೆಚ್ಚಿನ ಶಿಷ್ಯರಲ್ಲೊಬ್ಬರಾದರು. ಗೋಪಾಲಕೃಷ್ಣರಾಯರಿಗೆ ಆಯುರ್ವೇದದಲ್ಲಿ ಆಸಕ್ತಿ ಹುಟ್ಟಲು ಬಹುಮಟ್ಟಿಗೆ ಪಂಡಿತ ತಾರಾನಾಥರೇ ಕಾರಣ. ಮುಂದೆ ರಾಯರು ಮೈಸೂರಿನ ಸರಕಾರಿ ಆಯುರ್ವೇದಿಕ್ ಕಾಲೇಜನ್ನು ಸೇರಿ ೧೯೨೪ರಲ್ಲಿ ಎಲ್.ಐ.ಎಂ.ಎಸ್. 'ಆಯುರ್ವೇದ ವಿದ್ವಾನ್' ಪದವಿಯನ್ನು ಪಡೆದು ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು.

ಇವರು ಧಾರವಾಡದಲ್ಲಿದ್ದಾಗ ಅಲ್ಲಿಯ ವನಿತಾ ಸೇವಾ ಸಮಾಜದಲ್ಲಿ ಗೌರವ ಶಿಕ್ಷಕರೆಂದು ಕೆಲಸ ಮಾಡಿದ್ದಾರೆ. ವಿಧವಾ ಪುನರ್ವಿವಾಹವನ್ನು ಬಲವಾಗಿ ಪ್ರತಿಪಾದಿಸುವ ಗೋಪಾಲಕೃಷ್ಣರಾಯರು ಬಾಲವಿಧವೆಯೊಬ್ಬಳನ್ನು ಮದುವೆಯಾಗಿ ತಾವು ನುಡಿದಂತೆ ನಡೆಯುವವರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಪತ್ನಿ ಸೌ. ಶಾಲಿನೀದೇವಿ, ಹಾಗೂ ಇಬ್ಬರು ಮಕ್ಕಳ ಚಿಕ್ಕ, ಚೊಕ್ಕಟ ಕುಟುಂಬ ಅವರದು. ಮಗ ಡಾ. ಮುರಲೀಧರ ಮೊದಲು ಅಲೋಪಥಿಯಿಂದ ಸಾಕಷ್ಟು ಸಂಪಾದಿಸುತ್ತಿದ್ದರೂ ಈಗ ತಂದೆಯ ಇಚ್ಛೆಯಂತೆ ಇಂದು ಆಯುರ್ವೇದಿಕ್ ಕಾಲೇಜಿನ ಪ್ರಾಧ್ಯಾಪಕರಾಗಿ, ಆಯುರ್ವೇದಿಕ್ ಆಸ್ಪತ್ರೆಯ ಮುಖ್ಯ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಗಳು ಡಾ. ಚಿತ್ರಾಂಗದೆಯೂ ಆಯುರ್ವೇದದ ಅಭಿವೃದ್ಧಿಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದಾರೆ ಈ ಸಂಸ್ಥೆಯಲ್ಲಿ.

ರಾಯರು ವೈದ್ಯಕೀಯ ಸೇವೆಯು ಕರ್ನಾಟಕದ ಎಲ್ಲ ಭಾಗಗಳಿಗೂ ಸಂದಿದೆ. ಧಾರವಾಡ, ದಕ್ಷಿಣ ಕನ್ನಡದ ಅಶ್ವತ್ಥಪುರ, ಈಗ ಆಂಧ್ರದಲ್ಲಿರುವ ಆದವಾನಿ, ಕಳೆದ ೨೦ ವರ್ಷಗಳಿಂದ ಬೆಂಗಳೂರು ಇವರ ಕಾರ್ಯಕ್ಷೇತ್ರವಾಗಿದೆ. ಇದರಿಂದಾಗಿ ಅಲ್ಲಲ್ಲಿಯ ಜನಗಳ ಭಾಷೆ, ರೂಢಿ, ಸಂಸ್ಕೃತಿ, ಆಯಾ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ರೋಗರುಜಿನಗಳು ಮುಂತಾದವುಗಳ ನಿಕಟ ಪರಿಚಯ ಅವರಿಗಾಗಿದೆ. ಅದರಿಂದಾಗಿ ಇವರಾಡುವ ಭಾಷೆ ಕೂಡ ಎಲ್ಲ ಭಾಗಗಳ ಉತ್ತಮಾಂಶಗಳನ್ನಾಯ್ದುಕೊಂಡು ಪರಿಪುಷ್ಟವಾಗಿರುವ ಅಚ್ಚ ಕನ್ನಡ.

ಡಾ. ಗೋಪಾಲಕೃಷ್ಣರಾಯರು ಆಯುರ್ವೇದದ ಮೂಲತತ್ವಗಳಲ್ಲಿ ಒಂದಾದ ನಿದಾನ ಪರಿವರ್ಜನವನ್ನು ಕಟ್ಟುನಿಟ್ಟಾಗಿ ತಮ್ಮ ಚಿಕಿತ್ಸಾ ಕ್ರಮದಲ್ಲಿ ಅನುಸರಿಸುತ್ತಾರೆ. ಮನುಷ್ಯ ತನ್ನ ರೋಗಕ್ಕೆ ಕಾರಣನಾದ ಚಟ ಮುಂತಾದ ಬಾಹ್ಯ ಅಂಶಗಳನ್ನು ತ್ಯಜಿಸಿ ಆರೋಗ್ಯಕರ ಮಾರ್ಗದಲ್ಲಿ ನಡೆಯುವುದೇ ಈ ಕ್ರಮ. ಅಲ್ಲದೆ ಏಕಮೂಲಿಕಾ ಪ್ರಯೋಗ ಇವರ ವೈಶಿಷ್ಟ್ಯ. ಅಲ್ಲದೆ ಅನ್ಯ ಚಿಕಿತ್ಸಾ ಪದ್ಧತಿಗಳ ಗ್ರಾಹ್ಯ ಅಂಶಗಳನ್ನು ಅಳವಡಿಸಿಕೊಳ್ಳಲು ಅವರೆಂದಾಗ ಹಿಂಜರಿದಿಲ್ಲ. ನಿಸರ್ಗ ಚಿಕಿತ್ಸಾಪದ್ಧತಿ ಹಾಗು ಔಷಧವನ್ನು ಅಲ್ಪ ಪ್ರಮಾಣದಲ್ಲಿ ಬಳಸುವ ಹೋಮಿಯೋಪಥಿ ತತ್ತ್ವವನ್ನು ಅವರು ಪರಿಣಾಮಕಾರಿಯಾಗಿ ಬಳಸುತ್ತಾರೆ.


ಪ. ತಾರಾಥರಿಂದ ಪ್ರಭಾವಿತರಾದ ರಾಯರ ಗುರುಭಕ್ತಿ ಅಪೂರ್ವವಾದುದು. ಗುರುಗಳ ಬಗ್ಗೆ ಎಷ್ಟು ಮಾತಾಡಿದರೂ ಅವರಿಗೆ ತೃಪ್ತಿಯಿಲ್ಲ. ಅವರ ಒಂದು ಕಾವ್ಯನಾಮ 'ತಾರಾದಾಸ'; ಅವರು ಪ್ರಾರಂಭಿಸಿದ ಔಷಧ ತಯಾರಿಕೆ ಸಂಸ್ಥೆಯ ಹೆಸರು ತಾರಾನಾಥ ರಸೌಷಧಿ ವರ್ಕ್ಸ್: ಅವರ ಸ್ವಂತ ಆಸ್ಪತ್ರೆಯ ಹೆಸರು 'ತಾರಾನಾಥ ಆಯುರ್ವೇದ ಮಂದಿರ. ಇದು ಸಾಲದೆಂಬಂತೆ ಗುರುಗಳ ಹೆಸರಿನಲ್ಲಿ ವರ್ಷವರ್ಷವೂ ವಕ್ತೃತ್ವ ಸ್ಪರ್ಧೆಯನ್ನೇರ್ಪಡಿಸುತ್ತಾರೆ.

ಡಾ. ಗೋಪಾಲಕೃಷ್ಣರಾಯರು ಕರ್ನಾಟಕಕ್ಕೆ ಒಂದು ಬಹುದೊಡ್ಡ ಸಂಸ್ಥೆಯೋಪಾದಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಆದರೆ ಅವರೆಂದೂ ಕೀರ್ತಿಯ, ಜನಮನ್ನಣೆಯನ್ನು ಅರಸಿ ಹೋದವರಲ್ಲವೆಂಬುದು ಅವರ ಕಾರ್ಯಕ್ಕೆ ಮತ್ತಷ್ಟು ಗೌರವ ತರುತ್ತದೆ. ✿



ಕತ್ತಲೆಯಾಗುವುದರೊಳಗೆ ಮನೆಗೆ ತಲುಪ ಬೇಕೆಂದು ಎಣಿಸಿದ್ದಳು ಲಚ್ಚು. ಆದರೆ ಒಡೆಯರು ಬಂದು ಗದ್ದೆಯ ಹುಣಿಯಲ್ಲಿ ನಿಂತುದರಿಂದ ಹಾಗೆ ಅವಸರ ಮಾಡಲು ಆಗ ಲಿಲ್ಲ. ಅವಳು ಒಬ್ಬಳೇ ಆದರೆ ಹೌದು, ಸ್ವಲ್ಪ ಬೇಗ ಹೋಗಬೇಕು ಒಡೆಯರೇ ಎಂದು ಹೊರಡಬಹುದಿತ್ತು. ಹತ್ತಿಪ್ಪತ್ತು ಜನ ನೆಡುತ್ತಿರುವಾಗ ಹಾಗೆ ಮಾಡಿದರೆ ಸರಿ ಯಾಗುತ್ತದಾ? ಉಳಿದವರೂ ಹಾಗೇ ಮಾಡು ವುದಿಲ್ಲವಾ? ಆಗ ಎಷ್ಟು ನಾಟಿ ಬಾಕಿ ಉಳಿ ಯುತ್ತದೆ. ಒಡೆಯರಾದರೂ ಸ್ವಲ್ಪ

ಗೊ. ಜಾರ್ಕಳ



ಮಾತಾಡಿ ಸುಮ್ಮನಾದಾರು; ಆದರೆ ಮನೆಯಲ್ಲಿ 'ಅಮ್ಮ'ನಿಗೆ ತಿಳಿದರೆ ನಾಳೆ ತುಂಬ 'ಪಿರಿ ಪಿರಿ' ಹೇಳಿ ಮುಖ ಸೊಟ್ಟಗೆ ಮಾಡುವುದಿಲ್ಲವಾ? ಅದಕ್ಕಾಗಿ ಲಚ್ಚು ನಸು ಕತ್ತಲೆಯಾದರೂ ಇನ್ನೂ ನೆಡುತ್ತಲೇ ಇದ್ದಳು. ಅವಳಿಗೆ ಬೇಗ ಹೋಗಬೇಕು ಅನಿಸಿದ್ದರಲ್ಲಿ ವಿಶೇಷವಿಲ್ಲದಿಲ್ಲ. ಸಾಗೆಂದು ದಿನಾ ಅವಳು ಹೊತ್ತಿರುವಾಗಲೇ ಮನೆಗೆ ಹೋಗಲು ಇಚ್ಛಿಸಿದವಳಲ್ಲ. ಅದು ಒಡೆಯರಿಗೂ ಗೊತ್ತು, ಅಮ್ಮನಿಗೂ ಗೊತ್ತು. ಸಂಜೆ ಕೆಲಸ ಎಲ್ಲಾ ಆದಮೇಲೆ ಎಲ್ಲರೂ ಅವಗವರ ಗುಡಿಸಲುಗಳಿಗೆ ಹೋದರೂ ಲಚ್ಚು ಬಂದು ಅಂಗಳದ ಬದಿಯಲ್ಲಿ ನಿಂತು ಆ ಮೇಲೆ ಅದು, ಇದು ಎಂದು ಏನಾದರೂ ಸಣ್ಣ ಪುಟ್ಟ ಕೆಲಸ ಮಾಡಿಯೇ ಹೋಗುವುದು. ಅದಕ್ಕಾಗಿಯೇ ಒಡೆಯರಿಗೂ ಅಮ್ಮನಿಗೂ ಲಚ್ಚುವಿನ ಮೇಲೆ ಒಂದು ರೀತಿಯ ವಿಶ್ವಾಸ. ಅದಕ್ಕೆಯೇ ಅಮ್ಮ ಅವಳಿಗೆ ಹಲಸಿನ ಬೀಜವೋ, ಹಪ್ಪಳವೋ ಕುಮಾಂದ್ರವೋ ಕೊಡುವುದು. ಕೆಲವೊಮ್ಮೆ ತುಂಡಾದ ಅಕ್ಕಿ ಒಂದೋ ಅರ್ಧವೋ ಸೇರು ಕೊಡುವುದೂ ಇದೆ. ಅದರ ನೆನಪು ಲಚ್ಚುಳಿಗೂ ಇಲ್ಲದಿಲ್ಲ. ಆದರೂ ಬೇಗ ಹೋಗುತ್ತಿದ್ದರೆ ಒಳ್ಳೆಯದಿತ್ತು: ಎಂದು ಎಣಿಸುತ್ತಾ ಬೇಗ ಬೇಗನೆ ನಾಲ್ಕು ನಾಲ್ಕು ನೇಜಿ ತೆಗೆದು ನೆಡುವಾಗ ''ನುಸಿಗಳು ಜೋರಾಗಿ ಕಚ್ಚತೊಡಗಿದುವಲ್ಲಾ. ಕತ್ತಲೆ ಆದ್ರೆ ಈ ಮಾರಿಗಳು ಬಹಳ ಜೋರು" ಎಂದಂ ಕೆಸರು ಕೈಯಿಂದಲೇ ಬಡಿದುಕೊಳ್ಳುವಾಗ ಒಡೆಯರು "ಗಂಟೆ ಇನ್ನೂ ಆರಾಗಲಿಲ್ಲ ಇನ್ನೂ ಒಂದೂವರೆ ಗಂಟೆ ಹೊತ್ತಿದೆ" ಎಂದು ಅಲ್ಲಿಯೇ ಕಲ್ಲಿನ ಮೇಲೆ ಕುಂಡೆ ಊರಿದ್ದನ್ನು ಕಂಡು ಲಚ್ಚುಳಿಗೆ ತುಂಬಾ ಅಸಮಾಧಾನವಾಗುತ್ತದೆ. "ಇವರ ಕರ್ಮ ಹೊತ್ತು ಮುಳುಗಲು ಒಂದು ಮಾರು ಮಾತ್ರ ಇದೆ. ಒಂದೂವರೆ ಗಂಟೆ ಅಂತೆ'' ಎಂದು ತಲೆಯೆತ್ತಿ ಸೂರ್ಯನನ್ನು ನೋಡಿ, ನಾನು ನೋಡಿದ್ದು, ಒಡೆಯರಿಗೆ ಗೊತ್ತಾಯ್ತು ಎಂದು ಅವರನ್ನೊಮ್ಮೆ ನೋಡಿ ಇನ್ನೊಂದು 'ಸೂಡಿ' ನೋಜಿಗೆ ಕೈ ಹಾಕುತ್ತಾಳೆ.

ಬೆಳಿಗ್ಗೆ ಬರುವಾಗ ಗಿರಿಜನಲ್ಲಿ ಹೇಳಿ ಬಂದಿದ್ದಳಂ ಸಂಜೆಗೆ ಬೂತಯಿ ತಂದು 'ಗಸಿ' ಮಾಡು ಎಂದು. ಇತ್ತೀಚೆಗೆ ತಿನ್ನದೆ ನಾಲಿಗೆ ಚಪ್ಪೆ ಚಪ್ಪೆ ಆಗಿದೆ ಅನಿಸುತ್ತದೆ. ಬೂತಯಿ ಬಂಗುಡೆಗಿಂತ ಒಳ್ಳೇದು ಎಂದು ಒಡೆಯರೇ ಹೇಳುತ್ತಾರೆ. ಅವರಿಗೂ ಬೂತಯಿ ಅಂದ್ರೆ ಇಷ್ಟವಂತೆ. ಆದ್ರೆ ಅಮ್ಮನಿಗೆ ಅದು ಸೇರುವುದೇ ಇಲ್ಲವಂತೆ. "ಏನು ವಾಸನೆ!" ಎನ್ನುತ್ತಾಳೆ. ಬೂತಯಿಯ ನೆನಪಾಗುವಾಗ ಬಾಯಿಯಲ್ಲಿ ನೀರು ಬರುತ್ತದೆ ಲಚ್ಚುಳಿಗೆ. ಇವತ್ತು ಸಂತೆ ಅಗ್ಗ ಉಂಟಾ ಅಥವಾ ತುಂಬಾ ಪಿರಿಯುವ? ಒಂದು ರೂಪಾಯಿಗೆ ಎಷ್ಟು–ಹತ್ತೂ ಇಪ್ಪತ್ತೂ ಸಿಕ್ಕಬಹುದು. ಅಯ್ಯೋ! ಆದ್ರೆ

ಹಸಿ ಮೆಣಸು ತರ ಕ್ಕೆ ಹೇಳಲಿಲ್ಲವಲ್ಲ. ಬೂತಯಿಗೆ ಹಸಿ ಮೆಣಸು ತುಂಬಾ ಹಿಡಿಸುತ್ತದೆ. ಸ್ವಲ್ಪ ಬೇಗಾದ್ರೂ ಹೊರಡುತ್ತಿದ್ದರೆ ಒಡೆಯರ ಮನೆಗೆ ಹೋಗಿ ಅಮ್ಮನತ್ರ ಹತ್ತು ಮೆಣಸು ಕೇಳಬಹುದಿತ್ತು ಎಂದು ಮನಸ್ಸು ಆಲೋಚಿಸುವಾಗ ಕೈ ಬೇಗ ಬೇಗ ಕೆಲಸ ಮಾಡುತ್ತದೆ.

ಇವತ್ತು ಘಟ್ಟದಿಂದ ಅವರು ಬರುತ್ತಾರೆ. ಹಾಗೆಂದು ಮೊದಲೇ ಒಡೆಯರಲ್ಲಿ ಹೇಳುತ್ತಿದ್ದರೆ ಸ್ವಲ್ಪ ಬೇಗ ಹೋಗು ಅನ್ನುತ್ತಿದ್ದರೋ ಏನೋ? ಅವರು ಘಟ್ಟಕ್ಕೆ ಹೋಗತೊಡಗಿದ ಲಾಗಾಯ್ತು ಹೀಗೆಯೇ ವರ್ಷಕ್ಕೆ ಒಮ್ಮೆಯೋ ಎರಡು ಸಲವೋ ಬರುವುದು ನಾಲ್ಕು ದಿನ ಇದ್ದು ಹೋಗುವುದು. ಯಾವಾಗಲಾದರೊಮ್ಮೆ ಇಪ್ಪತ್ತೋ ಮೂವತ್ತೋ ರೂಪಾಯಿ ಕಳಿಸಿದರೆ ಆಯ್ತು. ಕೇಳಿದರೆ ಗಾರೆಯ ಕೆಲಸಕ್ಕೆ ಎಷ್ಟು ಸಿಕ್ಕುತ್ತದೆ ಅಂತ ಮಾಡಿದ್ದಿ. ಅದೂ ಯಾವಾಗಲೂ ಕೆಲಸ ಉಂಟಾ ಎಂದು ಬಿಡುತ್ತಿದ್ದರು. ದುಡ್ಡು ಕೊಡುವುದಿಲ್ಲ ಅಂತ ನೀವು ಬರುವುದು ಬೇಡ ಅಂತ ಹೇಳಲಿಕ್ಕಾಗುತ್ತದೆಯಾ?– ನಿನ್ನ ಗಂಡನಿಗೆ ಘಟ್ಟದಲ್ಲಿ ಒಂದು 'ಆಸಾಮಿ' ಉಂಟಂತೆ, ಮೊನ್ನೆ ಅತ್ರಾಡಿಯ ಮೈದು ಘಟ್ಟಕ್ಕೆ ಹೋಗಿ ಬಂದವ ಹೇಳಿದ ಎಂದು ಒಡೆಯರು ಹೇಳುವಾಗ ನಾನು ಅದಕ್ಕೆ ಏನು ಹೇಳಬೇಕು? ಹೊರಗೆಲ್ಲಾ ತಿರುಗುವವರು ಎಲ್ಲಿ ನಾಯಿಯ ಹೇಲು ಮೆಟ್ಟುತ್ತಾರೆಂದು ಹೇಗೆ ಹೇಳುವುದು ಎಂದು ಸಮಾಧಾನ ಹೊಂದಿದ್ದಳು ಲಚ್ಚು.

ಲಚ್ಚುವಿನ ಗಂಡ ಶೀನ, ಮೇಸ್ತ್ರಿಯಾದದ್ದು ಘಟ್ಟಕ್ಕೆ ಹೋದ ಮೇಲೆಯೇ. ಇಲ್ಲಿ ಅವನು ಲಚ್ಚುಳನ್ನು ಮದುವೆ ಆದಲಾಗಾಯ್ತು ಒಡೆಯರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದವ. ಒಂದು ಸಲ ಕೆಳಗಿನ ಮನೆ ತಬ್ರನ ಜೊತೆ ಅಡಿಕೆ ಕದ್ದು ಸಿಕ್ಕಿಬಿದ್ದಾಗ ಒಡೆಯರು ಪೋಲೀಸಿನವರ ಕೈಗೆ ಕೊಡದೆ ಅವರೇ ಕಟ್ಟಿ ಹಾಕಿ ನಾಲ್ಕು ನಾಲ್ಕು ಸೊಂಟಕ್ಕೆ ಮೆಟ್ಟಿದ್ದನ್ನು ತಿಂದುಕೊಂಡು ತಬ್ರ ಬೊಂಬಾ

ಜೊತೆ ಗಾರೆ ಕೆಲಸ ಸುರುಮಾಡಿದ್ದ. ಹಾಗೇ ಒಂದು ಐದಾರು ತಿಂಗಳಲ್ಲಿ ಘಟ್ಟಕ್ಕೆ ಮೀನು ಕೊಂಡು ಹೋಗುವ ದೊಡ್ಡ ಹುಸೇನ ಬ್ಯಾರಿಯ ಒಟ್ಟಿಗೆ ಹೋದವ ಆರೇಳು ವರ್ಷ ಇಂತಲ್ಲಿ ಇದ್ದಾನೆ ಎಂದು ವರ್ತಮಾನ ಇರಲಿಲ್ಲ. ಶೀನ ಹೋಗುವಾಗ ಗಿರಿಜನಿಗೆ ೫ ವರ್ಷ ಪೂರ್ತಿ ಆಗಿರಲಿಲ್ಲ. ಅವಳ ತಮ್ಮ ಕಿಟ್ಟಿ ಆಗಿನ್ನೂ ಎರಡು ವರ್ಷದವ. ಮಕ್ಕಳನ್ನು ಹೇಗಾದರೂ ಕಷ್ಟದಲ್ಲಿ ಸಾಕಿದ್ದಳು ಲಚ್ಚು.

''ಇದು ಒಂದು ಸಾಲು ದಡ ಮುಟ್ಟಿಸಿ ಹೋಗಿ'' ಎಂದು ಒಡೆಯರು ಕುಳಿತಲ್ಲಿಂದ ಏಳುವಾಗ ಎಲ್ಲಾ ಹೆಂಗಸರೂ ತಲೆಯೆತ್ತಿ ಹಿಂದಕ್ಕೆ ನೋಡಿ ಇನ್ನೂ ಎರಡು ಮೂರು ಇದೆಯಲ್ಲಾ ಎಂದು ಮತ್ತೆ ಬಗ್ಗುತ್ತಾರೆ.

ಒಡೆಯರ ಮಕ್ಕಳು ಶಾಲೆಗೆ ಹೋಗುವಾಗ ಗಿರಿಜಳನ್ನು ಮತ್ತು ಕಿಟ್ಟನನ್ನು ಶಾಲೆಗೆ ಕಳುಹಿಸಲು ಹೇಳಿ ಸ್ಲೇಟು ಕಡ್ಡಿ ತೆಗೆಸಿ ಕೊಟ್ಟವರು ಒಡೆಯರೆ. ಅಲ್ಲದಿದ್ದರೆ ಗಿರಿಜ ಒನೇ ಕ್ಲಾಸಾದರೂ ಕಲಿಯುವುದು ಸಾಧ್ಯವೇ ಇರಲಿಲ್ಲ. ಕಿಟ್ಟ ನಾಲ್ಕನೇ ಕ್ಲಾಸಿನಲ್ಲಿರುವಾಗಲೇ ಕೆಳಗಿನ ಮನೆ ತಬ್ರ ಬೊಂಬಾಯಿಂದ ಬಂದವ "ನಾನು ಹೋಟೇಲು ಮಾಡಿದ್ದೇನೆ. ಹಗಲು ಕೆಲಸ ಮಾಡಿ ರಾತ್ರಿ ಶಾಲೆಗೆ ಹೋಗಲಿ ನೀನೇನೂ ಬೇಜಾರು ಮಾಡಬೇಡ" ಎಂದು ಕರೆದುಕೊಂಡು ಹೋದವ ಮತ್ತೊಮ್ಮೆ ಬಂದಾಗ ಹೇಳಿದ್ದ "ಈಗ ಬೇರೆ ಕಡೆ ಇದ್ದಾನೆ" ಎಂದು. ಇತ್ತೀಚೆಗೆ ಎರಡು ವರ್ಷದಿಂದ ಅವನ ಒಂದು ಪಾವಾಣೆ ಬಿಡಿ ಒಂದು ಕಾಗ್ದ ಬರೆದಿದ್ದಾನೆ ? ಗಿರಿಜ ಇಲ್ಲಿ ಬೀಡಿ ಕಟ್ಟಲಿಕ್ಕಾದರೂ ಕಲಿಯದಿರುತ್ತಿದ್ದರೆ ಖರ್ಚಿಗೆ ಏನು ಮಾಡಬೇಕಿತ್ತು ? ನಾನು ಒಬ್ಬಳು ಸೊಪ್ಪು, ಹುಲ್ಲು ಎಂದು ಕೆಲಸ ಮಾಡಿ ಒಂದೋ ಅರ್ಧವೋ ಸೇರು ಅಕ್ಕಿ ತುದುದರಲ್ಲಿ ಹೊಟ್ಟೆಗೆ ಬಟ್ಟೆಗೆ ಹೇಗೆ ಮಾಡಿಕೊಳ್ಳುವುದು. ಇವರು ಘಟ್ಟಕ್ಕೆ ಹೋದವರು ಬರುವಾಗ ಒಂದು ಕೈಮಗ್ಗದ ಸೀರೆ, ನಾಲ್ಕು ಮೊಳ ಬಟ್ಟೆ ತಂದರೆ ಅದು ವರ್ಷವಿಡೀ ಸಾಕಾಗುತ್ತದೆಯೆ?

ಉಪ್ಪು ಮೆಣಸಿಗಾದರೂ ಆಗುತ್ತಿತ್ತು. ಈಗ
ಅವನ ಸುದ್ದಿಯೇ ಇಲ್ಲದಿರುವಾಗ ಮತ್ತೆ
ಯಾರನ್ನು ನಂಬಿ ಬದುಕುವುದು ? ಅಲ್ಲಾ...
ಮರ್ಯಾದೆ ಬಿಟ್ಟರೆ ಬದುಕಲಿಕ್ಕೆ ಅಷ್ಟು ಕಷ್ಟ
ವೇನೂ ಆಗದು ಎಂಬುದು ಲಚ್ಚುಳಿಗೂ
ಗೊತ್ತು. ಸಂತೆಯಲ್ಲಿ ಮೀನು ಮಾರುವ
ಬ್ಯಾರಿಯನ್ನು ಮನೆಗೆ ಕರೆದು, ದಿನಾ
ಬಂಗುಡೆಯ 'ಗಸಿ' ತಿನ್ನುತ್ತಾ ವಾರಕ್ಕೊಮ್ಮೆ
ಉಡುಪಿಗೆ ಸಿನಿಮಾ ನೋಡಲಿಕ್ಕೆ ಹೋಗುವ
ಕುಪ್ಪನ ತಂಗಿ ಬಾಗೇರ್ತಿಯಾಗಲಿ ಅವಳ
ತಾಯಿ ರಂಗುವಾಗಲಿ ನನ್ನ ಹಾಗೆ ಗದ್ದೆಗೆ
ಇಳಿಯುತ್ತಾರಾ? ಬಿಸಿಲಲ್ಲಿ ಒಣಗುತ್ತಾರಾ ?
ಅವರು ಸುಖದಲ್ಲಿ ಇಲ್ಲವಾ ? ಒಟ್ಟಾರೆ
ಸುಖ ಮುಖ್ಯವಾ ಮರ್ಯಾದೆ ಸಹಾ ಬೇಕಾ ?
ಕೂಸುನ ಮಗಳು ರಾಜೀವಿ ನಾಲ್ಕು ವರ್ಷ
ಗಳ ಹಿಂದೆ ಫಿಟ್ಟರ್ ಸೋಜರೊಡನೆ ಓಡಿ
ಹೋದವಳು ಈಗ ಕುತ್ತಿಗೆ ತುಂಬಾ ಚೈನು,
ಕೈ ತುಂಬಾ ಬಳೆ ಹಾಕಿಕೊಂಡು ಕಾಮತರ
ಮನೆಯ ಅಮ್ಮನ ಹಾಗೆ ಕೆಂಪು ಕೆಂಪು
ಆಗಿ ಬರಲಿಲ್ಲವಾ? ಈಗ ನಲ್ವತ್ತೊ ಐವತ್ತೊ
ಸಾವಿರ ಕೊಟ್ಟು ಆಸ್ತಿ ತೆಗೆದುಕೊಳ್ಳುತ್ತಾ
ಳಂತೆ ಏನಿದ್ರೂ ಹೇಳುವುದೆಂತದು. 'ಚರ್ಮದ
ದುಡ್ಡು' ಅಂತ ಅಲ್ಲವಾ ? ಮಾನ ಮರ್ಯಾದೆ
ಬಿಟ್ರೆ ಎಲ್ಲಾ ಆಗ್ತದೆ. ಇವರು ಘಟ್ಟಕ್ಕೆ
ಹೋದವರು ಯಾರನ್ನೊ ಕಟ್ಟಿಕೊಂಡರು
ಎಂದು ಕೇಳಿ ನಾನು ತುಂಟಿ ಎರಡು ಮಾಡಿ
ದ್ದೇನ? ಯಾರತ್ರಾದ್ರೂ ಹೇಳಿದ್ದೇನ? ಆಟದ
ದಿವಸ ರಾತ್ರಿ ಬೀಡಿ ಚಕ್ಕರ್ ಇಬ್ರಾಯಿ,
ಕಾರ್ ಡ್ರೈವರ್ ಮೋಂತು ಬಾಗೇರ್ತಿ
ಯನ್ನು ಕರೆದುಕೊಂಡು ರಥದ ಕೊಟ್ಟಿಗೆಯ
ಹಿಂದೆ ಹೋಗುವಾಗ ಶಾಲೆಯ ಹುಡುಗರು
ನೋಡಿ ಗಲಾಟೆ ಮಾಡಿ ಅವರು ಮೂವರೂ
ಪೋಲೀಸ್ ಸ್ಟೇಶನ್‌ನಲ್ಲಿ ಗುದ್ದು ತಿನ್ನ
ಲಿಲ್ಲವಾ? ಆದ್ರೂ ಅವಳಿಗೆ ಮರ್ಯಾದೆ
ಉಂಟಾ ? ದೊಡ್ಡ ಸುರಭಿಯ ಹಾಗೆ
ನಡೆಯುವುದಿಲ್ಲವಾ ? ಮಾರ್ಗ ಮಧ್ಯದಲ್ಲಿ?

ಕತ್ತಲೆಯಾದುದರಿಂದ ಎಲ್ಲರೂ ಹೊರಡು
ಫಕ್ಕನೆ ಹಸಿಮೆಣಸಿನ ನೆನಪಾಗಿ ಹಾಗೇ
ಒಡೆಯರ ಮನೆಗೆ ಹೋಗಿ ಬಂದು ಹತ್ತು
ಹಸಿ ಮೆಣಸು ಕೇಳೋಣ ಬೂತಯಿಗೆ ಪಸ್ಟು
ಎಂದು ಮತ್ತೊಮ್ಮೆ ಆಲೋಚಿಸಿ ಗದ್ದೆಯ
ಹುಣಿಯಲ್ಲಿ ಕಾಲು ಹಾಕುವಾಗ ಎದುರಿ
ನಿಂದ ಎಲೆಕ್ಟ್ರಿಕ್ ಲೈನ್‌ಮೇನ್ ಸುಬ್ಬ
ಗಡದ್ದಾಗಿ ಕುಡಿದುಕೊಂಡು ಬಂದವ ಖಂಡಿತ
ವಾಗಿ ತನಗೆ ಡಿಕ್ಕಿ ಹೊಡೆದೇ ಹೊಡೆಯು
ತ್ತಾನೆಂದು ತಿಳಿದು ಲಚ್ಚು ಗದ್ದೆಗೆ ಇಳಿದು
ನಿಲ್ಲುತ್ತಾಳೆ.

ಲಚ್ಚುಳನ್ನು ಕಂಡು ಮುಖ ದುಸು
ದುಸು ಮಾಡಿಕೊಂಡು ಬಿರಬಿರನೆ ಹೆಜ್ಜೆ ಇಟ್ಟ
ಸುಬ್ಬನನ್ನು ನೋಡಿ ಅವನಿಗೆ ತನ್ನಲ್ಲಿ ಸಿಟ್ಟು
ಯಾಕೆಂದು ನೆನಪಾಗಿ ನಗೆ ಬರುತ್ತದೆ. "ನಿನ್ನ
ಗಂಡ ಘಟ್ಟದಲ್ಲಿ ಒಳ್ಳೆಯ ಮಜದಲ್ಲಿ ಇದ್ದಾ
ನಂತೆ ಲಚ್ಚಕ್ಕ. ಅವನಿಗೆ ನಿನ್ನ ನೆನಪಾದರೂ
ಉಂಟಾ ಇಲ್ಲವಾ ? ನೀನು ಇಲ್ಲಿ ಸುಮ್ಮನೆ
ಯಾಕ ಬಂಗ್ರ ಬರುವುದು ? ಹತ್ತೊ ಇಪ್ಪತ್ತೊ
ಬೇಕಿದ್ರೆ ನಾನು ಕೊಡುವುದಿಲ್ಲವಾ" ಎಂದು
'ಶೇಲೆ ಶೇಲೆ' ಮಾತಾಡಿ ಮೈ ಮುಟ್ಟಲು
ಬಂದಾಗ ಹಿಡಿಸೂಡಿಯಲ್ಲಿ ಮುಖದ ಮೇಲೆ
ಎರಡು ಬಾರಿಸಿ ಉಗುಳಿದ ಮೇಲೆ ಮತ್ತೆ
ಕೆಲವು ಸಮಯ ಅವನ ಮುಖ ತೋರಿಸಿ
ದ್ದಾನಾ ? ನನ್ನನ್ನು ಕೂಡ ಅವ ಬೇವರ್ಸಿ
ಅಂತ ತಿಳಿದಿದ್ದಾನ ಏನ ! ಎಂದು ಆಲೋಚಿಸಿ
ಬೇಗ ಬೇಗನೆ ಹೆಜ್ಜೆ ಇಡುವಾಗ 'ಅವರ'
ನೆನಪಾಗಿ ಇವತ್ತು ಒತ್ತಾಯಿಸಲೇಬೇಕು
ಅವರಿಗ ಕಣ್ಣು ಕಾಣುತ್ತದೆಯ ಇಲ್ಲವ ?
ಹುಡುಗಿ ಹೆಂಗಸಾಗಿ ಬರುವ ಜಾತ್ರೆಗೆ ೫
ವರ್ಷ ಆಗುವುದಲ್ಲವ–ಇನ್ನು ಎಲ್ಲಿಯಾದರೂ
ನೋಡಿ ಯಾರ ಕೈಗಾದರೂ ಹಾಕಿಕೊಡ
ದಿದ್ದರೆ ಹೇಗೆ ? ಪ್ರಾಯಕ್ಕೆ ಬಂದ ಹುಡುಗಿ
ಯನ್ನು ಮನೆಯಲ್ಲಿ ಹಾಗೆಲ್ಲಾ ಇರಿಸುವುದು
ಸರಿಯಾಗುತ್ತದೆಯ ? ಎಂದು ಹೇಳಬೇಕು.
ಘಟ್ಟದಲ್ಲಿ ರೈಟರ್ ಕೆಲಸ ಮಾಡುವವ ಒಬ್ಬ
ಇದ್ದಾನೆ. ಮಾತಾಡಿ ನೋಡುತ್ತೇನೆಂದು ಹೇಳಿ
ದವರು ಏನು ಮಾಡಿದ್ದಾರೆ ಎಂದು ಕೇಳಬೇಕು.

ಮನೆ ಬಿಟ್ಟರೆ ಆಯ್ತು ಮತ್ತೆ ಹೋಗುವುದು ಬಹಳ ಬೇಗ ಎಂದು ಆಲೋಚಿಸಿಕೊಂಡು ಒಡೆಯರ ಮನೆಯ ಅಂಗಳಕ್ಕೆ ಬರುವಾಗ ನಾಯಿ ಬೊಗಳಿದ್ದನ್ನು ಕೇಳಿ ಹೊರಗೆ ಬಂದ ಅಮ್ಮನಿಂದ ಮೆಣಸು ಕೇಳಿ ಪಡೆಯುವಾಗ ಅವರು ಕೊಟ್ಟ ಹುಣಿಸೆ ಹಣ್ಣಿನ ಮುದ್ದೆಯನ್ನು ಸೆರಗಿನಲ್ಲಿ ಕಟ್ಟಿಕೊಂಡು ಈಗ ಅವರು ಬಂದಿರಲೂಬಹುದು ಎಂದು ಅಂಗಳ ಇಳಿಯುತ್ತಾಳೆ. ಕತ್ತಲೆಯಲ್ಲಿ ದಾರಿ ಏನೂ ಕಾಣದಿರುವಾಗ ಒಡೆಯರ ಮೇಲೆ ಸಿಟ್ಟು ಬರುತ್ತದೆ. ಈ ಸಲ ಒಡೆಯರ ಹತ್ತಿರ ಬಂದು ಇನ್ನೂರೋ ನೂರೋ ಸಾಲ ಕೇಳದಿದ್ರೆ ಆಗುತ್ತದೆಯಾ ಮದುವೆ ಖರ್ಚು ಬಟ್ಟೆ ಬರೆ ಎಂದು ಆಗಬೇಕಲ್ಲ. ಕೊಟ್ಟಾರು. ಕೊಡದಿದ್ರೆ ಮತ್ತೆ ಗೊತ್ತಾಗುತ್ತದೆಯಲ್ಲ ಅವರ ಬಿಟ್ಟಿ ಚಾಕ್ರಿ ಮಾಡುವುದು. ಅವರಿಗೆ ಮುಲಾಜು ಇದ್ರೆ ನನಗೂ ಇರುತ್ತದೆ. ಕೆಲಸ ಮಾಡಿ ತೀರಿಸುವ. ಹೇಗಿದ್ರೂ ಈ ಸಲ ಮದುವೆ ಮಾಡಲೇಬೇಕು. ಒಟ್ಟಾರೆ ಮರ್ಯಾದೆಯಲ್ಲಿ ನಾಲ್ಕು ಜನರ ಹಾಗೆ ಬದುಕಬೇಕಲ್ಲ ಎಂದುಕೊಂಡು ಮೆಣಸನ್ನು ಹುಳಿಯನ್ನು ಒಮ್ಮೆ ಮುಟ್ಟಿ ನೋಡಿಕೊಂಡು ಪಕ್ಕನೆ ಮೀನು ಪಲ್ಯದ ನೆನಪಾಗಿ ಬಾಯಿಯಲ್ಲಿ ನೀರು ಬಂದು ನಾಲ್ಕು ದೊಡ್ಡ ಹೆಜ್ಜೆಯಿಟ್ಟು ಅಂಗಳಕ್ಕೆ ಬರುತ್ತಾಳೆ.

ಮನೆಯಲ್ಲಿ ದೀಪ ಕೂಡ ಹಚ್ಚಲಿಲ್ಲವಲ್ಲ–ಹಾಗಾದ್ರೆ ಅವರು ಇವತ್ತು ಬರಲಿಲ್ಲವೇ... ಹುಡುಗಿ ಎಲ್ಲಿ ಹೋಯಿತು? ಕತ್ತಲೆ ಆಗುತ್ತಾ ದೀಪ ಹಚ್ಚಿಡು ಎಂದು ಎಷ್ಟು ಸಲ ಹೇಳಿದೆ ಎನ್ನುತ್ತಾ "ಗಿರಿಜಾ...ಗಿರಿಜಾ..." ಎಂದು ಜಗಲಿ ಹತ್ತಿದರೂ ಗಿರಿಜ ಇಲ್ಲದ್ದನ್ನು ಕಂಡು ಬಾಗಿಲು ದೂಡುವಾಗ ಬರ್ರನೆ ತೆಗೆದುಕೊಳ್ಳುತ್ತದೆ. ಕತ್ತಲೆಯಲ್ಲಿ ಅಂದಾಜಿಗೆ ಕೈಹಾಕಿ ಬೆಂಕಿ ಪೆಟ್ಟಿಗೆ ತೆಗೆದು ದೀಪ ಹಚ್ಚುವಾಗ ಒಲೆಯಲ್ಲಿ ತಣ್ಣಗಿನ ಬೂದಿ ತುಂಬಿದ್ದು ಅನ್ನದ ಪಾತ್ರೆ ಖಾಲಿ ಇರವುದನ್ನು ಕಂಡು ಒಮ್ಮೆಲೆ ಏನು ಇದೆಲ್ಲಾ! ಎಂದು ತಿಳಿಯದೆ ದುಃಖ ಉಮ್ಮಳಿಸಿ ಬರುತ್ತದೆ. ಬೀಡಿ ಕಟ್ಟುವ 'ಸೂಪು'ವಿನಲ್ಲಿ ಎಲೆ ತಂಬಾಕುಗಳು ಹಾಗೆಯೇ ರಾಶಿ ಇರುವುದನ್ನು ಕಂಡು ಅವುಗಳ ನಡುವೆ ಮಡಚಿ ಇಟ್ಟ ಕಾಗ್ದವನ್ನು ತೆಗೆದು ಓದಿಸಲು ಕೃಷ್ಣಭಟ್ಟರಲ್ಲಿಗೆ ಹೋಗುತ್ತಾಳೆ. ಭಟ್ಟರು ಮನೆಯಲ್ಲಿಲ್ಲದ್ದನ್ನು ತಿಳಿದು ಅವರ ಹೆಂಡತಿಯ ಕೈಗೆ ಅಳುತ್ತಾ ಚೀಟಿಯನ್ನು ಕೊಡುತ್ತಾಳೆ. ಅವರು ಓದಿ "ನಿನ್ನ ಮಗಳು ಘಟ್ಟಕ್ಕೆ ಅಪ್ಪ ಇದ್ದಲ್ಲಿ ಹೋಗಿದ್ದಾಳಂತೆ. ಹುಡುಕುವದು ಬೇಡಂತೆ' ಎನ್ನುವಾಗ ಒಳಗಿಂದ ಬಂದ ಭಟ್ಟರ ಮಗ ಪಿ. ಯು. ಸಿ. ಓದುವ ಮಾಣಿ ಹೇಳುತ್ತಾನೆ: "ಗಿರಿಜ ಮತ್ತು ಬೀಡಿ ಚಕ್ಕರ್ ಇಬ್ರಾಯಿ ಬೊಂಬಾಯಿಗೆ ಹೋಗುವ ಸ್ಟೇಟ್ ಬಸ್ಸು ಹತ್ತಿದ್ದು ನಾನು ನೋಡಿದೆ ಉಡುಪಿಯಲ್ಲಿ" ಎಂದು. ಲಚ್ಚು ಗಳಗಳನೆ ಅಳುತ್ತಾ ಹೊರಗೆ ಬರುವಾಗ "ನನಗೆ ಅಂದಾಜಿತ್ತು ಅವಳ 'ಕಬತ್' ನೋಡಿ ಏನಾದರೂ 'ಕಿತಾಪತಿ' ಮಾಡುತ್ತಾಳೆಂತ" ಎಂದು ಕೃಷ್ಣಭಟ್ಟರ ಹೆಂಡತಿ ನಗುವಾಗ ಲಚ್ಚುವಿನ ಮಡಿಲಲ್ಲಿ ಹುಳಿಯ ಗಂಟು ಮತ್ತು ಹಸಿ ಮೆಣಸು ನಗುತ್ತ ಕುಳಿತಿತ್ತು. ✡

ಶತ್ರುದೇಶದಲ್ಲಿದ್ದಾಗ ಸಂಯಮದಿಂದಿರಬೇಕು. ಸ್ತ್ರೀ–ಮದ್ಯದಿಂದ ದೂರಿರಬೇಕು. ಒಬ್ಬನೇ ಮಲಗಬೇಕು. ಏಕೆಂದರೆ ಮಲಗಿದಾಗ ಮತ್ತು ಮತ್ತೇರಿದಾಗ ಹೃದ್ಗತ ಹೊರಬೀಳುವದು. ಶತ್ರುರಾಜನು ಕೇಳಿದರೂ ತನ್ನ ದೇಶದ ಪ್ರಕೃತಿ ಮಂಡಲಗಳ ಪರಿಮಾಣವನ್ನು ತಿಳಿಯಗೊಡಬಾರದು.

ತಿಗಣೆ-ಒಂದು ಅನಿಸಿಕೆ

ಶಂ. ಚಿ. ಪಾಟೀಲ

ತಿಗಣೆ ಅಥವಾ ತಗಣೆ ಎಂದೊಡನೆ ನಿಮಗೂ ನನ್ನಂತೆ ಸಹಜವಾದ ಕುತ್ಸಿತಭಾವ ಮೂಡಬಹುದೆಂದು ನನಗೆನಿಸುತ್ತದೆ. ಗಣನೀಯವಾಗಿ ಚಿಕ್ಕದಾದರೂ ಮೂರಕ್ಷರದ ಆ ಪ್ರಾಣಿ ಎಂದೆಂದೂ ಯಾರ ಹೃದಯದಲ್ಲಿಯೂ–ಅಂದರೆ ತಪ್ಪಾಗದೇನೋ–ಸ್ನೇಹಾಂಕುರ ಮಾಡಲಾರದು. ಸಮಯ ದೊರೆತಾಗ ನಮ್ಮ ರಕ್ತದ ಬಿಂದುಗಳನ್ನು, ಭಯಾಗ್ರಸ್ತ, ಕವಳಗಳ್ಳ ಕ್ರಿಮಿಯಾದರೂ ಒಂದೊಂದಾಗಿ ಹೀರುವ ತಿಗಣೆ ಹಗಲಿನಲ್ಲೂ ಪೀಡಿಸಲು ಹಿಂದು–ಮುಂದು ನೋಡದಂಥದು. ಈಝಿ ಚೇರಿನ ಕೈಗಳ ಮೇಲೆ ನಿಮ್ಮ ಕೈಗಳೆರಡನ್ನೂ ಒರಗಿ ಸ್ವಸ್ಥವಾಗಿ ಕುಳಿತಿರಿ. ಖುರ್ಚಿಯ ಕೈ, ಅದು ಹೊಂದಿಕೊಂಡಿರುವ–ತೋಳು ಇವೆರಡರ ನಡುವಿನ ಸಂದಿನಲ್ಲಿ ಸಾಮಾನ್ಯವಾಗಿ ಬೀಡಾರ ಹೂಡಿದ ತಗಣೆಯು ಆ ಸಂದಿನಿಂದ ನೀವು ಕೈಯಿಟ್ಟಿರುವ ಜಾಗೆಯ ಮೇಲೆ, ನಿಮ್ಮ ಕೈಯ ವಾಸನೆಯನ್ನು ಗ್ರಹಿಸಿ, ಸಾವಕಾಶವಾಗಿ ಇಣಕುತ್ತದೆ. ಈಗ ನಿಮ್ಮ ಕೈಯನ್ನು ಯಥಾ ಸ್ಥಿತಿಯಲ್ಲಿಯೇ ಚಲಿಸದಂತಿರಿಸಿರಿ. ಅದು ಕ್ಷಣ ಹೊತ್ತು ಯೋಚಿಸಿ ನಿಮ್ಮ ತೋಳಿನೆಡೆಗೆ ಬರುತ್ತದೆ. ನಿಮಗೆ ಗೊತ್ತಾಗದಂತೆ ಬರಲು ಪ್ರಯತ್ನಿಸುತ್ತದೆ.

ಯಶಸ್ವಿಯಾಗುತ್ತದೆ. ನಿಮ್ಮ ತೋಳನ್ನು ಕಚ್ಚಿದ ಕ್ಷಣಾರ್ಧದ ನಂತರ ನಿಮಗೆ ಅದರ ಸಂವೇದನೆಯಾಗಿ–ಒಮ್ಮಿಂದೊಮ್ಮೆಲೇ ನಿಮ್ಮ ಕೈಯನ್ನು ಚಲನಗೊಳಪಡಿಸುತ್ತೀರಿ. ನಿಮ್ಮ ತೋಳಿನ ಚಲನೆಯ ಅರಿವಾದೊಡನೆ ಅದು ಸರ್ರನೇ ಬಿರುಕಿನಲ್ಲಿ ನುಸುಳುತ್ತದೆ. ಅದರೆಡೆಗೆ ನೀವು ನಿಮ್ಮ ದೃಷ್ಟಿಹಾಯಿಸಿದರೂ, ನಿಮಗೆ ಕಾಣದಂತೆ ಅಡಗಲದು ಪ್ರಯತ್ನಿಸುತ್ತದೆ. ಸಾಹಸವನ್ನೇ ಮಾಡುತ್ತದೆಯೆಂದರೂ ಅಡ್ಡಿಯಿಲ್ಲ.

ಒಮ್ಮೆ ಅಥವಾ ಎರಡು, ಬಹಳವೆಂದರೆ ಮೂರು ಸಾರಿ ನೀವೂ ಅದನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳದೆ, 'ಹೋಗಲಿ ಚಿಲ್ಲರೆ ಪ್ರಾಣಿ'ಯೆಂದು ಸುಮ್ಮನಾಗುತ್ತೀರಿ. ಆದರೆ ಅದು ಏನು ತಿಳಿಯುತ್ತೇ ನಿಮ್ಮ ಬಗ್ಗೆ ಗೊತ್ತೇ? "ಇಷ್ಟೊಂದು ರುಚಿಕರ ರಕ್ತವುಳ್ಳ ಪ್ರಾಣಿ ನನ್ನಷ್ಟು ಜಾಣನಿಲ್ಲ; ಹೀಗೆಯೇ ಕುಳಿತಿರುತ್ತದೆ; ನಾನೂ ಒಂದೊಂದು ಹನಿ ರಕ್ತ ಹೀರಿ ಅದಕ್ಕೆ ವೇದನೆಯೆನಿಸಿದಾಗ ಸರ್ರನೇ ಬಿರುಕಿನಲ್ಲಿ ಸೇರಿ, ಮರೆಸಿ ಮತ್ತೆ ರಕ್ತ ಕುಡಿದು ಪುನಃ ಬಿರುಕಿನಲ್ಲಿ ಸೇರಲುದ್ಯುಕ್ತವಾದರೆ, ಈ ಹೆಡ್ಡನ ಕೈಗೆ ಸಿಗುವ ಪ್ರಮೇಯವೇ ಇಲ್ಲ, ಹಸಿವಿನ ಹಂಗೇ ಇಲ್ಲದಂತೆ

ಅದರ ಚಲನ-ವಲನಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೆ. ಎಷ್ಟು ರಕ್ತ ಕುಡಿದರೂ ಅದರ ಹಸಿವೇ ಹಿಂಗದೇನೋ ಎಂಬಂತೆ ನೀವೆಷ್ಟು ಸಲ ಅದರೆಡೆಗೆ ನಿರ್ಲಕ್ಷದಿಂದಿರುತ್ತೀರೋ ಅಷ್ಟೂ ಸಲ ನಿಮ್ಮನ್ನು ಅದು ಎಳ್ಳಷ್ಟೂ ಕಡೆಗಣಿಸಲಾರದು. ಇದೇನು ಬರೀತಾ ಇದ್ದಾನೆ ಈ ಹುಚ್ಚ ಅಂತ ಅನಿಸಬಹುದು ನಿಮಗೆ. ಆದರೆ ನೀವೂ ತಿಗಣಿಯ ಕಾರ್ಯಾನುಭವದಲ್ಲಿ ಪಾಲ್ಗೊಂಡರೆ ನಾನು ಹೇಳಿದುದು ಸುಳ್ಳೆನಿಸಲಾರದೆಂದು ನಾನು ಭಾವಿಸುತ್ತೇನೆ.

ತಿಗಣಿ ರಕ್ತ ಹೀರುವುದರ ಅನುಭವ ಬಹಳ ಜನರಿಗಿರಬಹುದು. ಅದು ಕ್ಷುಲ್ಲಕ ಪ್ರಾಣಿಯಾದರೂ ನಿರ್ಲಕ್ಷಿಸಲಾಗದು. ಅದು ಹಾಗೆಯೇ ನಾಲ್ಕೈದು ಸಲ ನಿಮ್ಮ ರಕ್ತ ಹೀರಲು ಪ್ರಾರಂಭಿಸಿದಂತೆ ನಿಮ್ಮ ಸುಪ್ತ ಪ್ರಜ್ಞೆ ಜಾಗೃತಗೊಂಡು ಆ ತಿಗಣಿಯ ಕತೆಯನ್ನೇ ಮುಗಿಸಿ ಬಿಡಬೇಕೆನಿಸುತ್ತದೆ. ನೀವು ಜಪ್ಪಿಸಿ ಕುಳಿತು ಅದನ್ನು ಮೊದಲು ಹಿಡಿಯಲು ಅಥವಾ ಬಯಲಿಗೆಳೆಯಲು ಯೋಚಿಸುತ್ತೀರಿ. ಅದು ಪುನಃ ನಿಮ್ಮ ತೋಳ ಸಮೀಪ ಮೇಲೆ ಬಂದಾಗ ನಿಮ್ಮ ತೋಳನ್ನು ಅದಕ್ಕೆ ಸನಿಹವಾಗುವಂತೆ ಬಯಲಿಗೆ ಮುಂದೆ ಸರಿಸುತ್ತೀರಿ. ನೀವು ಹೆಡ್ಡರಿದ್ದಷ್ಟು ಈಗ ತಿಗಣಿ ಹೆಡ್ಡನಾಗಿರುವದಿಲ್ಲ; ಕ್ಷಣಕಾಲ ಅದು ತನ್ನ ಚಲನ ಪರಿಮಿತಿಯಂಚಿನಲ್ಲಿ, ನೀವು ಅದು ಎಣಿಸಿದಷ್ಟು ಎಚ್ಚರಗೊಂಡಿರುವಿರೋ ಹೇಗೆಂಬುದನ್ನು ಪರಿಶೀಲಿಸಲು, ನಿಲ್ಲುತ್ತದೆ. ಆಗ ನಿಮ್ಮ ಕೈ ಮೊದಲಿನಂತೆ ನಿಶ್ಚಲ ಸ್ಥಿತಿಯಲ್ಲಿಯೇ ಇದ್ದರೆ ಸರಿ, ಮೆಲ್ಲನೆ ನಿಮ್ಮ-ತೋಳನ್ನು ಕಚ್ಚಲು ಮುಂಚಲಿಸುತ್ತದೆ, ಅರೆಮನಸ್ಸಿನಿಂದ. ಅದು ಮೇಲೆ ಬಂದಿತೆಂದು ನೀವು ಒಮ್ಮೆಲೇ ಅದರ ಮೇಲೆರಗಿದರೆ ನೀವೆಷ್ಟೇ ತೀವ್ರ ಪ್ರಯತ್ನಪಟ್ಟರೂ ನಿಮ್ಮಿಂದದು ಕ್ಷಣದಲ್ಲಿಯೇ ಬಿರುಕಿನಲ್ಲಿ ಅದೃಶ್ಯಗೊಳ್ಳುತ್ತದೆ. ಇಷ್ಟಾದರೆ ಅದರ ಆಸೆಬುರುಕತನ ಮುಗಿದೇ ಹೋಯಿತೆಂದು ತಿಳಿಯುತ್ತೀರಾ? ಹಾಗಿದ್ದರೆ ಅದು ಸಂಪೂರ್ಣ ಭಾಗ ನಿಃಸಂಶಯವಾಗಿಯೂ ತಪ್ಪು.

ಅದು ಹೊಂಚು ಹಾಕುತ್ತಲೇ ಅಡಗಿರುತ್ತದೆ. ಆಗ ನೀವು ಏನು ತಿಳಿಯುತ್ತೀರಿ (ಸಾಮಾನ್ಯವಾಗಿ) ಮಾಡಿಕೆಯಾಗಿಯೆಂದರೆ, ತಿಗಣಿ ಹೆದರಿತು, ಇನ್ನು ನಿಮ್ಮ ಸಮೀಪವೇ 'ಹಾಯಂಲದು ಅನುಮಾನಿಸುತ್ತದೆ, ನಿಶ್ಚಿಂತೆಯಾಗಿನ್ನು ಆರಾಮ ಖುರ್ಚಿಯ ಮೇಲೆ ವಿಶ್ರಮಿಸಬಹುದು' ಎಂದಲ್ಲವೇ? ಅದಕ್ಕೂ ಗೊತ್ತು ನೀವೆಷ್ಟು ತೀಕ್ಷ್ಣಮತಿಗಳೆಂಬುದು. ನಿಮಿಷಾರ್ಧ ಸ್ಥಿತಪ್ರಜ್ಞನಂತೆ ಅದೂ ಸುಮ್ಮನಿರುತ್ತದೆ. ನಂತರ ನೀವು ನಿಮ್ಮ ಮೈಛಳಿಯನ್ನು ಬಿಟ್ಟಿದ್ದೀರಿ ಎಂದರಿತೊಡನೆಯೇ ನಿಮ್ಮ ತೋಳಿನ ಮೇಲೆ ದಾಳಿ ಮಾಡುತ್ತದೆ. ಈಗ ನೀವು ಮೊದಲಿನಷ್ಟು ನಿರ್ಲಕ್ಷರಾಗಿರುವುದಿಲ್ಲ. ನಃಸುಳುತ್ತ ಅದು ನಿಮ್ಮ ತೋಳ ಸಮೀಪ ಬಂದಂತೆ ಅದನ್ನು ಅನತಿದೂರಕ್ಕೆ ಅದಕ್ಕೆ ಗೊತ್ತಾಗದಂತೆ ಒಯ್ಯುತ್ತೀರಿ. ಸಂಗತಿಯೆಂದರೆ, ತಿಗಣಿಗಳೆಲ್ಲವೂ ತೀಕ್ಷ್ಣ ದೃಷ್ಟಿಯಿಂದಿರುತ್ತವೆಯೆಂದು ಹೇಳಲಾಗದು.

ಜಗತ್ತಿನ ಬಹ್ವಂಶ ಲಭ್ಯವಿರುವ ಆಹಾರವನ್ನು ಸೇವಿಸುವ–ಮಾನವ ಗಾತ್ರದ (ಅದರ ದೃಷ್ಟಿಯಲ್ಲಿ) ದೊಡ್ಡ ಪ್ರಾಣಿಯ ರಕ್ತವನ್ನೇ ಹೀರಲು ಸೃಷ್ಟಿಗೊಂಡಿರುವಂತಿರುವ ತಿಗಣಿ ಚಟುವಟಿಕೆಯಲ್ಲಿ ನಿರತಗೊಂಡಾಗ ಅದೆಷ್ಟು ಅಭಿಮಾನ ತಾಳುತ್ತದೆಯೆಂಬುದನ್ನು ಊಹಿಸಲು ಸಾಧ್ಯವೇ? ಶರಣರಿಗೆ ಮರಣ ಹೇಗೆ ಮಹಾನವಮಿಯಂತೆ ಅನಿಸುವದೆಂಬ ಪ್ರತೀತಿಯಿದೆಯೋ, ತಿಗಣಿಗೂ ರಕ್ತ ಹೀರುವಾಗಲೇ ಮಹಾನವಮಿಯೆನಿಸುವುದೆಂದು ನಾನು ದೃಢವಾಗಿ ತರ್ಕಿಸಬಲ್ಲೆನೆಂದೆನಿಸುತ್ತದೆ.

ಅಲ್ಲ, ಒಬ್ಬ ಮಾನವ ತನ್ನಂತೆಯೇ ಇರುವ ಇನ್ನೊಬ್ಬನನ್ನು ಸಮಯಾಸಮಯ ಹೊಂಚು ಹಾಕಿ ದುರ್ಬಲಗೊಳಿಸಿ ಶೋಷಣೆಗೊಳಪಡಿಸುವ ಮೂಲಕ ಹಿಂಸಿಸುತ್ತಾನೆಯೆಂದ ಮೇಲೆ, ಒಂದು ಸಣ್ಣ ತಿಗಣಿ ಒಂದೆರಡು ಹನಿ ರಕ್ತವನ್ನು ಅದಕ್ಕಿಂತಲೂ ಅದು

ದೇಹದಿಂದ ಇಲ್ಲ ತೋಳಿನಿಂದ ಹೀರಿದರೆ ಏನು ನಷ್ಟ, ಅಲ್ಲವೇ? ಒಂದೆರಡು ಹನಿ, ಅತೀಯೆಂದರೆ ಎಂಟು–ಹತ್ತು ಹನಿಗಳೆನ್ನಿ, ರಕ್ತದ ಬಿಂದುಗಳ ಹೊರತಾಗಿ ಅವನಿಂದ ಅದು ಏನನ್ನೂ ಕಿತ್ತುಕೊಳ್ಳುವುದಿಲ್ಲ. ಅದೇನು ಅವನ ಆಸ್ತಿ ಬೇಡುತ್ತದೆಯೋ? ಅವನ ಆಹಾರದಲ್ಲಿ ಏನಾದರೂ ಪ್ರತ್ಯಕ್ಷ ಪಾಲು ಬೇಡುತ್ತದೆಯೋ? ಏನೂ ಇಲ್ಲ. ತನಗೆ ಬೇಕಾದುದಷ್ಟನ್ನೇ ಅದು ಕಿತ್ತುಕೊಳ್ಳುತ್ತದೆ, ಮತ್ತೇನು ಬಾಕಿ ಅದಕ್ಕೆ? ಎಂದು ಕೇಳಬಹುದು. ಗಣನೆಗೆ ಬಾರದಷ್ಟು ಹಾನಿಗೊಳಗಾಗುತ್ತೇವೆ ನಿಜ; ಆದರೆ ಅದು ಹೀರುವ ರಕ್ತ ಮಹತ್ವವೆನಿಸುವುದಿಲ್ಲ; ಅದೆಷ್ಟೇ ಹೀರಿದರೂ ಯಾರೂ ಅಷ್ಟೊಂದು ಹಾನಿಯನ್ನನುಭವಿಸಲಾರರು. ಆದರದು ಉಂಟು ಮಾಡುವ ಸಂವೇದನೆಯ ತೀವ್ರತೆಯು ನಾವು ಅದನ್ನು ಕ್ಷಿಪ್ರವಾಗಿ ದ್ವೇಷಿಸುವಂತೆ ಮತ್ತು ಬೇಕೆನಿಸಿದರೆ ಅದು ಕಂಡ ತಕ್ಷಣವೇ ಕೊಲ್ಲುವಂತೆ ಪ್ರೇರೇಪಿಸುತ್ತದೆಯೆನ್ನುವಲ್ಲಿ ತಥ್ಯವಿಲ್ಲದೇಯಿಲ್ಲ!

ನಾನೇನು ಇಲ್ಲಿ ತಗಣೆಯ ಪುರಾಣ ಹೇಳುತ್ತಿದ್ದೇನೆಂದು ತಿಳಿಯಬೇಡಿ. ಒಂದು ತಗಣೆಯಂತಹ ಪ್ರಾಣಿಯಲ್ಲಿಯೂ ಸಹ ಯೋಜನಾಬದ್ಧ ಜೀವಸಂಚಾರ ಸ್ವಾಭಾವಿಕವಾಗಿ ಎಷ್ಟೊಂದು ಸಮರ್ಪಕ ರೀತಿಯಲ್ಲಿದೆಯೆಂದು ವಿಸ್ಮಯವಾಗುತ್ತದೆ. ಚೇಳು, ಹಾವುಗಳಂತಹ ತೆವಳು ಪ್ರಾಣಿಗಳು ಭಯ ಹುಟ್ಟಿಸಬಹುದಾದರೆ, ತಗಣೆ, ಸೊಳ್ಳೆ, ಚಿಕ್ಕಾಡುಗಳಂತಹ ಕ್ರಿಮಿಗಳು ಸಹಜವಾದ ತೀಕ್ಷ್ಣಭಾವನೆಯನ್ನು ಮಾನವರ ಹೃದಯಗಳಲ್ಲಿ ಮೂಡಿಸುತ್ತವೆ. ಯಾಕೆಂದರೆ ಅವು ಹೀರುವ ರಕ್ತದ ಪ್ರಮಾಣ ನಮ್ಮಲ್ಲಿ ಯಾವುದೇ ರೀತಿಯ ವೈರಭಾವನ್ನೆಸಗಲೆಳಸುವುದಿಲ್ಲವಾದರೂ ಅವು ಉತ್ಪತ್ತಿಸುವ ಸಂವೇದನೆಯ ಪರಿಮಾಣ ಪರಿಣಾಮಕಾರಿಯೆನಿಸುವಷ್ಟು ಮನದ ಭಿತ್ತಿಯ ಮೇಲೆ ಮರೆಯಲಾಗದ ಅನುಭವವುಂಟುಮಾಡುತ್ತದೆ. ಇಷ್ಟಿದ್ದರೂ ಒಮ್ಮೊಮ್ಮೆ ಅವುಗಳ ಬಗ್ಗೆ



ಅನುಕಂಪ ತೋರಿಸಬಹುದಾದವರಿಲ್ಲವೆಂದರೆ ತಪ್ಪಾದೀತು !

ನಾನು ಚಿಕ್ಕವನಿದ್ದಾಗೊಮ್ಮೆ ರಾತ್ರಿ ಸಮಯ ಚೇಳು ಕಡಿಸಿಕೊಂಡಿದ್ದರ ನೆನಪು ಈಗಲೂ ನನ್ನಲ್ಲಿ ಉದ್ವೇಗಪೂರಿತ, ಅವ್ಯಕ್ತ ಭಯವುಂಟುಮಾಡುತ್ತದೆ. ಅದೊಂದು ಎಂದೂ ಮರೆಯಲಾಗದ, ಕಡೆಗಣಿಸಲಾಗದಷ್ಟು ಮಾನಸಿಕ ವೇದನೆಯುಂಟುಮಾಡುವ ಕಹಿ ನೆನಪು. ಅದನ್ನು ನೆನೆದರೇನೇ ಮೈಯೆಲ್ಲ ರೋಮಾಂಚನಗೊಳ್ಳುತ್ತದೆ. ಆ ಚಿಕ್ಕ ಪ್ರಾಣಿಯಲ್ಲಿ ಎಷ್ಟು ವಿಷತುಂಬಿದೆಯೆನಿಸುವುದಲ್ಲವೇ? ಎಷ್ಟೆಂದರೂ ಮಾನವನಷ್ಟು ವಿಷಕಾರಿಯಲ್ಲವೆನಿಸುತ್ತದೆಯೀಗ. ಮನಃಪಟಲದ ಮೇಲೆ ಅಸೂಯೆಯನ್ನು (ಮೂಡಿಸುವ) ಕುದುರಿಸುವ ತಿಗಣೆ ಎಷ್ಟು ತರ್ಕವಿತರ್ಕವಾಗಿ ವರ್ತಿಸುತ್ತದೆಯೆಂದು ಆಶ್ಚರ್ಯವಾದುದೂ ಉಂಟು ನನಗೆ.



"ಹೊತ್ತು ಬಂದಾಗ ಕತ್ತೆಯ ಕಾಲನ್ನು ಹಿಡಿಯಬೇಕು" ಎಂದಿದ್ದಿರಲ್ಲ ! ಅದಕ್ಕೇ ನಾನು ನಿಮ್ಮ ಕಾಲನ್ನು ಹಿಡಿಯಲು ಬಂದಿರುವೆನು, ಮಾರ್ಕ್ಸ್ ಕಾರ್ಡ ಸಹಿತ.


ಏನೇ ಅಹಿಂಸಾವಾದಿಯಿದ್ದಾನೆಂದರೂ ತಿಗಣೆಯ ರಕ್ತ ಹೀರುವಿಕೆಯಿಂದ ಅವನಲ್ಲಿ ಇಂತಹ ತೀಕ್ಷ್ಣ ಸಂವೇದನೆಯ ಪರಿಣಾಮವಾಗಿ ಕನಿಷ್ಟವಾದ ಕೋಪೋದ್ರಿಕ್ತ ಮಾನಸಿಕ ಅನಿಸಿಕೆ ಎಳ್ಳಷ್ಟು ಮೂಡಲಾರದೆಂದರೆ ಅದು ಒಪ್ಪಲಸಾಧ್ಯ ಮಾತು. ಆ ತೆರನಾದ ಅನಿಸಿಕೆ ಮೂಡಿಯೇ ಮೂಡುತ್ತದೆಂದು ನಾನು ಊಹಿಸುತ್ತೇನೆ; ನನ್ನ ಊಹೆ ಸರಿಯೋ, ತಪ್ಪೋ, ನಾನರಿಯೆ. ಆದರೆ ಸಾಮಾನ್ಯವೆಂಬಂತೆ ಬಹುತೇಕ ಜನರು ತಿಗಣೆಯನ್ನು ಕಂಡೊಡನೆ ಅದನ್ನು ಅರೆದು ಕೊಲ್ಲಲಿಚ್ಛಿಸುತ್ತಾರೆ. ಗೋಡೆಯ ಸಂದಿನಲ್ಲಡಗಿದ್ದರೆ ರಾತ್ರಿ ವೇಳೆ ಹಳ್ಳಿಗಳಲ್ಲಿ ಹೆಚ್ಚಾಗಿ ಈಗಲೂ ಕೂಡ ಹೆಣ್ಣು ಮಕ್ಕಳು ಚಿಮಣಿಯ ದೀಪದ ಕುಡಿ ಹಿಡಿದು ಅವು ಇದ್ದಲ್ಲಿಯೇ ಸುಟ್ಟು ಹೋಗುವಂತೆ ಮಾಡುತ್ತಾರೆ. ಅದರಲ್ಲೂ ಈ ಬೇಸಿಗೆ ಕಾಲದಲ್ಲಿ ಅವುಗಳ ಕಾಟ ಹೇಳತೀರದು. ನಾಗರಿಕತೆ ತಲೆಯೆತ್ತಿರುವ ನಗರಗಳಲ್ಲಿ, ಪಲ್ಲಂಗಗಳ, ಗೋಡೆಗಳ, ಖುರ್ಚಿ–ಮೇಜುಗಳ ಸಂದು–ಗೊಂದುಗಳಲ್ಲಿ ವಾಸಗೊಂಡಿರುವ ಅವುಗಳನ್ನು ಕ್ರಿಮಿನಾಶಕ, ವಿಶೇಷವಾಗಿ ತಗಣಿನಾಶಕ ರಸಾಯನಿಕಗಳಿಂದಲೇ ಸುಲಭವಾಗಿ ನಿರ್ಮೂಲನಗೊಳಿಸಲು ಸಾಧ್ಯವಿದ್ದು, ಅವುಗಳ ಬಗ್ಗೆ ಕೇವಲ ಕೆಲವೇ ಸಾಧು–ಸಂತರು, ಅಹಿಂಸಾವಾದವನ್ನಾಚರಿಸುವವರನ್ನುಳಿದು ಯಾರಲ್ಲಿಯೂ ಸದಭಿಪ್ರಾಯ ಮೂಡಲಾರದಲ್ಲವೇ ?

ಅಹಿಂಸೆಯನ್ನು ಆಚರಿಸಲಿಚ್ಛಿಸಿದವರಲ್ಲಿ ನಾನೂ ಒಬ್ಬ, ಆದರೆ ಸಿದ್ಧನಲ್ಲ. ಮೊದಲೇ ಹೇಳಿದೇನಲ್ಲ, ಒಂದೆರಡು ಮೂರು ಸಾರಿ ಸುಮ್ಮನಿರಲು ಸಾಧ್ಯವೆಂದು. ಆರಾಮ ಖುರ್ಚಿಯ ಮೇಲೊರಗಿ ಪುಸ್ತಕ ಓದುತ್ತಾ ಕುಳಿತಾಗ ನಿದ್ರೆಯ ಮಂಪರು ಆವರಿಸಿ ನನ್ನ ದೇಹ ನಿಶ್ಚಲಗೊಂಡಿರಲು ಖುರ್ಚಿಯ ಕೈಗಳ ಮೇಲೆ ಚೆಲ್ಲಿದ ನನ್ನ ತೋಳುಗಳನ್ನು, ಸಂದಿನಿಂದ ಕಳ್ಳನಂತೆ ಬಂದು, ತಿಗಣೆ ಕಚ್ಚಿದಾಗ

ಒಮ್ಮೆಲೇ ಆವೇಶಯುಂತ ವೇದನೆಯುಂಟಾಗುತ್ತದೆ. ತಕ್ಷಣ ಎದ್ದು ನೋಡಿದರೆ ಅದು ಮಾಯವಾಗಿರುತ್ತದೆ. ಅದೇ ಕೋಪೋದ್ರೇಕದಲ್ಲಿ ಒಂದು ಬಿರುಸಾದ ತಿಳು ಕಡ್ಡಿಯನ್ನು ಖುರ್ಚಿಯ ಸಂದಿನಲ್ಲಿ ತುರುಕಿ ಅಲ್ಲಿ ತಂಗಿದ ತಿಗಣೆವಂಶವೇ ಸಮೂಲ ನಿರ್ನಾಮವಾಗಲೆಂದು ಸರಿಸಿದುದೂ ಉಂಟು. ಕಡ್ಡಿಯ ಸರಿಸಂವಿಕೆಯ (ಅವುಗಳಿಗನಿಸಬಹುದಾದ) ಬಲಪಾದ ಪರಿಣಾಮ ಕೆಲವು ತಿಗಣೆಗಳಿಗೆ ಮಾತ್ರ ಮೃತ್ಯು. ಉಳಿದವು ಪಾರ್ಶ್ವ ಸಂದುಗಳಲ್ಲಿ ತೆವಳುತ್ತ ಹೋಗುವ ದೃಶ್ಯ ಕಂಡಾಗ, "ಅಸಹಾಯಕ ಪ್ರಾಣಿಗಳು, ಎಷ್ಟೊಂದು ಅನ್ಯಾಯ ಮಾಡಿದೆನಲ್ಲಾ" ಎಂದು ಖೇದವೆನಿಸಿದುದೂ ಉಂಟು. ಆದರೆ ಅವುಗಳುಂಟು ಮಾಡಿದ ಇರಿತದ ನೆನಪು ಮರುಕಳಿಸುತ್ತಲೇ ಅವುಗಳನ್ನು ಉಳಿಸಲೇಬಾರದೆಂಬ ಛಲ ಮೂಡಿ ಪುನಃ ಕಡ್ಡಿ ಹಾಯಿಸಿದ ನಂತರ ಮನದ ತೆರೆಯ ಮೇಲೆ ಮೂಡಿದ ಸೇಡಿನ ಭಾವ ಮರೆಯಾಗುತ್ತಿದ್ದಂತೆ ಮತ್ತೆ ಅನುಕಂಪದ ತೆರೆಗಳೇಳುತ್ತವೆ. ಎಷ್ಟೋ ವೇಳೆ ತೋಳುಗಳ ಮೇಲೆ, ಅರಿವೆಗಳ ಮೇಲೆ ಹರಿದಾಡುವಾಗ ಕೈಗೆ ಸಿಕ್ಕ ತಿಗಣೆಗಳನ್ನು ಬದುಕಿಕೊಳ್ಳಲಿಯೆಂದು ಹೊರಗೆ ಸಜೀವವಾಗಿ ಒಗೆದದ್ದೂ ಉಂಟು. ಒಗೆದು ತಿರುಗಿ ಬರುವಾಗ ಒಳದನಿಯೊಂದು, "ನೀನು ಮಾಡಿದುದಾದರೂ ಮಹಾ ಕೆಲಸವೇನು ? ನಿಮ್ಮಂತಹ ಘನ ಜೀವಿಗಳ ರಕ್ತವೇ ಅದರ ಆಹಾರವಾಗಿರುವಾಗ ಹೊರಚೆಲ್ಲಿದ ಅದಕ್ಕೆ ಈಗ ಅಶನವೇನು ? ನೀನೇ ಕೈಯಾರೆ ಕೊಂದಿದ್ದರೆ ಚೆನ್ನಿತ್ತಲ್ಲವೇ ! ನಿನ್ನ ಉದಾತ್ತ ಉದ್ದೇಶಕ್ಕೇನು ಬೆಲೆ ?" ಎಂದು ಪ್ರಶ್ನಿಸಿದಂತೆ ಭಾಸವಾಗಿ, ಆ ಪ್ರಶ್ನೆಯನ್ನೇ ತಿರಸ್ಕಾರದಿಂದ ಕಡೆಗಣಿಸಿದ್ದೆನಾದರೂ ಮನಸ್ಸು ಏನೋ ಅಳುಕಿನಿಂದ ಹೊರತಾಗಿದ್ದಿಲ್ಲ. ನಾನೇನೂ ಕೊಲ್ಲಲಿಲ್ಲವಲ್ಲ ಎಂಬ ಸಮಾಧಾನ ಆ ಅಳುಕಿನಿಂದ ನನ್ನನ್ನು ದಾಟಿಸಿತ್ತು.

ಒಂದು ಮಧ್ಯಾಹ್ನ ಊಟ ಮುಗಿಸಿ ಏಳುತ್ತಿದ್ದಂತೆ ಬನಿಯನ್ನಿನ ಮೇಲಿನಿಂದ ಕೆಳಗೆ ತೋಳಿನ ಮೇಲೆ ಚಲಿಸುತ್ತಿದ್ದ ಒಂದು ಒಣ ಬಡಕಲು ತಿಗಣೆ ಕಣ್ಣಿಗೆ ಬಿದ್ದಾಗ ಅದನ್ನು, ಕೊಲ್ಲಲು ಮನವೊಪ್ಪದೆ, ಹಿತ್ತಿಲಿಗೆ ಹೋಗಿ ಬಿಸಿಲಿಗೆ ಚಾಚಿ ಬಿದ್ದಿದ್ದ ಕಲ್ಲು ಪಾಟಿಯ ಮೇಲೆ ಕೊಡವಿದೆ. ಮೊದಲೇ ಆ ಕಲ್ಲು ಸೂರ್ಯನ ಪ್ರಖರೋಷ್ಣದಿಂದ ಸುಡುತ್ತಿದ್ದುದು ನನ್ನ ವಿವೇಕಕ್ಕೆ ಬಾರದೇ ಹೋಗಿ, ಅದರ ಮೇಲದು ಅತ್ಯಂತ ಸಾವಧಾನವಾಗಿ ಒಂದೆರಡು ಹೆಜ್ಜೆ ಮುನ್ನಡೆದಂತೆ, ಅದರ ದೇಹವೆಲ್ಲ, ಉಷ್ಣದ ಪ್ರಖರತೆಯನ್ನು ತಾಳಲಾರದೇ, ಮುದುಡಿದಂತಾಯಿತು. ಪ್ರೇಕ್ಷಕನಂತೆ ವೀಕ್ಷಿಸುತ್ತಾ ನಿಂತಿದ್ದ ನಾನದನ್ನು ತೀರ ಸನಿಹದಿಂದ ನಿರುಕಿಸಿದಾಗ ಅದರ ಪ್ರಾಣ ಪಕ್ಷಿ ಹಾರಿ ಹೋಗಿದ್ದುದು ಗೋಚರಿಸಿತು. ಮನ ಕ್ಷಣ ಹೊತ್ತು ಅತ್ಯಂತ ವಿಷಣ್ಣಗೊಂಡಿತ್ತು. ನಾನೂ ಪ್ರಖರೋಷ್ಣಮಯವಾದ ಈ ಜೀವನದ ಸುಡುವ ಹಾಸುಗಲ್ಲಿನ ಮೇಲೆ ನಡೆಯುವುದು ಇಷ್ಟೇಯೇನೋ ಬಹುಶಃ ಎಂಬ ಕಳವಳದ ಖಿನ್ನ ಮನದೊಂದಿಗೆ ಒಳ ಬಂದೆ. ನನ್ನ ಖಿನ್ನ ಮನಸ್ಕತೆಯ ಮಹತ್ವವಾದುದಾದರೂ ಎಷ್ಟು ?

ಅಲ್ಡಸ್ ಹಕ್ಸಲೆಯ ಮಾತು, "Man is a helpless creature in the hands of unseen force that rules the universe" ಸ್ಮರಿಸುತ್ತಿದ್ದಂತೆ, ನನ್ನನ್ನು ನನ್ನ ಕೈಯಲ್ಲಿದ್ದ ಆ ಅಸಹಾಯಕ ತಿಗಣೆಯೊಂದಿಗೆ ಹೋಲಿಸಿದಾಗ ನಾವೂ ಜಗತ್ತನ್ನಾಳುವ ಅದೃಶ್ಯ ಶಕ್ತಿಯ ಕೈಗಳಲ್ಲಿ ಅಸಹಾಯಕ ಪ್ರಾಣಿಗಳೇ ! ಎಂದನಿಸುತ್ತದೆಯಲ್ಲವೇ ?


ನಿಮ್ಮದನ್ನಾಗಿ
ಮಾಡಿಕೊಳ್ಳಿರಿ
ದಾವಣಗೆರೆ
ನಿಮ್ಮ ಹಣಕ್ಕೆ ಅಧಿಕ ಮೌಲ್ಯ ಪಡೆಯಿರಿ
MONSIEUR ಮ್ಯಾಶೆ
ಟೆರೀನ್ ಕಾಟನ್ ಸೂಟಿಂಗ್
RAMSON ರ್ಯಾಮ್ಸನ್
'ಟೆರೀನ್' ಕಾಟನ್ ಸೂಟಿಂಗ್
DAVARIN ದಾವರಿನ್
'ಟೆರೀನ್' ಕಾಟನ್ ಶರ್ಟಿಂಗ್
DAVANJOY ದಾವಣ್‌ಜಾಯ್
'ಟೆರೀನ್' ಕಾಟನ್ ಶರ್ಟಿಂಗ್
ಟ್ರೇಡ್‌ಮಾರ್ಕ್
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿಮಿಟೆಡ್
ದಾವಣಗೆರೆ, ಕರ್ನಾಟಕ
ಇಲ್ಲಿ ಪರಂಪರೆಯು ಆಧುನಿಕತೆಯ ರೂಪವನ್ನು ಧರಿಸುತ್ತದೆ

ಕೆ. ಜಿ. ಕುಂದಣಗಾರ

ಚಹದೇವ ಮಹಾತ್ಮ್ಯ

ಹೊಸಗನ್ನಡ ಗದ್ಯವು ಇನ್ನೂ ನಿಶ್ಚಿತ ರೂಪುದಳೆಯುತ್ತಿದ್ದ ಅವಸ್ಥೆಯಲ್ಲಿ ಹಾಗೆ ಬರೆಯಲಾದ ಲಘುಪ್ರಬಂಧದ ಮಾದರಿ ಇಲ್ಲಿದೆ. ೧೯೨೭ ರಲ್ಲಿ 'ವಾಗ್ಭೂಷಣ'ದಲ್ಲಿ ಪ್ರಕಟವಾದ ಇದನ್ನು ಬರೆದವರು ಮುಂದೆ ಹೆಸರಾಂತ ಕನ್ನಡ ಪ್ರಾಧ್ಯಾಪಕರೂ ಸಂಶೋಧಕರೂ ಎನಿಸಿದ ದಿ. ಕುಂದಣಗಾರರು.

ಎಲೈ ಚಹದೇವನೆ, ನಿನ್ನ ಮಹಿಮೆಯನ್ನು ಎಷ್ಟೆಂದು ವರ್ಣಿಸಲಿ! ಬೆಟ್ಟದಲ್ಲಿ ಹುಟ್ಟಿ ಬೆಳೆದರೂ ಕಾಡುಮನುಜನಾಗಲಿಲ್ಲ. ಐರೋಪ್ಯರಿಂದ ಬೆಳವಣಿಗೆಯನ್ನು ಹೊಂದಿದರೂ ಎಲ್ಲ ಕೂಲಿಕಾರರಿಗೂ ಬೇಕಾದೆ. ಕಪ್ಪುಬಣ್ಣದ ಕೂಲಿಕಾರರಿಂದ ಪೋಷಿತನಾಗಿದ್ದರೂ ವಿದ್ಯಾಧರರಿಗೆ ಪ್ರಿಯನಾದೆ. ನೀನು ಕಪ್ಪುಬಣ್ಣದವನಾದರೂ ಸಮಭಾವದಿಂದ ಎಲ್ಲರನ್ನೂ ಸೇವಿಸುವೆ. ಸೊಪ್ಪು ಸೊವಡಾದರೂ ಪೀತವರ್ಣಜವರಿಗೆ ಶಾಕಾಹಾರದವನಾದೆ. ಸುಕರ್ಗೊಂಡಿದ್ದರೂ ನಿನ್ನ ಸೇವನೆಯಿಂದ ಜನರಲ್ಲಿ ಉತ್ಸಾಹವನ್ನುಂಟುಮಾಡುವೆ. ಬ್ರುಕ್ಕನ ಬಂಧನವೆನ್ನಿಸಿಕೊಂಡರೂ ಮುಕ್ತನಾಗಿ "ಚಳಿಜ್ವರವನ್ನು ಕಂಡಿಸುತ್ತೆ" ಎಂದು ಹೊಗಳಿಸಿಕೊಂಡೆ. ತುಟಿಗಳಿಗೆ ಭಾರವೆಂದೆನ್ನಿಸಿದರೂ (Lipton) ತುಟಿಗಳ ಮೇಲೆ ಮುತ್ತುಗಳನ್ನು ಕುಳ್ಳಿರಿಸುವೆ. ಗುಲಾಬಿಯೆಂಬ ಹೆಸರಿನಂತೆ ಕೆನ್ನೆಗಳ ಮೇಲೆ ರಕ್ತಿಮೆಯನ್ನುಂಟು ಮಾಡುವೆ. ನೀಲಗಿರಿಯೆಂಬ ಹೆಸರಿನಿಂದ ಕ್ಷಂಥೆಯೆಂಬ ಶರಾವತಿಯನ್ನೂ ಅಡ್ಡಗಟ್ಟುವೆ. ಕಾಂಗೋ ಎಂಬ ಹೆಸರಿಂದ ದೂರ ದೂರ ದೇಶಗಳಲ್ಲಿ ಸಂಚರಿಸುವೆ. ಸೈನ್ಯ-ನೌಕಾಸೈನ್ಯವೆಂಬ ಹೆಸರಿನಿಂದ (Army and Navy) ಜಗತ್ತನ್ನೇ ಜಯಿಸಿದೆ. ಕಿತ್ತಳೆಯ ಪೈರೆಂಬ ಹೆಸರಿನಿಂದ ಎಲ್ಲವನ್ನೂ ಕಿತ್ತುಹಾಕಲನುವಾದೆ. ಬಹಳ ಮಾತುಗಳಿಂದೇನು! ನಟ್ಟು ಕಡಿಯುವವನಿಗೂ ಕೂಡ ನೆಹರೆಯ ಸಾಧನವಾದೆ.

ಸತ್ವಶಾಲಿಯೇ, ಹಿಂದುಸ್ತಾನದಲ್ಲಿ ಎಲ್ಲ ಕಡೆಯಲ್ಲಿಯೂ ಐಕ್ಯ ಐಕ್ಯವೆಂದು ಕೇಳಬರುತ್ತಿರುವ ಕೂಗನ್ನು ಅಡಗಿಸಲು ನೀನೇ ಕಾರಣನು. ಪಾಶ್ಚಾತ್ಯರು, ಪೌರ್ವಾತ್ಯರು, ಹಿಂದೂ ಮುಸಲ್ಮಾನರು ಬ್ರಾಹ್ಮಣ ಬ್ರಾಹ್ಮಣೇತರರು, ಪಾರ್ಸೀ ಕ್ರೈಸ್ತರು, ಕಾಂಗ್ರೆಸ್-ಸ್ವತಂತ್ರರು, ಉಗ್ರ-ಪ್ರಾಗತಿಕರು ಮುಂತಾದವರು ತಮ್ಮ ತಮ್ಮ ಭೇದಭಾವಗಳನ್ನು ಮರೆಮರೆದು ಒಂದೇ ಮೇಜಿನ ಮೇಲೆ ನಿನ್ನ ಸೇವನೆಯನ್ನು ಮಾಡುವದೆಂದರೆ ಐಕ್ಯವಲ್ಲವೇ! ಮುಂಜಾವಿನಿಂದ ಸಂಜೆಯವರೆಗೆ ಎಷ್ಟೇ ವೈರತ್ವವನ್ನು ಸಾಧಿಸುತ್ತಿದ್ದರೂ ಸಂಜೆಗೆ ದೇವಾಲಯದಲ್ಲಿ ಹಸ್ತಾಂದೋಲನ ಮಾಡಿ ಮಿತ್ರರಾಗಬೇಕೆಂದು ಕ್ರೈಸ್ತರ ಧರ್ಮವು ಬೋಧಿಸುವದು. ಆದರೆ ಮುಂಜಾನೆಯಿಂದ ಸಂಜೆಯವರೆಗೆ ಒಂದೇ

ಮೋಜಿನಮೇಲೆ ಭಿನ್ನ ಭಿನ್ನ ಜಾತಿಯವರು ತಮ್ಮ ಜಾತಿಮತ್ಸರಗಳನ್ನು ಮರೆದು, ಭಿನ್ನ ಭಿನ್ನ ದೇಶದವರು ತಮ್ಮ ವೈರತ್ವವನ್ನು ಮರೆದು ನಿನ್ನ ಸೇವನೆಯನ್ನು ಮಾಡುವದು ಎಂಥ ಉದಾರ ಧರ್ಮತತ್ವವು! ಎಷ್ಟು ಸ್ಥಿರ ವಾದ ಐಕ್ಯವನ್ನು ಬೆಳೆಯಿಸುವದು! ನೀನೇ ವಸುಧೈವ ಕುಟುಂಬಕನು! ಐಕ್ಯವನ್ನು ಬೆಳೆಯಿಸಲಿಕ್ಕೆ ಉಗಿಬಂಡೆಯು ಒಂದು ಕಾರಣ ವಾಗಿತ್ತು. ಅದಕ್ಕೆ ಸಹಾಯಮಾಡಲು ನೀನು ಲಗುಬಗೆಯಿಂದ ಓಡಿ ಬಂದೆ. ಇನ್ನು ಮೇಲೆ ಈ ಕಾರ್ಯಕ್ಕೆ ಅನ್ಯ ಉಪಾಯಗಳ ಕಾರಣವೇ ಇಲ್ಲ. ತೀವ್ರವಾಗಿಯೇ ನಮಗೆ ಸ್ವರಾಜ್ಯವು ದೊರೆಯುವದು. ನಮಗೆ ಸುದರ್ಶನ ಚಕ್ರವೂ ಬೇಡ, ಖಾದಿಪ್ರಸಾರವೂ ಬೇಡ. ಒಕ್ಕಲತನದ ಏಳ್ಗೆಯೂ ಬೇಡ. ಔದ್ಯೋಗಿಕ ಶಿಕ್ಷಣವೂ ಬೇಡ. ನ್ಯಾಯವಿಧಾಯಕ ಸಭೆಗಳಲ್ಲಿ ಮಾತಾಡಬಾರದೆಂಬ ಛಲವೂ ಬೇಡ. ನ್ಯಾಯ ವಿಧಾಯಕ ಸಭೆಗಳಿಗೆ ನಮ್ಮ ಪ್ರತಿನಿಧಿಗಳನ್ನು ಕಳುಹುವದೂ ಬೇಡ.

ಮಹಾಪ್ರಭೋ, ನಿನ್ನ ಆಗಮನದಿಂದ ಸಮಾಜದಲ್ಲಿ ಎಷ್ಟು ದೊಡ್ಡ ಕ್ರಾಂತಿ-ಯುಂಟಾಗಿದೆ! ಅತಿಥಿ ಅಭ್ಯಾಗತರು ಬಂದರೆ ಅವರ ದೆಶೆಯಿಂದ ಮೃಷ್ಟಾನ್ನ ಪಕ್ವಾನ್ನಗಳು ಬೇಡ. ಅವರಿಗೆ ಸ್ನಾನವಂದನೆಗಳು ಬೇಡ. ಅವರಿಗೆ ಕೈಕಾಲು ತೊಳೆದುಕೊಳ್ಳಲು ನೀರು ಕೂಡ ಬೇಡ. ಒಂದು ಕಪ್ಪು ಚಹವಾದರೆ ಅದರಲ್ಲಿ ಎಲ್ಲವೂ ಬಂದಿತು. ಅತಿಥಿಗಳನ್ನು ಸತ್ಕರಿಸುವದೇ ನಮ್ಮ ಧರ್ಮವು ಯಾಕಂದರೆ–

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿ
ನಿವರ್ತತೇ।
ಸತಸ್ಮೈದುಷ್ಕೃತಂ ದತ್ವಾ ಪುಣ್ಯ-
ಮಾದಾಯ ಗಚ್ಛತಿ॥

ಎಂದು ನಮ್ಮ ಶಾಸ್ತ್ರಗಳು ಸಾರಿ ಹೇಳುತ್ತವೆ. ಆದ್ದರಿಂದ ಅತಿಥಿಗಳನ್ನು ಸತ್ಕರಿಸುವದಕ್ಕೆ ಸಾಧನವಾದ ಚಹದೇವನೇ ನಿನಗೊಂದು ನಮಸ್ಕಾರವು.

ಮದುವೆ ಮುಂಗಲ ಕಾರ್ಯಗಳಲ್ಲಿಯೂ

ನೀನು ಬಹು ದೊಡ್ಡ ಕ್ರಾಂತಿಯನ್ನುಂಟು ಮಾಡಿರುವೆ. ಪೂರ್ವದ ಎಂಟೆಂಟು ದಿವಸಗಳ ವರೆಗೆ ನಡೆಯುತ್ತಿರುವ ಈ ಸಮಾರಂಭಗಳು ನಿನ್ನ ಆಶೀರ್ವಾದದ ಬಲದಿಂದ ಈಗ ಒಂದು ದಿವಸದಲ್ಲಿಯೇ ಮುಗಿದುಹೋಗುತ್ತವೆ. ಈ ಎಂಟು ದಿವಸಗಳ ವರೆಗೆ ನಡೆಯುತ್ತಿದ್ದ ಊಟದ ಸಮಾರಂಭಗಳಲ್ಲಿ ಬರುತ್ತಿದ್ದ ಜಿಲೇಬಿ ಚಕ್ಕಲಿಗಳೂ, ಲಡ್ಡುಗೆ ಗುಳ್ಳೋರಿಗೆಗಳೂ, ಪೂರಿಕೆ ದೋಸೆಗಳೂ, ಹೋಳಿಗೆ ಕಡಬುಗಳೂ, ಸೇವಿಗೆ ಗವಲಿಗಳೂ, ತುಪ್ಪ ಕ್ಷೀರಗಳೂ, ಹಪ್ಪಳ ಸಂಡಿಗೆಗಳೂ, ಚಟ್ನಿ ಉಪ್ಪಿನಕಾಯಿಗಳೂ (ವಾಚಕ ಮಹಾಶಯರೇ ತುಸು ತಡೆಯಿರಿ. ನೀರೊಡೆಯುತ್ತಿರುವ ಬಾಯಿಯನ್ನು ತುಸು ಬಿಗಿ ಹಿಡಿಯಿರಿ, ಚಹ ಬರುವದು.) ಚಹದೇವನೇ, ನಿನ್ನ ಪ್ರತಾಪದಿಂದ ಓಡಿ ಹೋದವು. ಇಷ್ಟೇ ಏಕೆ? ಭೂರಿ ದಕ್ಷಿಣೆಯಿಂದ ತೃಪ್ತರಾಗುತ್ತಿದ್ದ ವೈದಿಕ ಬ್ರಾಹ್ಮಣ ಕೂಡ ಚಹವೆಚ್ಚಕ್ಕೆ ಸಾಕಾಗುವಷ್ಟು ಸಂಭಾವನೆಯು ದೊರೆತರೆ ದಕ್ಷಿಣಾಃ ಪಾಂತು ಚಹೇದಯಂ ಚಾಸ್ತು। ಎಂದು ಆಶೀರ್ವದಿಸಿ ಚಹದ ಡೇಗುಗಳನ್ನೇ ತೇಗುತ್ತ, ಚಂಡಿಕೆಯ ಮೇಲೆ ಕೈಯಾಡಿಸುತ್ತ ನಮ್ಮ ಯಜಮಾನನು ಬಹು ದೊಡ್ಡವನೆಂದು ಕೀರ್ತಿಸುತ್ತ ದಾರೀ ಹಿಡಿಯುವರು. ಇದೇನು ಸಾಮಾನ್ಯವೇ! ಚಹದೇವಾಯ ನಮಃ.

ದೇವಾಧಿದೇವನೇ. ಸ್ತ್ರೀಯರು ಗೌರಿಯ ಉತ್ಸವದಲ್ಲಿ ಅರಿಷಿಣ ಕುಂಕುಮಕ್ಕೆಂತ ಹೋದ ಹೋದಲ್ಲಿ, ಅರಿಷಿಣ-ಕುಂಕುಮಗಳೊತ್ತಟ್ಟಿಗುಳಿದು ಗೌರಿಯಾರಾಧನೆಯ ಬದಲಾಗಿ ಚಹಾರಾಧನೆಯೇ ನಡೆಯುವದು. ಸುವಾಸಿನಿಯರು ತಮ್ಮ ಕೋಮಲ ಕರಪಲ್ಲವಗಳಿಂದ ಬಟ್ಟಲುಗಳನ್ನೆತ್ತಿ ಚಹಪಾನ ಮಾಡಿದ ಮೇಲೆ ಮುಖದ ಮೇಲೆ ಬಂದಿರುವ ಬೆವರು ಹನಿಗಳನ್ನು ತಮ್ಮ ಸ್ವಚ್ಛವಾದ ಕರವಸ್ತ್ರಗಳಿಂದ ಒರಸಿಕೊಂಡು ಆರಕ್ತವಾದ ಕೆನ್ನೆಗಳಿಂದ ತಮ್ಮ ಸೌಂದರ್ಯವನ್ನು ಇಮ್ಮಡಿಗೊಳಿಸಿ, ಹಸಿತಮುಖರಾಗಿ ತೃಪ್ತಿಯನ್ನು ವ್ಯಕ್ತಗೊಳಿಸಿದ ಕೂಡಲೇ ಯಜಮಾನಿಯು

ಳಾದಳು. ಗೌರಿಯೂ ಸಂತುಷ್ಟಳಾದಳು. "ಸಾವಿತ್ರೀಬಾಯಿಯವರೇ, ಹೋಗಿಬರುತ್ತೇನೆ. ಚಹವು ಬಹಳ ಸೆಟ್ಟಗಾಗಿತ್ತು. ನಾನು ಎಷ್ಟು ಪ್ರಯತ್ನ ಮಾಡಿದರೂ ನೋಡಿರಿ, ನಮ್ಮ ಮನೆಯಲ್ಲಿ ಚಹವು ಹೀಗಾಗುವದೇ ಇಲ್ಲ," ಎಂದು ರಂಗೂಬಾಯಿಯವರೆಂದ ಕೂಡಲೇ ಸಾವಿತ್ರೀಬಾಯಿಯವರು ಹಿರಿಹಿರಿ ಹಿಗ್ಗಿ, ಆ ಉಬ್ಬಿನಲ್ಲಿ ಅರಿಷಿಣ ಕುಂಕುಮವನ್ನು ಮರತೇ ಬಿಟ್ಟು ರಂಗೂಬಾಯಿಯವರನ್ನು ಬಾಗಿಲವರೆಗೆ ಹೋಗಿ ಕಳುಹಿಸಿ ಒಳಗೆ ಬರುವರು. ಅರಿಷಿಣ ಕುಂಕುಮವನ್ನು ಮರೆಯಿಸುವದರಿಂದ ಚಹದೇವನಿಗೊಂದು ನಮಸ್ಕಾರವು.

ಹಳ್ಳಿಗಳಲ್ಲಿ ಸೋಮವಾರವು - ಬಿಡುವು. ರೈತರಿಗೆ ಕೆಲಸವಿಲ್ಲ. ಹುಡುಗರು ದನಗಳನ್ನು ಬಿಟ್ಟುಕೊಂಡು ಹೋಗುವರು. ಉಳಿದವರು ಇಡೀ ದಿವಸವನ್ನು ಮನೆಯಲ್ಲಿ ಕೂತುಕಳೆಯುವದು ಕಷ್ಟ. ಈರಪ್ಪನು ಬಸಪ್ಪನ ಮನೆಗೆ ಹೋಗಿ ಲಕ್ಷ್ಮಿಯ ಜಾತ್ರೆಯ ವಿಷಯವನ್ನೆತ್ತಿ ಮಾತಾಡಿ, ಸಿದ್ದಪ್ಪನ ಮನೆಯಲ್ಲಿ ಎಲ್ಲರೂ ಸೇರುವರು, ಅಲ್ಲಿಗೇ ಹೋಗೋಣವೆಂದು ಹೊರಡುವರು. ಸಿದ್ದಪ್ಪನು ಧನಿಕನಿದ್ದುದರಿಂದ ಎಲ್ಲರೂ ಅಲ್ಲಿ ಕೂಡುವದು ಸಹಜ. ಗೌಡರ ಚನ್ನಣ್ಣನೂ ಬರುವನು. ಮಾತುಗಳು ನಡೆನಡೆದು ಹೊಗೆಸೊಪ್ಪಿನಿಂದ ಬೇಸತ್ತು ಗೌಡರು, "ಏನಪ್ಪಾ ಸಿದ್ದಪ್ಪಾ, ಯಾಕೋ ಬೇಸರ ಬರುತ್ತಿದೆ. ಚಹವಾದರೆ ಒಳ್ಳೇದು" ಎಂದ ಕೂಡಲೇ "ಚಹ ಚಹ" ವೆಂದು ಚಹದೇವನ ಸ್ತೋತ್ರವೇ ನಡೆಯುವದು. ಸಿದ್ದಪ್ಪನು ನಿರ್ಭಿಡನಲ್ಲ. ಗೌಡರು ಸಣ್ಣ ಮನುಷ್ಯರಲ್ಲ. ಅವರನ್ನು ನಿರಾಶೆಪಡೆಯಿಸುವದು ಹೇಗೆ. ಚಹವು ಸಿದ್ಧವಾಗುವದು. ಗೌಡರಾಶ್ರಯದಿಂದ ಎಲ್ಲರಿಗೂ ಚಹದೇವನ ಸೇವನೆಯು ದೊರೆಯುವದು. ತರುವಾಯ ಆ ಇಡೀ ದಿವಸವೂ ಲಕ್ಷ್ಮೀದೇವಿಯ ವಿಷಯವು ಒತ್ತಟ್ಟಿಗುಳಿದು ಚಹದೇವನ ಸ್ತೋತ್ರದಿಂದಲೇ ಕಳೆದು ಹೋಗುವದು.

ಪತಿಯ ಪೂಜೆಗೆ ಬದಲಾಗಿ ಚಹ ದೇವಾಯ ನಮಃ ಎಂದ ಮೇಲೆಯೆ ವಿಷಯಪ್ರವೇಶವಾಗುವದು. ಮಹಾರಾಜಾಧಿರಾಜರೂ ಪ್ರಭುಗಳೂ ಯಾವದಾದರೂ ಮಹತ್ವದ ವಿಷಯವನ್ನು ಚರ್ಚಿಸಬೇಕಾದ ಸಂದರ್ಭದಲ್ಲಿ ಮುಖಂಡರನ್ನು ಚಹದೇವಾರಾಧನೆಗೇ ಕರೆಯುವರು. ಇದೇ ಪದ್ಧತಿಯು ಸಣ್ಣ ದೊಡ್ಡ ಪಂಗಡಗಳಲ್ಲಿಯೂ ರೂಢವಾಗಿರುವದು. ಆದ್ದರಿಂದ ಮುಖಂಡರು ಚಹದೇವನೆಂದ ಕೂಡಲೇ ಮಹತ್ವದ ವಿಷಯವೆಂದು ತಿಳಿಯಲೇಬೇಕು. ಸರ್ವಾರಂಭೇ ತಂಡುಲಾಃ ಪ್ರಸ್ಥಮೂಲಾಃ।

ಆದ್ದರಿಂದ ಚಹದೇವನೇ ನಿನ್ನ ಆಗಮನವು ಎಲ್ಲರಿಗೂ ಸುಖಕರವಾಗಿಯೇ ಪರಿಣಮಿಸಿರುವದು. ನಿನ್ನ ಆಗಮನದಿಂದ ಸಮಾಜದಲ್ಲಿ ಹುಚ್ಚುತನದಿಂದ ಹೇರಳವಾಗಿ ಆಗುತ್ತಿರುವ ದ್ರವ್ಯವೆಚ್ಚವನ್ನು ನಿಲ್ಲಿಸಿದೆ; ನಿನ್ನ ಆಗಮನ



"ಏನೂ ಅನುಮಾನ ಪಡಬೇಡಿ, ಖೋಟಾ ನೋಟಲ್ಲ, ನನ್ನ ಗಂಡನೇ ಖುದ್ದಾಗಿ ಪ್ರಿಂಟ್ ಮಾಡಿರೋದು."

ದಿಂದ ಸಮಾಜ ಸುಧಾರಣೆ ಸಮಾಜ ಸುಧಾರಣೆಯೆಂದು ದೇಶದ ತುಂಬೆಲ್ಲ ಕೇಳಿಬರುತ್ತಿರುವ ಕೂಗು ನಿಂತುಹೋಯಿತು. ನಿನ್ನ ಆಗಮನದಿಂದ ದೀರ್ಘಕಾಯರೂ, ದೃಢಕಾಯರೂ ಆದ ಜನರು ರಾಕ್ಷಸರಂತೆ ಕಾಣುವರೆಂದು ನೀನು ಕಂಡುಹಿಡಿದು ಜನರು ಕೋಮಲಾಂಗರಾಗುವಂತೆ ಮಾಡಿದೆ. ನಿನ್ನ ಆಗಮನವಾದಂದಿನಿಂದ ಕಣ್ಣುಗಳು ನಿಚ್ಚಳವಾಗಿ ಕಾಣಬೇಕೆಂದೂ, ಕಣ್ಣುಗಳಲ್ಲಿ ಏನೂ ಬೀಳಬಾರದೆಂದೂ, ಮುಖಮುದ್ರೆಯು ಮುದ್ದುಮುದ್ದಾಗಿ ಕಾಣಬೇಕೆಂದೂ ಜನರ ಕಣ್ಣುಗಳ ಮುಂದೆ ಚಿತ್ರವಿಚಿತ್ರವಾದ ಕನ್ನಡಕಗಳು ಬಂದು ನಿಂತವು. ನಿನ್ನ ಆಗಮನವಾದಂದಿನಿಂದ ತಮ್ಮ ಗಂಡಂದಿರ, ಅಣ್ಣತಮ್ಮಂದಿರ, ಮಕ್ಕಳ ನೆಪೆರೆಯು ಸಲುವಾಗಿ ಮುಂಜಾವಿನಲ್ಲಿ ಬೇಗನೆದ್ದು ಅಡಿಗೆ ಮಾಡುವ ಶ್ರಮವು ಹೆಣ್ಣು ಮಕ್ಕಳಿಗೆ ತಪ್ಪಿಹೋಯಿತು. ನಿನ್ನ ಆಗಮನವಾದಂದಿನಿಂದ ತಕ್ಕಮಟ್ಟಿಗೆ ಜ್ಞಾನವುಳ್ಳ ವೈದ್ಯರೂ ಕೂಡ ಸಿಗದಂಥ ಸ್ಥಳಗಳಲ್ಲಿ ಎಲ್. ಎಮ್. ಆ್ಯಂಡ ಎಸ್; ಎಮ್. ಬಿ. ಬಿ. ಎಸ್; ಎಲ್. ಆರ್. ಸಿ. ಪಿ; ಎಲ್. ಸಿ. ಪಿ. ಎಸ್. ಮುಂತಾದ ಉದ್ದುದ್ದ ಪದವಿಗಳುಳ್ಳ ಧನ್ವಂತರಿಗಳು ಹಳ್ಳಿಗಳಲ್ಲಿ ನಿಂತ ಕಾರಣದಿಂದಲೇ ಔದ್ಯೋಗಿಕ ಶಿಕ್ಷಣಕ್ಕೆ ಅನುಕೂಲತೆಯು ದೊರೆತಂತಾಯಿತು. ಈ ಧನ್ವಂತರಿಗಳಾದರೂ ಚಹದೇವನನ್ನು ಮರೆತಿಲ್ಲ. ಅವರ ಔಷಧದ ಅನುಪಾನವು ಚಹವೇ ಆಗಿರುವದು. ಸಾರಾಂಶವೇನಂದರೆ ಸುಧಾರಣೆಯ ಶಿಖರವನ್ನು ಮುಟ್ಟಬೇಕೆಂದು ಅಹಮಹಮಿಕೆಯಿಂದ ಪ್ರಯತ್ನಪಡುತ್ತಿರುವ ಜನಾಂಗಗಳ ಸರ್ವಾಂಗಸುಂದರವಾದ ಉನ್ನತಿಗೆ ನೀನೇ ಕಾರಣನು. ದೇವಾಧಿದೇವನೇ, ವಿಷ್ಣುವಿನ ದಶಾವತಾರಗಳ ಕೀರ್ತಿಯು ಇಷ್ಟು ಹಬ್ಬಲಿಲ್ಲ. ಶಂಕರನ ತಾಂಡವವೂ ಅಷ್ಟು ಪ್ರಸಿದ್ಧವಲ್ಲ. ಕಾಮನ ಶೌರ್ಯವು ಅಷ್ಟು ವಿಶ್ರುತವಲ್ಲ. ಇಂದ್ರನ ಸಾವಿರ ಕಣ್ಣುಗಳೂ, ಶೇಷನ ಸಾವಿರ ಹೆಡೆಗಳೂ ಅಷ್ಟು ಖ್ಯಾತಿಯನ್ನು ಹೊಂದಲಿಲ್ಲ. ಸೂರ್ಯನ ತೇಜವೂ ಚಂದ್ರನ ಆಹ್ಲಾದಕತ್ವವೂ ಅಷ್ಟು ಹಬ್ಬಲಿಲ್ಲ. ನಿನ್ನ ಕೀರ್ತಿಯೆಂಬ ಕೌಮುದಿಯು ದಶದಿಶಗಳನ್ನು ವ್ಯಾಪಿಸಿಕೊಂಡುದರಿಂದ ಉಳಿದವರ ಕೀರ್ತಿಯು ಕಮಲಗಳು ಮುಗ್ಗುವಂತೆ ಮುಗ್ಗಿತು. ಏಮಂಗುಣವಿಶಿಷ್ಟನಾದ ಚಹದೇವನೇ, ನಿನ್ನ ಕೀರ್ತಿಯನ್ನು ಎಷ್ಟು ಹೊಗಳಿದರೂ ತೀರದು.

ಓಂ ಣಮೋ ಚಹದೇವಾಣಂ. ಓಂ ಣಮೋ ಕ್ಷೀರಾಣಂ. ಓಂ ಣಮೋ ಶರ್ಕರಾಣಂ. ಓಂ ಣಮೋ ಕಬ್ಬೇವಾಣಂ. ಓಂ ನಮೋ ಬಸಿದೇವಾಣಂ.

ಚಹೋ ಬ್ರಹ್ಮಾ ಚಹೋವಿಷ್ಣುಶ್ಚ ಹೋದೇವೋ ಮಹೇಶ್ವರಃ॥

ಓಂ ಚಹದೇವಾಯನಮಃ ಶರ್ಕರಾಯೈಸ್ವಾಃ ಧುಗ್ದೇವಾಯಹುಂ. ಕಬ್ಬೇವಾಯವಷಟ್. ಬಸಿದೇವಾಯ ಫಟ್.

ಇದು ಏನಮದಖಿಲ ಸುರಾಸುರೇಂದ್ರ ಮುನೀಂದ್ರಮಣಿ ಮಕುಟಪ್ರಭಾ ಪಟಲ ಪರಿವೃತ ಚಹದೇವ ಪಾದನಖಚಂದ್ರ ಚಂದ್ರಿಕಾ ಚಕೋರಾಯಮಾನ ರಸಿಕರಂಜನ ಭಕ್ತಾಗ್ರೇಸರ ಚಹದಾನಿ ವಿರಚಿತಮಪ್ಪ ಚಹದೇವ ಮಹಾತ್ಮ್ಯಂ ಸಂಪೂರ್ಣಂ.

ಶಾಂತಿರಸ್ತು! ಪುಷ್ಟಿರಸ್ತು! ತುಷ್ಟಿರಸ್ತು!

ಓಂ ಶಾಂತಿಃ! ಶಾಂತಿಃ! ಶಾಂತಿಃ!

('ವಾಗ್ಭೂಷಣ'ದಿಂದ ಸಂಗ್ರಹ- ನಿವೇದಿತಾ)

ಮನುಷ್ಯ ನಿರ್ಮಿತ ಕಲ್ಪನೆಗಳು ಕಟ್ಟುಪಾಡುಗಳು ಜಗತ್ತನ್ನು ತಲೆಕೆಳಗಾಗಿಸಿವೆ

ಇರುವ ವರೆಗೆ ವಿಧವೆ ವೇಶ್ಯೆಯರು ಇರುವುದು ಅನಿವಾರ್ಯ. ಮದುವೆ ಮಂಗಳ ಕಾರ್ಯ ಅನ್ನುವವರು ತಾವು ವಿಧವೆಯಾಗಿದ್ದರೆ, ತಮ್ಮ ಮಗಳು ಸೊಸೆ ಅತ್ತಿಗೆ ನಾದಿನಿ ವಿಧವೆಯಾಗಿದ್ದರೆ, ತಾವು ಎಂತಹ ನೋವು ಸಂಕಟಗಳನ್ನು ಅನುಭವಿಸಬೇಕಾಗಿತ್ತು ಅನ್ನುವುದನ್ನು ಯೋಚಿಸಲಿ.

ಮದುವೆ ಮಂಗಳ ಕಾರ್ಯ ಅನ್ನುವವರು, ತಾವು ಮದುವೆಯಿಲ್ಲದೆ ತಾಯಿಯಾಗಲಿರುವ ಸಂಭವವನ್ನು ಕಲ್ಪಿಸಿಕೊಳ್ಳಲಿ. ಜಗದಾದಿಯಿಂದ ಎಷ್ಟು ಕೋಟಿ ಕೋಟಿ ಸ್ತ್ರೀಯರು 'ಅಕ್ರಮ ಸಂಪರ್ಕ' ಫಲ ಹೊತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಅನ್ನುವುದನ್ನು ಚಿಂತಿಸಲಿ.

ಅಹಿಂಸೆ ಮತ್ತು ಅಸತ್ಯ

ಮ. ಬ. ಚನ್ನಬಸಪ್ಪ

ಅಹಿಂಸೆಯೊಡನೆ ಸತ್ಯವನ್ನು ಜೊತೆಗೂಡಿಸುವ ಬೌದ್ಧಿಕ ಕಸರತ್ತನ್ನು ಜಗತ್ತು ಬಹಳಷ್ಟು ಕಂಡಿದೆ. ಅಹಿಂಸೆ ಆತ್ಮಶಕ್ತಿ ಸಹನೆ ಅನುಕಂಪ ಅನ್ನುವಂತಹದನ್ನೆಲ್ಲ ಮಾನವೀಯತೆ ಮೇಲಾಗಿ ದೈವಿಕತೆಯೊಡನೆ ಬೆಸೆಯುವ ಸಮರಸ ಸಾಹಸವೂ ಅನಂತವಾಗಿ ನಡೆದು ಬಂದಿದೆ.

ಪ್ರಾರ್ಥನೆಯಿಂದ ದೊರೆಯುತ್ತದೆ ಅನ್ನಲಾಗಿರುವ, ಸಂತ ಮಹಂತ ಪ್ರವಾದಿಗಳು ಕಂಡಿರುವರೆಂದು ಹೇಳಲಾಗುತ್ತಿರುವ, ವಿಶಾಲ ಜಗತ್ತಿನ ಅಸಂಖ್ಯಾತ ಅನುಭಾವಿ ದಾರ್ಶನಿಕರು ಅನುಭವಿಸಿರುವ ಪ್ರೇರಣೆ ಅನ್ನುವಂತಹದೆಲ್ಲದರ ಹುರುಳಾದರೂ ಏನು? ಎಷ್ಟು?

ಮದುವೆ ಇರುವ ವರೆಗೆ ಹೆಣ್ಣು ತಪ್ಪಿತಸ್ಥ. ತೂಗು ಕತ್ತಿ ತಲೆಯ ಮೇಲೆ ಆಜೀವ ಪರ್ಯಂತ ನೇತಾಡುತ್ತಿರುತ್ತದೆ. ಸುಖ ಪಡುವುದು ತಪ್ಪೇ! ದೇವಾನುದೇವತೆಗಳು ಸಾಧು ಸಾಧ್ವಿಯರು ಪ್ರವಾದಿ ಪುರುಷೋತ್ತಮರು ಸಹ ಸುಖಾಭಿಲಾಷಿಗಳೇ!

ಇಲ್ಲದ್ದಕ್ಕೆ ತೆಪ್ಪಗಿರುತ್ತಾರೆಯೇ ವಿನಾ, ಸಿಗದಿರುವುದರಿಂದ ದ್ರಾಕ್ಷಿ ಹುಳಿಯೇ ಹೊರತು, ಪುಕ್ಕಟೆ ದೊರಕುವುದಾದರೆ, ಗುಟ್ಟಿನಲ್ಲಿ ಲಭಿಸುವುದು ಸಾಧ್ಯವಾದರೆ ಯಾರಿಗೆ ಬೇಡ! ದಿನ ನಿತ್ಯವೂ ಬೇಕು. ಆಜೀವ ಪರ್ಯಂತ ಹದಿ ಹರೆಯ ನವ ಯೌವನ ಚಿರ ಕಸುವು! ಪಾತಿವ್ರತ್ಯವೂ ಪಾಪ, ಬುರ್ಖಾ ಕವಿಯುವುದೂ ಶಾಪ. ಮುಸ್ಲಿಂ ಜಗತ್ತು ಅ ಕಡೆ

ಸಾಹಿತ್ಯ ರಂಗಭೂಮಿ ರಜತಪರದೆಗಳ ಗೀಳು ಚಾಳಿ ಹಾಳು ಅಭ್ಯಾಸವೆಂದರೆ ಆಕೆಯನ್ನು ವಿವಸ್ತ್ರಗೊಳಿಸುವುದು. ಬೇಕಾದವಳೊಡನೆ ಮಲಗುವುದು ತಪ್ಪಲ್ಲವಾದರೆ, ಕ್ಷಮಾರ್ಹವೆನ್ನಿಸುವುದಾದರೆ; ಬೇಕಾದವನೊಡನೆ ವಿಹರಿಸುವುದು ಧರ್ಮವೆನ್ನಿಸಬೇಕು.

ಜಗತ್ತಿನ ಅತಿ ದೊಡ್ಡ ಆತ್ಮವಂಚನೆ ಆತ್ಮಹತ್ಯೆಯೆಂದರೆ ಮದುವೆ. ಆಸ್ತಿ ಇರುವ ವರೆಗೆ ಗಂಡು ಗೂಂಡಾ–ಕಳ್ಳ. ಮದುವೆ ಇರುವ ವರೆಗೆ ಹೆಣ್ಣು ವಿಶ್ವಾಸದ್ರೋಹಿಯಾಗುವ ಅಪಾಯ ಸಂಭವ. ವ್ಯಾಪಾರವಿರುವವರೆಗೆ ಮನುಷ್ಯ ನಂಬಿಕೆಗೆ ಅನರ್ಹ.

ಆಸ್ತಿ–ಹಕ್ಕು– ವ್ಯಾಪಾರ– ಸ್ವಾತಂತ್ರ್ಯಗಳ ಸುತ್ತ ಮಾನವನ ಅಸಹಾಯಕತೆ ಹಿಕ್ಕು ಮತ್ತು ಗೊಂದಲ, ಹಗರಣ, ಹಸಿ ಹೇಸಿ ಸ್ವಾರ್ಥ ಲಂಚ ವಂಚನೆಗಳು ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಇನ್ನೊಬ್ಬರ ಹೆಂಡತಿ ಗಂಡನನ್ನು ಅಪಹರಿಸುವುದು ಇನ್ನೊಬ್ಬರ ಆಸ್ತಿ ವಸ್ತು ಸಂಗತಿ ವಿಶೇಷಗಳನ್ನು ಲಪಟಾಯಿಸುವುದು–ಇದೇ ಚರಿತ್ರೆ ಇತಿಹಾಸ ಭೂ ವಿವರಣೆ.

ಆಸ್ತಿ ವ್ಯಾಪಾರ ಮದುವೆ ಇವೇ ಪಾತಕ ನೀಚತನ. ಇವಕ್ಕೆ ಪೂಜ್ಯತೆ ಪಾವಿತ್ರ್ಯ ದೊರಕಿಸಿ ಕೊಡುವತ್ತ ಮಾನವನ ಶಕ್ತಿ ಚೈತನ್ಯಗಳು ವಿನಿಯೋಗವಾಗುತ್ತ ಬಂದಿವೆ. ಹಾಗೆಂದೇ ಅವು ಕೊಬ್ಬಿ ಹೆಬ್ಬುಲಿಗಳಾಗಿ ಅವನ ಕುತ್ತಿಗೆ ಹಿಡಿದು ಮಡಿಸಿ ನಡೆಸುತ್ತಿವೆ.

ಕುಡಿದಿರುವವನು ನುಡಿಯುವ ಸಾಕ್ಷ್ಯ ನಂಬಲನರ್ಹ!

ಕಾನೂನು ಹೇಳುತ್ತದೆ, ಕುಡಿದು ವಾಹನ ನಡೆಸುವುದು ಅಪರಾಧ! ಶಾಸ್ತ್ರ ಹೇಳುತ್ತದೆ, ಮಂತ್ರವಾದಿ ಹಸ್ತ ಸಾಮುದ್ರಿಕ ಇವರು ಪಟಾಯಿತ (ಜೂರಿ)ರಾಗಿ ನ್ಯಾಯ ಮಂಡಳಿಯ ಸದಸ್ಯರಾಗಲು ಅನರ್ಹರೆಂದು! ದೈವ ಏಕೆ ಮೋಸವೆಂದರೆ ಅದು ಸಂಪೂರ್ಣ ಶರಣಾಗತಿಯನ್ನು ಬಯಸುತ್ತದೆ! ಮೊದಲು ಶುಲ್ಕ

ಎರಡು ಬಗೆಯ ಸಾಹಿತ್ಯಗಳು ಜನ ಮನವನ್ನು ಹಿಡಿದಿಟ್ಟುಕೊಂಡಿರುತ್ತವೆ; ಶರಣ (ದಾಸ್ಯ) ಸಾಹಿತ್ಯ, ಲೈಂಗಿಕ ಸಾಹಿತ್ಯ! ಸೋಜಿಗದ ಸಂಗತಿಯೆಂದರೆ ಬಹಳಷ್ಟು ಸಂದರ್ಭ ಪ್ರಮಾಣಗಳಲ್ಲಿ ಅವೆರಡು ಪ್ರಕಾರಗಳೂ ಜೊತೆ ಜೊತೆಯಾಗಿ ಸಾಗಿರುತ್ತವೆ! ಶರಣ ದಾ(ಸ್ಯ) ಸಾಹಿತ್ಯದಿಂದ ಮಾನವ ಹೇಡಿ ಅಂಜುಬುರುಕ ಹೀನದೀನ ಮೈಗಳ್ಳನಾದರೆ, ಇನ್ನು ಲೈಂಗಿಕ ನಗ್ನ ಸಾಹಿತ್ಯದಿಂದ ಹೇಳಿ ಕೇಳಿ ಲಂಪಟ ನೀಚ ಪಾಪಿಯಾಗುತ್ತಾನೆ. ಎರಡೂ ಪ್ರಕಾರಗಳು ಕೃತಕ ಕಪಟ ಅಸಹಜ.

ಪೋಲೀಸರು 'ಒದ್ದು ಹೇಳಿಕೆಗೆ ರುಜು ಪಡೆ'ಯುತ್ತಾರೆ ಠಾಣೆಯಲ್ಲಿ. ನ್ಯಾಯಾಲಯದಲ್ಲಿ ಅದು ನಿಲ್ಲುವುದಿಲ್ಲ! ಸ್ವತಂತ್ರ ವಾತಾವರಣ ಅಗತ್ಯ ಸಾಕ್ಷ್ಯ ನುಡಿಯಲು–ಪಡೆಯಲು ಅನ್ನುತ್ತದೆ ಕಾನೂನು. ಭಯ ಹುಟ್ಟಿಸಿ ಪಡೆಯುವ ಸಾಕ್ಷ್ಯ ಕಾಣುವ ಸಾಕ್ಷಾತ್ಕಾರಗಳು ಸಲ್ಲ ಪೊಲ್ಲ.

ತನ್ನ ಪ್ರಿಯಕರ! ಪ್ರೇಯಸಿ ತನಗೆ ಮುದ್ದು. ತನಗೆ ಬೇಕೆನಿಸಿದುದೆಲ್ಲ ಬೇಕೆನಿಸುವ ವರೆಗೆ ಮುದ್ದು. ಅದರ ಬಗ್ಗೆ ಹಿಗ್ಗು ಹುಗ್ಗಿ ಪಾಯಸ ರಸಾಯನ ರಸಗುಲ್ಲ ನಳ ಪಾಕ ಇನ್ನಷ್ಟು ಮತ್ತಷ್ಟು, ತನ್ನ ದೈವ ನಂಬಿಕೆ ಅನಿಸಿಕೆ ಅಪೇಕ್ಷೆಗಳ ಬಗೆಗೂ ಹಾಗೆಯೇ.

ತಾನು ಸತ್ತು ಸ್ವರ್ಗ ಕಾಣಬೇಕು. ಸಾಯದೆ ಇರುವವರು ಹೇಳುವ ಸ್ವರ್ಗ ಅಲ್ಲಿನ ಅಪ್ಸರೆಯರು ಅವರಿಂದ ಲಭಿಸುತ್ತದೆಯೆಂದು ಹೇಳಲಾಗುವ ಸುಖ–ಇವೆಲ್ಲ ನಂಬಲರ್ಹವೇ? ದೊರೆಯುತ್ತವೆಯೇ? ಕನಸಿನ ಗಂಟು ನನಸಿನಲ್ಲಿ ನೆರವಿಗೆ ಒದಗುವುದಾಗಿದ್ದರೆ!

ಸನ್ಯಾಸ ಬ್ರಹ್ಮಚರ್ಯ. ಅನ್ನುವುದೆಲ್ಲ ಮೋಸ. ಸುಖಪಡುವುದೇ ಯೋಗ್ಯ ಸಹಜ. ಹಾಗೆಂದೇ ಲೈಂಗಿಕ ಸಾಹಿತ್ಯದ ಅನಂತ ಆಕರ್ಷಣೆ. ಶೃಂಗಾರ ಸಾಧನ ಮಾಧ್ಯಮ ಸಲಕರಣೆ ಪರಿಕರಗಳ ಉತ್ಪಾದನೆ ವ್ಯಾಪಾರ ವಿತರಣೆಗಳು; ಕೋಟಿ ಜನಕ್ಕೆ ಉದ್ಯೋಗ ಜೀವ

ಲೈಂಗಿಕತೆ ಹೇಗೆ ಮಾದಕ ಭ್ರಾಮಕವೋ, ದೈವಿಕತೆಯೂ ಅಂತೆಯೇ ಮಾದಕ ಭ್ರಾಮಕ, ಸುಖ-ಮುಕ್ತಿಗಳು ದೊರಕಬೇಕಾದರೆ ಸಂಪೂರ್ಣ ಶರಣಾಗತಿ ಪೂರ್ವಭಾವಿ ಷರತ್ತು! ಉಪ್ಪು ಖಾರ ತಿನ್ನುವವರಿಗೆಲ್ಲ ಲೈಂಗಿಕತೆಯ ಸುಖ ಅರ್ಥವಾಗುತ್ತದೆ.

ದೈವಿಕತೆ ದೊರಕಿಸಿಕೊಡುತ್ತದೆಯೆಂದು ಸರ್ವಕಾಲ ದೇಶಗಳಲ್ಲಿ ಗೋಪುರವೇರಿ ಸಾರಲಾಗುತ್ತಿರುವ ಮುಕ್ತಿ ಸುಖ ಸಾಮ್ರಾಜ್ಯ ಎನ್ನುವುದೇನು? ಅದನ್ನು ಅರ್ಥಮಾಡಿಕೊಳ್ಳುವ ಗುಂಗಿಗೆ ಸಿಕ್ಕು ಪ್ರತಿಯೊಬ್ಬರೂ ಬದುಕನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರಲ್ಲ!

ಸಂದೇಹಿಸಬಾರದು, ಪ್ರಶ್ನೆ ಕೇಳಬಾರದು— ಇದೇ ಹೆಂಡ ಭಂಡತನ. ದೈವ ಹಾಗೂ ಅದರ ಏಜೆಂಟರನ್ನು ಏಕೆ ದೂರವಿರಿಸಬೇಕೆಂದರೆ ಅವರು ಒಡ್ಡುವ ಪ್ರಥಮ ಷರತ್ತು ಈ ಹೆಂಡ ಭಂಡತನ. ಅಮಲಿನಲ್ಲಿ ಕಂಡು ಕೇಳಿದುದು ನಂಬಲರ್ಹವೆ.

ಪ್ರತ್ಯಕ್ಷವಿದ್ದರೂ ಪ್ರಮಾಣಿಸಿ ನೋಡು

ಮನುಷ್ಯ ಪ್ರಯತ್ನಕ್ಕೆ ದೈವದ ಆಶೀರ್ವಾದದ ಕೊಕ್ಕೆಯನ್ನು ತಗುಲಿಸಿ ಮಾತ್ರ ಲೋಕ ಯೋಚಿಸಬಲ್ಲುದು. ಆಕಾಶ ಮಳೆ ಸುರಿಸುತ್ತದೆ ತಾನು ಉತ್ತು ಬಿತ್ತಿ ಬೆಳೆಯುತ್ತೇನೆ! ಅನ್ನುವುದರಲ್ಲಿ ಬುದ್ಧಿವಂತಿಕೆಯನ್ನು ಕಾಣಲು ಮಾನವ ಸಿದ್ಧನಿಲ್ಲ. ಎಲ್ಲದಕ್ಕೂ 'ಅವನ' ಕರುಣೆ ಅಗತ್ಯ!

ಹೊಳೆ ನೀರಿಗೆ ದೊಣೆನಾಯಕನ ಅಪ್ಪಣೆಯೆ! 'ಅವನು' ಕೊಡಬೇಕು, ನಾವು ಉಣಬೇಕು! ಹಿಂದೆ ರಾಜಮಹಾರಾಜರ 'ಉಪ್ಪು'ಂಡು ಬದುಕುತ್ತಿದ್ದ ಜನ, ಈಗ ರಾಜಕಾರಣಿ ಮಂತ್ರಿ ಮಹಾಶಯರ 'ಉಪ್ಪು'ಂಡು ಬಾಳಬೇಕಾಗಿದೆಯಲ್ಲ!

ಸೂರ್ಯನ ಸುತ್ತ ಭೂಮಿ ಸುತ್ತುತ್ತಿದೆಯೆಂದು ಹೇಳಿದರೆ ಒಂದೆ ಧರ್ಮಾಧಿಕಾರಿಗಳು ತಲೆದಂಡ ಕೇಳುತ್ತಿದ್ದರು. ಇಂದು ಸಂದೇಹಿಸಿದರೆ ಸೈಬೀರಿಯಾಕ್ಕೆ ಸಾಗಹಾಕು

ಕಾರಿಯೂ ಸಂದೇಹವನ್ನು ಸಹಿಸುವುದಿಲ್ಲ, ದೈವವೂ ಸಹ ಅಂತೆಯೆ!

ಶರಣಾಗತಿ ಸಾವು, ಸಂಪೂರ್ಣ ಶರಣಾಗತಿ ದುರಂತ ದುರ್ಮರಣ, ಶರಣಾಗತಿ ಪಾಪ, ಸಂಪೂರ್ಣ ಶರಣಾಗತಿ ಮಹಾಪಾತಕ. ಮಾನವನಿಗೂ ಮಣಿಯಬಾರದು, ದೈವಕ್ಕೂ ಶರಣಾಗಬಾರದು. ಶರಣಾಗಬೇಕಾದ ಶಕ್ತಿ ಜಗತ್ತಿನಲ್ಲಿಲ್ಲ.

ತನ್ನನ್ನು ಆಳಿಸಿ ಹೊತ್ತು ಹೆತ್ತು ಸಾಕಿ ಸಲಹಿದ ಈ ತಾಯಿ ಹಾಗೂ ಅನ್ನ ವಸತಿ ನೀಡುವ ಭೂಮಿತಾಯಿ ಇವರಿಬ್ಬರಿಗಲ್ಲದೆ ಸೃಷ್ಟಿಯಲ್ಲಿ ತಲೆಬಾಗಲೇಬೇಕಾದ ಶಕ್ತಿ ಇನ್ನಿಲ್ಲ. ತಾಯಿ ಮಕ್ಕಳ ಮಾನವ ಮಣಿನ ಸಂಬಂಧ ಸಹಜ ಸ್ವಾಭಾವಿಕ.

ತಂದೆ ಸಂಬಂಧವಿಲ್ಲದವನು, ಹೊರಗಿನವನು, ನೈಮಿತ್ತಿಕ, ಹೆಚ್ಚೆಂದರೆ. ನಮ್ಮನ್ನು ಪ್ರೀತಿಸುವವರು ಹೃನ್ಮನಗಳಲ್ಲಿ ಸ್ಥಾನ ಕೊಡುವವರೆಲ್ಲರೂ ವಂದನೀಯರು. ತಂದೆ ಅವರಲ್ಲೊಬ್ಬ. ಅದೂ ಕೂಡ ಹೆಚ್ಚಿನದೇನಲ್ಲ. ಸಮಾಜದಲ್ಲಿ ಅನ್ಯೋನ್ಯ ಸಹಕಾರ ಸಹಜ ಸ್ವಾಭಾವಿಕ ಸಹಯೋಗ ಸಹಜೀವನ ಸಾಮರಸ್ಯ ಸಾಮಾನ್ಯ.

ಗಂಡಿನ ಭಯ ಹೆಣ್ಣಿನ ಅಸಹಾಯಕತೆ ಇವೆರಡೂ ಸಂಗಮಿಸಿ ದೈವವನ್ನು ಕಲ್ಪಿಸಿ ಸೃಷ್ಟಿಸಿದುವು. ತಾನು ಸೃಷ್ಟಿಸಿದ ದೆಯ್ಯ ದೇವರುಗಳಿಗೆ ಹಾಗೂ ಅವುಗಳ ಏಜೆಂಟ್ ರೀಜೆಂಟ್ ಪ್ರಮಾದಿ ಪ್ರತಿನಿಧಿಗಳಿಗೆ ತಲೆದಂಡ ನೀಡಿ ಶರಣಾಗತನಾಗುತ್ತ ಬಂದಿದ್ದಾನೆ.

ಮಾನವ ಚಿಂತನೆಯಲ್ಲಿ ಆಕಸ್ಮಿಕವಾಗಿ ಸತ್ಯ ಇಣುಕಿ ನೋಡಲು ಸಾಧ್ಯವಿದೆ. ಅಂತಹ ತುಣುಕುಗಳು ಸರ್ವ ಕಾಲ ದೇಶಗಳಲ್ಲಿ ಆಗಾಗ ಕಾಣಿಸುವುದುಂಟು. ಅಹಂ-ಬ್ರಹ್ಮಾಸ್ಮಿ—ನಾನು ನಾನೇ ಬ್ರಹ್ಮ! ನಾನು ದುಡೀತೀನಿ, ತಿಂತೀನಿ, ಯಾರ ಹಂಗೂ ಇಲ್ಲ!

ದಾಕ್ಷಿಣ್ಯ ತತ್ಸಮ, ದೇವ (ದೆವ್ವ, ಪೀಡೆ ಪಿಶಾಚ ಮಂತ್ರ ತಂತ್ರ ಮಾಟ ಕಾಟ ಹೂಟ ತದ್ಭವ) ದುಡಿಯಲಾರದ ಹೇಡಿ ಮೈಗಳ್ಳ

ದೈವ! 'ಅವ'ನಿಂದ ಸುಲಭ ಸರಳ ದಿಢೀರ್ ಸರ್ವಾರ್ಥ ಸಿದ್ಧಿ ಖಚಿತ.

ಪಿಶಾಚ ಪಾಪ ದೇವ ಪುಣ್ಯ ಪುರುಷಾರ್ಥ?

ಮುಟ್ಟಿದ್ದೆಲ್ಲ ಚಿನ್ನ! ಬಂಗಾರದ ತತ್ತಿ ಯಿಡುವ ಕೋಳಿ! ಗೆಲ್ಲುವ ಕುದುರೆ ಗೊತ್ತಂತೆ! ಯಾವ ಟಿಕೆಟ್ಟಿಗೆ ಲಕ್ಷ ಬಹು ಮಾನ ಬರುತ್ತೆ ಅನ್ನೋದನ್ನ ಹೇಳ್ತಾನಂತೆ! ಮಾಟ ಮಾಂತ್ರಿಕತೆಯಿಂದಲೂ ಎಲ್ಲರಿಗೂ ಲಾಭವಿಲ್ಲ, ವೈಜ್ಞಾನಿಕ ತಾಂತ್ರಿಕತೆಯಿಂದ ಸರ್ವೋದಯ ಸಾಧ್ಯವಾಗಿದೆಯೆ? ಬಂಡ ವಾಳಶಾಹಿಗಳ ಶೃಂಖಲೆ ದಾಸ್ಯ ನೊಗಗಳಿಂದ ಸಂರಕ್ಷಿಸುವುದಾಗಿ ಹೇಳುವ ಕಮ್ಯೂನಿಸಂ, ತನ್ನ ಪರಿಧಿಯಲ್ಲಿ ಬರುವವರಿಗೆ ಬಂಗಾರದ ಶೃಂಖಲೆ ತೊಡಿಸಿ ಕುಡುಗೋಲಿನಿಂದ ಕುತ್ತಿಗೆ ಕತ್ತರಿಸಿ, ರುಂಡಕ್ಕೆ ಸುತ್ತಿಗೆಯ ಪೆಟ್ಟು ಕರುಣಿಸತೊಡಗುತ್ತದೆ.

ಹಿಂದೆ ಶರಣ ಸಾಹಿತ್ಯ ಅದರ ಪ್ರಚಾರ ಪ್ರತಾಪ ಪವಾಡಗಳು ಮಾನವನ ಚೇತನ ಕನಸು ಅನಿಸಿಕೆಗಳನ್ನು ದೈವದ ದೊಡ್ಡಿಗೆ ನೂಕುತ್ತಿದ್ದುವು. ಈಗ ಉಗ್ರ ಸಮತಾವಾದ ಸಾಮ್ಯವಾದ ಸಮಾಜವಾದಗಳು, ಅವುಗಳ ಪ್ರಚಾರ ಪ್ರತಾಪ ಪವಾಡಗಳು ಮಾನವನ ಚೇತನ ಕನಸು ಅನಿಸಿಕೆಗಳನ್ನು ಕುಡುಗೋಲು ಸುತ್ತಿಗೆಗಳ ಕತ್ತರಿಸುವಿಕೆ ಕುಟ್ಟುವಿಕೆಗಳ ಚಿತ್ರಹಿಂಸೆಗೆ ಗುರಿ ಮಾಡುತ್ತಿವೆ.

ಸಿ ಐ ಎ ಅಮೆರಿಕನ್ ಕತ್ತಿಯಿಂದ ಕುತ್ತಿಗೆ ಕತ್ತರಿಸಿಕೊಳ್ಳಬೇಕೋ? ಅಥವಾ ಕೆ ಜಿ ಬಿ ರಷ್ಯನ್ ಕುಡುಗೋಲೇ ಸಾಕಾದೀತೋ? ಕಣ್ಣಿಗೆ ಕಾಣುವ ಮಾನವನಿಗಿಂತ ಕಾಣಿಸದ ದೈವಕ್ಕೆ ಶರಣಾಗುವುದರಲ್ಲಿ ಖಂಡಿತ ಜಾಣ ತನವಿದೆಯೇನು?

ಸಾರಪೂರಿತ ಮೂಲಭೂತ ಸಮಸ್ಯೆ ಯೆಂದರೆ, ಮನುಷ್ಯನಿಗೆ ಎಲ್ಲಿಂದಲಾದರೂ ಬರುತ್ತದೆಯೆ? ಯಾರಾದರೂ ಬೇರೆಯವರು ತಂದು ಕೊಡುತ್ತಾರೆಯೆ? ಕಡಿಮೆ ಪ್ರಯತ್ನ

ಸರಳ ಹಗುರ ಸುಲಭ ಸಾಧ್ಯವೆ?

ಇಲ್ಲ! ಅನ್ನುವುದಾದರೆ ನಿಶ್ಚಿಂತೆ, ಸರ್ವ ಸಮಾಧಾನ, ಸಾರ್ವತ್ರಿಕ ಕ್ಷೇಮ ನೆಮ್ಮದಿ ಶಾಂತಿ ತೃಪ್ತಿ ಭರವಸೆ, ತಿನ್ನಲು ಅನ್ನ ಬೇಕು. ಅನ್ನ ಭೂಮಿಯಿಂದ ಬರುತ್ತದೆ. ಪ್ರತಿ ಕುಟುಂಬವೂ ಉತ್ತು ಬಿತ್ತಿ ಬೆಳೆದುಣ್ಣುವು ದಾದರೆ ತಂಟೆ ತಕರಾರಿಲ್ಲ. ಸಾರ್ವತ್ರಿಕ ಸರ್ವೋದಯ.

ಪ್ರತಿ ಕುಟುಂಬವೂ ಬೆಳೆದುಣ್ಣುವು ದಾದರೆ, ಆರಾಧಕರಿಲ್ಲದೆ ದೈವವೂ ಸತ್ತು ಹೋಗುತ್ತದೆ, ಅಂದಲ ಪೊರುವವರಿಲ್ಲದೆ ಸರ್ವಾಧಿಕಾರಿ ರಾಜಕಾರಣಿ ಕಾರ್ಮಿಕ ಮುಖಂಡರೂ ಆತ್ಮಹತ್ಯೆ ಮಾಡಿಕೊಳ್ಳು ತ್ತಾರೆ. ಭೂಮಿಯಲ್ಲಿ ಸರಕಾರವಿಲ್ಲ, ಆಗಸ ದಲ್ಲಿ 'ಅವನೇ' ಇಲ್ಲ!

ಪ್ರತಿ ಕುಟುಂಬಕ್ಕೆ ಹನ್ನೆರಡು ಚೀಲ ಧಾನ್ಯ ಬೇಕಾಗುತ್ತದೆ. ಅಷ್ಟು ಧಾನ್ಯ ೨–೩ ಎಕರೆ ಭೂಮಿಯಲ್ಲಿ ಲಭಿಸುತ್ತದೆ. ಅಷ್ಟು ಭೂಮಿ ಜಗತ್ತಿನ ಪ್ರತಿ ಕುಟುಂಬಕ್ಕೂ ಸಿಕ್ಕು ತ್ತದೆ ಧಾರಾಳವಾಗಿ. ಕೃಷಿ ಪಶುಪಾಲನೆಗೆ ಬೇಕಾಗುವ ಕಾಲ ವರ್ಷದಲ್ಲಿ ಅತ್ಯಲ್ಪ. ಉಳಿದ ವೇಳೆಯನ್ನು ಸಂತೋಷ ಸಂಭ್ರಮ ಚಿಂತನ ಮಂಥನಗಳಿಗೆ ವಿನಿಯೋಗಿಸಬಹುದು.

ಜಗತ್ತಿನ ಪ್ರತಿ ಕುಟುಂಬವೂ ಕೃಷಿ ಪಶು ಪಾಲನೆಯಲ್ಲಿ ತೊಡಗಿದರೆ, ಪ್ರತಿ ಗೃಹದಲ್ಲಿ ಮಕ್ಕಳು ಹುಟ್ಟುವುದು ಹೇಗೆ ಸಹಜ ಸ್ವಾಭಾ ವಿಕವೋ, ಅನ್ನಾಹಾರ ಹಾಲು ಬೆಣ್ಣೆ ತುಪ್ಪ ಮೊಸರು ಕೂಡ ಅಂತೆಯೇ ಅಷ್ಟೇ ಸಹಜ ಸ್ವಾಭಾವಿಕವಾಗುತ್ತವೆ. ಹಸಿವು ನಿರು- ದ್ಯೋಗಗಳು ಇಲ್ಲದ ವಾತಾವರಣದಲ್ಲಿ ಹೆಣ್ಣು ಪರಪುರುಷನತ್ತ, ಗಂಡು ಪರಸ್ತ್ರೀಯತ್ತ ಗಮನ ಹರಿಸುವುದಕ್ಕೆ ಕಾರಣವೇ ಇರುವು ದಿಲ್ಲ, ಅಗತ್ಯವೇ ಇಲ್ಲ.

ಸಂಜೀವಿನಿ ಅಮೃತಸ್ಪರ್ಶ ಕೇವಲ ಸುಖ ಸೌಖ್ಯ

ನಮಸ್ಕಾರವೂ ಪಾಪ, ತಿರಸ್ಕಾರ ಪರಮ

ಪಾತಕವಲ್ಲ, ದಾನ ಧರ್ಮ ಪರೋಪಕಾರಗಳೂ ಪರಮ ಪಾತಕ! ಕುಟುಂಬದ ಅಗತ್ಯಕ್ಕಿಂತ ಹೆಚ್ಚು ಹೊಂದಿರುವುದು ಪಾಪವಲ್ಲವೆ? ಹೆಚ್ಚು ಹೊಂದಿರುವುದೇ ಪಾತಕ ಅನ್ನುವುದಾದರೆ, ಅದರಲ್ಲಿ ಕೊಂಚ ಕೊಡುವುದು 'ದಾನ'ವಾದೀತೆ?

ಸರ್ವಕಾಲ ದೇಶೀಯ 'ಧರ್ಮ' ಗ್ರಂಥಗಳೆಲ್ಲವೂ ಏಕೆ ಪಾಪಪೂರಿತವೆಂದರೆ, ಅವೆಲ್ಲ ದಾನ ಧರ್ಮ ಪರೋಪಕಾರಗಳನ್ನು ಪ್ರಚೋದಿಸುತ್ತವೆ. ಅದಕ್ಕೆ ಪ್ರಸುಲ್ಯಯಿಸುತ್ತವೆ. ಆಳು ಅರಸ ಉಳ್ಳವರು ಇಲ್ಲದವರು ಇವೆಲ್ಲ ಸಮಾಧಾನಕರ ಸ್ಥಿತಿಗಳೇನು?

ಬಹುಜನರು ದುಡಿಯುವುದು, ಕೆಲವರು ಕೊಂಚ ದುಡಿಯುವುದು ನ್ಯಾಯಸಮ್ಮತವೆಂದು ಹೇಳುತ್ತಿದೆಯೆಂದೆ ಎಲ್ಲ ಸಾಹಿತ್ಯ ಸರ್ವಸ್ವವೂ ನಷ್ಟಭ್ರಷ್ಟ. ಬಡವರ ಉದ್ಧಾರಕ್ಕೆ ಹೊರಡುತ್ತಾರೆಂದೇ ಎಲ್ಲ ಪ್ರವಾದಿ ಮಹಾತ್ಮರೂ ನಷ್ಟಭ್ರಷ್ಟರು! ಹೆಚ್ಚು ಹೊಂದಿರುವುದಕ್ಕೆ ಅವಕಾಶ ಕೊಡದಿದ್ದರೆ ಬಡವರು ಹೇಗೆ ಇರುತ್ತಾರೆ.?


ತೆಗೆದುಕೊಳ್ಳುವವನು ಮಾತ್ರ ಪಾಪಿಯಿಲ್ಲ, ದಾನ ಕೊಡುವವನೂ ಪರಮ ಪಾಪಿ, ನಿತ್ಯ ದಾನ ಮಾಡುತ್ತಿರುವುದು ಪುಣ್ಯ ಸಂಪಾದಿಸಿ 'ಬ್ಯಾಂಕ್ ಬ್ಯಾಲೆನ್ಸ್' ಹೆಚ್ಚಿಸಿಕೊಳ್ಳುವುದು? ಮಹಾದಾನವೆಂದರೆ ಜಗತ್ತಿನಲ್ಲಿ ಬೇಡುವವರೇ ಇಲ್ಲದಂತೆ ಮಾಡುವುದು.

ಎಲ್ಲ ಕಾಲದೇಶಗಳ ಎಲ್ಲ ಬಗೆಯ ಸಮಾಜ ಸಂಸ್ಥೆ ಸರಕಾರ ವ್ಯವಸ್ಥೆಗಳೆಲ್ಲಾ ಇರುವುದು, ಉಳ್ಳವರಿಗೆ ಇನ್ನಷ್ಟು ಹಾಗೂ ಇಲ್ಲದವರಿಗೆ ಏನೋ ಒಂದಿಷ್ಟು ಅಷ್ಟಿಷ್ಟು ದೊರಕಿಸಲು! ಭಿಕ್ಷುಕ ತಿರುಪೆಯವರಿಲ್ಲದಿದ್ದರೆ ದಾನಿಗಳು ಮಾಡಬೇಕೇನು! ಬಡವರಿಲ್ಲದಿದ್ದರೆ ಸಮಾಜ ಸರಕಾರಗಳು ಉದ್ಧಾರ ಕಾರ್ಯ ಸ್ಥಗಿತಗೊಳಿಸಬೇಕಾಗುತ್ತದೆ!

–ಪ್ರತಿ ಕುಟುಂಬಕ್ಕೂ ೧೨ ಚೀಲ ಕಾಳು ದೊರೆಯುವಷ್ಟು ಭೂಮಿ ದೊರಕಿಸುವುದು. ಅದನ್ನು ಯಾರು ಮಾಡಬೇಕು? ನಾನು, ಕಾರಿ ಸರಕಾರ ಸಮಾಜ ಸೈನ್ಯ ಪೋಲೀಸು ಅನ್ನುವಂತಹದೆಲ್ಲ ಇರುವವರೆಗೆ ಕೊಡುವುದು, ಅನುಗ್ರಹಿಸುವುದು, ಮಂಜೂರಿ ಲೈಸೆನ್ಸ್ ಪರ್ಮಿಟ್ ಬ್ಯಾಂಕ್ ಬ್ಯಾಲೆನ್ಸ್ ಪರೋಪಕಾರಿ ಅನ್ನುವಂತಹದು ಇದ್ದೇಯಿರುತ್ತದೆ.

ಮನುಷ್ಯ ದೈವದ ಅಂಜಿಕೆಯಲ್ಲಿಯೂ ಇರಬಾರದು, ಸರಕಾರದ ಹಂಗು ದಾಕ್ಷಿಣ್ಯಗಳಲ್ಲಿಯೂ ಇರಬಾರದು. ಸರಕಾರ ಕಾನೂನು ತಿಂಗಳು ಸಂಬಳ,. ಕುರ್ಚಿ ಮೇಜು, ಗಾದಿ ಗದ್ದುಗೆಗಳು ಇರುವಾಗ ಮಂತ್ರಿ ವಾಹನ ನಿತ್ಯೋಪಯೋಗಿ ವಸ್ತುಗಳು ಅಂಗಡಿ ಮಾರುಕಟ್ಟೆಗಳು ತುಂಬಿ ತುಳುಕುತ್ತವೆ.

ದೈವದ ಅನುಗ್ರಹ ಸರಕಾರದ ಕೃಪಾಛತ್ರ



"ನೀವು ನಿಧಿ ಸಮರ್ಪಣೆ ಮಾಡ್ತಿರೋದನ್ನ ನೋಡಿ ನನಗೆ ಸಂತೋಷ ಉಕ್ಕೇರಬೇಕಾಗಿತ್ತು... ನಿಜ...., ಆದರೆ ಮುಂದಿನ ಸಾಲಿನಲ್ಲಿಯೇ ಕುಳಿತಿರೋ, ನನ್ನ ಬಾಕಿ ವಸೂಲಿಗಾರರನ್ನು ನೋಡಿ, ನಿರಾಸೆ ಉಕ್ಕೇರು

ಗಳು ಇರುವವರೆಗೆ ಯುದ್ಧ ನರಮೇಧ ಪೋಲೀಸು ಬಂದೀಖಾನೆಗಳ ಚಿತ್ರಹಿಂಸೆ ಕುಡಿತ ಜೂಜೂ ವಿಧವೆ ವ್ಯಭಿಚಾರ ಸುಳ್ಳು ಕಳ್ಳತನ ಅನಿವಾರ್ಯ.

ವೈದ್ಯರಿಲ್ಲದಿರುವಾಗಲೂ ರೋಗಗಳು ಇರುತ್ತವೆ, ಅವರು ಇರುವಾಗಲೂ ವ್ಯಾಧಿಗಳು ಉಲ್ಬಣಿಸುತ್ತವೆ. ಬಂದ ರೋಗ ಹೋಗಲೇಬೇಕು. ದೇವರು ವಾಸಿಮಾಡುತ್ತಾನೆ, ವೈದ್ಯ ಶುಲ್ಕ ಪಡೆಯುತ್ತಾನೆ. ವಕೀಲ ಪೋಲೀಸರು ಇರುವುದರಿಂದಲೇ ಜಗಳ ಹಗೆತನ ಹಕ್ಕು ಸಾಧನೆಯು ಚಟ ಹಟಗಳಿಗೆ ಪುರಸ್ಕಾರ ಪ್ರೋತ್ಸಾಹ ಪ್ರೇರಣೆ!

ಪತ್ರಿಕೆ ಬಾನುಲಿಗಳಿಲ್ಲದಿದ್ದರೆ ಸದ್ದುಗದ್ದಲ ಹಾಹಾ ಹೂಹೂಗಳೇ ಇರುವುದಿಲ್ಲ. ಕಾನೂನು ಇಲ್ಲದಿದ್ದರೆ ಹಕ್ಕು ಒಡೆತನ ಮಾಲೀಕತ್ವಗಳಿಲ್ಲ. ವ್ಯಾಪಾರವಿಲ್ಲದಿದ್ದರೆ ಹೆಚ್ಚಿನ ವಸ್ತು ಸಂಗತಿಗಳೇ ಗೊತ್ತಾಗುವುದಿಲ್ಲ. ಹಣವಿಲ್ಲದಿದ್ದರೆ ಲಾಭ ಬಡ್ಡಿ ದಲಾಲಿ ಬಾಡಿಗೆಗಳಿಲ್ಲ!

ಇಕೊಳ್ಳಿ! ದೇವರಿಲ್ಲಿದ್ದಾನೆ, ಕಣ್ಣಾರೆ ಕಾಣಬನ್ನಿ!

ಇದು ನನ್ನ ಮಗುವೆಂದು ಹೇಳಿಕೊಳ್ಳುವುದು ಹೇಗೆ ಸಹಜ ಸ್ವಾಭಾವಿಕವೋ, ಹೇಗೆ ಅದಕ್ಕೆ ಮತ್ತಿನ್ನಾವ ಸಾಕ್ಷ್ಯ ಪುರಾವೆ ಅಪ್ಪಣೆ ದಾಖಲೆ ಅನುಮತಿ ಬೇಕಾಗಿಲ್ಲವೋ: ಅಂತೆಯೇ ತಾನು ವಾಸಿಸುವ ಮನೆ ಅದರ ಸುತ್ತ ಮೂರೆಕರೆ ಭೂಮಿ ತಾನು ಊಳುತ್ತಿರುವುದು, ಅದಕ್ಕೆ ಮತ್ತಿನ್ನಾವ ಸಾಕ್ಷ್ಯ ಪುರಾವೆ ಅಪ್ಪಣೆ ದಾಖಲೆ ಅನುಮತಿ ಬೇಕಾಗಬಾರದು. ಅಂತಹ ಪರಿಸ್ಥಿತಿ ಜಗತ್ತಿನಾದ್ಯಂತ ಬರಬೇಕು.

ಅದನ್ನು ಆಗಗೊಳಿಸುವವರು ನಾನು, ನೀವು! ತೆರಿಗೆ ಕೊಟ್ಟರೆ ಸರಕಾರವಿರುತ್ತದೆ. ತೆರಿಗೆ ತೆರಬಾರದು. ಹೆಚ್ಚು ಆಳಿಸಿದರೆ, ಸುಲಭ ಸಂಪಾದನೆ ಯಕ್ಷಿಣಿ ಪವಾಡ ಮಂತ್ರ ಮಾಯೆಗಳ ಆಸೆ ಬಿಡಿ, ದೇವರು ಸತ್ತು ಹೋಗುತ್ತಾನೆ—ಈ ಲೋಕ ಮೇಲಿನ ಲೋಕ ಎರಡರ ಹಂಗು ದಾಕ್ಷಿಣ್ಯಗಳಿಂದ ಈಗ ನೀವು ಮುಕ್ತರು.

ಉತ್ತರ ದಕ್ಷಿಣ ಧ್ರುವಗಳ ಮಧ್ಯೆ ಪ್ರಪಂಚ ವಿಶಾಲವಾಗಿದೆ. ಇಷ್ಟವೆನಿಸಿದೆಡೆ ಹೋಗಿ ಗುಡಿಸಲು ಕಟ್ಟಿಕೊಂಡು ಸುತ್ತಲಿನ ಮೂರು ಎಕರೆ ಭೂಮಿ ತನ್ನದೆನ್ನಲಿ. (ಇದರರ್ಥ ಮನೆಗಳ ಮಧ್ಯೆ ಚರಂಡಿಗಳು ಇರುವುದರ ಬದಲು ಹೊಲ ಗದ್ದೆಗಳಿರಲಿ, ಎರಡು ಮನೆಗಳ ಮಧ್ಯೆ ಒಂದು ಹೊಲ ಅಥವಾ ಗದ್ದೆ ಅಥವಾ ತೋಟ ಅಥವಾ ಹಿತ್ತಲು ಹೀಗಿಯೇ ವಿಶ್ವದಾದ್ಯಂತ ಜನವಸತಿಗಳ ಹಂದರ.) ಆಗ ದ್ವೇಷ ಅಸೂಯೆ ಜಾತಿ ಜನಾಂಗ 'ತಾಯಿ' ಭಾಷೆ, 'ತನ್ನ' ದೈವ ಜಗಳ, ಯುದ್ಧ, ಕುಡಿತ, ವ್ಯಭಿಚಾರ, ಜೂಜು ಅಧಿಕಾರ ಲಾಲಸೆ ಲಂಪಟತ್ವ ಕೊಲೆ ಸುಲಿಗೆ ಲೈಂಗಿಕ ಹುಚ್ಚಾಟ ವಾಹನ ದುರಂತ ಕೆಂಪುಪಟ್ಟಿ ಲಂಚ, ವಂಚನೆ ಪ್ರಳಯ ವಿನಾಶ ಅತ್ಯಾಚಾರ, ಭ್ರಷ್ಟಾಚಾರ ಚುನಾವಣೆ ಸೋಲು ಗೆಲುವು ಪಾಪ ಪುಣ್ಯ ಮೇಲು ಕೀಳು ಮಡಿ ಮೈಲಿಗೆಗಳೆಲ್ಲ ಮಾಯು ಪೋಯು!

ದಾನಿಯೂ ಸಲ್ಲ ಪಾಪಿಯೂ ಸಲ್ಲ– ಎಲ್ಲ ಅನ್ಯೋನ್ಯ ಸಹಮಾನವ ಸಹಕಾರಯೋಗ. ಮನುಷ್ಯನ ಮುಖ ಕಂಡರೆ ಮನುಷ್ಯನ ಮುಖ ಅರಳುತ್ತದೆ–ಈಗಿನಂತೆ ಕೆರಳುವುದಿಲ್ಲ. ✡



ಕೋಸುಗಡ್ಡೆಯ ಹೊರಭಾಗದಲ್ಲೇ ಬಿ೧ಬಿ೨ ಹಾಗೂ ಸಿ ಜೀವಸತ್ವಗಳು ಅತ್ಯಂತ ಪ್ರಮಾಣದಲ್ಲಿ ಸಂಚಿತವಾಗಿರುತ್ತದೆಂದು ಇತ್ತೀಚೆಗೆ ನಡೆದ ಸಂಶೋಧನೆಗಳು ತೋರಿಸಿಕೊಟ್ಟವೆ.

–(ಫಿಲಡೆಲ್ಫಿಯಾ ರೆಕಾರ್ಡ್‌ನಿಂದ


ನಮ್ಮ ಕಿಟ್ಟಿ ಬಲು ತುಂಟ. ಮಿಠಾಯಿಗಳು ಎಲ್ಲಿದ್ದರೂ
ಹಾರಿಸಿಬಿಡುತ್ತಾನೆ. ಹಾಗೆ ಮಾಡಬಾರದಾಗಿದ್ದರೂ ಸಹ
ಆದರೆ ಅವನನ್ನು ದೂರುವುದೇಕೆ ? ಅವನ ಗೆಳೆಯರೆಲ್ಲ
ರುಚಿಕರ ಎಲ್‌ವಿಟ ಸ್ವಾದವನ್ನೇ ಬಯಸುತ್ತಾರಲ್ಲ ?
ಆದರ ಮೇಲಿನ ಆಸೆಯನ್ನ ತೆದು
ಕೊಳ್ಳುವುದಕ್ಕಾಗುವುದಿಲ್ಲವಲ್ಲ?
LVT
ಎಲ್ ವಿ ಟಿ
ಪ್ರೊಡಕ್ಟ್ಸ್,
ಹುಬ್ಬಳ್ಳಿ-21

ಖಡೆ ಖಡೆ ಭೋಜನ್

ಜಯತೀರ್ಥ ಕೋಟಿ

ಎರಡು ಶತಮಾನಗಳಷ್ಟು ಕಾಲ ನಮ್ಮನ್ನಾಳಿದ ಬಿಳಿಯರು ಮರಳಿ ಹೋಗುವಾಗ ಬಿಟ್ಟುಹೋದ ಹಲವು ಉಡುಗೊರೆಗಳಲ್ಲಿ ನಿಂತೂಟವೂ ಒಂದು. ಮೊದಲೇ ಅಂಧಾನುಕರಣಪ್ರಿಯರಾದ ನಾವು ಅವರ ಸಂಪ್ರದಾಯಗಳನ್ನು ಚಾಚೂ ತಪ್ಪದೇ, ರಂಗುರಂಗಾಗಿ ಮತ್ತಷ್ಟು ಸೋಗಿನಿಂದ ಪಾಲಿಸಿಕೊಂಡು ಬರುತ್ತಿದ್ದೇವೆ. ಬಹುಶಃ ಪರಕೀಯರ ನಡೆನುಡಿಗಳನ್ನು ಅನುಕರಿಸುವವರಲ್ಲಿ ಭಾರತೀಯರೇ ಮೇಲುಗೈಯಿರಬೇಕು.

ನಮ್ಮ ಸಂಪ್ರದಾಯವೇನು... ಅದರ ಸೊಗಸೇನು ! ಹಗಲೆಲ್ಲ ಉರಿಯುವ ಬಿಸಿಲಿನಲ್ಲಿ ಕೆಲಸ ಮಾಡಿ ದಣಿದು, ಮನೆಗೆ ಬಂದು ಹಾಯಾಗಿ ಕಾಲು ಚಾಚಿ ವಿರಮಿಸಿ ನಂತರ ಪದ್ಮಾಸನಹಾಕಿ ಕುಳಿತು ಯಥೇಚ್ಛವಾಗಿ ಊಟ ಹೊಡೆದು ತಾಂಬೂಲ ಮೆಲ್ಲುವದೆಲ್ಲಿ? ನಾಯಿ ಕೋಳಿಗಳಂತೆ ನಿಂತಲ್ಲಿಯೇ ಕೂಳು ತಿನ್ನುವುದೆಲ್ಲಿ ?

ಈ ರೀತಿ ನಿಂತ ನಿಂತಲ್ಲಿಯೇ ಊಟ ಮಾಡುವುದರಿಂದ ಬರುವ ಸೌಭಾಗ್ಯವೇನೆಂಬುದನ್ನು ಅದನ್ನು ನಮಗೆ ಬಳುವಳಿಯಾಗಿ ಕೊಟ್ಟ ಆಂಗ್ಲ ಸಂಸ್ಕೃತಿಯ ಪೂಜಾರಿಗಳೇ ಹೇಳಬಲ್ಲರು !

ಆದರೆ, ನನ್ನ ಅನುಭವದ ರೀತ್ಯಾ, ಅರೆಹೊಟ್ಟೆ ತಿಂದು ಅನನ್ಯಗತಿಕರಾಗಿ ದುಡದುಡನೇ ಮನೆಗೆ ದೌಡಾಯಿಸಿ ಹಸನಾತ್ ಎಂದು ಮನೆಯಾಕೆಯನ್ನು ಕಾಡುವವರ ಜೊತೆಗೆ, ಸ್ವಾಸ್ಥ್ಯಕೆಡಿಸುವದೇ ನಿಂತೂಟದ ಕೆಲಸವೆಂದು ತೋರುತ್ತದೆ.

ಆದರೂ, ಈ ಖಡೇ ಖಡೇ ನಿಂತೇ ...ಯೆನ್ನುವುದನ್ನು ನಾನು ಅಲ್ಲಗಳೆಯಲಾರೆ.

ನಿಂತೂಟದ ಮೋಜನ್ನು ನೀವು ಯಾವುದಾದರೊಂದು ಭಾರೀ ಕಾನ್‌ಫರೆನ್ಸ್‌ನಲ್ಲಿ ಭಾಗವಹಿಸಿಯೇ ಅನುಭವಿಸಬೇಕು.

ಪಾನಿಪತ್ ಯುದ್ಧದಲ್ಲಿ ಆಜ್ಞೆ ದೊರೆತೊಡನೆಯೇ ಪ್ರಾಣ ಕೈಯಲ್ಲಿ ಹಿಡಿದುಕೊಂಡು ಮುನ್ನುಗ್ಗುವ ಸೈನಿಕರಂತೆಯೇ ಇಲ್ಲಿಯೂ ಜನ ಭೋಜನದ ಕೋಣೆಯತ್ತ ಧಾವಿಸುವದನ್ನೂ, ಒಂದೊಂದು ತಟ್ಟೆಯನ್ನು ವಶಪಡಿಸಿಕೊಂಡು ಊಟದ ಟೇಬಲನ್ನು ಘೇರಾಯಿಸುವುದನ್ನೂ ಕಾಣುವಿರಿ! ನಾನೆಷ್ಟೋ ಸಾರಿ ಮುನ್ನುಗ್ಗುವ ಪ್ರಯತ್ನ ಮಾಡಿಯೂ ಸಹಭುಂಜಕರ ಬಲಕ್ಕೆ ಹೆದರಿ ಒಂದು ಮೂಲೆಯಲ್ಲಿ ಅರ್ಧ ಗಂಟೆ, ಗಂಟೆಯವರೆಗೆ ಕಾದದ್ದುಂಟು.

ಮೇಜನ್ನು ಘೇರಾಯಿಸಿದ ಈ ಜನ ಕನಿಷ್ಠ ಪಕ್ಷ ಅರ್ಧ ಗಂಟೆಯ ವರೆಗಾದರೂ ಏಕಾಗ್ರತೆಯಿಂದ ತಮ್ಮ ತಟ್ಟೆಯನ್ನು ಖಾದ್ಯಗಳಿಂದ ಭರಿಸುವುದೂ, ಖಾಲಿ ಮಾಡುವದೂ, ಮತ್ತೇ ಮತ್ತೇ ತುಂಬಿ ಕಬಳಿಸುವದನ್ನು ನೋಡಿದರೆ ಇವರೆಂತಹ ವೃಕೋದರರೆನ್ನುವ ಸಂಶಯ ಬರುತ್ತದೆ.

ಒಂದು ಪಕ್ಷ, ಇವರೆಲ್ಲ ಒಂದು ಸಾರಿ ಮಾತ್ರವೇ ತಟ್ಟೆತುಂಬಿಕೊಂಡವರೆಂದುಕೊಂಡರೂ, ಅಷ್ಟು ಹೊತ್ತು ಅವರು ಅಲ್ಲಿ ನಿಂತು ಮಾಡುವದಾದರೂ ಏನನ್ನು? ಎನ್ನುವ ಪ್ರಶ್ನೆಯೂ ಯಕ್ಷಪ್ರಶ್ನೆಯಂತೆ ಕಾಡುತ್ತದೆ. 'ಅರ್ಧ ತಾಸು ಮಾತ್ರ ತಾನೇ' ಎಂದು ನೀವು ಹಗುರಾಗಿ ಮಾತಾಡಬೇಡಿ ಅದು ಅಷ್ಟು ಸುಲಭವಾದ ಕೆಲಸವೇನಲ್ಲ.

ದರೂ. ಎಲ್ಲಿ ಜಾಗ ಖಾಲಿಯಾದೀತೆಂಬ ಕಳವಳ ಮುಖದ ಮೇಲೆ ಬಾರದಂತೆ ಮಾಡುವದೇನು ಸುಲಭದ ಕೆಲಸವೇ? ಇದಕ್ಕೆ ನಾನೊಂದು ಸುಲಭ ಉಪಾಯವೊಂದನ್ನು ಕಂಡು ಹಿಡಿದಿದ್ದೇನೆ.

ನನ್ನಂತೆಯೇ ಹಿಂದೆ ಸರಿದಿರುವ ಯಾರಾದರೊಬ್ಬ ಸಂಗಾತಿಯನ್ನು ಹುಡುಕಿ ಆತನೊಡನೆ ಲೋಳೆಯೋ, ಲೊಟ್ಟೆಯೋ ಅಂತೂ ಒಂದು ಅಸಂಗತ ವಿಷಯವನ್ನು ಕುರಿತು ಚರ್ಚೆಗೆ ತೊಡಗಬೇಕು. ಆ ಚರ್ಚೆಯಲ್ಲಿ ಗಹನವಾಗಿ ತೊಡಗಿರುವೆನೆಂದು ನಟಿಸಿಯೂ. ದೃಷ್ಟಿಯೆಲ್ಲವನ್ನೂ ಖಾಲಿಯಾಗಬಹುದಾದ ಜಾಗದ ಕಡೆಗೇ ಕೇಂದ್ರೀಕರಿಸಬೇಕು. ಸ್ಥಳವೊಂದು ನನಗಾಗಿ– ನನಗಾಗಿಯೇ ಅಲ್ಲ, ಒಟ್ಟಿನಲ್ಲಿ ಖಾಲಿಯಾಗುವ ಸೂಚನೆ ಬಂದ ತಕ್ಷಣ ಈ ಕೆಲಸಕ್ಕೆ ಬಾರದ ಚರ್ಚೆಯನ್ನೊತ್ತಟ್ಟಿಗೆ ಬಿಸುಟು, ಖಾಲಿಯಾದ ಆ ಸ್ಥಳವನ್ನು ಆಕ್ರಮಿಸಲು ಸಿದ್ಧನಾಗಿ ಓಟ ಕಿತ್ತಬೇಕು.

ಇದು ಸ್ಥಳ ದೊರಕಿಸಿಕೊಳ್ಳುವ ಬಗೆಗಾದರೆ, ನಿಮ್ಮನ್ನು ನೀವು ರಕ್ಷಿಸಿಕೊಳ್ಳುವ ಬಗೆಯೊಂದು ಮಹಾಪ್ರಯಾಸದ ಕೆಲಸ!

ಕಿಷ್ಕಿಂಧೆಯಂತಹ ಡೈನಿಂಗ್ ಹಾಲ್‌ನಲ್ಲಿ ಮಹಾಶಯರನೇಕರು ಮಾಡುವ ತರತರದ ಕಸರತ್ತುಗಳ ಅರಿವು ನಿಮಗಿರಿಲಿಕ್ಕಿಲ್ಲ. ಒಬ್ಬ ಪುಣ್ಯಾತ್ಮ ತನ್ನ ತಟ್ಟೆಯನ್ನು ಈಚೆಗೆ ತರುವ ಪ್ರಯತ್ನದಲ್ಲಿ ಚಿಕನ್ ಮಸಾಲೆಯ ರಸವನ್ನು ನಿಮ್ಮ ಮದುವೆಯಲ್ಲಿ ಮಾವನಿಂದ ಕಾಡಿ ಹೋಲಿಸಿಕೊಂಡ ನಿಮ್ಮ ಪ್ಯಾಂಟು ಕೋಟುಗಳಿಗೆ ತಾಗಿಸಿ, ರಸವು ಬಟ್ಟೆಗಳಮೇಲೆ ಬಿದ್ದುದಕ್ಕೆ 'ಸ್ಸಾssರಿ' ಎನ್ನುವದರ ಜೊತೆಗೆ, ಅದನ್ನು ಒರೆಸಲು ಹೋಗಿ ರಸವನ್ನು ಬಟ್ಟೆಯ ಮೇಲೆಲ್ಲಾ ಸವರಬಹುದು.

ಕೆಲವು ವೇಳೆ ರಸಗುಲ್ಲಾಯ ಭಾಂಡಾರವನ್ನೆಲ್ಲ ನಿಮ್ಮ ತಲೆಯ ಮೇಲೆ ಸುರಿದು, ಅಲ್ಲದ ಹೊತ್ತಿನಲ್ಲಿ, ಅಭ್ಯಂಜನಕ್ಕೆ ಹಾದಿ



ಮಾಡಿಕೊಡುವವರೂ ಇದ್ದಾರೆ. ಕಾನ್-ಫೆರನ್ಸ್ ಮುಗಿಸಿ ಮನೆಸೇರಿದ ನಿಮ್ಮ ಕೋಟಿನ ಜೇಬಿನಲ್ಲಿ ನಿಮ್ಮ ಪತ್ನಿಗೆ ಒಂದು ಜಾಮೂನಿನ ಮುದ್ದೆ ಸಿಕ್ಕಿದರೂ ಆಶ್ಚರ್ಯವಿಲ್ಲ!

ಆ ಗದ್ದಲದಲ್ಲಿ ತಟ್ಟೆ ಮುಳ್ಳಿನ ಚಮಚಾ (ಫೋರ್ಕ್) ಹಿಡಿದವನೊಬ್ಬ ಯದ್ವಾ-ತದ್ವಾ ಈಚೆಗೆ ಬರುವ ಪ್ರಯತ್ನ ಮಾಡಿದರೆ ಮುಗಿಯಿತು. ಅವನ ಕೈಯಲ್ಲಿಯ ಫೋರ್ಕು ಪಕ್ಕ-ದಲ್ಲಿಯೇ ನಿಂತವರ ಕರುಳನ್ನು ಬಗೆಯದೇ ಇರುವ ಸಂಭವವೇ ಕಡಿಮೆ.

ದೇವರ ದಯೆಯಿಂದ ಈ ವರೆಗೆ ನನ್ನ ಹೊಟ್ಟೆಯನ್ನು ಯಾರ ಫೋರ್ಕೂ ಹೊಕ್ಕಿಲ್ಲವಾದರೂ, ರಸಗುಲ್ಲವೊಂದು ನನ್ನ ಜೇಬಿನಲ್ಲಿ ನಿದ್ರಿಸಿದ ನೆನಪು ಇನ್ನೂ ಹಸಿರಾಗಿಯೇ ಇದೆ.

ಕೆಲವೊಮ್ಮೆ, ಜನರ ಗದ್ದಲ ಕಡಿಮೆಯಾದ ನಂತರ ಟೇಬಲ್ಲಿನತ್ತ ಧಾವಿಸಿದರೆ, ಎಲ್ಲ ಖಾದ್ಯಗಳೂ ಬರಿದಾಗಿ, ಕೇವಲ ಒಂದೆರಡು ಎಮ್ಮೆಕೆಗಳೋ, ಹಪ್ಪಳದ ಚೂರುಗಳೋ ಉಳಿದದ್ದು ಕಾಣಿಸುತ್ತದೆ. ಮೊಸರೊಡೆಯ ಪಾತ್ರೆಯ ತಳದಲ್ಲೊಂದು ವಡೆ ಇರುವುದನ್ನು ಕಂಡು, ಅದನ್ನು ನಾನೆತ್ತಿಕೊಳ್ಳಬೇಕೆಂದು ಯೋಚಿ-ಸುತ್ತಿರುವಷ್ಟರಲ್ಲಿಯೇ ನನ್ನ ಜೊತೆಗೆ ಹರಟೆ ಕೊಚ್ಚುತ್ತಾ ನಿಂತ ಸಭ್ಯಗೃಹಸ್ಥರು ಅದನ್ನು ಕಬಳಿಸಿ ಪುನಃ ಮಾತಿಗೆ, ನನ್ನೊಡನೆ, ನಿಂತಾಗ ನಾನು ಅಳಲಾರದೇ ನಗುಮುಖ ಮಾಡಿಕೊಂಡು ಹಪ್ಪಳದ ತುಂಡನ್ನು– ಇಡೀ ಹಪ್ಪಳವಲ್ಲ!— ಕುರುಕುತ್ತಾ ನಿಲ್ಲುತ್ತೇನೆ.

ಹಾಂ...ಹಪ್ಪಳವೆಂದೊಡನೆಯೇ ನೆನಪಿಗೆ ಬಂತು. ಅದು ಪಾರ್ಟಿಗಳಲ್ಲಿ ನನ್ನನ್ನು ತೊಂದರೆಗೆ ಸಿಕ್ಕಿಸಿಬಿಡುತ್ತದೆ. ಯಾಕೆಂದರೆ... ನಾನು ಹಪ್ಪಳವನ್ನು ಧಾರಣ ಮಾಡಿಕೊಂಡು ಅದನ್ನು ಜಗಿಯುತ್ತಿರುವಾಗಲೇ ಐಸ್‌ಕ್ರೀಂನ ಪ್ರವೇಶವಾಗುತ್ತದೆ. ಕೈಯಲ್ಲಿಯ ಹಪ್ಪಳ ಮುಗಿದಲ್ಲದೇ, ಸಭ್ಯನಾದ ನಾನು, ಐಸ್-ಕ್ರೀಂಗೆ ಕೈಹಾಕುವಂತಿಲ್ಲವಲ್ಲ! ಹಪ್ಪಳ ತಿಂದಾಯ್ತು. ಎನ್ನುವ ಹೊತ್ತಿಗೆ ಐಸ್‌ಕ್ರೀಂ ಮಟಾಮಾಯ!! ಕೊನೆಗೆ ನೀರನ್ನಾದರೂ

ಕುಡಿದು ಹೊಟ್ಟೆಭರ್ತಿ ಮಾಡಿಕೊಳ್ಳುವಾ ಎಂದರೆ ಟೇಬಲ್ಲಿನ ಮೇಲೆಲ್ಲಾ ಖಾಲಿ ಗ್ಲಾಸುಗಳೇ ಮೆರೆಯುತ್ತಿರುವುದನ್ನು ಕಂಡು ಹೊಟ್ಟೆಯಲ್ಲಿ ದುಡಿಯ ಬಡಿತ ಹೆಚ್ಚಾಗುತ್ತ ಹೋಗುತ್ತದೆ.

ಆಗ, ಯಾವುನಾದರೂ ಹೊಟ್ಟೆ ತುಂಬ ಕವಳ ಜಗಿದು ನನ್ನ ಹತ್ತಿರ ಬಂದವನೇ.

'ಓಹ್...ನಿಜಕ್ಕೂ ಊಟ ಫೊಗದಸ್ತಾಗಿತ್ತು...ಅಲ್ವಾ ಮಹರಾಯ್ರೇ...'...ಎಂದರಂತೂ ನನ್ನ ಹೊಟ್ಟೆಯಲ್ಲಿ ಬೆಂಕಿಯನ್ನು ಜಾಲಾಡಿದಂತಾಗುತ್ತದೆ.

ಈ ಎಲ್ಲ ಕಟು ಅನುಭವಗಳನ್ನು ಅನುಭವಿಸಿಯಾದ ನಂತರ, ಪಾರ್ಟಿಗಳಲ್ಲಿ ಭಾಗವಹಿಸುವುದನ್ನೇ ಬಿಟ್ಟುಬಿಟ್ಟಿದ್ದೇನೆ. ಒಂದು ವೇಳೆ, ಹೋಗಲೇಬೇಕಾಗಿ ಬಂದರೂ ಸಹ. ಯಾವುದಾದರೂ ರೆಸ್ಟಾರೆಂಟಿಗೆ ಹೋಗಿ ಕಂಠಮಟ ಊಟ ಮಾಡಿಯೇ ಪಾರ್ಟಿಯಲ್ಲಿ ಭಾಗವಹಿಸಿ ಕಸರತ್ತು ಮಾಡುತ್ತೇನೆ.

ಇನ್ನು ತಾಜ್. ಅಶೋಕ...ಮುಂತಾದ ಪಂಚತಾರಾ ಹೋಟೆಲುಗಳಲ್ಲಿ ಪಾರ್ಟಿಗಳಾದರೆ ನನಗೆ ಹಲ್ಲುಕಚ್ಚುವ ಪ್ರಸಂಗವೇ ಇರುವದಿಲ್ಲ. ಅಂದರೆ, ಇದರರ್ಥ, ಅಲ್ಲಿ ನನಗೆ ಸುಖೀ ಭೋಜನ ಕಾದಿದೆಯೆಂದಲ್ಲ. ಒಂದರ್ಥದಲ್ಲಿ ಊದುವುದನ್ನು ಕೊಟ್ಟು ಒದರುವುದನ್ನು ಕೊಂಡಂತಾಗುತ್ತದೆ.

ಒಂದು ಕೈಯಲ್ಲಿ ತಟ್ಟೆಯನ್ನು ಸಂಭಾಳಿಸುತ್ತ, ಇನ್ನೊಂದು ಕೈಯಲ್ಲಿ ಚಾಕುವಿನಿಂದ ತಮ್ಮ ಭಾರತೀಯ ತಿಂಡಿಯನ್ನು ತಿನ್ನುವದು ಸ್ವಲ್ಪ ಹೆಚ್ಚು ಕಡಿಮೆ ಡೊಂಬರು ತಂತಿಯ ಮೇಲೆ ನಡೆದಷ್ಟೇ ಪ್ರಯಾಸದ ಕೆಲಸ. ಈ ತಿಂಡಿಗಳು ಎಷ್ಟು ದೊಡ್ಡವಿರುತ್ತವೆಂದರೆ, ತಟ್ಟೆಯನ್ನೆಲ್ಲಾ ಅವುಗಳೇ ಆಕ್ರಮಿಸಿಕೊಂಡು, ಯಾವುದನ್ನು ಎಲ್ಲಿಂದ ಕತ್ತರಿಸಿ ತಿನ್ನಬೇಕೆನ್ನುವದು ಹೊಳೆಯದೇ, ಆ ತಿಂಡಿಗಳೆಲ್ಲದರ ಮಿಶ್ರಣವೇ ಸಿದ್ಧವಾಗಿಬಿಡುತ್ತದೆ.

ಭಾರವಲ್ಲದ ಹಪ್ಪಳ ಆಗಾಗ್ಗೆ ಕೆಳಗೆ ಬೀಳುವ ಸಂಭವವಿರುವುದರಿಂದಾಗಿ ನಾನು ಪಾರ್ಟಿಗಳಲ್ಲಿ

ನಾದರೂ ಯಾವನೊಬ್ಬ ಪಾಪಡ ಪ್ರೇಮಿ,

'ಅಯ್ಯೋ, ನೀವು ಪಾಪಡವನ್ನೇ ತಿನ್ನಲಿಲ್ಲವಲ್ಲ'... '-ಎಂದು ಅಚ್ಚರಿ ವ್ಯಕ್ತಪಡಿಸಿ, ಹಪ್ಪಳವೊಂದನ್ನು ನನ್ನ ತಟ್ಟೆಯಲ್ಲಿಡುತ್ತಾನೆ.

ಹುಲಿಯ ಗೊಡವೆ ಬೇಡವೆಂದು ದೂರ ಇದ್ದವನ ಹತ್ತಿರ ಹುಲಿಯೇ ಬಂದು ಗರ್ಜಿಸಿದ ಹಾಗೆ, ಈ ಹಪ್ಪಳವೊಂದು ನನಗೆ ಬೇಡವಾಗಿದ್ದರೂ ಭೂತಾಕಾರವಾಗಿ ನನ್ನೆದುರಿಗೆ ನಿಲ್ಲುತ್ತದೆ.

ಫೋರ್ಕನ್ನು ತಟ್ಟೆಯ ಮೇಲಿಡುವ ಸಮಯ ಕೊಂಚ ಏರುಪೇರಾಗಿ ಹಪ್ಪಳ ನೆಲಕ್ಕೆ ಬಿದ್ದುಬಿಡುತ್ತದೆ. ಬೀಳುವಾಗ ತನ್ನ ಜೊತೆಗೆ ಅನ್ನದ ಜೂರನ್ನೂ ಒಯ್ದು ನೆಲವನ್ನೆಲ್ಲಾ ಅನ್ನಮಯವನ್ನಾಗಿ ಮಾಡುತ್ತದೆ. ಈ ಘಟನೆಯಿಂದ ಬೆಚ್ಚಿದ ನನ್ನ ಕೈ ಹಿಡಿತ ಸಡಿಲಾಗಿ ಫೋರ್ಕ್ 'ಠಣ್ಣೆಂ'ದು ನೆಲಕ್ಕೆ ಜಿಗಿದು ಎಲ್ಲರ ಗಮನವನ್ನು ತನ್ನೆಡೆಗೆ ಸೆಳೆದುಬಿಡುತ್ತದೆ.

ಸಭ್ಯಗೃಹಸ್ಥರೆಲ್ಲಾ ಒಂದುಕ್ಷಣ ನೆಲದ ಮೇಲೆ ಬಿದ್ದ ಫೋರ್ಕನ್ನೂ ನೋಡಿ, ಮರುಕ್ಷಣ ನನ್ನೆಡೆಗೆ ಮರುಕದ ದೃಷ್ಟಿಬೀರಿ ಪುನಃ ಏನೂ ನಡೆದಿಲ್ಲವೆಂಬಂತೆ ತಂತಮ್ಮ ಕಾಯಕದಲ್ಲಿ ತೊಡಗುತ್ತಾರೆ. ಅದೇ ಹೊತ್ತಿಗೆ ವೇಯಿಟರ್‌ನ ಪ್ರವೇಶವಾಗಿ, ಆತನ ದೃಷ್ಟಿಯನ್ನೂ ನಾನೆದುರಿಸಬೇಕಾಗುತ್ತದೆ. ವೆಯಿಟರ್‌ನು ನೆಲ ಕಚ್ಚಿದ ಫೋರ್ಕನ್ನೂ ಅಗುಳನ್ನೂ ನೋಡಿದರೂ ಆತ ಅದನ್ನೆತ್ತುವ ಗೋಜಿಗೇ ಹೋಗುವದಿಲ್ಲ, ಏಕೆಂದರೆ ಅದು ಆತನ ಕೆಲಸದ ಪರಿಮಿತಿಯಲ್ಲಿ ಬರುವುದಿಲ್ಲವಲ್ಲ!

ಈಗೀಗ ಪಾಪಡ್, ಫೋರ್ಕುಗಳನ್ನು ಕೆಳಗೆ ಬೀಳಿಸದೆಯೇ ಇರುವ ಕೈಚಳಕವನ್ನು ಅರಿತುಕೊಂಡಿದ್ದೇನಾದರೂ ಚಿಕನ್ ಅನ್ನು ತಿನ್ನುವುದರಲ್ಲಿ ಮಾತ್ರ ಯಶಸ್ವಿಯಾಗಿಲ್ಲ. ಅದನ್ನು ಮಾತ್ರ-ಫೋರ್ಕನ್ನಾಚೆ ಇರಿಸಿ-ಕೈಯಿಂದಲೇ ತಿನ್ನಬೇಕಾಗಿದೆ.

ಆದರೆ ಪಂಚತಾರೆಗಳಲ್ಲಿಯ ಸುಸಂಸ್ಕೃತ ವಾತಾವರಣದಲ್ಲಿ ಕೈಮುಟ್ಟಿ ಚಿಕನ್ ತಿನ್ನಬೇಕಾದರೆ ಎಂಟೆದೆಯೇ ಬೇಕು. ಆದರೂ ಇದಕ್ಕೊಂದು ಸಮಾಧಾನವಿದೆ :

ಗೋಡೆಗೆ ಮುಖಮಾಡಿ ನಮ್ಮ ಯುಕ್ತ್ಯಾನುಸಾರ ಚಿಕನ್ ಅನ್ನು ಕೈಯಿಂದಲೇ ತಿನ್ನುವದು! ಜನ ನಮ್ಮನ್ನು ನೋಡಿದರೂ ನಾವು ಯಾರನ್ನೂ ನೋಡಿಲ್ಲವೆಂಬ ಸಮಾಧಾನ ಒಂದಿರುತ್ತದಲ್ಲ!

ಇವಿಷ್ಟೂ ಅವಾಂತರಗಳನ್ನು ಅನುಭವಿಸಿಯಾದ ನಂತರ ನನ್ನ ನಿರ್ಧಾರವಿಷ್ಟು:

೧. ನಿಂತೂಟ-ಬಫೆ-ದ ಪಾರ್ಟಿಗಳಲ್ಲಿ ಭಾಗವಹಿಸಬಾರದು,

೨. ಒಂದುವೇಳೆ ಭಾಗವಹಿಸಿದರೂ ಪಾಶ್ಚಾತ್ಯ ಮಾದರಿಯ ಕೋಲ್ಡ್ ಮೀಟ್ ಅನ್ನು ಮಾತ್ರ ತಿಂದೇನು!

೩ ಯಾರೊಡನೆಯೂ ಮಾತನಾಡದೇ ಇರುವುದು.

ನನ್ನ ಈ ನಿರ್ಧಾರಗಳಲ್ಲಿ ಮೊದಲೆರಡನ್ನು ನಾನು ನಿರ್ವಹಿಸಬಲ್ಲೆನಾದರೂ ಮೂರನೆಯದು ನನಗಿನ್ನೂ ವಶವಾಗಿಲ್ಲ. ನಾನು ಮೌನವಾಗಿ ನನ್ನಷ್ಟಕ್ಕೆ ನಾನೇ ಊಟ ಮಾಡುತ್ತಿರುವಾಗ ಅಲ್‌ಬತ್ ಯಾರಾದರೂ ಬಂದು ಹರಟೆಗೆ ತೊಡಗುತ್ತಾರೆ. ತಿನ್ನುವಾಗ ಮಾತನಾಡುವುದು ನನ್ನ ದೃಷ್ಟಿಯಲ್ಲಿ ಅಸಭ್ಯತನವೇ! ಹಾಗೆಂದು, ತಿನ್ನದೇ ಅವನೊಡನೆ ಮಾತಿಗೆ ತೊಡಗಿದನೆಂದರೆ, ಅವನು ಮಾತ್ರ ತಿನ್ನುತ್ತಲೇ ಇರುವ; ಹಾಗೆಯೇ ಪಾರ್ಟಿಯೂ ಮುಗಿದುಬಿಟ್ಟು ನಾನು ನನ್ನ ಭರಪೂರ ತಟ್ಟೆಯನ್ನು ಟೇಬಲ್ಲಿನ ಮೇಲಿರಿಸಿ. ಖಾಲಿ ಹೊಟ್ಟೆಯಲ್ಲಿ ಹೊರಬೀಳಬೇಕಾಗುತ್ತದೆ. ಹಾಗೂ ಮನೆಯಲ್ಲಿ ಮತ್ತೇ ಪುಷ್ಕಳ ಊಟ ಮಾಡಬೇಕಾಗಿ ಬರುವುದರಿಂದ, ಮನೆಯವರ ಪಾಲಿಗೆ ನಾನೊಬ್ಬ 'ವೃಕೋದರ'ನಾಗಿ ಬಿಡುತ್ತೇನೆ. ✡

ಆಪತ್ತುಗಳೇ ನಮಗೆ ಸಾಧನ ಸಂಪತ್ತಾಯಿತು, ಎಂದು ಪುರಂದಾಸರು ಅಂದದ್ದುಂಟು. ಅದು ಲೋಕಮಾನ್ಯ ಟಿಳಕರ ವಿಷಯದಲ್ಲಿ ಹಾಗೂ ಶ್ರೀ ಅರವಿಂದರ ವಿಷಯದಲ್ಲಿ ಸತ್ಯಸಾಕ್ಷಿ ಆಯಿತಲ್ಲವೇ! ಲೋಕಮಾನ್ಯರಿಗೆ ಮಂಡಲೇ ಜೇಲಿನಲ್ಲಿ 'ಗೀತಾ ರಹಸ್ಯ'ದ ಪ್ರೇರಣೆ ಆಯಿತು. ಶ್ರೀ ಅರವಿಂದರಿಗೆ ಆಲಿಪುರ ಜೇಲಿನಲ್ಲಿ 'ವಾಸುದೇವಃ ಸರ್ವಮ್' ಎಂದು ಸಾಕ್ಷಾತ್ ಕೃಷ್ಣ ದರ್ಶನವಾಯಿತು. ಅದೇ ರೀತಿ ಪಂಡಿತ ಜವಾಹರಲಾಲ್ ನೆಹರೂ ಅವರಿಗೆ ಡೆಹರಾಡೂನ ಜೇಲಿನಲ್ಲಿ 'ಭಾರತ ದರ್ಶನ' (ಡಿಸ್ಕವ್ಹರೀ ಆಫ್ ಇಂಡಿಯಾ) ಆಯಿತು. ಮುಕ್ತಗಡೆ ಆಯಿತು. ಆ ಕಾರಾವಾಸದ ಅನುಭವವನ್ನೆಲ್ಲ 'ಕಾರಾ ಕಾಹಿನಿ'– ಕಾರಾವಾಸದ ಕಥೆ-ಎಂಬ ಬಂಗಾಲಿ ಪುಸ್ತಕದಲ್ಲಿ ಅವರು ಪ್ರಕಟಿಸಿದರು. ಅದರಲ್ಲಿಯ ಆಧ್ಯಾತ್ಮಿಕ ಸಾಧನದ ಸಾರಾಂಶವನ್ನೇ ಇಲ್ಲಿ ಕೊಟ್ಟಿದ್ದೇನೆ,

"ನಾನೊಂದು ವನ್ಯ ಪಶುವಿನಂತೆ ಒಂದು ಪಂಜರದಲ್ಲಿ ಬಂಧಿಸಲ್ಪಟ್ಟಿದ್ದೆನು. ಆದರೆ ಅದೇ ನನಗೊಂದು ಆಶ್ರಮ ವಾಸವಾಯಿತು. ನನ್ನ ಜೀವನದ ಒಂದು ಅಧ್ಯಾಯ ಆ ದಿನ ಮುಗಿಯಿತು. ವರುಷದ ನಂತರ ನಾನೊಬ್ಬ ಹೊಸ ಮನುಷ್ಯನಾಗಿ ಹೊರಬಿದ್ದೆ. ದುರ್ದೈವವೆಂದೆನಿಸಿದ ಆ ಕಾರಾವಾಸವೇ ನನಗೆ ನನ್ನ ದೈವತದ ದರ್ಶನವನ್ನು ದಯಪಾಲಿಸಿತು."

ಕಾರಾಗೃಹದಲ್ಲಿ ಕೃಷ್ಣದರ್ಶನ

ರಂಗನಾಥ ದಿವಾಕರ

ವಾಯುಮಂಡಲದಲ್ಲಿ ಸ್ವೇಚ್ಛೆಯಿಂದ ಸುಳಿದಾಡುವಾಗ ಅವರಿಗೆ ಲಭಿಸದೆ ಇದ್ದ ಪ್ರಜ್ಞಾನ ಪ್ರಭೆ ನಾಲ್ಕು ಗೋಡೆಗಳಿಂದ ಬದ್ಧವಾದ ವಾತಾವರಣದಲ್ಲಿ ಬೆಳಗಿ ಲೋಕಕ್ಕೆ ಜ್ಯೋತಿ-ರೂಪವಾಗಿ ಪ್ರಕಾಶವನ್ನು ಬೀರಿತು. ಮಾನವನ ಆಂತರಿಕ ಆಧ್ಯಾತ್ಮಿಕ ಉತ್ಕ್ರಮಣದ ಕ್ರಮವೇ ಹೀಗಿದೆ!

ಅದು ೧೯೦೮ ರಲ್ಲಿ ಮೇ ತಿಂಗಳ ಒಂದನೇ ತಾರೀಖು. ಆ ದಿನ ಅರವಿಂದರು ಸೆರೆ ಹಿಡಿಯಲ್ಪಟ್ಟರು. ಐದನೇ ತಾರೀಖಿನ ದಿನ ಅವರನ್ನು ಕಲಕತ್ತೆಯಲ್ಲಿ ಅಲೀಪುರ ಜೇಲಿಗೆ ಕಳಿಸಲಾಯಿತು. ೧೯೦೯ ರ ಮೇ ಆರನೇ ತಾರೀಖಿನಂದು ನಿರಪರಾಧಿ ಎಂದು ಅವರ ಬಿಡು

ಹೀಗೆಂದು ಶ್ರೀ ಅರವಿಂದರು ಆ ಅನುಭವದ ಉಲ್ಲೇಖವನ್ನು ಮಾಡಿದ್ದಾರೆ.

"ಭಾರತೀಯ ಸನಾತನ ಧರ್ಮ ಕಲ್ಪನೆಗಳ ಬಗ್ಗೆ ನನ್ನ ಮನಸ್ಸಿನಲ್ಲಿ ಅನೇಕ ಸಂಶಯಗಳಿದ್ದವು. ನಾನು ಇಂಗ್ಲಂಡಿನಲ್ಲಿಯೇ ಹದಿನಾಲ್ಕು ವರುಷ ಬೆಳೆದವ. ಅದು ತೀರ ಅಪರಿಚಿತ ವಾತಾವರಣ. ಆದರೆ ಕಾರಾವಾಸದಲ್ಲಿ ದಿನಂಪ್ರತಿ ನನಗೆ ಭಾರತೀಯ ಆಧ್ಯಾತ್ಮಿಕ ತತ್ವಗಳ ಬಗ್ಗೆ, ಹಿಂದೂ ಧರ್ಮದ ಬಗ್ಗೆ ಆದ ಹೊಸ ಹೊಸ ಅನುಭಾವಗಳ ಮೂಲಕ ನನ್ನ ಶ್ರದ್ಧೆ ಬೆಳೆಯುತ್ತ ಹೋಯಿತು. ಅಲಿಪುರ ಜೇಲಿನಲ್ಲಿ ನಾನು ಯೌಗಿಕ ಸಾಧನಗಳಲ್ಲಿ ಮಗ್ನನಾಗಿದೆನು," ಎಂದಿದ್ದಾರೆ ಶ್ರೀ ಅರವಿಂದರು.

ಹಲವು ಕಾಲ ಶ್ರೀ ಅರವಿಂದರನ್ನು ಅವರ ಜೊತೆಗಾರರೊಡನೆಯೇ ಇಟ್ಟಿದ್ದರು. ಆದರೆ ಆ ಮೇಲೆ ೯×೫ ಅಡಿ ಕೋಣೆಯ ಏಕಾಂತ ವಾಸದಲ್ಲಿಡಲಾಯಿತು. ಬಾಂಬು ಮಾಡುವಿಕೆ ಹಾಗೂ ಅವುಗಳನ್ನು ಕೊಲೆಗಾಗಿ ಉಪಯೋಗಿಸುವಿಕೆ ಈ ಅಪರಾಧಗಳನ್ನು ಅವರ ಮೇಲೆ ಹೊರಿಸಲಾಗಿತ್ತು. ಆದರೆ ಅವರು, 'ನಾನು ನಿರಪರಾಧಿಯೆಂದು ಬಿಡುಗಡೆ ಹೊಂದುವೆ, ಏನೂ ಚಿಂತಿಸಬೇಡಿ,' ಎಂದು ಮೊದಲೇ ಮಿತ್ರರೆಲ್ಲರಿಗೆ ಹೇಳಿ ಕಳುಹಿದ್ದರು. ಅವರು ಆ ಮೊಕದ್ದಮೆಯತ್ತ ಎಳ್ಳಷ್ಟೂ ಲಕ್ಷ್ಯಗೊಡುತ್ತಿರಲಿಲ್ಲ. ತಮ್ಮ ಯೋಗಸಾಧನೆಯಲ್ಲಿಯೇ ಕಾಲ ಕಳೆಯುತ್ತಿದ್ದರು. ಇತರ ಆರೋಪಿತರೊಡನೆ ಗುಂಪಿನಲ್ಲಿರುವಾಗಲೂ ಅಷ್ಟೇ, ಕೋರ್ಟಿನಲ್ಲಿ ಮೊಕದ್ದಮೆ ನಡೆದಿರುವಾಗಲೂ ಅಷ್ಟೇ, ತಮ್ಮ ಕೊಠಡಿಯ ಏಕಾಂತದಲ್ಲಿರುವಾಗಲೂ ಅಷ್ಟೇ. ಏಕ ರೀತಿಯಾಗಿ ಶ್ರೀ ಅರವಿಂದರ ಯೋಗ ಸಾಧನೆ ನಡೆಯುತ್ತಲೇ ಇತ್ತು.

"ಶ್ರೀಕೃಷ್ಣ ಪರಮಾತ್ಮನ ಸಾಕ್ಷಾತ್ ದರ್ಶನ ನನಗೆ ಆಗಬೇಕೆಂದು ನಾನೊಂದು ಸಾತ್ವಿಕ ಹಟ ತೊಟ್ಟಿದ್ದೆನು. ಆದರೆ ನನ್ನಲ್ಲಿಯ ರಜೋಗುಣ ಇನ್ನೂ ಮಾಯವಾಗಿರಲಿಲ್ಲ," ಎಂದಿದ್ದಾರೆ ಶ್ರೀ ಅರವಿಂದರು. ಮೊದಮೊದಲು ಆ ಕಾರಾಗೃಹದಲ್ಲಿ ತಮಗೆ ಯಾವ ಸಾಧನೆಯನ್ನೂ ನಡೆಯಿಸಲಿಕ್ಕಾಗಲಿಕ್ಕಿಲ್ಲ, ಎಂದೆನಿಸಿತ್ತು. ಬರೀ ಶಾರೀರಿಕ ಕಷ್ಟಗಳು ಹಾಗಿರಲಿ, ಹಲವು ಪೋಲೀಸ್ ಹಾಗೂ ಜೇಲ್ ಅಧಿಕಾರಿಗಳು ಆಡುವ ಶಲ್ಯದಂಥ ಮಾತುಗಳು ಹಾಗೂ ಉದ್ದಾಮ ವರ್ತನ ಇವು ಕೂಡ ಮನಸ್ತಾಪಕ್ಕೆ ಕಾರಣವಾಗುತ್ತಿದ್ದವು. ಹಲವು ಅಧಿಕಾರಿಗಳು ಉತ್ತಮರೂ ಇದ್ದರು, ಇಲ್ಲವೆಂದಲ್ಲ. ಉತ್ತಮನಾಗಿದ್ದ ಒಬ್ಬನನ್ನ ಬಡತರ್ಫ ಮಾಡಿದ ಉದಾಹರಣೆಯೂ ಇದೆ!

"ನಾನು ಹೊರಗಿರುವಾಗ ಒಂದು ಒಂದೂವರೆ ಗಂಟೆ ಕಾಲ ಧ್ಯಾನ ಸಾಧನೆ ಮಾಡುತ್ತಿದ್ದೆ. ಅದೇ ಪರಿಪಾಠವನ್ನು ಜೇಲಿನಲ್ಲಿಯೂ

ಬಾರದೆಂದು ಡಾಕ್ಟರರು ಸ್ವಲ್ಪ ಹಾಲಿನ ಆಹಾರವನ್ನು ಕೊಡುತ್ತಿದ್ದರು. ಬರಬರುತ್ತ ಯೋಗಾಭ್ಯಾಸದ ಮೂಲಕ ನನ್ನ ಆರೋಗ್ಯ ಒಳ್ಳೆಯದಾಗುತ್ತಲೇ ನಡೆಯಿತು. ನನ್ನ ಕೊದಲು ಒಳ್ಳೇ ಕಪ್ಪಾಗಿ ಮಿಂಚುವದನ್ನು ನೋಡಿ ನಾನು ಎಲ್ಲಿಂದಾದರೂ ಎಣ್ಣೆ ದೊರಕಿಸುತ್ತಿರಬೇಕು. ಎಂದು ಹಲವರು ಊಹಿಸಿದರು. ಹಾಗೇನೂ ಇಲ್ಲ; ಅದು ಯೋಗ ಸಾಧನೆಯ ಪರಿಣಾಮ ಎಂದು ನಾನು ಹೇಳಬೇಕಾಯಿತು! ಮುಂದೆ ಕೃಷ್ಣದರ್ಶನದ ಚಿಂತನವೇ ಅಧಿಕಾಧಿಕವಾಗಿ ನಡೆದುದರಿಂದ ನನಗೆ ಎಲ್ಲವೂ ಕೃಷ್ಣಮಯವಾಗಿಯೇ ತೋರಲಾರಂಭಿಸಿತು ಹಾಗೂ 'ವಾಸುದೇವಃ ಸರ್ವಮ್' ಎಂಬ ಸಾಕ್ಷಾತ್ಕಾರವಾಯಿತು. ಆ ಕಬ್ಬಿಣದ ಸಲಾಕೆಗಳು, ಆ ಜೇಲಿನ ಸಣ್ಣ ದೊಡ್ಡ ಅಧಿಕಾರಿಗಳು, ಜೀವಾವಧಿ ಶಿಕ್ಷೆ ಭೋಗಿಸುವ ಅಪರಾಧಿಗಳು ಎಲ್ಲವೂ ಕೃಷ್ಣಮಯವಾಗಿ ಬಿಟ್ಟಿತು!"

ಈ ಕೃಷ್ಣಮಯತ್ವದ ಅರ್ಥವನ್ನು ನಾವು ತಿಳಿದುಕೊಳ್ಳಬೇಕು. ಮೊಟ್ಟಮೊದಲಿನಿಂದ ಶ್ರೀ ಅರವಿಂದರ ಯೋಗವು ಸರ್ವಾರ್ಪಣ ಭಾವದಿಂದಲೇ ಪ್ರಾರಂಭಿಸಿತು. ಈ ವಿಶ್ವವೆಲ್ಲವೂ, ಅದರಲ್ಲಿಯ ತೃಣಕಾಷ್ಠ ಮೊದಲು ಮಾಡಿ ಅನಂತ ಬ್ರಹ್ಮಾಂಡಗಳೆಲ್ಲವೂ ಆ ಪರಮಾತ್ಮನ, ಆ ಪುರುಷೋತ್ತಮನ ಆವಿರ್ಭಾವ. ಆ ದೃಷ್ಟಿಯಿಂದ, ಆ ಲೀಲಾಭಾವದಿಂದ ನೋಡಿದರೆ ಒಂದು ಅಣುವಿನಿಂದ ಮೇರುಪರ್ವತದ ವರೆಗೆ ಎಲ್ಲವೂ ಏಕರಸ ಚಿದಾತ್ಮ ವಸ್ತುವಾಗಿ ದೃಗ್ಗೋಚರವಾಗುವದು! ಆ ಮೇಲೆ ಅಲ್ಲಿ ಉಚ್ಚ, ನೀಚ, ಸಮ ವಿಷಮ, ಹಿರಿದು ಕಿರಿದು ಎಂಬುದನ್ನರಸಲುಂಟೇ? ತಾಯಿಗೆ ಮಕ್ಕಳಲ್ಲಿ ತಾರತಮ್ಯವೇ?

ಇದು ಆಧ್ಯಾತ್ಮಿಕ ದೃಷ್ಟಿಯಿಂದ ಶ್ರೀ ಅರವಿಂದರ ಸಾಕ್ಷಾತ್ ದರ್ಶನದ ಮಾತಾಯಿತು. ಇನ್ನೊಂದು ದರ್ಶನವು ಕೂಡ ಅವರ ಹೃದಯಾಂತರದಲ್ಲಿ ಮೂಡಿತ್ತು. ಅದೇನೆಂದರೆ

ಯಲ್ಲಿ ಆಧ್ಯಾತ್ಮಿಕತೆಯು ಬೀಜ ಮೊದಲಿನಿಂದ ಬೆಳೆದುಬಂದಿದೆ. ಅದರ ತೇಜ ಕಾರಣಾಂತರ ದಿಂದ ಮಸುಕಾಗಿದ್ದರೂ (೧೯೦೮ ರಲ್ಲಿ) ಅದರ ವಿಕಾಸ ಆಗಿಯೇ ತೀರುವದು ಹಾಗೂ ಈ ವಿಷಯದಲ್ಲಿ ಭಾರತವು ಜಗತ್ತಿಗೆ ತನ್ನ ಈ ಮೌಲಿಕ ಸೊತ್ತನ್ನು ಒಪ್ಪಿಸಲೇಬೇಕಾದೀತು. ಆ ಹೊಣೆ ಭಾರತದ ಮೇಲೆ, ಭಾರತೀಯರ ಮೇಲೆ ಇದೆ. 'ಭಾರತದ ತೀರ ಹಿಂದುಳಿದವರೆನಿಸಿದವರಲ್ಲಿಯೂ ಆಧ್ಯಾತ್ಮಿಕತೆ ಮಿಂಚುವದನ್ನು ನಾವು ನೋಡಬಲ್ಲವು', ಎಂದು ಶ್ರೀ ಅರವಿಂದರು ತಮ್ಮ 'ಕಾರಾ ಕಾಹಿನಿ' ಯಲ್ಲಿ ಬರೆದಿದ್ದಾರೆ. ಆ ಬಗ್ಗೆ ಆ ಕಾಲಕ್ಕೆ ಜೇಲ್ ಅಧಿಕಾರಿಯಾಗಿದ್ದ, ಡಾ. ಡ್ಯಾಲಿ ಎಂಬವನ ಮಾತುಗಳನ್ನು ಉಲ್ಲೇಖಿಸಿದ್ದಾರೆ, ಅವು ಹೀಗಿವೆ: "ಭಾರತೀಯ ಸದ್ಗೃಹಸ್ಥರೇ ಇರಲಿ, ಅಥವಾ ತೀರ ಬಡಬಗ್ಗರೇ ಇರಲಿ. ಸಾರ್ವಜನಿಕರಲ್ಲಿ ಪ್ರಸಿದ್ಧರಾದವರೇ ಇರಲಿ ಅಥವಾ ಅಪರಾಧಿಗಳೆಂದು ಜೇಲು ಶಿಕ್ಷೆ ಭೋಗಿಸುತ್ತಿರಲಿ. ಗುಣ ಶೀಲಗಳ ದೃಷ್ಟಿಯಿಂದ ನಿಮ್ಮ ಜನ ಐರೋಪ್ಯರಿಗಿಂತ ಒಂದು ತೂಕ ಒಳ್ಳೆಯವರೇ, ಎಂದು ಹೇಳಬೇಕಾದೀತು. ಈ ನಿಮ್ಮ ಮೊಕದ್ದಮೆಯಲ್ಲಿ ಬಂಧಿತರಾದ ಈ ಯುವಕರನ್ನು ನೋಡಿ ನನ್ನ ಈ ಮನವರಿಕೆ ಮತ್ತಷ್ಟು ದೃಢವಾಗಿದೆ. ಅವರು ಅರಾಜಕ ವೃತ್ತಿಯವರು ಅಥವಾ ಕೊಲೆ ಸುಲಿಗೆ ಮಾಡತಕ್ಕವರು ಎಂದು ಯಾವ ಬಾಯಿಂದ ನಾವು ಹೇಳಬೇಕು. ಅವರ ರೀತಿ ನೀತಿ, ನಡತೆ ನಡಾವಳಿ ಅಷ್ಟು ಚೊಕ್ಕಟವಿರುವದು. ಕ್ರೂರತೆ? ಸ್ಥೈರ್ಯ ವೃತ್ತಿ, ಉದ್ರೇಕಾದಿಗಳ ಬದಲಾಗಿ ಅವರಲ್ಲಿ ತದ್ವಿರುದ್ಧ ಸಾತ್ವಿಕ ಗುಣಗಳೇ ಸ್ಪಷ್ಟವಾಗಿ ದೃಗ್ಗೋಚರವಾಗುವವು."

ಅಲಿಪುರ ಜೇಲಿನಲ್ಲಿಯ ಒಂದು ವರುಷದ ಕಾರಾವಾಸದ ಪರಿಣಾಮವಾಗಿ ಶ್ರೀ ಅರವಿಂದರಿಗೆ ತಮ್ಮ ಆಧ್ಯಾತ್ಮಿಕ ಸಾಧನೆಗಾಗಿ ಒಂದು ಅನಪೇಕ್ಷಿತ ಅವಕಾಶ ದೊರೆಯಿತು. ಅದೇ ರೀತಿ ಭಾರತೀಯ ಸಂಸ್ಕೃತಿಯ ಬಗ್ಗೆ ಇದ್ದ ಅವರ ಶ್ರದ್ಧೆ ಹೆಚ್ಚು ಬದ್ಧಮೂಲವಾಯಿತು. ಭಾರತದ ಸ್ವಾತಂತ್ರ್ಯ ಎಂಬುದೊಂದೇ ಗುರಿ ಅವರೆದುರಿಗೆ ಮೊದಲು ಇದ್ದುದು. ಈಗ ಭಾರತದ ಆಧ್ಯಾತ್ಮಿಕ ಸಂದೇಶವನ್ನು ಜಗತ್ತಿಗೆ ಬೀರುವುದು ಕ್ರಮಪ್ರಾಪ್ತ ಎಂಬ ಎರಡನೇ ಗುರಿ ಅವರಿಗೆ ಹೊಳೆಯಿತು.

ಮಾನವನು ಯೋಚಿಸುವುದೇ ಒಂದು. ದೇವರು ಸಾಧಿಸುವುದೇ ಬೇರೆ! ✡



ಗರಳವ ಬೈಚಿಟ್ಟುಕೊಂಡ ಉರಗನಂತೆ
ಫಲವನಿಂಬಿಟ್ಟುಕೊಂಡಿಹ ತರುವಿನಂತೆ
ನಿಧಾನವ ಮರೆಸಿಕೊಂಡಿಪ್ಪ ಧರೆಯಂತೆ
ಗಂಧವನಿಂಬಿಟ್ಟ ಚಂದನದಂತೆ
ಇದರಂಗವುನ ತೆರದಲ್ಲಿ ನಿಂದಿತ್ತು?
ಸುಗದುಸ್ಸಂಗವನರಿದು ಸಲೆ ಸುಡುದು
ನಿಂದುದು ಮರ ಸಂದ-ದ ನಾರೇಶ್ವರಾ

ವಿಸ್ತಾರ-ವೈವಿಧ್ಯ

ಮ್ಯಾಂಗನೀಸ್ ಅದುರಿನ ರಫ್ತು ದರದ ಸುಧಾರಣೆಯೊಂದಿಗೆ ೧೯೭೮ ಮತ್ತು ಮುಂದಿನ ವರ್ಷಗಳ ಆರ್ಥಿಕ ಪ್ರವೃತ್ತಿ ತೀರಾ ಉತ್ತೇಜನಕಾರಿಯಾಗಿ ಕಾಣುತ್ತಿದೆ. ಕಂಪನಿಯ ಆರ್ಥಿಕ ಪರಿಸ್ಥಿತಿಯ ಗಣನೀಯ ಸುಧಾರಣೆಯು ಎರಡು ೨೦,೦೦೦ ಕೆವಿಎ ವಿದ್ಯುತ್ ಕುಲುಮೆಗಳ ಸ್ಥಾಪನೆಯ ಜೊತೆಗೆ ತಾಳೆ ಬಿದ್ದಿರುವುದು ಗಮನೀಯ ಅಂಶ. ಈ ಕುಲುಮೆಗಳು ವರ್ಷಕ್ಕೆ ೨೪,೦೦೦ ಟನ್ನುಗಳಷ್ಟು ಫೆರೋಸಿಲಿಕಾನ್ ಉತ್ಪಾದಿಸುತ್ತವೆ. ಈ ಕಾರ್ಯಕ್ರಮದಿಂದ ಕಂಪೆನಿಯ ಅದಿರು ಆಗೆತ ಹಾಗೂ ಲೋಹೋದ್ಯಮ ಚಟುವಟಿಕೆಗಳು ವಿಸ್ತಾರಗೊಳ್ಳುತ್ತವೆ; ವೈವಿಧ್ಯವಾಗಿ ಬೆಳೆಯುತ್ತದೆ.

ವೈ. ಆರ್. ಘೋರ್ಪಡೆ,
(ಅಧ್ಯಕ್ಷ ಭಾಷಣದಿಂದ) ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಡೈರೆಕ್ಟರ್

ದಿ ಸೊಂಡೂರು ಮ್ಯಾಂಗನೀಸ್ ಮತ್ತು ಐರನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ :
'ಲೋಹಾದ್ರಿ ಭವನ' ಯಶವಂತನಗರ 583 124
ಸೊಂಡೂರು ಮಾರ್ಗ (ಕರ್ನಾಟಕ)


ಗಣಿಗಳು :
ದೇವಗಿರಿ – 583 112
ಸೊಂಡೂರು ಮಾರ್ಗ

ಕಾರ್ಖಾನೆ :
ವ್ಯಾಸನಕೆರೆ – 583 201
ಹೊಸಪೇಟೆ ಸಮೀಪ (ಕರ್ನಾಟಕ)

ಫೋನ್ : 33 (ಸೊಂಡೂರು)

ಟೆಲೆಕ್ಸ್ :
ಬೆಂಗಳೂರು BG 427

ಗ್ರಾಮ್ಸ್ :
'SMIORE' ಸೊಂಡೂರು



ಮಲ್ಲಿಗೆ ಹಬ್ಬೋಗು ನನ್ನ ತವರೀಗೆ

ಪ. ರಾಮಕೃಷ್ಣ ಶಾಸ್ತ್ರಿ

ರಾಯಿದ್ರೆ ತವರೂರು. ನೀರಿದ್ರೆ ಹೆಗ್ಗೆರೆ, ಆನೆಯಿದ್ರರಸು ದೊರೆತನ ತಾಯವ್ವ ನೀನಿದ್ರೆ ಲೇಸು ತವರುಮನೆ'. ನವಮಾಸ ಹೊತ್ತು ಹೆತ್ತು ಸಲಹಿದ ದೈವ ಸ್ವರೂಪಳಾದ ತಾಯಿಗೆ ಪತಿಗೃಹ ಸೇರಿರುವ ಹೆಣ್ಣಿನ ಹೃದಯದಲ್ಲಿ ದೊರೆತಿರುವ ಸ್ಥಾನ ಅಮೂಲ್ಯವಾದುದು. ತಾಯಿಯ ವಿಶಾಲ ಕಲ್ಪನೆ-ಪ್ರೀತಿ, ವಾತ್ಸಲ್ಯ, ಅಂತಃಕರಣಗಳ ಪ್ರತಿಬಿಂಬ. ತಾಯಿ-ತವರುಮನೆಗಳ ಬಗ್ಗೆ ಹೆಣ್ಣಿನ ಭಾವನೆ ಹೇಗೆ ಮಿಡಿಯಬಲ್ಲದು, ಅದೆಷ್ಟು ಪ್ರೀತಿ ಮಮಂತೆ ಬಲ್ಲುದು, ಅದೆಷ್ಟು ಪ್ರೀತಿ ಮಮತೆಗಳನ್ನು ತುಂಬಿಕೊಂಡು ಹಿಗ್ಗಬಲ್ಲದು ಎಂಬುದಕ್ಕೆ ಕರ್ನಾಟಕದ ಮನೆಮನೆಗಳಲ್ಲಿ ಹಾಡಿ ಹಬ್ಬಿರುವ ಕೆಲವು ಸುಂದರ ಜಾನಪದ ಗೀತೆಗಳು ಜೀವಂತ ಸಾಕ್ಷಿಗಳಾಗಿವೆ.

ಬೇಸಿಗೆ ದಿವಸಕ್ಕೆ ಬೇವಿನ ಮರ ತಂಪು
ಭೀಮರತಿಯೆಂಬ ಹೊಳೆ ತಂಪು-
ಹಡೆದಬ್ಬೆ
ನೀ ತಂಪು ನನ್ನ ತವರೀಗೆ ||

ಹೆಣ್ಣಿಗೆ ತವರೂರು ರಸಬಾಳೆ ಹಣ್ಣಿನಂತೆ, ಬೆಳುವಲದ ಹಬ್ಬುಜೇನಂತೆ, ತಾಯಿಯ ಮೊಲೆಹಾಲ ರುಚಿಯ ಸವಿದಂತೆ, ಉಂಗುರ ಉಡಿದಾರ ಮುರಿದರೆ ಮಾಡಿಸಬಹುದು; ಮಡದಿ ಸತ್ತರೆ ತರಬಹುದು; ಆದರೆ ಹಡೆದಂಥ ತಾಯೆಲ್ಲಿ ಸಿಕ್ಕಾಳು ? ಎಂದು ಕೇಳುತ್ತಾಳೆ ಹೆಣ್ಣೊಬ್ಬಳು.

ನೀರ ಮೇಲೆ ನೀರು ನೀರಾಚೆ ತಾವರೆ
ತಾವರೆಯಾಚೆ ತವರೂರು-ಹೋದರೆ
ತಿರುಗಿ ಬರಲಿಕ್ಕೆ ಮನಸಿಲ್ಲ ||

ತವರೂರ ದಾರಿಯಲಿ ಕಲ್ಲಿಲ್ಲ, ಮುಳ್ಳಿಲ್ಲ. ಸಾಸುವೆಯಷ್ಟು ಮರಳಿಲ್ಲ. ತಾಯಿ ಮಕ್ಕಳ ದನಿಯಾದರೋ ತಾಳ ಬಾರಿಸಿದಂತೆ. 'ಯಾರು ಇದ್ದರೂ ನನ್ನ ತಾಯವ್ವನ ಹೋಲರು. ಸಾವಿರ ಕೊಳ್ಳಿ ಒಲೆಯಲ್ಲಿ ಉರಿದರೂ ಜ್ಯೋತಿ ನಿನ್ಯಾರೂ ಹೋಲರು' ಎಂದು ಹೇಳಲು ಹೆಣ್ಣಿಗೆ ಹೆಮ್ಮೆ. ಅವಳ 'ತವರೂರ ದಾರಿಯಲಿ ಗಿಡವೆಲ್ಲ ಮಲ್ಲಿಗೆ ಹೂವರಳಿ ಪರಿಮಳ ಘಮ್ಮೆಂದು ನಾ ಕೊಯ್ದು ಗಿಡಕೊಂದು

ತ್ತಾಳೆ. ಅಷ್ಟೇ ಅಲ್ಲ! 'ಕಾಶೀಗೆ ಹೋಗಲಿಕೆ ಎಷ್ಟೊಂದು ದಿನ ಬೇಕು, ತಾಸೊತ್ತಿನ ಹಾದಿ ತವರೂರು–ಮನೆಯಲ್ಲಿ ಕಾಶಿ ಗಂಗಾವಾಯಿ ಹಡೆದವ್ವ.' 'ತಾಯವ್ವ ಎಂಬವಳು ದೇವ-ಲೋಕದ ಮನಸ್ಯಾಳು, ಕಾಲು ಸೋಕಿದರೆ ಕರ್ಮವು ತಾಯವ್ವ ಕಾಶಿಗೆ ಹೋದರೂ ಕಳೆಯದು' ಅಂಥ ಪರಮ ಪಾವನೆ ಆಕೆ.

ನಡುದಾರ ಉಡದಾರ ಪಟ್ಟಿಯು
ಸಿರಿ ಭಾರ
ತವರಿನ ಹಂಬಲಿಕೆ ಬಲುಭಾರ।
ತಾಯಿದ್ರೆ ಭೋಗ ತಂದೆ ಇದ್ದರೆ ಭೋಗ
ನೀರಿದ್ರೆ ಬಾಳೆ ಗೊನೆ ಭೋಗ– ತಾಯವ್ವ
ನೀನಿದ್ರೆ ನಮಗೆ ಐಭೋಗ॥

ಗಂಡನಲ್ಲಿ ಹೇಳುತ್ತಾಳೆ, 'ತವರೂರಿಗ್ಹೋ-ಗದೆ ಮೂರ್ಮಾಸ ಸಂದೀತು, ತವರೀನ ಚಿಂತೆ ಬಲು ಚಿಂತೆ–ನನಗೀಗ ತಾಯ್ತಂದೆ ಚಿಂತೆ ಬಲು ಚಿಂತೆ' ತಾಯವ್ವನ ನೆನೆಯುವ ಹೊತ್ತಾದರೂ ಯಾವುದು? ಊರೆಲ್ಲ ಉಂಡು ಮಲಗಿದ್ರ ಬೆಳ್ಳಿಚುಕ್ಕೆ ಹೊರಟಾಗ ಅವಳ ನೆನೆವಾಳು. ತಂದೆಯ ನೆನೆದರೆ ತಂಗಳೂ ಬಿಸಿಯಾಯ್ತು. ಗಂಗಾದೇವಿ ನನ್ನ ಹಡೆದವ್ವನ ನೆನೆದರೆ ಮಾಸಿದ ತಲೆಯೂ ಮಡಿಯಾಯ್ತು'. ಇಂತಹ ತಾಯಿಲ್ಲದ ಮೇಲೆ ಇರಬಾರದೀ ಜನ್ಮ ಎನ್ನುತ್ತಾಳೆ ಹೆಣ್ಣು.

ಅಕ್ಕ ತಂಗಿಯು ಕಟ್ಟೆ ನೀರಿಗ್ಹೋಗಿ
ಅಲ್ಲಿ ನೋಡಕ್ಕ ತವರೂರು –ಬೀದೀಯ
ಹದಿನಾರು ತೇರು ಹರಿದಾವು॥

ಹೆಮ್ಮೆಯಿಂದ ತವರೂರನ್ನು ಒಬ್ಬಳು ತೋರಿದಾಗ ಇನ್ನೊಬ್ಬಳು ಅದು ಗಗನ ಕುಸುಮವೆಂಬಂತೆ ನಿಟ್ಟುಸಿರಿಟ್ಟು, 'ಹರಿದರೆ ಹರಿಯಲಿ ಮುರಿದರೆ ಮುರಿಯಲಿ ನಾವ್ ಒಬ್ರ ಮನೆಯ ಸೊಸೆಯಾಗಿ ತಂಗೆವ್ವ ತವ-ರೂರ ಸುದ್ದಿ ನಮಗ್ಯಾಕೆ?' ಎಂದು ಕಂಬನಿ ಗರೆಯುತ್ತಾಳೆ. ಅತ್ತೆ ಸತ್ತರೆ ಸೊಸೆ 'ಹಿತ್ತಲ ಕದವ ತಡೆಕೊಂಡು ನಮ್ಮನೆಯ ಮೃತ್ಯು-ದೇವತೆಯೆ ತೊಲಗಿತು' ಎಂದು ನೆಟಿಕೆ ಮುರಿಯುತ್ತಾಳೆ. ಆದರೆ ತಾಯಿ ಸತ್ತಾಗ ಏನೆಂದು ಕೊರಗುವಳು? 'ಬಾಗಿಲ ಕದ ತಡೆಕೊಂಡು ನಮ್ಮನೆಯ ಭಾಗ್ಯದೇವತೆಯೆ ನಡೆಯಿತು' ಎಂದು!

ಆಕಳ ಕರು ಜಿಂದು ಅಂಬ ಅಂಬಾ ಎಂದು
ತನ್ನಮ್ಮನ ಮೊಲೆಯ ನಲಿನಲಿದು
ತಿಂಬಾಗ
ನಮ್ಮವ್ವನ ಧ್ಯಾನ ನನಗಾಗಿ॥

ಸದಾ ತವರುಮನೆಯದೇ ಧ್ಯಾನ, ಅಲ್ಲಿಯದೇ ಹೊಗಳಿಕೆ. 'ಒಬ್ಬರಿರುವ ಮನೆಗೆ ಹಬ್ಬದಿರು, ಮಲ್ಲಿಗೆ ಒಬ್ಬಳೇ ಕೂತು ಮುಡಿಲಾರೆ–ಮಲ್ಲಿಗೆ ಹಬ್ಹೋಗು ನನ್ನ ತವರೀಗೆ' ಎಂದು ಮಲ್ಲಿಗೆಗೆ ಹೇಳುತ್ತಾಳೆ. ಜಂಗಮರು ಬಂದರೆ 'ಹೋಗಿ ನನ್ನ ತವರಿಗೆ ಸಣ್ಣಕ್ಕಿ ದಾನ ಕೊಡುತಾನೆ ನನ ಅಣ್ಣ ಹೊನ್ನಿನ ದಾನ ಕೊಡುತಾನೆ, ನೀರುಳ್ಳಿ ದಾನ ನೀರು ಮಜ್ಜಿಗೆ ದಾನ ಮತ್ತೆ ಅಂಬಲಿ ದಾನ ಕೊಡುತಾನೆ, ಅತ್ತಿಗೆ ಬಸುರಿ ಮನೆ ಮುಂದೆ ಚಪ್ಪರ ಅನ್ನ-ಛತ್ರವ ಇಡಿಸ್ಯಾನೆ ಅಣ್ಣಯ್ಯ ಮನೆ ಮುಂದೆ ಇಡಿಸ್ಯಾನೆ ಅರವಟ್ಟಿಗೆ' ಎಂದು ತವರಿನ ಹಿರಿಮೆ ಗರಿಮೆಯನ್ನು ಎತ್ತಿ ಹೇಳುತ್ತಾಳೆ. ಬಳೆಗಾರ ಬಂದಾಗ—

ಅಚ್ಚ ಕೆಂಪು ಬಳೆ ಕರಿಯ ಪಟ್ಟೆ ಬಳೆ
ನನ್ನ ಹಡೆದವ್ವಗೆ ಬಲು ಆಸೆ–ಬಳೆಗಾರ
ಹೋಗಿ ಬಾರಪ್ಪ ತವರೀಗೆ॥

ಆಗಲೂ ತಾಯ ನೆನಪು! ಮಳೆಯು ಬಂದರೆ ಬರಲಿ ಮರದ ಮೇಲಿರುವೆ ಮಳೆ ನಿಂತ್ರು ಮರದ ಹನಿ ಬಿಡದು ಹಡೆದವ್ವ ನೀ ಬಿಟ್ರು ನಿನ್ನ ಮನ ಬಿಡದು ಎಂದು ತಾಯಿಗೆ ಗಟ್ಟಿ ಆತುಕೊಳ್ಳುತ್ತದೆ ಮನಸ್ಸು. ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ ರುಚಿ ತಾಯ ಎದೆಹಾಲು ಎಂದು ನೆನೆಯುತ್ತಾಳೆ. ಬಾರದ್ದು ಬಯಸಿದರೆ ಅವಳಿಗೆ ಯಾರು ಕಳಿಸಿಯಾರು? ಆದರೆ ತಾಯೆ ಹಡೆದವ್ವ ದೇವದುರ್ಗದ ತುಳಸಿಯ ಬಾಳಕ ಮಾಡಿ ಮಗಳಿಗೆ ಕಳಿಸಿದಳಂತೆ. ಕಣ್ಣೆಂಜಲ

ಕಾಡಿಗೆ ಬಾಯುಂಜಲ ವೀಳ್ಯವ ಹಡೆದವ್ವನ ಬಾಯೆಂಜಲುಂಡು ಬೆಳೆದಾಕೆ ಇವಳಲ್ಲವೇ!

ಕಣ್ಣು ಕಾಣುವ ತನಕ ಬೆನ್ನು
ಬಾಗುವ ತನಕ
ತಾಯಿರಲಿ ನನಗೆ ತವರಿರಲಿ-ನನ್ನಪ್ಪ
ಅಣ್ಣಂದಿರಿರಲಿ ಕರೆಯಲಿಕೆ ||

'ಮಾತೃಹಸ್ತೇನ ಭೋಜನಂ'- ತಾಯಿಯ ಕೈಯಡುಗೆ ಎಂದೂ ತಪ್ಪದಿರಲಿ ಎಂದು ಶ್ರೀಕೃಷ್ಣ ಗುರುವಿನಲ್ಲಿ ವರ ಬೇಡಿದ್ದನಂತೆ. ಜೋಳದ ಒಣರೊಟ್ಟಿ ಸೊಪ್ಪಿನ ಪಲ್ಲೆ ರಾಜ್ಯಕ್ಕೆ ತವರವರು ಬಡವರಾದರೂ ಅಲ್ಲಿ ನಾಕು ದಿನ ಇದ್ದು ಬರುತ್ತೇನೆಂದು ಹೆಣ್ಣು ಬರುತ್ತಾಳಂತೆ. ಆದರೆ 'ಕಡಗ ಇಲ್ಲದ ಕೈಯು' ಕರುಣ ಇಲ್ಲದ ಪುರುಷ ಹಡೆದಬ್ಬೆಯಿಲ್ಲದ



"...'ಸುಖ-ಭೋಗಗಳನ್ನು ಕಡಿಮೆ ಮಾಡಿ ಪರಮಾತ್ಮನತ್ತ ಗಮನ ಹರಿಸಿ' ಅಂತ ಇವತ್ತಿನ ಉಪನ್ಯಾಸದಲ್ಲಿ ಹೇಳಿದಿರಲ್ಲ ಗುರುಗಳೇ..., ಅದಕ್ಕೇ ನಿಮ್ಮ 'ಆಶ್ರಮ'ದ ಫ್ಯಾನು, ವಿದ್ಯುತ್, ಸೋಫಾಸೆಟ್ಟುಗಳನ್ನೆಲ್ಲಾ ತೆಗೆಸಿಬಿಟ್ಟೆವು...!!"

ತವರಿಗೆ ಹೋದರೆ ನೀರಿಲ್ದ ಕೆರೆಗೆ ಕರು ಹೋಗಿ ಬಂದಂತೆ.' ತಾಯಿದ್ದರೆ ತವರ್ಮನೆ, ನೀರಿದ್ದರೆ ಕೆರೆ ಬಾವಿ- ತಾಯಿಲ್ಲದ ತವರಿಗೆ ಹೋದರೆ ಕಾಲ ಕಸ!

ತಾಯಿ ಕಟ್ಟಿದ ಬುತ್ತಿ ತರತರದ
ರಾಯಾಲಕ್ಕಿ
ಜರತರದ ಜಾಣೆ ಹಡೆದವ್ವ-ನಿನ ಬುತ್ತಿ
ಬಿಚ್ಚಿ ಉಂಡೆ ಭೀಮರಥಿಯ ಮೇಲೆ ||

ತಾಯಿ ಕಟ್ಟಿದ ಬುತ್ತಿಗೆ ಅಂಥ ರುಚಿ! ತಾಯಿ ಕೊಟ್ಟ ಕರಿಯ ಸೀರೆಯನುಟ್ಟು ಕೆರೆಯ ನೀರಿಗೆ ಹೋದೆ ಬೆಲೆಯ ಕೇಳ್ಯಾರು ಬಹುಮಂದಿ! ಆಗ 'ನನ್ನ ತವರವರು ಉಡಿಸಿಹರು' ಎಂದು ಹೇಳಲು ಹೆಣ್ಣಿಗೆ ಎಷ್ಟು ಹೆಮ್ಮೆ! ಬಾಳೆಯ ಹಣ್ಣಿನಂತೆ ಅವಳ ಮಗನ ಮೈಚಂದ; ಏನುಂಡು ಆ ಮಗನ ನೀ ಹಡೆದೆ ಎಂದು ಕೇಳಿದರೆ, 'ತವರ್ಮನೆ ಹಾಲುಂಡು ಹಸುರು ಬಳೆಯಿಟ್ಟು' ಎನ್ನುವಾಗ ಹೆಣ್ಣಿನ ಅಭಿಮಾನ ಉಕ್ಕುತ್ತದೆ. ಇನ್ನೊಂದೆಡೆ 'ವಾರಿಗೆ ಗೆಳತೀರು ಬತ್ತಿದಾ ಬಾವಿಗ್ಹೋಗಿ ಗರತಿ ಹೆತ್ತವ್ವನ ಸುದ್ದಿಯ ತೆಗೆದರೆ ಒರತೆಯ ನೀರ ಸೆಲೆ ಬಂತು' ಎಂಬ ಕತೆಯೂ ಇದೆ.

ಹಣ್ಣು ಸುಲಿಯಲು ಬೇಕು ವೀಳ್ಯ
ಮೆಲ್ಲಲು ಬೇಕು
ಮಲ್ಲಿಗೆ ಬೇಕು ತುರುಬಿಗೆ- ಹಡೆದವ್ವ
ನೀ ಬೇಕು ನನ್ನ ತವರೀಗೆ ||

ಎಂದು ಹೆಣ್ಣು ಹೃದಯ ಹಾರೈಸುತ್ತದೆ. ಹಾಲುಂಡ ತವರೀಗೆ 'ಹೊಳೆದಂಡೆಲಿರುವ ಗರಿಕೆಯ ಚಿಗುರಂತೆ ಅವರ ರಸಬಳ್ಳಿ ಹಬ್ಬಲಿ' ಎಂದು ಹರಸುತ್ತದೆ. 'ಅಲ್ಯಾಡತಾವ ಗಾಣ ತಿರುಗೂತಾವ ಪಾರುವದ ಪಕ್ಷಿ ಪಗಡೀಯ ಆಡ್ತಾವ ಅದೇ ನೋಡಣ್ಣ ನಮ್ಮ ತವರೂರು' ಹರ್ಷದ ಬುಗ್ಗೆ, ಉತ್ಸಾಹದ ಚಿಲುಮೆ!

ವಾರಿಗೆ ಪುರುಷರ ತೋಳ ಮೇಲಿನ ನಿದ್ದೆ
ಏಳೇ ನನ ಮಗಳು ಬೆಳಗಾಗಿ- ದೊಡ್ಯಾನ
ಕೀಲ ಕರಗೋಳು ಮೊಲೆಯುಂಡು ||

ತವರಿನಲ್ಲಿರುವ ತಾಯಿಗೆ ಸದಾ ಮಗಳದೇ ಚಿಂತೆ. ಇಂಥ ತಾಯಿ ಕಾಲವಶಳಾದಾಗ ಹೆಣ್ಣಿನ ಹೃದಯ ಮಿಡುಕುವ ಪರಿಯಾದರೋ ಕರುಳಿರಿಯುವಂಥದು.

ಹಡೆದವ್ವನ ನೋಡಲು ಧಡಬಡ ನಾ ಬಂದೆ
ಒಳಗೆ ಅಣ್ಣಯ್ಯನ ಮಡದೀಯ- ಧ್ವನಿ ಕೇಳಿ
ತಲೆಬಾಗಿಲಿಂದ ತಿರುಗಿದೆ ||

ಅಣ್ಣ ನಮ್ಮವನಷ್ಟು ಅತ್ತಿಗೆ ನಮ್ಮವಳಲ್ಲ! 'ಅಕ್ಕಿ ಕಿಚಡಿಯ ಮಾಡಿ ತುಪ್ಪ ಬೆಚ್ಚಗೆ ಮಾಡಿ, ಸುತ್ತೇಳು ನಿರಿಗೆ ಮರೆ ಮಾಡಿ ಉಣಿಸುವ ಅಕ್ಕರೆಯ ಅವ್ವನಿಲ್ಲ ಮನೆಯಲ್ಲಿ'. ಹಡೆದವ್ವ ಇದ್ದಾಗ ನಡುಮನೆ ನನಗಿತ್ತು; ಕಡಗದ ಕೈಯ ಸೊಸೆ ಬಂದು ನಡೆದಾಗ ತುದಿಬಾಗಿಲು ನನಗೆ ಎರವಾಯ್ತು' ಎಂದು ಪ್ರಲಾಪಿಸುತ್ತದೆ ಮನ. ಅಮ್ಮನಿಲ್ಲದ ಮನೆಗೆ ಹೋಗಿ ನಿರಾಶಳಾಗಿ ಹಿಂತಿರುಗಿದ ಹೆಣ್ಣು 'ತಾಯ ಮಗಲಿ ಬಂದಿಹೆನು ತಾಳಲಾರೆನು ಬಿಸಿಲು ಬೇಗ ಹಾಸಣ್ಣ ಹರಗೋಲು ಗಂಗಮ್ಮ ನಿನ್ನಂಥ ತಾಯ ಅಗಲಿಹೆನು' ಎಂದು ನದಿ ದಡದಲ್ಲಿ ನಿಂತು ಕಣ್ಣೀರ್ಗರೆಯುತ್ತಾಳೆ.

ಹಡೆದವ್ವ ಇದ್ದರೆ ಉಡಿಗನಲಕ್ಕಿ ಹಾಕಿ
ಹರದಾರಿ ತನಕ ಬರುತಿದ್ಳು |
ಹೆತ್ತವ್ವ ಇದ್ದರೆ ನೆತ್ತಿಗೆಣ್ಣೆ ಒತ್ತಿ
ಮುತ್ತಷ್ಟು ದೂರ ಕಳುವ್ಯಾಳು ||

ಆದರೆ ಅತ್ತಿಗೆ ಬಾಗಿಲ ಬಿಟ್ಟು ಇಳಿಯಳು ಹಟ್ಟಿ ಕಲ್ಬಿಟ್ಟು ಇಳಿಯಳು! ಇಂತಹ ಸ್ಥಿತಿಯಲ್ಲಿ ಅವಳ ಮೃದು ಹೃದಯ 'ಗಂಜೀಯ ಕುಡಿದರು ಗಂಡನ ಮನೆ ಲೇಸು, ಅಂದಣದ ಮೇಲೆ ಚಾಮರವ ಬೀಸಿದರೂ ಹಂಗೀನ ತವರು ಮನೆಯ ಸಾಕು' ಎಂದು ನಿರ್ಧರಿಸಿದುದರಲ್ಲಿ ಅಚ್ಚರಿಯಿಲ್ಲ. 'ಹಡೆದವ್ವ ಬೈದವರ ವಂಶ ಹುರಿಯಲಿ' ಎಂದು ಒಬ್ಬ ಮಗಳು ಆ ದುಃಖದಲ್ಲಿ ಶಪಿಸಿದ್ದಳಂತೆ. ತಾಯಿ ತೀರಿಹೋದ ಮೇಲೆ ತವರಿನ ಹಂಬಲ ಮಾಸಿ ಹೋಗುತ್ತದೆ.

ಗಂಡನ ಮನೆಯಲ್ಲಿ ಕಷ್ಟದಲ್ಲಿ ನಲುಗುತ್ತಿರುವ ಹೆಣ್ಣಿನ ಮನಸ್ಸಿಗೆ ಶಾಂತಿ, ಸಮಾಧಾನ, ಸುಖವೀಯುವದು ತವರಿನ ನೆನಪು, ತಾಯಿಯ ಸ್ಮರಣೆ. ಅಲ್ಲಿ ತಾಯಿಗಾಗಿ ಹಂಬಲಿಸುತ್ತಿರುವ ಹೆಣ್ಣಿನ ಪರಿಸ್ಥಿತಿಯಿದು :

ತಾಯಿ ಕಾಣದ ಜೀವ ತಾವೂರಿ ಬಾವೂರಿ
ಭಾಳ ಬಿಸಲಾನ ಅವರೀಯ | ಹೂವಿನ್ಹಾಂಗ
ಬಾಡತೀನಿ ತಾಯಿ ಕರೆದೊಯ್ಯೋ ||

ವಿಜಿಗೀಷು ಮಿತ್ರನನ್ನು ತಿರಸ್ಕರಿಸಿದರೆ, ತ್ಯಜಿಸಿದರೆ ಅವನ ಮೇಲೆ ದಾಳಿ ಮಾಡಿದರೆ, ಅವನ ಕೈಬಿಟ್ಟರೆ, ಅವನನ್ನು ಸಂಕಟದಿಂದ ಪಾರು ಏರುವದಿದ್ದರೆ ಮಿತ್ರ ತಿರುಗಿ ಬೀಳುವನು. ಆದ್ದರಿಂದ ವಿಜಿಗೀಷು ಮಿತ್ರನನ್ನು ಕಳೆದುಕೊಳ್ಳುವಂಥ ದೋಷಗಳನ್ನೆಸಗಬಾರದು.

— ಚಾಣಕ್ಯನೀತಿ

ಕುರುಡ ಕನ್ನಡಿಯ ಹಿಡಿದಲ್ಲಿ ಅದೇನ ಒಡಗೂಡುವ ?
ಬಧಿರಂಗೆ ಗಾಂಧರ್ವವಿರಲಿ ಸರಸಂಚವುಂಟೆ?
ಅರಿವು ಹೀನಂಗೆ ಷಟ್‌ಧರ್ಮದ ಪೂಜೆಯಲ್ಲದೆ
ನಿಜಾಂಕಧರ ಸೋಮೇಶ್ವರ ಲಿಂಗದಲ್ಲಿ ಅರಿವು ಸನ್ನದ್ಧನಾಗಬೇಕು.

ಸಂಸ್ಕೃತ ಕನ್ನಡ ಬಾಂಧವ್ಯ

ಎಸ್. ಕೃಷ್ಣಭಟ್ಟ

ಜಗತ್ತಿನ ಅತ್ಯಂತ ಸಂಪದ್ಭರಿತ ಭಾಷೆಗಳಲ್ಲಿ ಸಂಸ್ಕೃತವೂ ಒಂದು. ಈ ಕಾರಣದಿಂದ ಇದಕ್ಕೆ ಅಪಾರ ಬಂಧುವರ್ಗ ಹಾಗೂ ಅವುಗಳ ಜೊತೆಯಲ್ಲಿ ವಿವಿಧ ರೀತಿಯ ಬಾಂಧವ್ಯವಿರುವುದನ್ನು ನಾವು ನೋಡಬಹುದು. ಸಂಸ್ಕೃತವೆಂಬ ಪ್ರಾಚೀನ ಮಹಾ ವೃಕ್ಷದ ಆಶ್ರಯದಲ್ಲಿ ಹುಟ್ಟಿದ, ಬೆಳೆದ ಅಥವಾ ಪ್ರತ್ಯಕ್ಷವಾಗಿಯೂ ಪರೋಕ್ಷ ವಾಗಿಯೂ ಇದರ ಸಹಾಯ ಪಡೆದ ಭಾಷೆಗಳು ಅಸಂಖ್ಯಾತವಾಗಿವೆ. ಸಂಸ್ಕೃತವು ಉತ್ತರ ಭಾರತದ ಭಾಷೆಗಳಿಗೆ ಜನನಿಯೆನಿಸಿದ್ದರೆ, ದಕ್ಷಿಣದ ಭಾಷೆಗಳಿಗೆ ಪ್ರೀತಿಯ ಪೋಷಕಳೆನ್ನಬಹುದು. ಕನ್ನಡದ ಮಟ್ಟಿಗೆ ಹೇಳುವುದಾದರೆ, ಅದು ದ್ರಾವಿಡಮೂಲ ದಿಂದ ಬಂದಿದ್ದರೂ, ಶ್ರೀಮಂತ ಸಂಸ ತದೊಡನೆ ಅದರ ಬಾಂಧವ್ಯ ಇಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಸಂಸ್ಕೃತ ಕನ್ನಡಗಳಿಗೆ ಇರುವುದು ಹಿರಿಯ–ಕಿರಿಯ, ಪತಿ–ಪತ್ನೀ, ಸಹೋದರ–ಸಹೋದರಿ, ಆಪ್ತಮಿತ್ರರು–ಹೀಗೆ ನಾನಾ ರೀತಿಯಲ್ಲಿ ಸಂಬಂಧ.

ಕನ್ನಡ ಸಾಹಿತ್ಯದಲ್ಲಿ ಮೊದಲು ಉಪಲಬ್ಧವಾದ ಕವಿರಾಜಮಾರ್ಗದಿಂದ ಹಿಡಿದು, ಇತ್ತೀಚಿನ ಕೃತಿಗಳವರೆಗೂ ನಮ್ಮ ದೃಷ್ಟಿಯನ್ನು ಹಾಯಿಸಿದರೆ, ಅದಕ್ಕೆ ಸಂಸ್ಕೃತ ದೊಂದಿಗೆ ಇದ್ದ ವಿವಿಧ ರೀತಿಯ ಬಾಂಧವ್ಯದ ಮೇಲೆ ಬೆಳಕು ಚೆಲ್ಲುವ ಕೆಲವು ಅಂಶ ಗಳು ಗೋಚರಿಸುವುವು. ಸಂಸ್ಕೃತ ಸಮಾಸಗಳಿರುವ ಕನ್ನಡವನ್ನು ಬಳಸಿದ ಪ್ರಾಚೀನ ಬರವಣಿಗೆಯಲ್ಲಿ ನಮಗೆ ಸಿಕ್ಕಿರುವುದು ಕ್ರಿ. ಶ. ೪೫೦ ರ ಹಲ್ಮಿಡಿ–ಶಾಸನ. ಪ್ರೊ; ಎಂ. ವಿ. ಸೀತಾರಾಮಯ್ಯನವರು ಹೇಳುವಂತೆ, ಕನ್ನಡ ನಾಡಿನಲ್ಲಿ ಈ ಶಾಸನಕ್ಕಿಂತ ಎರಡು ಮೂರು ಶತಮಾನಗಳಿಗೆ ಮುಂಚೆಯೇ ಸಂಸ್ಕೃತವು ಪ್ರಚಲಿತವಾಗಿರಬೇಕು.

ತ್ತಿದ್ದ ಸಂಸ್ಕೃತ ಭಾಷೆಯ ಜೊತೆಗೆ, ಕನ್ನಡ ನಾಡಿನಲ್ಲಿ ಕನ್ನಡಕ್ಕೂ ಸಮಾನ ಮನ್ನಣೆ ದೊರೆಯಿತು. ಆಸ್ಥಾನ ಕವಿಗಳಲ್ಲಿ ಅನೇಕರು ಎರಡು ಭಾಷೆಗಳಲ್ಲೂ ಪ್ರಾವೀಣ್ಯವನ್ನು ಪಡೆದಿದ್ದರು. ಇದರ ಪರಿಣಾಮವಾಗಿ, ವಸ್ತು, ಶೈಲಿ, ಛಂದಸ್ಸು, ಅಲಂಕಾರ, ಶಬ್ದಸಂಪತ್ತು ಮುಂತಾದ ಅಂಶಗಳಲ್ಲಿ ಸಂಸ್ಕೃತವು ಕನ್ನಡದ ಮೇಲೆ ಅಳಿಯದಂತಹ ಅಚ್ಚನ್ನು ಒತ್ತಿತು. ಕನ್ನಡದಲ್ಲಿ ಬಹು ಮಟ್ಟಿಗೆ ಧಾರ್ಮಿಕ ಸಾಹಿತ್ಯವನ್ನೇ ಸೃಷ್ಟಿಸಿದ ಕವಿಗಳಿಗೆ ಸಂಸ್ಕೃತ ಭಾಷೆಯ ವೇದೋಪನಿಷತ್ತುಗಳು, ರಾಮಾಯಣ–ಮಹಾಭಾರತಗಳು, ಪುರಾಣಗಳು, ಇತರ ಶಾಸ್ತ್ರಗ್ರಂಥಗಳು ದಾರಿದೀಪವಾದುವು. ಒಮ್ಮೊಮ್ಮೆ ಸಂಸ್ಕೃತ ಶಬ್ದಗಳ ಬಳಕೆ ಕನ್ನಡದಲ್ಲಿ ನೋಡುವುದರ ಜೊತೆಗೆ, ಸಂಸ್ಕೃತ ಶಬ್ದಗಳಿಗೆ ಪೂರ್ತಿಯಾಗಿ ಬಹಿಷ್ಕಾರ ಹಾಕಲೆತ್ನಿಸಿದ ಆಂಡಯ್ಯ (ಕ್ರಿ. ಶ. ೧೨೨೫) ನಂಥವರನ್ನೂ ಕಾಣುತ್ತೇವೆ.

ಆಂಗ್ಲ ಕವಿ ಟೆನಿಸನ್ ಹೇಳುವಂತೆ, "ಒಂದು ಒಳ್ಳೆಯ ಕ್ರಮದಿಂದಲೂ ಜಗತ್ತಿಗೆ ಹಾನಿಯಾಗುವುದನ್ನು ತಪ್ಪಿಸಲು ಬದಲಾವಣೆ ಅವಶ್ಯಕ"ವಷ್ಟೆ. ಕ್ರಮೇಣ ಸಂಸ್ಕೃತ–ಕನ್ನಡಗಳ ಬಾಂಧವ್ಯದಲ್ಲೂ ಬದಲಾವಣೆಯಾಯಿತು. ಸಂಸ್ಕೃತದ ಶ್ರೀಮಂತಿಕೆಯ ಭಾರವನ್ನು ಕನ್ನಡ ಹೊತ್ತದ್ದು ಒಂದು ಹಂತವಾದರೆ, ಅದರ ಮುಂದಿನದು ತಾನೇ ಸ್ವತಂತ್ರವಾಗಬೇಕೆಂಬ ಪ್ರವೃತ್ತಿ. ಕನ್ನಡ ಈ ದಿಸೆಯಲ್ಲಿ ಮುಂದುವರಿದ ಕಾರಣ, ಮಾರ್ಗದರ್ಶನಕ್ಕಾಗಿ ನೇರವಾಗಿ ಸಂಸ್ಕೃತ ಗ್ರಂಥಗಳನ್ನು ನೋಡುವುದರ ಬದಲು, ಕಾವ್ಯಮೀಮಾಂಸಾದಿ ಶಾಸ್ತ್ರಗ್ರಂಥಗಳನ್ನೂ ಕಾವ್ಯಗಳನ್ನೂ ಕನ್ನಡಕ್ಕೆ ಅನುವಾದ ಮಾಡಿಕೊಳ್ಳಬೇಕೆಂಬ ಹಂಬಲ ಹೆಚ್ಚಾಯಿತು. ಹಾಗೆಯೇ ಮುಂದುವರಿದಂತೆಲ್ಲಾ, ಸಂಸ್ಕೃತದ ರೀತಿ ನೀತಿಗಳು ಈಗಿನ ಸಮಾಜಕ್ಕೆ ಪೂರ್ಣವಾಗಿ ಸರಿಹೊಂದುವುದಿಲ್ಲವೆಂಬ ಭಾವನೆಯು ಬೆಳೆದುಬಂದಿತು. ಈ ಕಾರಣದಿಂದ ಕತೆ, ಕಾದಂಬರಿ, ಕವನ, ನಾಟಕ ಮುಂತಾದ ಪ್ರಕಾರಗಳಲ್ಲಿ ಕನ್ನಡ ಲೇಖಕರ ಗಮನ ಪಾಶ್ಚಾತ್ಯ ಸಾಹಿತ್ಯಗಳ ಕಡೆಗೆ, ವಿಶೇಷವಾಗಿ ಆಂಗ್ಲ ಸಾಹಿತ್ಯದ ಕಡೆಗೆ ಹರಿಯಿತು. ಹೀಗೆ ಸಂಸ್ಕೃತದ ರೂಪಶೈಲಿಗಳಿಗೆ ಕನ್ನಡದಲ್ಲಿ ಈಗ ಪ್ರಾಧಾನ್ಯ ಕಡಿಮೆಯಾಗುತ್ತಿದ್ದರೂ, ಕನ್ನಡದಲ್ಲಿ ಹಾಸುಹೊಕ್ಕಾಗಿ ಬಂದಿರುವ ಸಂಸ್ಕೃತದ ಸಾವಿರಾರು ಸರಳ, ಸುಲಲಿತ ಶಬ್ದಗಳ ಬಳಕೆಗೇನೂ ಕುಂದುಂಟಾಗಿಲ್ಲ.

ಸಂಸ್ಕೃತ–ಕನ್ನಡ ಬಾಂಧವ್ಯದ ಮೊದಲನೇ ಹಂತದಲ್ಲಿ, ಉಭಯಭಾಷಾಕೋವಿದರು ಬರೆದ ಗ್ರಂಥ ರಾಶಿಯನ್ನೇ ನಾವು ನೋಡಬಹುದು. ಅಲಂಕಾರ ಹಾಗೂ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಕ್ರಿ. ಶ. ೯ ನೇ ಶತಮಾನದ್ದೆಂದು ಹೇಳಲಾದ ಕವಿರಾಜಮಾರ್ಗವು ಪ್ರಥಮ ಉಪಲಬ್ಧ ಗ್ರಂಥ. ಇದರ ಕರ್ತೃವಿನ ವಿಚಾರದಲ್ಲಿ ವಿವಾದವಿದ್ದರೂ, ಇದು ದಂಡಿಯ ಸಂಸ್ಕೃತದ ಕಾವ್ಯಾದರ್ಶನವನ್ನು ಅನುಸರಿಸಿ ಬರೆದದ್ದು ಎಂಬುದರಲ್ಲಿ ಸಂದೇಹವೇ ಇಲ್ಲ. ಅನಂತರ ಸಂಸ್ಕೃತದ ಅಲಂಕಾರಿಕ ಗ್ರಂಥಗಳ ಜಾಡನ್ನೇ ಹಿಡಿದು ಬಂದ ಕನ್ನಡ ಗ್ರಂಥಗಳು ಹಲವಾರು ಇವೆ: ನಾಗವರ್ಮನ ಕಾವ್ಯಾವಲೋಕನ (ಕ್ರಿ. ಶ. ೧೧೫೦), ಛಂದೋಂಬುಧಿ, ಸಾಳ್ವನ ರಸರತ್ನಾಕರ (೧೫೫೦), ಕೇಶಿರಾಜನ ಶಬ್ದಮಣಿದರ್ಪಣ ಮುಂತಾದುವು.

ಪ್ರಾಚೀನ ಕಾವ್ಯನಾಟಕಾದಿಗಳ ರಚನೆಯಲ್ಲಂತೂ ಕನ್ನಡವು ತನ್ನ ಶ್ರೀಮಂತ ಬಂಧುವಾದ ಸಂಸ್ಕೃತದಿಂದ ಹೇರಳವಾದ ಪ್ರಯೋಜನ ಪಡೆದಿದೆ. ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಂತಹ ಹಳಗನ್ನಡ ಗದ್ಯ ಗ್ರಂಥದಲ್ಲಿ ಹರಿಷೇಣನ ಬೃಹತ್ಕಥಾಕೋಶದ ಕಥಾನಿರೂಪಣ ಶೈಲಿಯನ್ನು ಗುರುತಿಸಬಹುದು. ಮಹಾಕವಿ ಪಂಪನು ಹಳಗನ್ನಡ ಸಾಹಿತ್ಯಕ್ಕೆ ಕೊಟ್ಟಿರುವ ದೊಡ್ಡ ಕಾಣಿಕೆಯಾದ ಪಂಪಭಾರತ (ವಿಕ್ರಮಾರ್ಜುನ ವಿಜಯ)ದ ವಸ್ತು ವ್ಯಾಸ ಭಾರತದ್ದು ಮತ್ತು ಪ್ರಕಾರ ಸಂಸ್ಕೃತದ ಚಂಪೂ; ಈ ಕಾವ್ಯ ಪ್ರಕಾರವನ್ನೇ ಪಂಪನು ತನ್ನ ಆದಿಪುರಾಣಕ್ಕೂ ಬಳಸಿದ್ದಾನೆ.

ಹೀಗೆಯೇ, ಪೊನ್ನನ ಶಾಂತಿಪುರಾಣವನ್ನು ಪೂರ್ಣವಾಗಿ ಮತ್ತು ದುರ್ಗಸಿಂಹನ ಪಂಚ ತಂತ್ರವನ್ನು ಬಹುಮಟ್ಟಿಗೆ ಚಂಪೂಕಾವ್ಯ ವೆನ್ನಬಹುದು. ರನ್ನನ ಕೃತಿರತ್ನವಾದ ಗದಾ ಯುದ್ಧಕ್ಕೆ ಮೂಲವು ವ್ಯಾಸಭಾರತದ ಗದಾ ಸೌಪ್ತಿಕ ಪರ್ವ; ಅಲ್ಲದೆ ಭಾಸನ ಊರುಭಂಗ ಹಾಗೂ ಭಟ್ಟನಾರಾಯಣನ ವೇಣಿಸಂಹಾರ ನಾಟಕಗಳು ರನ್ನನ ಮೇಲೆ ತಮ್ಮ ಪ್ರಭಾವ ವನ್ನು ತಕ್ಕಮಟ್ಟಿಗೆ ಬೀರಿ. ನಾಟಕೀಯತೆಗೆ ಪುಟಕೊಟ್ಟಿವೆ. ಶಿವಪುರಾಣದ ವಸ್ತುವನ್ನು ತೆಗೆದುಕೊಂಡು ಬರೆದ ಹರಿಹರನ ಗಿರಿಜಾ ಕಲ್ಯಾಣದಲ್ಲಿ ಕಾಳಿದಾಸನ ಕುಮಾರಸಂಭ ವದ ಛಾಯೆಯನ್ನು ಗುರುತಿಸಬಹುದಾಗಿದೆ. ಹಾಗೆಯೇ ಮುಂದೆ ದೃಷ್ಟಿ ಹಾಯಿಸಿದರೆ, ಕೃಷ್ಣ ಕತೆಯನ್ನು ಆಧರಿಸಿ ಜಗನ್ನಾಥವಿಜಯ ವನ್ನು ಬರೆದ ರುದ್ರಭಟ್ಟ, ಸಂಸ್ಕೃತದ ದಶ-ಕುಮಾರ ಚರಿತ್ರೆಗೆ ಚಂಪೂರೂಪವನ್ನು ಕೊಟ್ಟ ಚೌಂಡರಸನನ್ನೂ ನಾವು ಗಮನಿಸ ಬಹುದು.

ಕಾವ್ಯಪ್ರಕಾರದಲ್ಲಲ್ಲದಿದ್ದರೂ ವಸ್ತು ಹಾಗೂ ವರ್ಣನಾಶೈಲಿಯಲ್ಲಿ ಸಂಸ್ಕೃತದ ಮಾರ್ಗವನ್ನು ಅನುಸರಿಸಿದ ರಾಘವಾಂಕ, ನೇಮಿಚಂದ್ರ, ಚಾಮರಸ, ಲಕ್ಷ್ಮೀಶ, ನಾರಣಪ್ಪ ಮುಂತಾದ ಕವಿಪುಂಗವರನ್ನೂ ನಾವು ಈ ಸಂದರ್ಭದಲ್ಲಿ ಪರಿಗಣಿಸಬೇಕಾಗು ತ್ತದೆ. ಡಾ. ರಂ. ಶ್ರೀ. ಮುಗಳಿಯವರು ಹೇಳುವಂತೆ, ನೇಮಿಚಂದ್ರನ ಲೀಲಾವತಿ ಪ್ರಬಂಧವೆಂಬ ಶೃಂಗಾರ ಚಂಪೂಕಾವ್ಯದ ವರ್ಣನೆಗಳಲ್ಲಿ ಶ್ಲೇಷೋಪಮೆ, ವಿರೋಧಾ ಭಾಸ, ಶಬ್ದಚ್ಛಲ ಮುಂತಾದ ಬಗ್ಗೆ ಕಲ್ಪನೆ ಗಳ ಕೆಲ ಮಟ್ಟಿನ ಸಾಮ್ಯವನ್ನು ಕಣ್ಣಿಟ್ಟು ನೋಡಿದರೆ, ನೇಮಿಗೆ ಸುಬಂಧುವೇ ಪ್ರೇರಕ ನೆಂಬುದು ಸ್ಪಷ್ಟವಾಗುತ್ತದೆ. ಇನ್ನು, ಚಾಮರಸನ 'ಸತ್ತವರ ಕತೆಯಲ್ಲದ' ಪ್ರಭು ಲಿಂಗಲೀಲೆ, ರಸಭರಿತ ಕಾವ್ಯವಾದ ಲಕ್ಷ್ಮೀಶನ ಜೈಮಿನಿ ಭಾರತ, ಕನ್ನಡಸಾಹಿತ್ಯ ಪತಾಕೆಯನ್ನೇ ಎತ್ತಿಹಿಡಿದಿರುವ ಗದು ಗಿನ ನಾರಣಪ್ಪನ ಭಾರತ ಮುಂತಾದ ಕಾವ್ಯಗಳೂ ಸಂಸ್ಕೃತ-ಕನ್ನಡಗಳ ಬಾಂಧವ್ಯಕ್ಕೆ ಸಾಕ್ಷಿ. ಅಕ್ಕ ಮಹಾದೇವಿಯಂತಹ ವಚನ ಕಾರರ ವಚನಗಳಲ್ಲಿ ಮತ್ತು ಪುರಂದರ ದಾಸಾದಿ ದಾಸರ ಕೀರ್ತನೆಗಳ ವಸ್ತುವಿನಲ್ಲಿ ಉಪನಿಷತ್ತು ಹಾಗೂ ಪುರಾಣಗಳ ಸ್ಪಷ್ಟ ಛಾಯೆ ಕಂಡುಬರುವುದು. ಡಾ. ದ. ರಾ. ಬೇಂದ್ರೆಯವರ ಪ್ರಕಾರ, ಸುಮಾರು ಕ್ರಿ. ಶ. ೧೫೦೦ ರಲ್ಲಿದ್ದ ನಿಜಗುಣಶಿವಯೋಗಿಗಳು ವಿದ್ಯಾರಣ್ಯರ ಸಂಸ್ಕೃತ ಗ್ರಂಥಗಳಾದ ಪಂಚ-ದಶೀ ಮತ್ತು ಜೀವನ್ಮುಕ್ತಿ ವಿವೇಕಗಳನ್ನು ನೋಡಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ನಡುಗನ್ನಡದಲ್ಲಿನ ಮೇರುಕೃತಿಯಾದ ಮುದ್ದಣ್ಣನ ರಾಮಾಶ್ವಮೇಧವಂತೂ 'ರನ್ನ-ಗನ್ನಡಿಗೆ ಸುವರ್ಣದ ಚೌಕಟ್ಟು'; ಸಂಸ್ಕೃತದ ವಸ್ತು ಹಾಗೂ ವರ್ಣನಾಶೈಲಿಗೆ ಈ ಕವಿ-ಯದೇ ಆದ ನವೀನ ಮನಮೋಹಕ ರೂಪ. ಈಚೆಗೆ ಡಿ. ವಿ. ಜಿ, ಮಾಸ್ತಿ, ಬೇಂದ್ರೆ, ಕುವೆಂಪು ಮುಂತಾದವರ ಕೆಲವು ಗ್ರಂಥ ಗಳಂತೂ ಸಂಸ್ಕೃತ ಕನ್ನಡ ಬಾಂಧವ್ಯಕ್ಕೆ ಒಳ್ಳೆಯ ಸಾಕ್ಷಿ.

ಇನ್ನು ಮುಂದಿನ ಹಂತದಲ್ಲಿ, ಅಲ್ಲಲ್ಲಿ ಸಂಸ್ಕೃತ ಕನ್ನಡಕ್ಕೆ ಸಂಬಂಧಿಸಿದಂತೆ ಕೆಲವು ಗ್ರಂಥಗಳೂ ರಚಿಸಲ್ಪಟ್ಟರೂ ಹೇರಳವಾಗಿ ಅನುವಾದ ಸಾಹಿತ್ಯ ಸೃಷ್ಟಿಯಾಯಿತು. ಈ ದಿಸೆಯಲ್ಲಿ ಹಿಂದೆಯೇ ಪ್ರಯತ್ನಕ್ಕೆ ಅಂಕು ರಾರ್ಪಣವಾದದ್ದನ್ನು ನಾವು ನೋಡಬಹುದು. ಉದಾ - ೧ನೇ ನಾಗವರ್ಮನ ಕರ್ಣಾಟಕ ಕಾದಂಬರಿ. ಕಳೆದ ಒಂದೆರಡು ಶತಮಾನ-ಗಳ ಸುವರ್ಣ ವೃಷ್ಟಿಯಾಯಿತೆಂದರೆ ಅಚ್ಚರಿಯ ಮಾತಲ್ಲ. ಈ ಸಂದರ್ಭದಲ್ಲಿ, 'ಅಭಿನವ ಕಾಳಿದಾಸ' ಬಸವಪ್ಪಶಾಸ್ತ್ರಿಗಳ 'ಶಾಕುಂತಲ,' ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ 'ಕುಮಾರಸಂಭವ' ಮತ್ತು 'ರಘು ವಂಶ' ನಂಜನಗೂಡ ಅನಂತನಾರಾಯಣ ಶಾಸ್ತ್ರಿಗಳ 'ಕರ್ಣಾಟಕ ನಾಗಾನಂದ', ಧೋಂಡೊ ನರಸಿಂಹ ಮುಳಬಾಗಲ್ ಅವರ 'ಮೃಚ್ಛಕಟಿಕ', 'ಮಾಲವಿಕಾಗ್ನಿಮಿತ್ರ' ಕುಂಡಲಗಿರಿಯಾಚಾರ್ಯರ 'ಹರ್ಷಚರಿತ್ರೆ',

ಎಲ್. ಗುಂಡಪ್ಪನವರ ಭಾಸನ ನಾಟಕಗಳು ಮುಂತಾದ ಗ್ರಂಥಗಳ ರಾಶಿಯನ್ನೇ ಹೆಸರಿಸ ಬಹುದು. ದೇವಶಿಖಾಮಣಿ ಆಳಸಿಂಗರಾಚಾರ್ಯರ 'ಭಾರತ', 'ಭಾಗವತ'ಗಳು ಒಂದು ರೀತಿಯವಾದರೆ, ಈಚೆಗೆ ಬಂದಿರುವ ರಂಗನಾಥಶರ್ಮರ 'ರಾಮಾಯಣ'ದ ಅನುವಾದ ದಂತಹ ಗ್ರಂಥಗಳು ಇನ್ನೊಂದು ರೀತಿಯವು. ಇನ್ನು ಮೂಲ ಸಂಸ್ಕೃತ ಗ್ರಂಥಗಳ ಸಾರವನ್ನು ಭಟ್ಟಿ ಇಳಿಸಲು ಮಾಡಿದ ಸಫಲ ಯತ್ನವನ್ನು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳ ವಚನಭಾರತ, ಬಸವರಾಜಶಾಸ್ತ್ರೀ ಕೊಂಡಿಕೊಪ್ಪಮಠ ಅವರ ಕಿರಾತಾರ್ಜುನೀಯಸಾರ, ನೈಷಧೀಯಸಾರ, ಕುಮಾರ ಸಂಭವಸಾರ ಮುಂತಾದ ಕೃತಿಗಳಲ್ಲಿ ಕಾಣುತ್ತೇವೆ. ಜೊತೆಯಲ್ಲೇ, ಸಂಸ್ಕೃತದ ಜಾಡನ್ನನುಸರಿಸಿ, ಕೆಲ ನಾಟಕಾದಿಗಳು ಕನ್ನಡದಲ್ಲಿ ರಚಿತವಾಗಿವೆ.

ಶಾಸ್ತ್ರಗ್ರಂಥಗಳಲ್ಲೂ ಅನುವಾದ ಕಾರ್ಯ ಗಣನೀಯ ಪ್ರಮಾಣದಲ್ಲಿ ನಡೆದಿದೆ. ಹೊಳೆ ನರಸೀಪುರದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು ಶ್ರೀ ಆದಿ ಶಂಕರರ ಪ್ರಸ್ಥಾನತ್ರಯಿ ಭಾಷ್ಯವನ್ನು ಕನ್ನಡಿಸಿರುವರಲ್ಲದೆ, ಅದ್ವೈತ ವೇದಾಂತದ ವಿಚಾರವಾಗಿ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇಂತಹದೇ ಕೆಲಸ ದ್ವೈತ ವೇದಾಂತ ಕ್ಷೇತ್ರದಲ್ಲಿ ಉಡುಪಿಯ ಸರ್ವಜ್ಞ ಸೇವಾಸಂಘದಿಂದ ನಡೆದಿದೆ. ಮೈಸೂರು ಅರಮನೆಯಿಂದ ಪ್ರಕಟವಾದ ವೇದ–ಪುರಾಣಗಳ ಅನುವಾದ, ಡಾ. ಕೆ. ಕೃಷ್ಣಮೂರ್ತಿಗಳು ಮಾಡಿರುವ ಸಂಸ್ಕೃತದ ಮುಖ್ಯ ಅಲಂಕಾರ ಹಾಗೂ ಕಾವ್ಯ ಮೀಮಾಂಸಾ ಗ್ರಂಥಗಳ ಅನುವಾದ, ವಿಷ್ಣುಮೂರ್ತಿ ಭಟ್ಟರ ವ್ಯಾಕರಣ ಗ್ರಂಥಗಳ ಅನುವಾದ, ಶಾ. ವಿ. ಕೈಕಿಣಿ ಅವರ ವಿಶ್ವಗುಣಾದರ್ಶ ಚಂಪೂ ಅನುವಾದ ಮುಂತಾದುವು ಅನುವಾದ ಸಾಹಿತ್ಯಕ್ಕೆ ಅಮೋಘವಾದ ಕೊಡುಗೆ. ನಿಘಂಟು, ವಿಶ್ವಕೋಶ, ಭಾಷಾ

ಕನ್ನಡ ಬಾಂಧವ್ಯ ಸಾಕಷ್ಟು ಬೆಸೆದಿರುವುದನ್ನು ನೋಡಬಹುದು. ಉದಾ:— ಮುಮ್ಮಡಿ ಕೃಷ್ಣರಾಜ ಒಡೆಯರ ತತ್ವನಿಧಿ. ಶಾಂತಕವಿಯ ಅಲಂಕಾರಶಾಸ್ತ್ರ, ಪಾನ್ಯಂ ಸುಂದರ ಶಾಸ್ತ್ರಿಗಳ ಶಿವತತ್ವ ರತ್ನಾಕರ, ಪಾ. ವೆಂ. ಚಿ. ಪೇಟಕರ್ ಅವರ ಸಂಸ್ಕೃತ–ಕನ್ನಡ ಶಬ್ದವ್ಯುತ್ಪತ್ತಿ ಇತ್ಯಾದಿ. ಆಯುರ್ವೇದ ಜ್ಯೋತಿಷ್ಯ ಯಕ್ಷಿಣಿ ಮುಂತಾದ ಕ್ಷೇತ್ರಗಳಲ್ಲೂ ಸಾಕಷ್ಟು, ಅನುವಾದ ಸಾಹಿತ್ಯ ಹಾಗೂ ಸ್ವತಂತ್ರ ಕೃತಿಗಳ ನಿರ್ಮಾಣ ನಡೆದು ಸಂಸ್ಕೃತ-ಕನ್ನಡಗಳ ಬಾಂಧವ್ಯ ಅಧಿಕಗೊಂಡಿದೆ. ಉದಾ:- ಚರಕ ಸಂಹಿತೆ, ಅಷ್ಟಾಂಗ ಹೃದಯ ಮುಂತಾದ ಪ್ರಮುಖ ಆಯುರ್ವೇದಗಳ ಅನುವಾದ; ದ. ಕೃ. ಭರದ್ವಾಜರ ಆಯುರ್ವೇದ ಚಿಕಿತ್ಸಾಸಾರ, ಗರಣಿ ಕೃಷ್ಣಾಚಾರ್ಯರ ಆಯುರ್ವೇದ, ಬೋಳಂತೂರು ಕೃಷ್ಣಪ್ರಭು ಅವರ ಜಾತಕ ದರ್ಪಣ; ಸೂರ್ಯನಾರಾಯಣರಾವ್ ಅವರ ಇಂದ್ರಜಾಲ, ಶ್ರೀನಿವಾಸಯ್ಯಂಗಾರ ಸೆಟ್ಲೂರರ ಮಿತಾಕ್ಷರದ ಭಾಷಾಂತರ, ಬೆಳ್ಳಾವೆ ವೆಂಕಟನಾರಣಪ್ಪನವರ ಜೀವವಿಜ್ಞಾನ ಇತ್ಯಾದಿ. ಇವುಗಳಲ್ಲದೆ, ಶ್ರೀ ರಾಮಕೃಷ್ಣಾಶ್ರಮ, ಭಾರತೀಯ ವಿದ್ಯಾಭವನ ಮುಂತಾದ ಸಂಸ್ಥೆಗಳು ಪ್ರಕಟಿಸಿರುವ ಸ್ತೋತ್ರ ಸಾಹಿತ್ಯ, ಆಚಾರ ಗ್ರಂಥಗಳು, ಇತರ ಧಾರ್ಮಿಕ ಸಾಹಿತ್ಯ ಸಂಸ್ಕೃತ ಕನ್ನಡಗಳನ್ನು ಪರಸ್ಪರ ಇನ್ನೂ ಹತ್ತಿರಕ್ಕೆ ತಂದಿವೆ.


ಕನ್ನಡಕ್ಕೆ ಹೆಚ್ಚು ಕೆಲಸ ಮಾಡಿದ ಉಭಯ ಭಾಷಾ ಪಂಡಿತರು ಸಂಸ್ಕೃತದಲ್ಲಿ ಕೆಲವು ಕೃತಿಗಳನ್ನು ರಚಿಸಿ ಈ ಎರಡು ಭಾಷೆಗಳ ಬಾಂಧವ್ಯವನ್ನು ಪರೋಕ್ಷವಾಗಿಯೂ ತೋರಿಸಿದ್ದಾರೆ. ಉದಾ: ಹಿಂದೆ, ಭಟ್ಟಾಕಳಂಕನ ಶಬ್ದಾನುಶಾಸನ, ಈಚೆಗೆ ಬಸವಪ್ಪಶಾಸ್ತ್ರಿಗಳ ಶಾರದಾ ದಣ್ಡಕಮ್, ಶ್ರೀ ಸಚ್ಚಿದಾನಂದ ಸರಸ್ವತಿಗಳ ವೇದಾಂತ ದಿಣ್ಡಿಮ ಇತ್ಯಾದಿ.

ಅನೇಕ ಶತಮಾನಗಳಿಂದ ಸಂಸ್ಕೃತದ ಸಂಪತ್ತಿನಿಂದ ವಿಜೃಂಭಿಸುತ್ತಿದ್ದ ಕನ್ನಡ

ಸಾಹಿತ್ಯದತ್ತ ವಾಲಿದೆ. ಈ ಹಂತದಲ್ಲಿ ಕನ್ನಡದಲ್ಲಿ ಬಂದಿರುವ ಕೆಲವು ಉತ್ತಮ ಕೃತಿಗಳು ಸಂಸ್ಕೃತಕ್ಕೆ ಅನುವಾದವಾಗುವುದರ ಮೂಲಕ ಅದರ ಬಾಂಧವ್ಯದ ಋಣವನ್ನು ತೀರಿಸುವ ಪ್ರಯತ್ನಗಳೂ ನಡೆಯುತ್ತಿವೆ. ಉದಾ: ಡಾ. ಡಿ. ವಿ. ಜಿ. ಅವರ ಮೇರು ಕೃತಿ ಮಂಕುತಿಮ್ಮನ ಕಗ್ಗ, ಡಾ. ನಾಗರಾಜನ್ ಅವರು ಅನುವಾದಿಸಿರುವ ಕೈಲಾಸಂ ಅವರ ಕೀಚಕ ಇತ್ಯಾದಿ. ಇವಲ್ಲದೆ ಕೆಲವು ಅಪ್ರಕಟಿತ ಗ್ರಂಥಗಳ ಹಾಗೂ ಈಗ ನಡೆಯುತ್ತಿರುವ ಕಾರ್ಯಗಳ ಉದಾಹರಣೆಗಳೂ ಇವೆ. ಒಂದು ಕುತೂಹಲಕರವಾದ ಅಂಶವೆಂದರೆ ಬಿ. ವೆಂಕಟರಾಮ ಭಟ್ಟ ಎಂಬ ಹೈಸ್ಕೂಲು ಪಂಡಿತರು. ಕನ್ನಡದ ಭಾಮಿನಿ ಷಟ್ಪದಿಯಲ್ಲಿ ಸಂಸ್ಕೃತದಲ್ಲಿ ಕೃಷ್ಣನ ಕತೆಯನ್ನು ರಚಿಸಿದ್ದಾರೆಂದು ತಿಳಿದು ಬಂದಿದೆ. ಅಲ್ಲದೆ ಬೆಂಗಳೂರು ಶಂಕರ ಮಠದ ಕೊಡುರು ಕೃಷ್ಣ ಜೋಯಿಸರು ಶ್ರೀ ಸುರೇಶ್ವರ ಆಚಾರ್ಯರ ವಾರ್ತಿಕ ಎಂಬ ೧೨,೦೦೦ ಶ್ಲೋಕಗಳುಳ್ಳ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದಾರೆ. ಹೀಗೆ ಇನ್ನೂ ಅನೇಕ ವಿದ್ವಾಂಸರಿಂದ ಮೂಲೆ ಮೂಲೆಗಳಲ್ಲಿ ಇಂತಹ ಕಾರ್ಯ ನಡೆಯುತ್ತಿರಬಹುದು. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೆಲಸವಾಗಿ, ಪಾಶ್ಚಾತ್ಯ ದರ್ಶನ ಹಾಗೂ ವಿಜ್ಞಾನದ ಉದ್ಗ್ರಂಥಗಳು ಕನ್ನಡದ ಮೂಲಕ ಸಂಸ್ಕೃತಕ್ಕೆ ಹೋಗಬಹುದಾಗಿದೆ. ಈ ಕಾವ್ಯದಲ್ಲಿ ಸಂಸ್ಕೃತ ಪ್ರತಿಭಾ, ಸವಿತ್, ಪ್ರಜ್ಞಾಲೋಕ ಮುಂತಾದ ಸಂಸ್ಕೃತ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದೆ.

ಹೀಗೆ ನಾನಾ ರೀತಿಯಲ್ಲಿ ಸಂಸ್ಕೃತ-ಕನ್ನಡಗಳ ಬಾಂಧವ್ಯವನ್ನು ಬೆಳೆಸಲು ಅನೇಕ ವಿದ್ವಾಂಸರು ಬಹುವಾಗಿ ಶ್ರಮಿಸಿದ್ದಾರೆ. ಆದರೆ ಸ್ಥಳಾಭಾವದಿಂದ ಅಥವಾ ನನಗೆ ತಿಳಿಯದೆ ಆ ಎಲ್ಲ ಮಹನೀಯರ ಶ್ರಮದ ಫಲವನ್ನು ವಿವರಿಸಲು ಸಾಧ್ಯವಿಲ್ಲದುದಕ್ಕೆ ವಿಷಾದಿಸುತ್ತೇನೆ.

ಕೊನೆಯದಾಗಿ ಒಂದು ಮಾತು. ಮಾನವನ ವೇಷಭೂಷಣಗಳಲ್ಲಿ ಆದಂತೆ, ಸಾಹಿತ್ಯಾದಿ ಕ್ಷೇತ್ರಗಳಲ್ಲೂ ಅವನ ವಿಚಾರ ಲಹರಿ ಬದಲಾವಣೆ ಹೊಂದುತ್ತಿರುವುದು; ವಿವಿಧ ರೀತಿ ನೀತಿಗಳು ಚಕ್ರಾಕಾರವಾಗಿ ತಿರುಗುವವು. ಈ ತಿರುಗುವಿಕೆಯು ಕೆಲವು ವೇಳೆ ಹಳೆಯ ಬಿಂದುವನ್ನೇ ಹೊಸ ರೀತಿಯಲ್ಲೂ ಮುಟ್ಟಬಹುದು. ಈ ಮಾತು ಸಂಸ್ಕೃತದಂತಹ ಮಹಾಸಾಗರದೊಡನೆ ಪ್ರತ್ಯಕ್ಷ ಅಥವಾ ಪರೋಕ್ಷ ಸಂಬಂಧ ಹೊಂದಿರುವ ಕನ್ನಡದಂತಹ ಮಧುರ ಭಾಷೆಗಳಿಗೂ ಅನ್ವಯಿಸುವುದು. ಹೀಗೆ, ಕಾಲಕಾಲಕ್ಕೂ ಸಂಸ್ಕೃತದೊಡನೆ ಕನ್ನಡಕ್ಕೆ ಇರುವ ಬಾಂಧವ್ಯದ ಹಿರಿಮೆ ಬೇರೆ ಬೇರೆ ರೀತಿಯಲ್ಲಿ ಶೋಭಿಸುವುದು. "ಯಾವತ್ ಸ್ಥಾಸ್ಯಂತಿ ಗಿರಯಃ ಯಾವದ್ ವಿಂಧ್ಯಹಿಮಾಚಲೌ । ಯಾವದ್ ಗಂಗಾ ಚ ಗೋದಾ ಚ ತಾವದೇವ ಹಿ ಸಂಸ್ಕೃತಮ್ ॥" ಎಂಬ ಪ್ರೊ. ಎಚ್. ಎಚ್. ವಿಲ್ಸನ್‌ರ ಅಮರವಾಣಿ ಸಂಸ್ಕೃತ-ಕನ್ನಡದ ಬಾಂಧವ್ಯಕ್ಕೂ ಅನ್ವಯಿಸುವುದರಲ್ಲಿ ಸಂದೇಹವೇ ಇಲ್ಲ. ✡



ಬೇಡವೆಂದರೂ ಬಾಡಿಗೆಯ ಮನೆಯಲ್ಲಿಯೇ ಇರುವವನಿಗೂ ಬಾಡಿಗೆ ಕೊಟ್ಟರೂ ಮನೆ ಬಿಡಿಸುವ ಮಾಲೀಕನಿಗೂ ದಂಡ. ತಾನಾಗಿಯೇ ಮನೆ ಬಿಡುವವನು ವರ್ಷದ ಉಳಿದ ಬಾಡಿಗೆ ತುಂಬಬೇಕಾಗುವದು. ಒಂದೇ ಮನೆಯಲ್ಲಿ ಅನೇಕರು ಇರುತ್ತಿದ್ದರೆ ದುರಸ್ತಿ ಖರ್ಚನ್ನು ಎಲ್ಲರೂ ಕೊಡಬೇಕು

ಲೋಕಸಿದ್ಧ ದೇವರು--ಶ್ರುತ್ಯುಕ್ತ ಬ್ರಹ್ಮ*

ಸಂಗ್ರಹ: **ನರಸಿಂಹ ಗುಡಿ**

ಶ್ರುತ್ಯುಕ್ತ ಬ್ರಹ್ಮನಿಗೂ ಲೋಕಪ್ರಸಿದ್ಧ ಅಥವಾ ಇತರ ಶಾಸ್ತ್ರಪ್ರಸಿದ್ಧ ದೇವರು ಎಂಬುವನಿಗೂ ಮಹತ್ತಾದ ಅಂತರ ವಿರುವದು. ಲೋಕಸಿದ್ಧ ದೇವರಿಗೆ ಪೂಜೆ ಬೇಕು ಮತ್ತು ಸ್ತೋತ್ರ ಬೇಕು. ಅವಿಲ್ಲ ದಿದ್ದರೆ ಅವನಿಗೆ ಕೋಪ ಬರುವದು. ಅವ ನಿಗೆ ಆಹಾರ ನಿವೇದನ ಮಾಡದಿದ್ದರೆ ಸ್ವಪ್ನ ಮುಂತಾದುದರಲ್ಲಿ ಬಂದು ತನಗೆ ಹಸಿವು ಎಂದು ಭಕ್ತನನ್ನು ಮೊರೆಯಿಡುವನು ಅಥವಾ ಹೆದರಿಸುವನು. ನಿವೇದನ ಮುಂತಾದುದು ನಡೆದರೆ ತಾನು ತೃಪ್ತನಾದೆನೆಂದು ಹೇಳಿಕೊಳ್ಳುವನು. ಸಂಸಾರದಲ್ಲಿ ಏನಾದರೂ ತೊಂದರೆ ಇದ್ದರೆ ಅವನಿಗೆ ಹರಕೆ ಹೊರ ಬೇಕು. ಹರಕೆಯನ್ನು ಒಪ್ಪಿಸುವದರಲ್ಲಿ ಲೋಪವಿದ್ದರೆ ಅವನಿಗೆ ಕೋಪ ಬರುವುದು. ಅದರಿಂದ ಹರಕೆ ಹೊತ್ತವರಿಗೆ ಮತ್ತಷ್ಟು ಕಷ್ಟ ಒದಗುವುದು. ಅವನಿಗೆ ಸಂದರ್ಭಾನು-ಸಾರ ಭಕ್ತನಿಗಾಗುವ ಕಷ್ಟದ ಜ್ಞಾನವಿರುವು ದಿಲ್ಲ ಆದರೂ ಅವನನ್ನು ಸರ್ವಜ್ಞ ಎಂದು ಸಂಬೋಧಿಸಿ ಆ ವಿಷಯವನ್ನು ತಿಳಿಸಬೇಕು. ಅನಂತರ ಅವನು 'ಸಹಾಯ ಮಾಡುವೆನು' ಎಂಬ ಭರವಸೆ ಕೊಡಬೇಕು. ಆದರೂ ಅವನು ಸ್ವತಂತ್ರವಾಗಿ ಸಹಾಯ ಮಾಡುವುದಿಲ್ಲ. ಅವನ ಕಡೆಯವರು ಅವರವರ ಸಹಾಯ ಮಾಡಬೇಕು. ಅವನಿಗೆ ಶತ್ರು ಮಿತ್ರರಿರು ವರು. ಮಿತ್ರರ ಸಹಾಯವನ್ನು ತೆಗೆದು

ಬೇಕು. ಅವನು ಭಕ್ತಪಕ್ಷಪಾತಿ ಬೇರೆ. ಭಕ್ತನು ತಪ್ಪು ಮಾಡಿದರೂ ಅದನ್ನು ಮುಚ್ಚಿಟ್ಟು ಭಕ್ತನಲ್ಲದವನು ತಪ್ಪುಮಾಡದಿದ್ದರೂ ಅವ ನನ್ನು ನಿಗ್ರಹಿಸುವುದು ಅವನ ಸ್ವಭಾವ, ಯಾವನಾದರೊಬ್ಬನು ದೇವರನ್ನು ಅತ್ಯಂತ ಭಕ್ತಿಯಿಂದ ಪೂಜಿಸಿದರೆ ಅವನೇ ದೇವರಿಗೆ ಪೂಜ್ಯನೋ ದೇವರೇ ಅವನಿಗೆ ಪೂಜ್ಯನೋ ಎಂಬ ಸಂದೇಹ ಬೇರೆ. ಈ ಸಂದೇಹದ ಯುದ್ಧದಲ್ಲಿ ಭಕ್ತಪರಾಧೀನ ಎಂಬ ಬಿರುದು ದೇವರಿಗೇ ಹೊರತು ದೇವಪರಾಧೀನ ಎಂಬುದು ಭಕ್ತನಿಗಲ್ಲ. ಈ ಭಾವಗಳಲ್ಲಿ ಯಾವುದನ್ನಾದರೂ ಯಾರಾದರೂ ಆಕ್ಷೇಪಿಸಿ ದರೆ ಇದೆಲ್ಲ ಪರಮಾತ್ಮನ ಲೋಕವಿಡಂಬನ ಅಥವಾ ಲೀಲೆ ಎಂಬ ಸಿದ್ಧವಾದ ಸಮಾಧಾನ ಬೇರೆ; ಜ್ಞಾನಕ್ಕೆ ಅನಧಿಕಾರಿಗಳಾದ ಸಾಮಾನ್ಯ ಜನತೆಗೆ ಇದೇ ಬೇಕಾದುದು ಎಂಬ ಉಪ-ಪಾದನೆ ಬೇರೆ; ಈ ಮಾರ್ಗವೇ ಕಾಲಕ್ರಮ ದಲ್ಲಿ ಜ್ಞಾನಮಾರ್ಗಕ್ಕೆ ಬಿಡುವುದು ಎಂಬ ಆಶ್ವಾಸನೆ ಬೇರೆ. ಜ್ಞಾನದಂತೆ ಇದೂ ಒಂದು ಮಾರ್ಗ ಎಂದು ವಾದಿಸುವುದು ಬೇರೆ, ಇದು ದೊಡ್ಡವರು ಹೇಳಿದ್ದು, ಇದನ್ನು ನಂಬಲೇ ಬೇಕು. ಯಾವ ಕಾರಣದಿಂದಲೂ ನಂಬಿಕೆಗೆ

---

* ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾರತೀಯ ತತ್ತ್ವಶಾಸ್ತ್ರಾಧ್ಯಾಪಕರಾಗಿದ್ದ ವಿದ್ವಾನ್ ಎಚ್. ಎಸ್. ರಾಘವೇಂದ್ರಾಚಾರ್ಯರ 'ಭಾರತೀಯ ತತ್ತ್ವಶಾಸ್ತ್ರ

ಕುಂದು ಬರಬಾರದು ಎಂಬ ವ್ರತ ಬೇರೆ. ಈ ಮಹಾಪ್ರಮೇಯಗಳನ್ನು ಲೋಕಕ್ಕೆ ತಿಳಿಸುವುದಕ್ಕೆ ಯಾವ ಶಾಸ್ತ್ರ ಸಂಪ್ರದಾಯವೂ ಬೇಡ. ಈ ಭಾವಗಳು ಜ್ಞಾನಕ್ಕೆ ಸ್ಥಾನ ಕೊಡದ ಮನುಷ್ಯನ ಬುದ್ಧಿಯಲ್ಲಿ ಸ್ವಾಭಾವಿಕವಾಗಿ ಮೂಡುವವು. ಇವು ಹೆಚ್ಚಾಗಿ ವ್ಯಾಪಾರ ಮಾಡಿದರೆ ಅಂತಹ ಭಕ್ತನು ದೇವರನ್ನು ನೋಡಿವದನು ಎಂಬ ಪ್ರಸಿದ್ಧಿ ಬರುವದು. ದೇವರನ್ನು ದೂತನನ್ನಾಗಿ ಮಾಡಿಕೊಂಡವನು ಅವನು ಎಂಬ ಪ್ರಸಿದ್ಧಿ ಮುಂದಿನ ಮೆಟ್ಟಲು. ಒಟ್ಟಿನಲ್ಲಿ ಈ ಭಾವಗಳ ಬೆಳವಣಿಗೆ ಅನಂತ ಮತ್ತು ನಾನಾಮುಖ. ಅವು ಯಾರಲ್ಲಿ ಅತ್ಯಂತ ವೃದ್ಧಿಗೆ ಬರುವವೋ ಅವನನ್ನು ಜಗತ್ತು ತಡೆಯುವದೇ ಕಷ್ಟ. ಭಾವಗಳು ಒಂದಾದರೂ ವಿಷ್ಣು, ಶಿವ ಮೊದಲುಮಾಡಿಕೊಂಡು ಮಾರಿ ಮಸಣಿಯವರೆಗೆ ದೇವರ ಹೆಸರುಗಳು ಭಿನ್ನವಾದಂತೆಲ್ಲ ಮತಗಳು ಮತ್ತು ಮತಾಚಾರಗಳು ಹುಟ್ಟುವವು. ಈ ದೇವರುಗಳಲ್ಲಿ ಪರಸ್ಪರ ಸ್ನೇಹಿತರು ಕೆಲವರು, ದ್ವೇಷಿಗಳು ಕೆಲವರು. ಆರಾಧ್ಯವಾದ ದೇವರುಗಳು ಸ್ನೇಹಿತರಾದರೆ ಅಂಥ ಮತಗಳು ಒಂದಾಗುವ ಸಂಭವ. ಇಲ್ಲದಿದ್ದರೆ ಅವಕ್ಕೆ ನಿತ್ಯದ್ವೇಷ. ಇದು ಪ್ರಪಂಚದ ಸ್ವಭಾವ ಪರಿಸ್ಥಿತಿ. ಈ ಭಾವಗಳ ಹಿಡಿತಕ್ಕೆ ಸಿಕ್ಕಿದವರಿಗೆ ತತ್ತ್ವಜ್ಞಾನವನ್ನು ಹುಟ್ಟಿಸಲು ಪ್ರವೃತ್ತವಾದ ವೇದಕ್ಕೂ ಆ ಭಾವಗಳಿಗೆ ಅನುಕೂಲವಾದ ಅರ್ಥವಾಗುವದೇ ಹೊರತು ವೇದದ ಅರ್ಥವಾಗುವದಿಲ್ಲ. ಸ್ವಾರ್ಥಪರತೆಯೇ ಈ ಭಾವಗಳ ಮೂಲ.

ಈ ಮತಗಳ ಸಹಾನುಭೂತಿ ಅಥವಾ ಸಮನ್ವಯದ ಪ್ರಯತ್ನವು ಅಲ್ಲಲ್ಲಿ ಕಂಡು ಬರುವುದು. ಅನೇಕ ಸಂದರ್ಭದಲ್ಲಿ ಅದೂ ಒಂದು ಸ್ವಾರ್ಥಸಾಧನೆಯಾಗಿ ಕೃತಕವಾಗುವುದು ಮತ್ತು ಪರ್ಯವಸಾನದಲ್ಲಿ ಆಗಲೇ ಇದ್ದ ಮತಗಳ ಸಂಖ್ಯೆಗೆ ಮತ್ತೊಂದನ್ನು ಸೇರಿಸುವುದು. ಸಮನ್ವಯದ ಹೆಸರಿನಲ್ಲಿ ತನ್ನ ಮತವನ್ನು ಭದ್ರಪಡಿಸಿಕೊಳ್ಳುವ ಪ್ರಯತ್ನವೇ ಇದಕ್ಕೆ ಕಾರಣ...

ಶ್ರುತ್ಯುಕ್ತ ಬ್ರಹ್ಮ ವಿಚಾರವೇ ಬೇರೆ. ಶ್ರುತ್ಯುಕ್ತ ಬ್ರಹ್ಮ ಸರ್ವದಾ ಸರ್ವನಿಯಾಮಕ ಅವನೇ ಸತ್ತಾಪ್ರದ. ಈ ತತ್ತ್ವದೃಷ್ಟಿಯಿಂದ ಜಗತ್ತೇ ಬ್ರಹ್ಮಮಯ, "ಸರ್ವಂ ಖಲ್ವಿದಂ ಬ್ರಹ್ಮ-" (ಈ ಸರ್ವವೂ ಬ್ರಹ್ಮನೇ, ಬೇರೆಯಲ್ಲ) ಎಂದು ಶ್ರುತಿಸಿದ್ಧಾಂತ. ಈ ಬ್ರಹ್ಮನೇ ದೇವರು. ಅವನಿದ್ದಾನೆ ಎಂದು ನಂಬುವುದು ಅವನ ಸ್ವರೂಪಕ್ಕೆ ಸಂಗತವಲ್ಲ. ಜಿಜ್ಞಾಸಾದಿಂದ ಅವನನ್ನು ತಿಳಿಯುವುದೇ ಅವನ ಸ್ವರೂಪಕ್ಕೆ ಸಂಗತ. ಅವನನ್ನು ನಂಬುವುದು ಬೇಡ. ಅವನನ್ನು ತಿಳಿಯಬೇಕು. ಆ ತಿಳಿವಳಿಕೆಯು ಸ್ನೇಹ ಸಹಿತವಾಗಬೇಕು. ಆಗಲೇ ತಿಳಿವಳಿಕೆಯು ದೃಢವಾಗುವುದು. ತಿಳಿವಳಿಕೆಯಲ್ಲಿರುವ ಆದರವೇ ಈ ಸ್ನೇಹ. ಇದಕ್ಕೆ ಶಾಸ್ತ್ರದಲ್ಲಿ ಭಕ್ತಿ ಎಂದು ವ್ಯವಹಾರ. ಈ ಆದರ ಸಹಿತವಾದ ತಿಳಿವಳಿಕೆಗಿಂತ ಬೇರೆಯಾದ ಪೂಜೆ ಇಲ್ಲ. ಈ ತಿಳಿವಳಿಕೆಯೇ ಅವನ ಮಾಹಾತ್ಮ್ಯ ಜ್ಞಾನ. ಈ ಜ್ಞಾನವೇ ಅವನ ಪೂಜೆ. ಅದರಲ್ಲಿ ಎಲ್ಲ ವಿಧವಾದ ಪೂಜೆಯೂ ಅಡಗಿರುವುದು. ಈ ತಿಳಿವಳಿಕೆ ಇಲ್ಲದಿರುವಾಗ ಮಾಡಿದ ಪೂಜೆ ಸ್ವಾತ್ಮ ಪೂಜೆ, ದೇವರ ಪೂಜೆಯಲ್ಲ. ತತ್ತ್ವಜ್ಞಾನವಿಲ್ಲದ ಮನುಷ್ಯನು ತನ್ನ ಸ್ವಾರ್ಥಸಾಧನೆಕ್ಕೋಸ್ಕರ ದೇವರ ಪೂಜೆ ಮಾಡುವನು. ಈ ಸಂದರ್ಭದಲ್ಲಿ ಅವನು ಪೂಜೆ ಮಾಡುವುದು ದೇವರನ್ನಲ್ಲ, ತನಗೆ ಅಭಿಷ್ಟವಾದ ಅರ್ಥವನ್ನು ಅಥವಾ ಆ ಅರ್ಥವನ್ನು ಬಯಸುವ ತನ್ನನ್ನು. ತಾನು ಪೂಜಿಸಬೇಕೆಂದಿರುವ ದೇವರಿಂದ ತನ್ನ ಅಭೀಷ್ಟಪ್ರಾಪ್ತಿ, ತನ್ನ ಸ್ವಾರ್ಥಸಾಧನೆ ಆಗುವದಿಲ್ಲವೆಂದು ತಿಳಿದಾಗ ಅವನು ಆ ದೇವರ ಪೂಜೆಯನ್ನು ಬಿಡುವುದೇ ಈ ವಿಷಯದಲ್ಲಿ ಸಾಕ್ಷೀ. ಒಟ್ಟಿನಲ್ಲಿ ಲೌಕಿಕ ಭಾವಗಳಿಂದ ಜೀವನವು ಸ್ವಾರ್ಥಮಯವಾಗುವುದು. ಶ್ರುತ್ಯುಕ್ತಭಾವದಿಂದಲಾದರೋ ಸರ್ವಥಾ ಸ್ವಾರ್ಥತ್ಯಾಗವಾಗುವುದು. ✡


ಅವರು ಜೈವಿಕ ವಿಜ್ಞಾನದ ರಾಮಾನುಜನ್ ಅಂತೆ......

ವಿಜ್ಞಾನಿಯಾದ ಶಿಕ್ಷಕನ ಕಥೆ

ಬದರೀನಾಥ


ಅವನ ಶಿಕ್ಷಣ ಪ್ರಾಥಮಿಕ ಏಳನೆಯ ಇಯತ್ತೆಯನ್ನು ಪಾಸಾಗುವುದರೊಂದಿಗೇ ಮುಗಿದಿತ್ತು. ಮುಂದೆ ಜೀವನವಿಡೀ ಒಂದಿಲ್ಲೊಂದು ಪ್ರಾಥಮಿಕ ಶಾಲೆಯಲ್ಲಿ ದುಡಿತ. ನಿವೃತ್ತನಾಗುವ ಹೊತ್ತಿಗೆ ಉತ್ತರ ಪ್ರದೇಶದ ನೈನಿತಾಲ್ ಜಿಲ್ಲೆಯ ನೌಕುಚಿಯಾತಾಲ್ ಎಂಬಲ್ಲಿ ಒಂದು ಶಾಲೆಯ ಮುಖ್ಯಾಧ್ಯಾಪಕ ಹುದ್ದೆಗೇರಿದ್ದೇ ಅತಿ ಹೆಚ್ಚಿನ ಸಾಧನೆ. ದೇಶದ ತುಂಬೆಲ್ಲ ಹರಡಿರುವ ಹತ್ತಾರು ಸಾವಿರ ಶಾಲೆಗಳಲ್ಲಿಯ ಎಷ್ಟೋ ಶಿಕ್ಷಕರಂತೆ ಅವನೂ ಬಾಹ್ಯಜಗತ್ತಿಗೆ ಅಪರಿಚಿತನಾಗಿಯೇ ತನ್ನ ಬಾಳಿಗೆ ತಾನು [illegible]ಳಿಯಬಹುದಾಗಿತ್ತು..

ಆದರೆ ೭೩ ವರ್ಷದ ನಿವೃತ್ತ ಶಿಕ್ಷಕ ಶ್ರೀ. ಚಂದ್ರಶೇಖರ ಲೋಹುಮಿಯವರನ್ನು ಇತ್ತೀಚೆ ಭಾರತವು, ದೇಶದ ಶ್ರೇಷ್ಠ ವಿಜ್ಞಾನಿಯೊಬ್ಬರನ್ನು ಗೌರವಿಸುವ ತೆರದಲ್ಲಿ ಮನ್ನಿಸಿತು. ಅದು ಶಿಕ್ಷಣ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆಗಾಗಿ ಅಲ್ಲ, ವಿಜ್ಞಾನ ರಂಗದಲ್ಲಿ ಅವರು ಮಾಡಿದ ಕಾರ್ಯಕ್ಕೆ (೧೯೭೪ರಲ್ಲಿ ಉತ್ತಮ ಶಿಕ್ಷಕರಿಗೆ ವರುವರುಷವೂ ದೊರೆಯುವ, ರಾಷ್ಟ್ರಪ್ರಶಸ್ತಿ ಅವರಿಗೆ ಸಿಕ್ಕದ್ದೂ ಇದೆ). ಉತ್ತರ ಮತ್ತು ಮಧ್ಯ ಭಾರತದ ವಿಸ್ತಾರ ಪ್ರದೇಶದಲ್ಲಿ ವಿಪುಲವಾಗಿಯೂ ಅತಿ ದಟ್ಟವಾಗಿಯೂ ಬೆಳೆಯುವ ಲಂಟಾನಾ (Lantana Camara) ಪೊದೆಯನ್ನು ನಿಗ್ರಹಿಸಿ ನಾಶಪಡಿಸುವ ವಿಜ್ಞಾನಿಗಳಿಗೆ ಸಮ್ಮತವಾಗುವಂಥ ಮಾರ್ಗವೊಂದನ್ನು ಅವರು ಕಂಡುಹಿಡಿದಿದ್ದಾರೆ. ಯಮುನಾ ಮತ್ತು ಗಂಡಕಿ ನದಿಗಳ ನಡುವಿನ ಪ್ರದೇಶದಲ್ಲಿ ಬುಂದೇಲಖಂಡದಿಂದ ವಿಂಧ್ಯಾದ್ರಿಯ ಅರಣ್ಯಗಳವರೆಗಿನ ಭಾಗದಲ್ಲೆಲ್ಲ ಲಂಟಾನಾ ವಿಪರೀತವಾಗಿ ಬೆಳೆಯತೊಡಗಿದೆಯಲ್ಲದೆ ಹಿಮಾಲಯದ ಅಡಿಭಾಗವನ್ನು ಭರದಿಂದ ಆಕ್ರಮಿಸುತ್ತಿದೆ. ಈ ಭಾಗದಲ್ಲಿ ಲಂಟಾನಾ ಎಷ್ಟೊಂದು ಸಮೃದ್ಧವಾಗಿ ಬೆಳೆಯುತ್ತದೆಂದರೆ ಮನುಷ್ಯರಾಗಲಿ ದನಕರುಗಳಾಗಲಿ ಈ ಪೊದೆ-



ಚಂದ್ರಶೇಖರ

ಗಳನ್ನು ಭೇದಿಸಿಕೊಂಡು ಹೋಗುವುದು ಸಾಧ್ಯವೇಯಿಲ್ಲ. ಅಲ್ಲಿಯ ಹಳ್ಳಿಗರ ಹೇಳಿಕೆಯ ಪ್ರಕಾರ ಆನೆಗಳು ಕೂಡ ಭೇದಿಸಲಾರದಷ್ಟು ಈ ಬೆಳೆ ದಟ್ಟವಾಗಿರುತ್ತದೆ. ಈ ಪೊದೆ ಹೊಲಗಳನ್ನಾಕ್ರಮಿಸಿತೆಂದರೆ ಭೂಮಿಯು ಕೃಷಿಗೆ ನಿರುಪಯುಕ್ತವೇ ಆಗುತ್ತದೆ. ಯಾಕೆಂದರೆ ಪರಿಣಾಮಕಾರಿಯಾಗಿ ಈ ಕಳೆಯನ್ನು ನಾಶಗೊಳಿಸುವ ದಾರಿಯೇ ಯಾರಿಗೂ ತಿಳಿದಿರಲಿಲ್ಲ. ಬೇರು ಸಹಿತ ಕಿತ್ತಿ ಹಾಕಲು ಬಾರದಷ್ಟು ದಟ್ಟವಾಗಿ ಬೆಳೆಯುವ ಇದನ್ನು ಸುಟ್ಟರೂ ಸಾಯುವುದಿಲ್ಲ. ನೆಲದಲ್ಲುಳಿದ ಬೇರುಗಳು ಕೆಲ ಕಾಲದಲ್ಲಿ ಪುನಃ ಚಿಗಿಯುತ್ತವೆ. ಈ ಪೊದೆಯನ್ನು ನಾಶಪಡಿಸುವಂಥ ಯಾವುದೇ ರಾಸಾಯನಿಕವೂ ಇಲ್ಲ. ಉತ್ತರ ಪ್ರದೇಶದ ಅರಣ್ಯಗಳ ಮುಖ್ಯ ಕಾಂಜರ್ವೇಟರರ ಪ್ರಕಾರ ಲಂಟಾನಾ ಕೃಷಿ ಮತ್ತು ಅರಣ್ಯ ಭೂಮಿಯನ್ನು ಆಕ್ರಮಿಸುವುದು ಮಾತ್ರವಲ್ಲ ಈ ಪೊದೆಗೆ ಬೆಂಕಿ ಬಿದ್ದು ಅಮೂಲ್ಯ ಅರಣ್ಯ ಸಂಪತ್ತು ನಾಶವಾಗುವುದೂ ಇದೆ. ಅಗ್ನಿ ಪ್ರಕೋಪಗಳಿಗೆ ಇನ್ನುಳಿದ ಗಿಡಬಳ್ಳಿಗಳಿಗಿಂತ ಲಂಟಾನಾ ಕಾರಣವಾಗುವ ಸಂಭವ ಹೆಚ್ಚೆಂದು ಅವರು ಹೇಳುತ್ತಾರೆ.



ಒಂದು ಸೂಜಿ ಮೊನೆಯ ಗಾತ್ರದ್ದಿರುವ ಲಂಟಾನಾ ಕೀಟವನ್ನು ತಮ್ಮ ರಾವುಗಾಜಿನಲ್ಲಿ ನೋಡಿ ಚಂದ್ರಶೇಖರ ಅದರ ಚಿತ್ರ ಬಿಡಿಸಿದ್ದಾರೆ.

ಚಂದ್ರಶೇಖರ ಲೋಹುಮಿಯವರಿಗೆ ಈ ಪೊದೆಯನ್ನು ನಾಶಪಡಿಸಬೇಕೆಂಬ ವಿಚಾರ ಮೊದಲು ಬರುವುದಕ್ಕೆ ಕಾರಣ ಅವರ ಸಾಲೆಗೆ ಬರುತ್ತಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ಮೇಲಿಂದ ಮೇಲೆ ಮೈ ಕೈ ಪರಚಿಕೊಂಡು ರಕ್ತ ಸುರಿಸುತ್ತ ಬರುತ್ತಿದ್ದದ್ದು. ಇದಕ್ಕೆ ಕಾರಣ ಹೆಚ್ಚು ಸಲ ಅವರು ಲಂಟಾನಾ ಪೊದೆಗಳ ನಡುವೆ ದಾರಿ ಬಿಡಿಸಿಕೊಂಡು ಬರಬೇಕಾದಾಗ ಈ ಗಾಯಗಳಾಗುತ್ತಿದ್ದುದು ಅವರ ಗಮನಕ್ಕೆ ಬಂತು. ಅದುವರೆಗೆ ಹಳ್ಳಿಗರು ಮಾಡಿದ್ದ ಯಾವ ಪ್ರಯತ್ನಕ್ಕೂ ಲಂಟಾನಾ ಬಗ್ಗಿರಲಿಲ್ಲವೆಂಬುದು ಇವರಿಗೆ ಗೊತ್ತಿತ್ತು. ಕೃಷಿ ಭೂಮಿಗೂ ಅರಣ್ಯ ಸಂಪತ್ತಿಗೂ ಇದರಿಂದಾಗುವ ಹಾನಿಯ ಕಲ್ಪನೆಯೂ ಅವರಿಗಿತ್ತು. ಅವರು ಈ ಬಗ್ಗೆ ಗಂಭೀರವಾಗಿ ಯೋಚಿಸತೊಡಗಿದ್ದು ಈಗ ಹತ್ತು ವರ್ಷಗಳ ಹಿಂದೆ ಮಾತ್ರ. ಆಗ ಅವರ ನೆರವಿಗೆ ಬಂದ ಒಂದು ವಿಷಯವೆಂದರೆ ಎಷ್ಟೋ ವರ್ಷಗಳ ಹಿಂದೆ ಎಲ್ಲೋ ಓದಿದ ಒಂದು ಸಂಗತಿ. ಆಸ್ಟ್ರೇಲಿಯದಲ್ಲಿ ಅನಿಯಂತ್ರಿತವಾಗಿ ಹಬ್ಬುತ್ತಿದ್ದ ಒಂದು ಜಾತಿಯ ಕಳ್ಳಿಯನ್ನು ನಾಶಮಾಡುವುಕ್ಕೆ ಯಾವುದೋ ಕೀಟವೊಂದನ್ನು ಯಶಸ್ವಿಯಾಗಿ ಉಪಯೋಗಿಸಿದ್ದರು ಎಂಬುದು ಅವರ ನೆನಪಿನ ಮೂಲೆಯಿಂದೆದ್ದು ಅವರನ್ನು ಪ್ರಚೋದಿಸಿತು. ಲಂಟಾನಾ ಪೊದೆಯನ್ನು ನಾಶಮಾಡಲೂ ಇದೇ ಮಾರ್ಗವನ್ನೇಕೆ ಅನುಸರಿಸಬಾರದೆಂದು ಯೋಚಿಸಿದರು. ಅವರಿಗೆ ತಮ್ಮ ವಿಚಾರಗಳನ್ನು ಕೃತಿಗಿಳಿಸಲು ಬೇಕಾದ ವೈಜ್ಞಾನಿಕ ತರಬೇತಿಯಿರಲಿಲ್ಲ; ಆದರೆ ಗುರಿಯನ್ನು ತಲಪಲು ಬೇಕಾದ ಉತ್ಸಾಹಕ್ಕೇನೂ ಅವರಲ್ಲಿ ಕೊರತೆಯಿರಲಿಲ್ಲ,

ಒಂದು ದಿನ ಕೆಲವು ಹಳ್ಳಿಗರು ಅಕಸ್ಮಾತ್ ಹೇಳಿದ ಒಂದು ಸಂಗತಿ ಚಂದ್ರಶೇಖರರನ್ನು ಆಕರ್ಷಿಸಿತು. ಒಂದೆಡೆ ಲಂಟಾನಾ ಪೊದೆ ಕುಷ್ಠದಿಂದ ಬಳಲುತ್ತಿರುವಂತೆ ಬಾಡುತ್ತಿರು

ವುದನ್ನು ಕಂಡದ್ದಾಗಿ ಅವರು ಹೇಳಿದರು. ಚಂದ್ರಶೇಖರ ಲೋಹುಮಿ ಮುಂದಿನ ಅನೇಕ ದಿನಗಳ ಕಾಲ ಬಾಡುತ್ತ ನಡೆದಿದ್ದ ಲಂಟಾನಾ ಪೊದೆಯ ನಿರೀಕ್ಷಣೆಯಲ್ಲಿ ತೊಡಗಿದರು–ಹಗಲು ರಾತ್ರಿಯೆನ್ನದೆ. ಅವರಿಗೆ ಬೇಕಿದ್ದುದು ಈ ಪೊದೆ ಬಾಡುತ್ತಿರಲು ಕಾರಣ ಯಾವುದಾದರೂ ಕೀಟವೇ ಎಂಬುದು. ಅದಕ್ಕಾಗಿ ಅವರ ಬಳಿ ಸದಾ ಒಂದು ಫ್ಲ್ಯಾಶ್ ಲೈಟ್ ಮತ್ತು ಒಂದು ಭೂತಗಾಜು. ಹಗಲು ಇವರು ತಾಳ್ಮೆಯಿಂದ ತಮ್ಮ ಈ ಶೋಧ ಕಾರ್ಯದಲ್ಲಿ ತೊಡಗಿದ್ದನ್ನು ಹಳ್ಳಿಗರು ಯಾರೂ ಅಷ್ಟಾಗಿ ಗಮನಿಸುತ್ತಿರಲಿಲ್ಲ; ಆದರೆ ರಾತ್ರಿ ಸಮಯದಲ್ಲಿ ಮಾತ್ರ ಅವರು ಬಹಳ ಎಚ್ಚರದಿಂದ ಕೆಲಸ ಮಾಡಬೇಕಾಗುತ್ತಿತ್ತು. ಯಾಕೆಂದರೆ, ಆ ಭಾಗದ ಹಳ್ಳಿಗರು, ಈ ರೀತಿ ರಾತ್ರಿ ಅಲೆಯುವುದು ಬುದ್ಧಿವಂತಿಕೆಯ ಲಕ್ಷಣವಲ್ಲವೆಂದು ಭಾವಿಸುತ್ತಿದ್ದರು. ಅಷ್ಟೇ ಅಲ್ಲ ಇಂಥವರನ್ನು ಹುಚ್ಚರೆಂದು ಶಂಕಿಸಲು ಕೂಡ ಅವರು ಹಿಂಜರಿಯುತ್ತಿರಲಿಲ್ಲ. ಇಂಥ ಸೂಕ್ಷ್ಮಗಳನ್ನು ಎದುರು ಹಾಕಿಕೊಂಡೂ ಮೈಯೆಲ್ಲ ಕಣ್ಣಾಗಿ ಅವರು ಕೆಲಸ ಮಾಡಬೇಕಿತ್ತು. ಆದರೆ ಎಷ್ಟು ಕಾದರೂ ಅವರ ಕಣ್ಣಿಗೇನೂ ಬೀಳದಿದ್ದಾಗ ಅವರ ಸಹನೆಯೂ ತಪ್ಪತೊಡಗಿತು. ಹತಾಶರಾಗಿ ಕೊನೆಗೊಂದು ದಿನ ತಮ್ಮ ಊರುಗೋಲಿನಿಂದ ಬಾಡುತ್ತಿದ್ದ ಲಂಟಾನಾ ಪೊದೆಯನ್ನು ಹೊಡೆಯತೊಡಗಿದರು. ಅವರಿಗೆ ಬೇಕಿದ್ದುದು ತಕ್ಷಣ ಸಿಕ್ಕುಬಿಟ್ಟಿತು! ಲೋಹುಮಿ ಕೈಗೋಲೆತ್ತಿ ಅಪ್ಪಳಿಸಿದಾಗ ಲಂಟಾನಾ ಪೊದೆಯಿಂದ ತೀರ ಸೂಕ್ಷ್ಮವಾದ ಕೀಟಗಳು ಹಾರಾಡತೊಡಗಿದುವು. ಸೂಜಿಯ ಮೊನೆಯ ಗಾತ್ರದ ಇಷ್ಟು ಸೂಕ್ಷ್ಮ ಕ್ರಿಮಿಕೀಟಗಳು ಇರಬಹುದೆಂದೇ ಅವರಿಗೆಂದೂ ಅನಿಸಿರಲೇಯಿಲ್ಲವಂತೆ. ತಾವು ನಿರೀಕ್ಷಿಸಿದ್ದು ದೊರೆತಾಗ ಅವರು ಮಗುವಿನಂತೆ ಚಪ್ಪಾಳೆ ತಟ್ಟಿ, "ಸಿಕ್ಕಿತು! ಸಿಕ್ಕಿತು!" ಎಂದು ಕೂಗಿಬಿಟ್ಟರಂತೆ.

ಆದರೆ ಈ ಕೀಟಗಳು ಬೇರೆ ವನಸ್ಪತಿಗಳನ್ನು ಎಂಬ ಸಂದೇಹ ಅವರನ್ನು ಕಾಡದೇ ಬಿಡಲಿಲ್ಲ. ಕೀಟ ಶಾಸ್ತ್ರಜ್ಞರಿಗೆ ಈ ಕೀಟಗಳನ್ನು ಪರೀಕ್ಷಾರ್ಥ ಕಳಿಸಿದಾಗ ಇವುಗಳ ಶಾಸ್ತ್ರೀಯ ಹೆಸರು Teleonemia Scrupulosa ಎಂದು ತಿಳಿಯಿತು. ಸಸ್ಯಶಾಸ್ತ್ರದ ದೃಷ್ಟಿಯಿಂದ ಲಂಟಾನಾ ಮತ್ತು ತೇಗಿನ ಮರ ಒಂದೇ ಜಾತಿಗೆ ಸೇರಿದ ವನಸ್ಪತಿಗಳು. ಲಂಟಾನಾವನ್ನು ತಿಂದುಹಾಕುವ ಈ ಕೀಟಗಳು ತೇಗನ್ನೂ ಭಕ್ಷಿಸಬಹುದೆಂದು ಕೆಲವು ತಜ್ಞರು ಶಂಕಿಸಿದರು. ಮುಳ್ಳು ತೆಗೆಯಲು ಹೋಗಿ ಕಾಲೇ ಕೊಳೆತು ಹೋದಂತಾದೀತೆಂದು ಅನೇಕರು ಈ ಕೀಟಗಳನ್ನು ಬೇರೆಡೆ ಪ್ರಯೋಗಿಸಿ ನೋಡುವ ಚಂದ್ರಶೇಖರರ ಉತ್ಸಾಹಕ್ಕೆ ತಣ್ಣೀರೆರಚಲು ನೋಡಿದರು. ಆದರೆ ಚಂದ್ರಶೇಖರ ಲೋಹುಮಿ ಅಳ್ಳೆದೆಯವರಾಗಿರಲಿಲ್ಲ. 'ತಜ್ಞ'ರ 'ಎಚ್ಚರಿಕೆ'ಯನ್ನು ಗಮನದಲ್ಲಿರಿಸಿಕೊಂಡೂ ಬದಿಗೆ ಸರಿಸಿ ಅವರು ತಮ್ಮ ಯತ್ನದಲ್ಲಿ ಮುಂದುವರಿದರು. ತಮ್ಮ ನಂಬುಗೆಯ ಹಲವು ವಿದ್ಯಾರ್ಥಿಗಳ ಸಹಾಯದಿಂದ ಈ ಕೀಟಗಳಿಂದ ದೂಷಿತವಾದ ಲಂಟಾನಾ ಟೊಂಗೆಗಳನ್ನೂ ಎಲೆಗಳನ್ನೂ ಸಂಗ್ರಹಿಸಿ ರಾಜ್ಯದ ಬೇರ ಬೇರೆ ಭಾಗಗಳಿಗೆ ಕಳಿಸಿದರಲ್ಲದೆ ತಾವೂ ಸ್ವತಃ ಸುಮಾರು ಒಂದು ಸಾವಿರ ಮೈಲುಗಳಷ್ಟು ಸಂಚರಿಸಿ ೧೮ ಬಗೆಯ ಹಣ್ಣುಗಳು, ೨೧ ಬಗೆಯ ತರಕಾರಿ ಸಸ್ಯಗಳು, ೨೪ ವಿಧದ ಕಂಟಿಗಳು, ೬೬ ವಿಧದ ಹೂವುಗಳು ಮತ್ತು ಅರಣ್ಯದಲ್ಲಿ ಬೆಳೆಯುವ ೩೭ ಬಗೆಯ ವಿವಿಧ ಗಿಡ ಮರಗಳಿಗೆ ಇವನ್ನು ಸೋಂಕಿಸಿ ಈ ಕೀಟಗಳು ಅವುಗಳನ್ನು ನಾಶ ಮಾಡಬಹುದೇ ಹೇಗೆಂಬುದನ್ನು ಪರೀಕ್ಷಿಸಿದರು. ಆದಕ್ಕಾಗಿ ತಾವು ಈ ಕೀಟಗಳನ್ನು ಪ್ರಯೋಗಿಸಿದ್ದು ಎಲ್ಲೆಲ್ಲಿ ಎಂಬುದನ್ನು ಸರಿಯಾಗಿ ಗುರುತಿಸಲೋಸುಗ ದೊಡ್ಡದೊಂದು ನಕ್ಷೆಯನ್ನೇ ಸಿದ್ಧಪಡಿಸಿದರು. ಅನಂತರ ಸುದೀರ್ಘ ಕಾಲ ಈ ಕೀಟಗಳ ಜೀವನ ಕ್ರಮವನ್ನೂ ಅವುಗಳ ರೀತಿಗಳನ್ನೂ ಲಕ್ಷ್ಯಗೊಟ್ಟು ಅಭ್ಯಸಿಸಿದರು.

ವೀಕ್ಷಣೆ, ಅಭ್ಯಾಸದ ನಂತರ ಚಂದ್ರಶೇಖರ ತಾವು ಸಂಗ್ರಹಿಸಿದ್ದ ಪುರಾವೆಗಳ ಆಧಾರದಿಂದ ಈ ಪರೋಪಜೀವಿ ಕೀಟಗಳು ಲಂಟಾನಾ ಹೊರತು ಬೇರಾವುದೇ ವನಸ್ಪತಿಯನ್ನೂ ತಜ್ಜನ್ಯ ವಸ್ತುಗಳನ್ನೂ ಸೇವಿಸುವುದಿಲ್ಲವೆಂದು ಖಚಿತಪಡಿಸಿಕೊಂಡರು. ಅದು ಮಾತ್ರವಲ್ಲದೆ ಈ ಕೀಟಗಳು ಪತ್ತಿದ ನಂತರ ಲಂಟಾನಾ ಪೂರ್ತಿ ಸಾಯಲು ಮೂರು ವರ್ಷ ಕಾಲ ಹಿಡಿಯುತ್ತದೆಂದೂ ಕಂಡುಕೊಂಡರು.

ಚಂದ್ರಶೇಖರ ಲೋಹುಮಿಯವರ ಈ ಶೋಧವನ್ನು ಪರಿಶೀಲಿಸಲು ಭಾರತೀಯ ಕೃಷಿ ಸಂಸೋಧನ ಮಂಡಳಿಯು ಕಳೆದ ಡಿಸೆಂಬರಿನಲ್ಲಿ ವಿಜ್ಞಾನಿಗಳ ಒಂದು ಮಂಡಳಿಯನ್ನು ನೇಮಿಸಿತು. ಈ ಮಂಡಳಿಯ ಅಭಿಪ್ರಾಯದಲ್ಲಿ ಲಂಟಾನಾ ಪೊದೆಯನ್ನು ಸಮೂಲ ನಾಶಗೊಳಿಸುವುದಕ್ಕೆ ಚಂದ್ರಶೇಖರ ಲೋಹುಮಿಯವರು ಕಂಡುಹಿಡಿದ ಈ ಜೈವಿಕ ಪರಿಹಾರ ಅತ್ಯಂತ ಪರಿಣಾಮಕಾರಿಯೂ ಸುಲಭವೂ ಮಿತವ್ಯಯದ್ದೂ ಸುರಕ್ಷಿತವೂ ಆದುದಾಗಿದೆ. ಅತಿ ಬಲಿಷ್ಠವಾದ ಈ (ಲಂಟಾನಾ) ಕಳೆಯನ್ನು ನಾಶಮಾಡುವುದಕ್ಕೆ ಜೈವಿಕ ನಿರೋಧಕ ಉಪಾಯವನ್ನು ಶೋಧಿಸಿದ ಚಂದ್ರಶೇಖರ ಲೋಹುಮಿಯವರನ್ನು 'ಜೀವಶಾಸ್ತ್ರದ ರಾಮಾನುಜನ್'* ಎಂದು ಈ ಮಂಡಳಿ ಕರೆಯಿತೆಂದಾಗ ದೇಶದ ದೊಡ್ಡ ವಿಜ್ಞಾನಿಗಳ ಮೇಲೆ ಈ ಶೋಧ ಎಷ್ಟೊಂದು ಪರಿಣಾಮ ಬೀರಿದೆಯೆಂಬುದು ವ್ಯಕ್ತವಾಗುತ್ತದೆ.

ಈ ಕೀಟ ಮತ್ತು ಲಂಟಾನಾ ಪೊದೆ ಎರಡೂ ಭಾರತಕ್ಕೆ ಹೊರಗಿನಿಂದಲೇ ಬಂದಂಥವು. ಇವೆರಡರ ಮೂಲವೂ ಮಧ್ಯ ಹಾಗು ದಕ್ಷಿಣ ಅಮೇರಿಕ. ಲಂಟಾನಾವನ್ನು ಭಾರತಕ್ಕೆ ತಂದವನೊಬ್ಬ ಆಂಗ್ಲ ಗೃಹಸ್ಥ. ನೈನಿತಾಲದಲ್ಲಿ ವಾಸವಾಗಿದ್ದ ಅವನು ೧೮೮೨ ರಲ್ಲಿ ತನ್ನ ಕೈದೋಟವನ್ನು ಸಿಂಗರಿಸಲೆಂದು ತಂದು ತನ್ನ ಬಂಗಲೆಯ ಆವಾರದಲ್ಲಿ ಬೆಳೆಸಿದನು. ಈಗಲೂ ಅನೇಕರು ಉತ್ತರ ಪ್ರದೇಶ ಮುಂತಾದ ರಾಜ್ಯಗಳ ನಗರ ಪ್ರದೇಶಗಳಲ್ಲಿ ಚೆಂದಕ್ಕಾಗಿ ಬೆಳೆಯುವುದುಂಟು. ಈ ಪೊದೆ ಬಿಡುವ ಹೂಗಳು ತಿಳಿ ನೇರಳೆ ಬಣ್ಣದವು. ಪಕಳೆಗಳು ತುದಿಗೆ ಬಂದಂತೆ ಬೆಳ್ಳಗಾಗಿರುತ್ತವೆ. ಇದರ ಎಲೆಗಳು ದನಕರುಗಳಿಗೆ ವಿಷಾರಿಯೆನಿಸಿವೆ.

Teleonemia scrupulosa ಎಂದು ಗುರುತಿಸಲಾದ ಈ ಕೀಟವನ್ನು ಚಂದ್ರಶೇಖರ 'ಲಂಟಾನಾ ಕೀಟ'ವೆಂದು ಕರೆದಿದ್ದಾರೆ. ಇದನ್ನು ಭಾರತಕ್ಕೆ ಮೊದಲು ತಂದವರು ಡೆಹರಾಡೂನಿನಲ್ಲಿರುವ ಅರಣ್ಯ ಸಂಶೋಧನ ಸಂಸ್ಥೆಯವರು– ೧೯೬೧ ರಲ್ಲಿ. ಆಗಲೇ ಅಪಾಯಕಾರಿ ಎನ್ನುವ ಮಟ್ಟಿಗೆ ಬೆಳೆದಿದ್ದ ಲಂಟಾನಾದ ನಿರ್ಮೂಲನ ಸಾಧ್ಯವೇಸೆಂದು ಯತ್ನಿಸಲು ಈ ಕೀಟಗಳನ್ನು ಆಗ ಮೊದಲ ಬಾರಿ ಆಸ್ಟ್ರೇಲಿಯದಿಂದ ತರಿಸಲಾಯಿತು. ಆದರೆ ಈ ಕೀಟಗಳಿಗೆ ಭಾರತದಲ್ಲಿ ಬೆಳೆಯಲು ಅನುವು ಕೊಟ್ಟರೆ ಅವು ತೇಗು ಮತ್ತು ಆ ಜಾತಿಯ ಇತರ ಅರಣ್ಯ ಸಂಪತ್ತನ್ನೆಲ್ಲ ನಾಶ ಮಾಡಬಹುದು ಎಂದೆನಿಸಿದ್ದರಿಂದ ಅವುಗಳನ್ನು ತಂದಂತೆಯೆ ನಾಶಪಡಿಸಲಾಯಿತು. ಆದರೆ ಅವುಗಳಲ್ಲೆಲ್ಲೋ ಕೆಲವು ತಪ್ಪಿಸಿಕೊಂಡು ಬದುಕಿ ಉಳಿದು ಈಗ ಪುನಃ ದೊರೆತಿರುವುದಕ್ಕೆ ಕಾರಣವಾಗಿರಬೇಕು. ಲಂಟಾನಾವನ್ನುಳಿದು ಈ ಕೀಟಗಳು ತೇಗು ಅಥವಾ ಬೇರಾವುದೇ ಗಿಡಮರಗಳನ್ನಾಗಲಿ ಬಳ್ಳಿಗಳನ್ನಾಗಲಿ ತಿನ್ನುವುದಿಲ್ಲ; ಲಂಟಾನಾ ಮಾತ್ರವೇ ಅವುಗಳ ಆಹಾರವೆಂದು ಆಸ್ಟ್ರೇಲಿಯನ್ ವಿಜ್ಞಾನಿಗಳು ೧೯೭೧ ರಲ್ಲಿ ಪ್ರಕಟಿಸಿದ್ದಾರೆ.


ಚಂದ್ರಶೇಖರ ಲೋಹುಮಿ ತಮ್ಮ ವೀಕ್ಷಣೆಗಳೆಲ್ಲವನ್ನೂ ವಿವರವಾಗಿ ಬರೆದಿಟ್ಟಿದ್ದಾರಲ್ಲದೆ ಈ ಕೀಟದ ಹಾಗು ಅದರ ಜೊಂಡಿನ ಚಿತ್ರ

* ರಾಮಾನುಜನ್ ಆಧುನಿಕ ಭಾರತದ ಶ್ರೇಷ್ಠ ಗಣಿತಜ್ಞ. ಉಚ್ಚ ಶಿಕ್ಷಣದ ನೆರವಿಲ್ಲದೆಯೇ ಗಣಿತ ಶಾಸ್ತ್ರದಲ್ಲಿ ಅನೇಕ ಅದ್ಭುತಗಳನ್ನು ಸಾಧಿಸಿದ ಮೇಧಾವಿ ಅವರು. ಅವರ ಕುರಿತ ಲೇಖನಗಳಿಗಾಗಿ ಕಸ್ತೂರಿಯ ಏಪ್ರಿಲ್ ೧೯೭೬ ಹಾಗೂ ಅಕ್ಟೋಬರ್ ೧೯೫೭ ಮತ್ತು

ಎಲೆಗಳನ್ನು ಮಾತ್ರ ತಿನ್ನುತ್ತವಲ್ಲದೆ ದೇಟನ್ನೂ ಹೂಗಳನ್ನೂ ಬೀಜಗಳನ್ನೂ ಹಾಗೆಯೇ ಬಿಟ್ಟುಬಿಡುತ್ತವೆ. ಹಸಿರೆಲೆಗಳನ್ನು ಆಶ್ರಯಿಸಿ ಅವುಗಳ ರಸವನ್ನು ಹೀರುತ್ತವೆ. ಇವುಗಳು ತತ್ತಿಯಿಡುವುದು ಲಂಟಾನಾ ಎಲೆಗಳ ಮೇಲೆ ಈ ತತ್ತಿಗಳ ಜೊಂಡುಗಳು ಬರಿಗಣ್ಣಿಗೆ ಕಾಣುವುದಿಲ್ಲ. ಆಹಾರಕ್ಕಾಗಿ ಇವು ತಾವು ತತ್ತಿಯಿಟ್ಟ ಎಲೆಗಳನ್ನು ಬಿಟ್ಟು ಬೇರೆ ಎಲೆಗಳನ್ನು ಮಾತ್ರ ಆಹಾರವೆಂದುಪಯೋಗಿಸುತ್ತವೆ. ತತ್ತಿಗಳೊಡೆದು ಹೊರಬಂದ ನಂತರ ಇವುಗಳಿಗೆ ಪಕ್ಕಗಳೊಡೆದು ಹಾರಾಡತೊಡಗುತ್ತವೆ. ಲಂಟಾನಾ ಪೊದೆಯನ್ನು ಈ ಕೀಟಗಳು ಒಮ್ಮೆ ಆಶ್ರಯಿಸಿದುವೆಂದರೆ ಮೊದಲ ವರ್ಷದಲ್ಲಿ ಅದರ ಎಲೆಗಳು ಬಾಡತೊಡಗುತ್ತವೆ; ಎರಡನೆಯ ವರ್ಷದಲ್ಲಿ ಪೊದೆಯ ಬೆಳವಣಿಗೆ ನಿಂತು ಬಿಡುತ್ತದೆ; ಮೂರನೇಯ ವರ್ಷದಲ್ಲಿ ಅದು ಪೂರ್ತಿ ಸತ್ತುಹೋಗುತ್ತದೆ.

ಅಪಾಯಕಾರಿಯೂ ಪರೋಪಜೀವಿಯೂ ಆದ ಕಳೆಯನ್ನು ಸಮೂಲ ನಾಶ ಮಾಡಲು ಜೈವಿಕ ನಿರೋಧ ಕ್ರಮವನ್ನನುಸರಿಸುವುದು ಅಥವಾ ಕ್ರಿಮಿಕೀಟಗಳನ್ನು ಈ ಕಾರ್ಯಕ್ಕಾಗಿ ಬಳಸುವುದು ಚಂದ್ರಶೇಖರರ ಸ್ವತಂತ್ರ ಸಂಶೋಧನವೇನಲ್ಲ. ವಿಶೇಷತಃ ಆಸ್ಟ್ರೇಲಿಯಾ ಮತ್ತು ಅಮೇರಿಕಗಳಲ್ಲಿ ಈ ಕ್ರಮವನ್ನು ಸಾಕಷ್ಟು ಪರಿಣಾಮಕಾರಕವಾಗಿ ಹಿಂದೆಯೇ ಬಳಸಿದ್ದಾರೆ. ಆದರೆ ಚಂದ್ರಶೇಖರ ಲೋಹುಮಿಯವರ ಕಾರ್ಯದ ಮಹತ್ವವಿರುವುದು—ಯಾವುದೇ ಬಗೆಯ ವೈಜ್ಞಾನಿಕ ಶಿಕ್ಷಣದ ಹಿನ್ನೆಲೆಯಿಲ್ಲದಿರುವಾಗಲೂ ಎಲ್ಲೋ ಯಾವಾಗಲೋ ಓದಿದ್ದರ ಬಲದ ಮೇಲೆಯೆ ಒಂದು ಕಲ್ಪನೆಯ ಬೆನ್ನು ಹತ್ತಿ ಎಷ್ಟೇ ಅಡೆತಡೆಗಳು ಬಂದರೂ ನಿಶ್ಚಿತ ಪರಿಣಾಮ ದೊರೆಯುವವರೆಗೂ ಏಕಮುಖ ನಿಷ್ಠೆಯಿಂದ ಕೆಲಸ ಮಾಡಿರುವುದರಲ್ಲಿ; ಹಾಗು ತಮ್ಮ ಸಂಶೋಧನ ಕಾರ್ಯದಲ್ಲಿ ಒಬ್ಬ ಶ್ರೇಷ್ಠ ವಿಜ್ಞಾನಿಯು ಅನುಸರಿಸಬಹುದಾಗಿದ್ದಂಥ ವಿಧಾನಗಳನ್ನು ಅನುಸರಿಸಿದ್ದು ಮತ್ತು ಎಚ್ಚರಿಕೆಗಳನ್ನು ವಹಿಸಿದ್ದು. "ವಿಜ್ಞಾನಕ್ಕೆ ಅವರಿತ್ತ ಕೊಡುಗೆಯು ಮಟ್ಟ ಭಾರತದ ಯಾವುದೇ ವಿಜ್ಞಾನಿಯು ಗೈದ ಸಾಧನೆಯನ್ನೂ ಮೀರಿದ್ದಾಗಿದೆ" ಎಂದು ಭಾರತೀಯ ಕೃಷಿ ಸಂಶೋಧನ ಮಂಡಳಿಯು ವರ್ಣಿಸಿದೆ.

ಇದೇ ಎಪ್ರಿಲ್ ೨ ರಂದು ದಿಲ್ಲಿಯಲ್ಲಿ ನಡೆದೊಂದು ಸಮಾರಂಭದಲ್ಲಿ ಚಂದ್ರಶೇಖರ ಲೋಹುಮಿಯವರನ್ನು ಭಾರತ ಸರಕಾರ ಒಂದು ಪ್ರಶಸ್ತಿಪತ್ರವನ್ನೂ ೧೫೦೦೦ ರೂಪಾಯಿಗಳ ನಗದು ಬಹುಮಾನವನ್ನೂ ನೀಡಿ ಗೌರವಿಸಿತು, ಎರಡು ತಿಂಗಳ ಮುಂಚೆಯೇ ಪ್ರಧಾನಮಂತ್ರಿಗಳು ೫೦೦೦ ರೂಪಾಯಿಗಳ ಇನ್ನೊಂದು ಬಹುಮಾನವನ್ನು ಅವರಿಗೆ ನೀಡಿ ದೇಶದ ಒಂದು ದೊಡ್ಡ ದೊಡ್ಡ ಸಮಸ್ಯೆಯನ್ನು ಪರಿಹರಿಸಲು ನೆರವಾದ ಈ ವಿಜ್ಞಾನಿ ಶಿಕ್ಷಕನ ಖಾಸಗಿ ಸಮಸ್ಯೆಯೊಂದು ಪರಿಹಾರವಾಗುವುದಕ್ಕೆ ನೆರವಾಗಿದ್ದರು. ಚಂದ್ರಶೇಖರರ ೨೯ ವರ್ಷದ ಮಗಳು ಮದುವೆಯಾಗದೇ ಉಳಿದುಬಿಟ್ಟಿದ್ದಳು. ಕಾರಣ : ಮದುವೆ ಮಾಡಿಕೊಡಲು ತಂದೆಯ ಬಳಿ ಹಣವಿಲ್ಲದುದು. ಈ ಸಾಮಯಿಕ ಸಹಾಯದಿಂದಾಗಿ ಅವರು ಅವಳ ಮದುವೆಯನ್ನು ಮುಗಿಸಿ ಆ ಋಣಭಾರವನ್ನು ಹಗುರುಮಾಡಿಕೊಂಡು ಸಮಾಧಾನದ ನಿಟ್ಟುಸಿರು ಬಿಟ್ಟರು. ಈ ನಿವೃತ್ತ ಶಿಕ್ಷಕನಿಗೆ ಈಗಲೂ ದೊರೆಯುತ್ತಿರುವ ನಿವೃತ್ತಿವೇತನ ತಿಂಗಳಿಗೆ ೨೦ ರೂಪಾಯಿ !



ಕ್ಷಯ

ಮೂಲ : ಮನ್ನೂ ಭಂಡಾರಿ
ಅನುವಾದ : ಜಯಲಕ್ಷ್ಮಿ ಕೊಳತೂರ್

ಸಾವಿತ್ರಿಯ ಮನೆಯಿಂದ ಹಿಂತಿರುಗುವಾಗ ಕುಂತಿ ಸಾಕಷ್ಟು ಸಂಸ್ತಾಗಿದ್ದಳು, ಸಾಲದುದಕ್ಕೆ ತಮ್ಮನಿಂದ ಬಂದಿದ್ದ ಪತ್ರ ಮತ್ತಷ್ಟು ಬೇಸರವನ್ನುಂಟುಮಾಡಿತು. ತಮ್ಮ ಟುನ್ನಿಯನ್ನು ವಾಪಸ್ ಕರೆಸಲಿ? ಬಾಯಿ ಬಿಟ್ಟು ಹೇಳದಿದ್ದರೂ ತಂದೆಯ ಇಷ್ಟ ಕರೆಸಿಕೊಳ್ಳಲಿ ಎನ್ನುವುದೇ ಆಗಿತ್ತು.

"ಅಕ್ಕ, ಇಲ್ಲಿ ನನಗೆ ಬಹಳ ಬೇಜಾರು. ಯಾವಾಗಲೂ ನಿನ್ನ, ಅಪ್ಪನ ನೆನಪು ಬರುತ್ತಿರುತ್ತದೆ. ಶಾಲೆಯವರು ನನ್ನನ್ನು ಎಂಟನೆಯ ತರಗತಿಗೇ ಹಾಕಿದ್ದಾರೆ. ಆ ದಿನ ನೀನು ಹೆಡ್ ಮಾಸ್ತರರಿಗೆ ಹೇಳಿದ್ದರೆ ಎಷ್ಟು ಚೆನ್ನಾಗಿತ್ತು. ಒಂದು ವರ್ಷ ಉಳಿಯುತ್ತಿತ್ತು. ನನಗಾಗಿ ನೀನು ಇಷ್ಟು ಸಹ ಮಾಡಲಿಲ್ಲ. ಒಂದು ವರ್ಷ ಹಾಳು..."

ನಿಜವಾಗಿಯೂ ತಾನು ಟುನ್ನಿಯ ಒಂದು ವರ್ಷವನ್ನು ಹಾಳು ಮಾಡಿದೆನೆ? ಇಲ್ಲ. ಎಂದಿಗೂ ಇಲ್ಲ, ತಾನು ಮಾಡಿದ್ದೇ ಸರಿ. ತನ್ನ ಬಳಿಗೆ ಯಾರಾದರೂ ಆ ರೀತಿಯ ಶಿಫಾರಸು ತಂದಿದ್ದರೆ ಅವರನ್ನು ಸ್ಕೂಲಿನ ಗೇಟಿನಾಚೆಗೇ ಸರಿಸಿಯಾಳು, ಮೊದಲಿನಿಂದಲೂ ಟುನ್ನಿಗೆ ಕಷ್ಟಪಟ್ಟು ಓದು ಎಂದು ಹೇಳುತ್ತಲೇ ಬಂದಿದ್ದಾಳೆ, ತಂದೆಗಂತೂ ಅವನು ಆಗಿನ್ನೂ ಮಗು. ಫೇಲಾದಾಗ ಗುರುತಿನವರಿಂದ ಪ್ರಯೋಜನಪಡಿ, ಶಿಫಾರಸು ಮಾಡಿಸು. ತಾನು ಮಾಡಿದ್ದೇ ಸರಿ. ಸ್ಕೂಲಿನಲ್ಲಿ ಇಂತಹದನ್ನೆಲ್ಲಾ ನೋಡುವಾಗ, ತನಗೆಷ್ಟು ಸಿಟ್ಟು ಬರುತ್ತದೆ. ಆದರೆ ಅಂತಹದು ನಡೆಯುತ್ತಲೇ ಇರುತ್ತದೆ. ತಾನೂ ನೋಡುತ್ತಲೇ ಇರುತ್ತಾಳೆ. ತನಗೆ ಇಂತಹ ಮಾತನ್ನು ತಂದೆ ಹೇಳಿದಾಗ ಬೆಚ್ಚಿ, ಅವರ ಮುಖವನ್ನೇ ನೋಡಿದಳು. ಈ ಮಾತು ತಂದೆ ಹೇಳುತ್ತಿರುವರೆ! ಅದೂ ತನಗೆ!... ಕುಂತಿಯ ಇಂದಿನ ಸ್ವಭಾವ, ವಿಚಾರಗಳು ನಂಬಿಕೆಗಳು...ತಂದೆಯದೇ ಬಳುವಳಿ. ಹಾಗಾದರೆ? ಅಪ್ಪನೇ ಬದಲಾಯಿಸಿದ್ದಾರೆ, ನಿಜ, ಬಹಳ ಬದಲಾಗಿದ್ದಾರೆ. ಈ ಖಾಯಿಲೆಯೇ ಅಂಥದು. ಎಂಥವನೂ ಬದಲಾಗುತ್ತಾನೆ. ತಮ್ಮ ಆದರ್ಶವಾದಕ್ಕಾಗಿ, ಆತ್ಮಾಭಿಮಾನಕ್ಕಾಗಿ ಹೆಮ್ಮೆ ಪಡುತ್ತಿದ್ದ ಅಪ್ಪ ಈಗ ಅದಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದಾರೆ ಎನ್ನಿಸಿತು. ತನ್ನನ್ನು ಈ ರೀತಿ ಬೆಳೆಸಿ ತಂದೆಯೇ ತಪ್ಪು ಮಾಡಿರಬೇಕು......ತನ್ನನ್ನೇ ಪರಿಶೀಲಿಸಿಕೊಂಡಳು–ತಾನೇ ಏನಾದರೂ ತಪ್ಪು ನಂಬಿಕೆಗಳನ್ನು, ಸಿದ್ಧಾಂತಗಳನ್ನು ಬೆಳೆಸಿಕೊಳ್ಳುತ್ತಿರುವೆನೆ ಎಂದು.

ಪಿಟೀಲು ಎದುರಿಗಿತ್ತು. ತಟ್ಟನೆದ್ದು ಅದನ್ನು ತೆಗೆದುಕೊಂಡು ತಾರಸಿಯ ಮೇಲೆ ಹೋದಳು. ಮನಸ್ಸಿಗೆ ಬಹಳ ಬೇಸರವಾದಾಗ ನುಡಿಸುವುದು ಅವಳ ಸ್ವಭಾವ. ರಾತ್ರಿಯ ನೀರವತೆಯಲ್ಲಿ ಮನಸ್ಸಿನ ದುಗುಡ ಸ್ವರಲಹರಿಯೊಡನೆ ಬೆರೆತು ವಾಯುಮಂಡಲದಲ್ಲಿ ಲೀನವಾಯಿತು. ಪಿಟೀಲು ನುಡಿಸುತ್ತಾ, ನುಡಿಸುತ್ತಾ ಅವಳು ಬೇರೆಯೇ ಲೋಕದಲ್ಲಿ ವಿಹರಿಸಲಾರಂಭಿಸಿದಳು. "ಖೊಖ್, ಖೊಖ್, ಖೊಖ್"– ಅಪ್ಪನ ನಿರಂತರವಾದ ಕೆಮ್ಮು ಅವಳ ತನ್ಮಯತೆಯನ್ನು ಹಾಳು ಮಾಡಿತು. ಬೆರಳುಗಳು ಸಡಿಲಾಗಿ ಪಿಟೀಲು ಜಾರಿತು. ಅಪ್ಪನಿಗೆ ಈ ದಿನ ಕೆಮ್ಮು ಬಂದಿರುವುದು ಮೂರನೆಯ ಬಾರಿ. ಔಷಧಿ ಕುಡಿಸಿದಳು. ಕೆಮ್ಮು ನಿಂತು ಮಲಗುವವರೆಗೂ ಬೆನ್ನು ನೀವುತ್ತಾ ಕುಳಿತಿದ್ದಳು.

ಮಲಗಲು ತನ್ನ ಕೋಣೆಗೆ ಹೋದಾಗ ಸುಮಾರು ಅರ್ಧ ರಾತ್ರಿ ಕಳೆದಿತ್ತು. ಸಾವಿತ್ರಿಗೆ ಪಾಠ ಹೇಳಲು ಹೋದದ್ದು ಇಂದೇ ಮೊದಲು. ಮಾರನೆಯ ದಿನ ಶಾಲೆಗೆ ಹೋದರೆ ಮಿಸೆಸ್ ನಾಥ್ ತನ್ನನ್ನೇ ನೋಡಿ ನಗುವಳೆನ್ನಿಸಿತು. ಅವಳ ವ್ಯಂಗ್ಯಪೂರ್ಣ ನಗೆಯಿಂದಾಗಿಯೇ ಅವಳ ಬಗ್ಗೆ ತನಗೆ ತಿರಸ್ಕಾರ. ನಾಳೆ ತಾನು ಆ ನಗೆಯನ್ನು ಎದುರಿಸಬಲ್ಲೆನೆ? ಮನೆ ಮಾಲೀಕನ ಮಕ್ಕಳಿಗೆ ಪಾಠ ಹೇಳುವ ಮಾಸ್ತರನ ದಯನೀಯ ಮುಖ ಕಣ್ಣೆದುರು ಸುಳಿಯಿತು. ತನ್ನ ಕೆಲಸದ ಬಗ್ಗೆ ಅನಾಸಕ್ತಿಯುಂಟುಮಾಡುವಂತಹ ವ್ಯಕ್ತಿ. ಓಹ್...ಪಾಠ ಹೇಳುವುದರ ಬಗ್ಗೆ ತನ್ನ ವಿಚಾರಗಳೇನು......ಮಿಸೆಸ್ ನಾಥ್....ಈ ಮಾಸ್ತರು......ಕುಂತಿ ಹೊರಳಾಡುತ್ತಲೇ ಇದ್ದಳು.

ಈ ಒಂದು ತಿಂಗಳಿನಲ್ಲಿ ಮನೆಯಲ್ಲಿ ಸಾಕಷ್ಟು ಬದಲಾವಣೆಗಳು. ತಂದೆಯ ಎಕ್ಸ್‌ರೇ ತೆಗೆದು ಕ್ಷಯ ಎನ್ನುವ ರಿಪೋರ್ಟಿನೊಡನೆ ಬಂದ ದಿನ ತಂದೆಗೆ ಆ ರಿಪೋರ್ಟ್ ಹೇಗೆ ಕೊಡುವುದೆಂದು ಯೋಚಿಸಿ ಸಾಕಾದಳು. ಔಷಧಿ ಮಾತ್ರೆಗಳ ಪಟ್ಟಿ ಆ ಸಮಸ್ಯೆಯ ಇನ್ನೊಂದು ಮುಖವನ್ನು ಎತ್ತಿ ತೋರಿಸುತ್ತಿದ್ದವು. ತಾನೇ ಎಲ್ಲವನ್ನು ಮಾಡಬೇಕು. ನಾಲ್ಕು ವರ್ಷಗಳಿಂದ ತಾನೇ ಮಾಡುತ್ತಾ ಬಂದಿದ್ದಾಳೆ. ಅಪ್ಪ ಯಾವಾಗಲೂ ಹೇಳುತ್ತಿರುತ್ತಾರೆ–ಕುಂತಿ ಮಗಳಲ್ಲ ಮಗ ಎಂದು. ಸಾಕಿರುವುದೂ ಹಾಗೆಯೇ. ಗಂಡು ಮಕ್ಕಳೊಡನೆಯೇ ಆಟವಾಡಿ ಬೆಳೆದಳು. ಈಗ ಗಂಡು ಮಗನಂತೆ ಮನೆ ನೋಡಿಕೊಳ್ಳುತ್ತಿದ್ದಾಳೆ. ಮನೆ ತಲುಪಿದಾಗ ತಂದೆ ಮಲಗಿದ್ದರು. ಸುಮ್ಮನೇ ಕಾಗದವನ್ನು ಅವರ ಕೈಯ ಬಳಿ ಇಟ್ಟು ಹೊರಟು ಹೋದಳು. ನೋಡಿದ ನಂತರ ತಂದೆ ಕರೆಯುತ್ತಾರೆ, ಏನಾದರೂ ಹೇಳುತ್ತಾರೆ ಎಂದು ನಿರೀಕ್ಷಿಸಿದಳು. ನಿರೀಕ್ಷೆ ಸುಳ್ಳಾಯಿತು. ರಿಪೋರ್ಟ್ ನೋಡಿ ಅಪ್ಪನಿಗೆ ದುಃಖವಾಯಿತೇ? ಅಥವಾ ತಮಗೆ ಕ್ಷಯ ಎನ್ನುವುದು ಅವರಿಗೆ ಮೊದಲೇ ತಿಳಿದಿತ್ತೇ?

ಟೀ ಸೇವನೆಯ ನಂತರ ತೋಟದಲ್ಲಿ ಬಂದು ಕುಳಿತಳು. ತಂದೆ ಈಗಲಾದರೂ ಏನಾದರೂ ಪ್ರಸ್ತಾಪ ಮಾಡಬಹುದು. ಆದರೆ ಅಪ್ಪನ ಬಾಯಿಗೆ ಬೀಗ ಮುದ್ರೆ. ಕಾಲು ಚಾಚಿ, ದಿಂಬಿಗೊರಗಿ ಶೂನ್ಯ ದೃಷ್ಟಿಯಿಂದ ಆಕಾಶವನ್ನೇ ದಿಟ್ಟಿಸುತ್ತಿದ್ದಾರೆ. ಕುಂತಿಗೆ ಈ ಮೌನ ಸಹ್ಯವಾಗಲಿಲ್ಲ. ಇಂತಹ ಬೃಹತ್ ಸಮಸ್ಯೆ ಎದುರಿಗಿದ್ದೂ ಸುಮ್ಮನಿರುವುದೆಂದರೆ! ಆದರೆ ಯಾರೊಬ್ಬರಿಗೂ, ತಿಳಿದಿರುವ ಸ್ಥಿತಿಗತಿಗಳ ಬಗ್ಗೆ ಚರ್ಚಿಸುವ ಉತ್ಸಾಹ ಇರಲಿಲ್ಲ. ಅಪ್ಪ ಬಹುಶಃ ತಮ್ಮ ಅಸಹಾಯಕತೆಯ ಬಗ್ಗೆ ಚಿಂತಿಸುತ್ತಿರಬಹುದು. ಏನು ಮಾಡಲಿ? ಏನಾದರೂ ಮಾತನಾಡಲೇ ಬೇಕೆಂದು ಟುನ್ನಿಯನ್ನು ಕರೆಸಿಕೊಳ್ಳುವ ವಿಚಾರ ಎತ್ತಿದಳು. ತಂದೆ "ಹೇಗೆ ಬೇಕೋ ಹಾಗೆ ಮಾಡು," ಎಂದರು. 'ಈಗಂತೂ ನೀನೇ ಸರ್ವಸ್ವ, ನಿನ್ನಿಷ್ಟ ಬಂದಂತೆ ಮಾಡು,' ಎನ್ನುವ ಧಾಟಿಯಲ್ಲಿತ್ತು ಅವರ ಮಾತು. ಅವಳ ಕಣ್ಣಾಲಿಗಳು ತುಂಬಿಬಂದವು. ಕೊಂಚ ತಡೆದು ಅಪ್ಪ ಹೇಳಿದರು:

ತ್ನಿಸಿ ಇವನನ್ನು ಮುಂದಿನ ತರಗತಿಗೆ ಹಾಕಿಸು. ಹೆಡ್ ಮಾಸ್ತರ್ ಪರಿಚಯ ನಿನಗೆ ಚೆನ್ನಾಗಿದೆ. ಒಂದು ವರ್ಷ ಉಳಿಯಲಿ!"

"ಅಪ್ಪಾ, ಕಡೆಯ ಪಕ್ಷ ಸ್ಕೂಲುಗಳನ್ನಾದರೂ ಇಂತಹ ವಿಷಯಗಳಿಂದ ಕಲುಷಿತಗೊಳಿಸ್ಬೇಡಿ. ಟುನ್ನಿ ನನ್ನ ವಿದ್ಯಾರ್ಥಿಯೇ ಆಗಿದ್ರೂ ನಾನು ಅವನನ್ನು ಮುಂದಿನ ತರಗತಿಗೆ ಹಾಕ್ತಿರಲಿಲ್ಲ." ಮಾತಿನಲ್ಲಿದ್ದ ದೃಢತೆಯನ್ನು ನೋಡಿ ಅಪ್ಪ ಸುಮ್ಮನಾಗಿದ್ದರು. ಆದರೂ ಏಕೋ ಟುನ್ನಿಯ ಪತ್ರ ಪದೇ ಪದೇ ಮನಸ್ಸನ್ನು ಚುಚ್ಚುತ್ತಿದೆ. ಬಾಯಾರಿಕೆಯಿಂದ ಗಂಟಲು ಒಣಗಿದಂತಾಯ್ತು. ಎದ್ದು ನೀರು ಕುಡಿಯುವಾಗ ಪಿಟೀಲು ಕಾಣಿಸಿತು; ನುಡಿಸೋಣ ಎನ್ನಿಸಿದರೂ ನುಡಿಸಲಾರದೆ ಸುಮ್ಮನೆ ಕಣ್ಮುಚ್ಚಿ ಮಲಗಿದಳು.

ಸಾವಿತ್ರಿಯ ಟ್ಯೂಷನ್ ನಿಭಾಯಿಸಲು ಸಾಧ್ಯವೇ? ಈಗಂತೂ ಹೇಗಾದರೂ ನಿಭಾಯಿಸಲೇಬೇಕು. ಸ್ಕೂಲಿನಲ್ಲಿ ಆರು ಘಂಟೆ ದುಡಿದರೆ ಇನ್ನೂರು ರೂಪಾಯಿ ಸಿಗುತ್ತದೆ. ಆದರೆ ಟ್ಯೂಷನ್ನಿನಲ್ಲಿ ಒಂದೂವರೆ ಘಂಟೆಗೇ ಇನ್ನೂರು ರೂಪಾಯಿ. ಸಾವಿತ್ರಿಯ ಅಮ್ಮನಂತೂ ಒಂದು ತಿಂಗಳಿನಿಂದ ನಾಲ್ಕಾರು ಬಾರಿ ಮನೆಗೆ ಬಂದು ಗೋಗರೆದಿದ್ದಾಳೆ. ಅಷ್ಟರಲ್ಲೇ ಮಾಲೀಕನ ಮನೆಯ ಮಾಸ್ತರನ ಚಿತ್ರ ಎದುರಾಯಿತು. ಅವರೆಂಥವರು! ಮನೆ ಸಾಮಾನು ತಂದು ಕೊಡುತ್ತಾರೆ, ಲೆಕ್ಕ ಪತ್ರ ಬರೆದು ಕೊಡುತ್ತಾರೆ...ಸಾವಿತ್ರಿಗೆ ಇಷ್ಟು ಕಲಿಸಿದರೂ ಏನೂ ಕಲಿಯದಿದ್ದರೆ! ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ, ಪಾಠ ನಿಲ್ಲಿಸಿಬಿಡ್ತೇನಿ. ಎಂಟನೆಯ ತರಗತಿಗೂ ಲಾಯಖ್ಖಿಲ್ಲದವಳನ್ನು ಒಂಬತ್ತರಲ್ಲಿ ಪಾಸು ಮಾಡಿಸುವುದು ಎಂದರೇನು ಸುಲಭದ ಮಾತೇ?

ಒಂದೇ ತಿಂಗಳಲ್ಲಿ ಬ್ಯಾಂಕಿನಲ್ಲಿದ್ದ ಅಪ್ಪನ ಹಣ ಸಾವಿರಕ್ಕೂ ಹೆಚ್ಚು ಖರ್ಚಾಗಿತ್ತು, ಮತ್ತೂ ಖರ್ಚಾಗುವುದು ಅವಳಿಗಿಷ್ಟವಿರಲಿಲ್ಲ. ಗಂಟು ಎಂದು ಇಟ್ಟಿದ್ದು ಐದು ಸಾವಿರ. ಅದರ ಮೇಲೆ ಅಪ್ಪನಿಗೆ ವಿಪರೀತ



ವೇನೋ ಎನ್ನುವಂತೆ. ಅವನ್ನು ಒಮ್ಮೆ, 'ಕುಂತಿಯ ಮದುವೆಗೆ' ಎಂದು ತಾನೊಬ್ಬ ಜವಾಬ್ದಾರಿ ಅರಿತ ತಂದೆಯೆಂದೋ, 'ಟುನ್ನಿಯ ಓದಿಗೆ' ಎಂದು ಅವನ ಉಜ್ವಲ ಭವಿಷ್ಯವನ್ನು ನೆನೆದೋ ಸಮಾಧಾನಪಡುತ್ತಿದ್ದರು. ಈಗ ಆ ಗಂಟು ಕರಗುತ್ತಿದೆ. ಇದುವರೆಗೆ ತನ್ನ ಸಂಬಳ, ತಂದೆಯ ಪೆನ್ಶನ್, ಹಳ್ಳಿಯ ಮನೆಯಿಂದ ಬರುವ ಬಾಡಿಗೆ ಇಷ್ಟರಿಂದ ಮನೆಯನ್ನು ಹೇಗೋ ತೂಗಿಸುತ್ತಿದ್ದಳು. ಆದರೆ ಈಗ ಖಾಯಿಲೆಯಿಂದ ಹೆಚ್ಚಿನ ಖರ್ಚು, ಖಾಯಿಲೆಯ ಅವಧಿಯೂ ಅನಿಶ್ಚಿತ......ದೂರದಲ್ಲೆಲ್ಲೋ ಕೋಳಿ ಕೂಗಿತು. ಓಹ್, ಆಗಲೇ ಬೆಳಗಾಯಿತು. ನಿದ್ರೆಯಿಲ್ಲದ ರಾತ್ರಿ. ಹುಂ, ಇನ್ನು ದಿನಚರಿ ಪ್ರಾರಂಭ...ಮನೆಗೆಲಸ, ಸ್ಕೂಲು, ಸಾವಿತ್ರಿ, ಅಪ್ಪನ ಆರೈಕೆ... ತಲೆ ಭಾರವಾಯಿತು.

ತನ್ನ ಕ್ಲಾಸ್ ಮುಗಿಸಿ ಕುಂತಿ ಸ್ಟಾಫ್ ರೂಮಿಗೆ ಬಂದು ಕಿಟಕಿಯಿಂದ ಹೊರಗೆ ನೋಡುತ್ತಾ ಕುಳಿತಳು. ತಿದ್ದಬೇಕಾದ ಉತ್ತರ ಪುಸ್ತಕಗಳೂ ರಾಶಿ ಬಿದ್ದಿದೆ. ಏನು ಮಾಡಲೂ ಮನಸ್ಸಿಲ್ಲ. ವಿಪರೀತ ತಲೆಭಾರ. ನಿದ್ರೆಯಂತೂ ತಡೆಯಲಾರದಷ್ಟು. ಮಿಸೆಸ್ ನಾಥ್ ಉತ್ತರ ಪುಸ್ತಕಗಳ ಕಟ್ಟಿನೊಂದಿಗೆ ಬಂದಳು. ನೋಡಿಯೂ ನೋಡದವಳಂತೆ ತಿದ್ದಲಾರಂಭಿಸಿದಳು. ತಾನು ಸಾವಿತ್ರಿಗೆ ಟ್ಯೂಷನ್ ಹೇಳುವುದು ಇವಳಿಗಿನ್ನೂ ತಿಳಿದಿಲ್ಲವೇನೋ. ಇಲ್ಲದಿದ್ದರೆ ಸುಮ್ಮನಿರುತ್ತಿದ್ದಳೇ? ಪುಸ್ತಕವೊಂದು ಕೆಳಗೆ ಬಿದ್ದ ಸದ್ದಾದಾಗ ಕುಂತಿ ಬೆಚ್ಚಿ ತಿರುಗಿ ನೋಡಿದಳು. ಮಿಸೆಸ್ ನಾಥ್ ಕೋಪವನ್ನು ಯಾರದೋ ಪುಸ್ತಕದ ಮೇಲೆ ತೋರಿಸುತ್ತಿದ್ದಳು : "ತಲೆಯಲ್ಲಿ ಸಗಣಿ ತುಂಬಿದೆ. ಓದು ಬೇಕಂತೆ ಓದು. ಮನೇಲಿ ಹಾಯಾಗಿ ಉಂಡು ತಿಂದು ಇರಬಾರ್ದೆ? ಎಲ್ಲೆಲ್ಲಿಂದ ಬರ್ತಾರೋ ನಮ್ಮ ತಲೆ ತಿನ್ನೋಕ್ಕೆ!" ಕುಂತಿ ಸುಮ್ಮನೆ ಹೊರಗೆ ನೋಡಲಾರಂಭಿಸಿದಳು. ಒಂದು ವರ್ಷದಿಂದ ಇಂಥಾ ಮಾತು ಕೇಳಿ ಕೇಳಿ ಕಿವಿ ಜಡ್ಡಾಗಿದೆ. ವಿದ್ಯಾವಂತರು, ಸಭ್ಯರು ಎನಿಸಿಕೊಂಡು ಮಕ್ಕಳನ್ನು ಈ ರೀತಿ ಬಯ್ಯುವುದು ಅವಳಿಗಂತೂ ಹಿಡಿಸದು.

ಮೊದಲನೆಯ ಬಾರಿ ಮಿಸೆಸ್ ನಾಥ್ ಈ ರೀತಿ ರೇಗಾಡುವುದನ್ನು ಕೇಳಿದಾಗ ತಡೆಯಲಾರದಷ್ಟು ನಗು ಬಂದಿತ್ತು. ಕೋಪದಿಂದ ಕೆಂಪಾಗಿ ಮೇಜನ್ನು ಗುದ್ದುತ್ತಾ ಎದುರಿಗೆ ನಿಂತಿದ್ದ ಹುಡುಗಿಗೆ ರೇಗುತ್ತಿದ್ದಳು: "ನಾಳೆ ಪಾಠ ಓದದೇ ಬಂದ್ರೆ ನಿನ್ನ ತಿರುಗೋ ಫ್ಯಾನಿಗೆ ನೇತುಹಾಕಿಬಿಡ್ತೀನಿ." ತಿರುಗುವ ಫ್ಯಾನಿನಲ್ಲಿ ಆ ಹುಡುಗಿ ನೇತಾಡುವ ಕಲ್ಪನೆ ಕುಂತಿಗೆ ಅಸಾಧ್ಯ ನಗೆ ತಂದಿತ್ತು. ಕುಂತಿಯಾದರೂ ಚುರುಕಿಲ್ಲದ ವಿದ್ಯಾರ್ಥಿಗಳಿಗೆ ಬೆಳಿಗ್ಗೆ ಸಂಜೆ ಪಾಠ ಹೇಳಿ ಕೊಡುತ್ತಿದ್ದಳು. ಬತ್ತಿದ ಅವರ ಆತ್ಮವಿಶ್ವಾಸವನ್ನು ಚಿಗುರಿಸುತ್ತಿದ್ದಳು. ಪರಿಣಾಮವಾಗಿ ಸಹೋದ್ಯೋಗಿಗಳಲ್ಲಿ ನಗೆಗೀಡಾಗಬೇಕಾಯಿತು. ವರ್ಷ ಕಳೆಯುತ್ತಿದ್ದಂತೆ ಅವಳ ಉತ್ಸಾಹ ಕಡಿಮೆಯಾಗಿ, ಉತ್ತರ ಪುಸ್ತಕ ತಿದ್ದುವಾಗ ಪರಿಶ್ರಮದ ವ್ಯರ್ಥತೆಯ ಅನುಭವವಾಗುತ್ತಿತ್ತು. ಆದರೂ ಈ ರೀತಿಯ ಗದರಿಕೆ, ಅಪಶಬ್ದಗಳು. ಛೀಛೀ...

"ಸಾವಿತ್ರಿಯ ತಾಯಿ ಅವಳನ್ನು ಬೇರೆ ಸ್ಕೂಲಿನಲ್ಲಿ ಒಂಬತ್ತನೇ ಕ್ಲಾಸಿಗೆ ಸೇರ್ಸಿದಾಳಂತೆ. ನೀವು ಪಾಠ ಹೇಳಿ ಕೊಡಲು ಒಪ್ಪಿಕೊಂಡ್ರಾ?" ಮಾತು ತನ್ನನ್ನು ಉದ್ದೇಶಿಸಿಯೇ ಎಂದು ತಿಳಿದಿದ್ದರೂ ಕುಂತಿ ತಿರುಗಲೂ ಇಲ್ಲ, ಉತ್ತರಿಸಲೂ ಇಲ್ಲ.

"ಹಣ ಇದ್ದರೆ ಒಂಬತ್ತೇನು, ಹತ್ತನೆಯ ಸರ್ಟಿಫಿಕೇಟ್ ಬೇಕಾದ್ರೂ ಸಿಗುತ್ತೆ. ಇಂಥಾ ಟ್ಯೂಷನ್ ಸಿಗಬೇಕಾದ್ರೆ ಪುಣ್ಯ. ಕಲಿತ್ರೆ ಕಲೀಲಿ, ಬಿಟ್ರೆ ಬಿಡಲಿ, ನಾವು ಶಂಖ ಊದಿಬಿಟ್ರೆ ಆಯ್ತು. ಕುಂತಿ, ನೀವು ಎಷ್ಟು ತಗೋತೀರ?" ಪ್ರಶ್ನೆ ನೋವನ್ನುಂಟುಮಾಡಿತು. ತಿರುಗಿ ನೋಡದೆ ಹೇಳಿದಳು: "ಇನ್ನು ಫೀಜಿನ ವಿಷಯ ಮಾತಾಡಿಲ್ಲ. ಒಂದು ತಿಂಗಳು ಪಾಠ ಹೇಳಿ ನೋಡ್ತೀನಿ. ಕಲಿತ್ರೆ ಸರಿ ಇಲ್ಲದಿದ್ರೆ ಬಿಟ್ಟುಬಿಡ್ತೀನಿ." ಉತ್ತರ ಕೇಳಿದಾಗ ಮಿಸೆಸ್ ನಾಥಳ ಮುಖದ ಮೇಲೆ

ಸುಳಿದ ವ್ಯಂಗ್ಯಪೂರ್ಣ ನಗೆಯನ್ನು ಗಮನಿಸದೆ ಇರಲಿಲ್ಲ. 'ಇರಲಿ ಈ ಅಹಂ ಎಷ್ಟು ದಿನ' ಎನ್ನುವ ಭಾವವಿತ್ತು ಅವಳ ನಗೆಯಲ್ಲಿ.

ಮನೆ ತಲುಪಿ ಟೀ ಕುಡಿದು ಸಾವಿತ್ರಿಯ ಮನೆಗೆ ಹೋಗುವ ತಯಾರಿ, ಟೀ ಕುಡಿಯುವುದು ಯಾವಾಗಲೂ ಅಪ್ಪನೊಡನೆ, ಅವನೊಡನ ಮಾತನಾಡುತ್ತಾ ಅವರ ಯೋಗ ಕ್ಷೇಮ ವಿಚಾರಿಸುತ್ತಾ, ಅವಳು ಮೇಲೇಳುವಾಗ ಅಪ್ಪ, "ಈಗ ತಾನೆ ಬಂದಿದ್ದೀಯಾ, ಸ್ವಲ್ಪ ಸುಧಾರಿಸಿಕೊ," ಎಂದರು. ಅಪ್ಪನ ಮಾತು ತೆಗೆದು ಹಾಕಲಾರದೆ ಮತ್ತೆ ಕುಳಿತಳು, ತಡವಾದರೆ ಬಸ್ಸು, ಟ್ರಾಂ ಸಿಗಲಾರದು. ತನ್ನ ಪರಿಶ್ರಮಕ್ಕಾಗಿ ಅಪ್ಪ ಬಹಳ ಚಿಂತಿಸುತ್ತಾರೆ– ಇದಕ್ಕೆಲ್ಲಾ ತಾವೇ ಹೊಣೆಗಾರರೇನೊ ಎನ್ನುವಂತೆ. ಈ ಖಾಯಿಲೆ ಅಪ್ಪನನ್ನು ಅದೆಷ್ಟು ವಿವಶರನ್ನಾಗಿ ಮಾಡಿದೆ!

ಸಾವಿತ್ರಿಗೆ ಒಂದು ತಿಂಗಳು ಪಾಠ ಮಾಡುವುದರಲ್ಲಿ ಸಾಕಾಯಿತು. ಪಾಠಕ್ಕೆ ಒಂದೂವರೆ ಗಂಟೆಯಾದರೆ ಬಸ್ಸಿಗಾಗಿ ಕಾಯುವುದು ಒಂದೂವರೆ ಗಂಟೆ, ಪೇಪರ್ ಓದಲೂ ಪುರುಸೊತ್ತಿಲ್ಲ. ಪಿಟೀಲಿನ ಮೇಲೆ ಧೂಳಿನ ರಾಶಿ. ಧೂಳನ್ನೇನೊ ಒರೆಸಿಯಾಯಿತು. ಆದರೆ ಎಷ್ಟೇ ಪ್ರಯತ್ನಿಸಿದರೂ ನುಡಿಸುವುದು ಸಾಧ್ಯವಾಗಲಿಲ್ಲ. ತನ್ನ ಜೀವನ ಹೀಗೇ ಇರುವುದಾದರೆ ತಾನು ಎಂದಿಗೂ ಪಿಟೀಲು ನುಡಿಸಲಾರೆ ಎನ್ನಿಸಿತು. ಓಹ್, ಅದು ಸಾಧ್ಯವಿಲ್ಲ, ನಾಳೆ ಸಾವಿತ್ರಿಯ ತಾಯಿಗೆ ಹೇಳಿಬಿಡುವುದು 'ನಾನಿನ್ನು ಪಾಠ ಹೇಳಲಾರೆ' ಎಂದು. ತಿಂಗಳಿಗೆ ಇನ್ನೂರು ಸಿಕ್ಕಿದರೆ ಮನೆಯ ಸ್ಥಿತಿ ಎಷ್ಟೋ ಸುಧಾರಿಸುತ್ತದೆ ನಿಜ, ಆದರೇನು ಮಾಡುವುದು ?

"ಇದೇನು ನೀವು ಹೇಳೋದು? ನಿಮ್ಮ ಭರವಸೆಯಿಂದ್ಲೆ ಹೊಸ ಸ್ಕೂಲಿಗೆ ಸೇರಿಸಿದೆವು. ನಿಮ್ಮಿಂದ ಏನೋ ಸ್ವಲ್ಪ ಕಲೀತಾ ಇದ್ಲು. ಹೀಗೆ ಮಾತ್ರ ಮಾಡ್ಬೇಡಿ. ಹೇಗಾದ್ರೂ ಮಾಡಿ ಎಸ್ಸೆಸ್ಸೆಲ್ಸೀ ತನಕ ತಲುಪಿಸಿಬಿಡಿ." ಸಾವಿತ್ರಿಯ ತಾಯಿಯ ಪ್ರತಿಕ್ರಿಯೆ,

"ನೋಡಿ, ಮನೆ ಬಹಳ ದೂರ. ನಮ್ಮ ತಂದೆ ಖಾಯಿಲೆಯವರು. ಅವರ ಔಷಧಿ ಪಥ್ಯ ಎಲ್ಲಾ ನಾನೇ ನೋಡ್ಕೋಬೇಕು."

ಮಾತು ಮುಗಿಯುವ ಮೊದಲೇ...

"ದೂರವೇನೋ ನಿಜ. ಹೇಗಾದ್ರೂ ನಿಭಾಯಿಸ್ಸಿ. ನಾನು ಬೇಕಾದ್ರೆ ನಿಮಗೆ ಕಾರಿನ ಏರ್ಪಾಡು ಮಾಡ್ತೀನಿ, ಇನ್ನೇನು ಮಾಡ್ಬಲ್ಲೆ ನೀವೇ ಹೇಳಿ," ಎಂದು ಬಿಟ್ಟಳು.

ಕುಂತಿ ಅವಾಕ್ಕಾದಳು. ಇನ್ನೂರು ರೂಪಾಯಿ ಜೊತೆಗೆ ಕಾರು ಬೇರೆ. ತಾಯಿ ಮುಂದುವರಿಸಿದಳು: "ನೋಡಿ ವಿಷಯ ಇಷ್ಟೇ. ದೊಡ್ಡ ಮನೆತನದ ಜೊತೆ ಸಾವಿತ್ರಿಯ ಮದುವೆ ಮಾತುಕತೆ ನಡೆದಿದೆ. ಅವರು ಹುಡುಗಿ ಎಸ್ಸೆಸ್ಸೆಲ್ಸಿ ಪಾಸು ಮಾಡ್ಲಿ ಆಮೇಲೆ ನೋಡೋಣ ಅಂತಾರೆ. ಹೇಗಾದರೂ ಹತ್ತರ ತನಕ ತಲುಪಿಸಿಬಿಡಿ. ಆಮೇಲೆ ನೋಡೋಣ. ಏನು ಮಾಡೋದು ಹೇಳಿ; ಈಗಿನ ಕಾಲದ ಹುಡುಗರು. ಸಾವಿತ್ರಿ ನಿಮ್ಮನ್ನು ಬಿಟ್ಟು ಬೇರೆ ಯಾರ ಹತ್ರಾನೂ ಪಾಠ ಹೇಳಿಸಿಕೊಳ್ಳಲ್ಲ ಅಂತಾಳೆ. ನೀವು ಬನ್ನಿ. ನಾನು ಕಾರು ಕಳಿಸ್ತೀನಿ."

ಆ ದಿನ ಕುಂತಿ ಕಾರಿನಲ್ಲೇ ಹಿಂತಿರುಗಿದಳು. ಕಾರು ಗೇಟಿನೊಳಗೆ ಪ್ರವೇಶಿಸುವಾಗ ಮಾಲೀಕರ ಮನೆ ಮೇಷ್ಟ್ರು ರಿಕ್ಷಾದಲ್ಲಿ ಸಾಮಾನು ತುಂಬಿ ತರುವುದು ಕಾಣಿಸಿತು. ತನಗಾದರೊ ಕಾರಿನಲ್ಲಿ ಬಂದೆ ಎಂಬ ಗರ್ವ, ಆತ್ಮವಿಶ್ವಾಸ. ಅಪ್ಪನಿಗೆ ವಿಷಯ ತಿಳಿಸಿದಾಗ ಅವರೂ ಸಂತೋಷಪಟ್ಟರು.

ಮಾರನೆಯ ದಿನ ಕಾರಿನಲ್ಲಿ ಕುಳಿತು ಸಾವಿತ್ರಿಯ ಮನೆಗೆ ಹೋಗುವಾಗ ರಸ್ತೆ ಬಹಳ ಸುಂದರವಾಗಿ ಕಾಣಿಸಿತು. ಬಸ್ಸಿನಲ್ಲಾದರೊ ನೂಕುನುಗ್ಗಲು, ಬೆವರಿನ ದುರ್ಗಂಧ ಅವನ್ನೆಲ್ಲಾ ತಪ್ಪಿಸಿ ರಸ್ತೆಯನ್ನು ಗಮನಿಸುವುದಾದರೂ ಹೇಗೆ ? ತಾನು ಸ್ಕೂಲಿಗೂ ಕಾರಿನಲ್ಲಿ ಹೋಗುವಂತಿದ್ದರೆ !

ಟುನ್ನಿ ಚೆನ್ನಾಗಿ ಓದುತ್ತಿದ್ದಾನೆ ಎಂದು ಮಾವನಿಂದ ಪತ್ರ ಬಂದಿತ್ತು. ಅಪ್ಪನ ಆರೋಗ್ಯ ಒಮ್ಮೆ ಸರಿಯಿದ್ದರೆ ಒಮ್ಮೆ ವಿಪರೀತ, ಹೇಗೋ ನಡೆದಿತ್ತು. ಮಾತನಾಡುವುದ-

ನ್ನಂತೂ ಅಪ್ಪ ನಿಲ್ಲಿಸಿಯೇಬಿಟ್ಟಿದ್ದರು. ಅವರ ಆರೈಕೆಗೆ ಅತ್ತೆ ಬಂದಿದ್ದಾರೆ. ಕುಂತಿಗೆ ಅದೇ ಸ್ಕೂಲು, ಮನೆ, ಸಾವಿತ್ರಿಯ ಪಾಠ... ಚಕ್ರದಂತೆ ಸುತ್ತು ಹಾಕಿತ್ತು. ಮನಸ್ಸಿಗೆ ಬೇಸರವಾದಾಗ ಪಿಟೀಲು ವಾದನ, ನೀರಸ ಜೀವನದ ಏಕಮಾತ್ರ ಆಧಾರ.

ಆ ದಿನ ಸಾವಿತ್ರಿಯ ಪಾಠ ಮುಗಿಸಿ ಹೊರಡುವದರಲ್ಲಿದ್ದಾಗ ಅವಳಮ್ಮ ಒಬ್ಬ ಹುಡುಗನೊಡನೆ ಪ್ರವೇಶಿಸಿದಳು, "ನೋಡಿ... ಇವನು ಸಾವಿತ್ರಿಯ ಸೋದರಳಿಯ. ಇನ್ಮುಂದೆ ಇಲ್ಲೇ ಇರ್ತಾನೆ. ನೆನ್ನೆ ತಾನೆ ಸ್ಕೂಲಿಗೆ ಸೇರ್ಸಿದೆವು. ಸಾವಿತ್ರಿಯದಾದ ಮೇಲೆ ಇವನಿಗೂ ಸ್ವಲ್ಪ ಪಾಠ ಹೇಳ್ಬಿಡಿ." ಕುಂತಿಗೆ ಮಾತಾಡಲು ಅವಕಾಶವೇ ಇಲ್ಲ... "ಭಾಳ ಮುಂದ್ಹೋಗಿದಾನೆ, ಮಾತಾಡಿದ್ರಂತೂ ಮರಳು ಮಾಡ್ಬಿಡ್ತಾನೆ. ನಮಸ್ತೆ ಮಾಡು ಮರಿ." ಸರಿ ಸಾವಿತ್ರಿಯದಾದನಂತರ ಆ ಮಗುವಿಗೂ ಅರ್ಧ ಗಂಟೆ ಪಾಠ. ಒಂದೇ ಸಮಾಧಾನ ಸಂತೋಷ ಎಂದರೆ ಪಾಠ ಎಷ್ಟು ಹೊತ್ತಿಗೆ ಮುಗಿದರೂ ಕಾರಿನಲ್ಲಿ ಮನೆ ತನಕ ಹೋಗಬಹುದು. ಆದರೆ ಕ್ರಮೇಣ ಈ ಸಾಲು ಹೆಚ್ಚಾಯಿತು. ಸಾವಿತ್ರಿಯ ತಮ್ಮ ತಂಗಿ ಯಾರಾದರೂ ಸೇರುತ್ತಲೇ ಇದ್ದರು. ಒಬ್ಬರಿಗೆ 'ಹೋಂ ವರ್ಕ್' ಹೇಳಿಕೊಳ್ಳುವ ಆತುರವಾದರೆ ಮತ್ತೊಬ್ಬನಿಗೆ ಟೆಸ್ಟಿನ ತಯಾರಿ. ಸಾವಿತ್ರಿಯ ಪಾಠ ಮುಗಿಯುವ ವರೆಗೆ ಮಾತ್ರ ಅವರಮ್ಮ ಯಾರನ್ನೂ ಒಳಗೆ ಕಳಿಸುತ್ತಿರಲಿಲ್ಲ. ಆಗಾಗ ಅವಳೇ ಬಂದು ಕುಳಿತು ಯೋಗಕ್ಷೇಮ ವಿಚಾರಿಸುತ್ತಿದ್ದಳು. ಸಾವಿತ್ರಿಯ ಪಾಠದ ಬಗ್ಗೆ ಕೇಳುತ್ತಿದ್ದಳು. ಅವಳ ಧೈರ್ಯ, ಸಾಹಸಗಳನ್ನು ಹೊಗಳುತ್ತಿದ್ದಳು. ಕುಂತಿಗೆ ಮೊದಲು ಇದೆಲ್ಲಾ ವಿಚಿತ್ರ ಎನಿಸಿದರೂ ಕ್ರಮೇಣ ಅಭ್ಯಾಸವಾಗಿಹೋಯಿತು.

ಇಂದು ಏಕೋ ಟುನ್ನಿಯ ನೆನಪು ಬಹಳ. ಸ್ಟಾಫ್ ರೂಮಿನಲ್ಲಿ ಬರೀ ಸಿನಿಮಾ ಚರ್ಚೆ. ಟುನ್ನಿ ಹೋದ ನಂತರ ತನ್ನ ಬಾಳು ಎಷ್ಟು ನೀರಸ. ಹಾಸಿಗೆ ಹಿಡಿದಿರುವ ಅಪ್ಪ,

ಅತ್ತೆ. ಮಾತನಾಡಲೂ ಯಾರಿಲ್ಲ. ತನ್ನ ವಯಸ್ಸಿನ ಇತರ ಹುಡುಗಿಯರೆಲ್ಲಾ ಎಷ್ಟು ಖುಷಿಯಾಗಿದ್ದಾರೆ, ವಿಹಾರ, ವಿನೋದ... ಅವಳ ಜೀವನದಲ್ಲಿ ಎಲ್ಲಾ ದೂರ...ದೂರ-ವೇನು ಪ್ರವೇಶಿಸುವಂತೆಯೇ ಇಲ್ಲ. ಅಪ್ಪನಿಗೆ ಯಾವಾಗ ವಾಸಿಯಾಗುತ್ತದೋ? ಇನ್ನೂ ಎಷ್ಟು ದಿನ ಹೀಗೆ ಮಲಗಿರುತ್ತಾರೆ? ಟುನ್ನಿ ಇದ್ದಿದ್ದರೆ ಅವನ ಜೊತೆ ಸಿನಿಮಾಗೆ ಹೋಗಬಹುದಾಗಿತ್ತು. ಓಹ್, ಟುನ್ನಿ ಯಾವಾಗ ದೊಡ್ಡವನಾಗಿ ಈ ಹೊರೆಯನ್ನೆಲ್ಲಾ ಹೊತ್ತುಕೊಳ್ಳುತ್ತಾನೋ! ಎದುರಿಗೇ ಪಿಟೀಲಿದೆ. ನುಡಿಸಲು ಸಾಧ್ಯವಿಲ್ಲ, ಒಂದೇ ಸಮನೆ ನೋಡುತ್ತಿದ್ದರೆ ಮನಸ್ಸಿಗೆ ಸಮಾಧಾನ. ಒಮ್ಮೊಮ್ಮೆ ಸ್ಕೂಲು, ಮನೆ, ಪಾಠ ಎಲ್ಲವನ್ನೂ ತೊರೆದು, ಪಿಟೀಲಿನೊಡನೆ ಎಲ್ಲಿಯಾದರೂ ಹೋಗಿ ಅದು ಮುರಿದು ಹೋಗುವವರೆಗೂ ನುಡಿಸುತ್ತಿರಬೇಕು, ನಾದಲಹರಿಯೊಡನೆ ಲೀನವಾಗಿ ಹೋಗಬೇಕು ಅನಿಸುತ್ತದೆ.

ಡಿಸೆಂಬರ್ ರಜೆಯಲ್ಲಿ ಟುನ್ನಿ ಬಂದ. ಬಂದದ್ದೇ ಮನೆ ಬೆಳಕಾಯಿತು. ಅಪ್ಪನಿಗೆ, ಕುಂತಿಗೆ, ಅತ್ತೆಗೆ ಎಲ್ಲರಿಗೂ ಖುಷಿ, ಬೇಸರವೆಲ್ಲಾ ಮಾಯ, ಕ್ರಿಕೆಟ್ ಹುಚ್ಚು ಮಾತ್ರ ಅವನಿಗೆ ಇನ್ನೂ ಹಾಗೇ ಇದೆ. ಟೆಸ್ಟ್ ಮ್ಯಾಚ್ ನೋಡಬೇಕು ಎನ್ನುತ್ತಲೇ ಬಂದ. ಹೋದ ವರ್ಷ ಕ್ರಿಕೆಟ್‌ನಿಂದಾಗಿಯೇ ಫೇಲಾದದ್ದು. ಟೆಸ್ಟ್‌ಗೆ ಕಳಿಸಲು ಟಿಕೆಟ್‌ಗಾಗಿ ಕುಂತಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಹೋಗುವುದನ್ನೇ ಬಿಟ್ಟಿದ್ದ ಎಷ್ಟೋ ಪರಿಚಿತರ ಮನೆಗೆ ಟಿಕೆಟ್‌ಗಾಗಿ ಹೋಗಿ ಬಂದಳು. ಏನೇ ಮಾಡಿದರೂ ಟಿಕೆಟ್ ಇಲ್ಲ. ಈ ಮ್ಯಾಚಿಗಾಗಿ ಜನ ಯಾಕಿಷ್ಟು ಹುಚ್ಚರಾಗ್ತಾರೋ. ಕಾಮೆಂಟ್ರಿ ಕೇಳಿಯೇ ಸಂತೋಷಪಡು ಎಂದು ಟುನ್ನಿಗೆ ಹೇಳಿದಳು. ಪಾಠಕ್ಕೆ ಹೋದಾಗ ಸಾವಿತ್ರಿ ಅಂಜುತ್ತಾ, "ಮೇಡಂ, ನಾಳೆ ಬರಬೇಡಿ. ನಾವು ಟೆಸ್ಟ್ ನೋಡಲು ಹೋಗಬೇಕು," ಎಂದಳು.

ಬಂದಿದ್ದಾನೆ. ಟೆಸ್ಟ್ ನೋಡಬೇಕು ಅಂತ ಭಾಳ ಆಸೆಪಟ್ಟ, ಏನು ಮಾಡಿದ್ರೂ ಟಿಕೆಟ್ ಸಿಗಲಿಲ್ಲ."

"ಅಮ್ಮನ್ನ ಕೇಳ್ತೀನಿ ತಡೀರಿ. ಒಂದೆರಡು ಉಳಿದಿರಬಹುದು." ಸಾವಿತ್ರಿ ಒಳಗೋಡಿದಳು.

ಇಷ್ಟೆಲ್ಲಾ ಓಡಾಡಿದೆ, ಇವರ ನೆನಪೇಕೆ ಬರಲಿಲ್ಲ ಎಂದುಕೊಂಡಳು ಕುಂತಿ. ಅವರನ್ನು ಫೋನಿನಲ್ಲಿ ವಿಚಾರಿಸಿ ಹೇಳಿದರು: "ನಾಳೆ ಒಂಬತ್ತು ಗಂಟೆಗೆ ಅವನನ್ನ ತಯಾರು ಮಾಡಿರಿ. ಮಕ್ಕಳು ಹೋಗುವಾಗ ಹಾಗೇ ಕರಕೊಂಡು ಹೋಗ್ತಾರೆ."

ಕುಂತಿಗೆ ಹಿಗ್ಗು. ಟುನ್ನಿಗೆ ತಿಳಿಸಿದರೆ ಎಷ್ಟು ಕುಣಿದಾಡುತ್ತಾನೋ. ಸಾವಿತ್ರಿ ಮನೆಯವರು ನಿಜವಾಗ್ಲೂ ಒಳ್ಳೇ ಜನ. ಅಪ್ಪನ ಆರೋಗ್ಯದ ಬಗ್ಗೆ ಎಷ್ಟೊಂದು ವಿಚಾರಿಸ್ತಾರೆ. 'ಏನಾದ್ರೂ ಬೇಕಾದ್ರೆ ಕೇಳಿ,' ಅಂತ ಒಗ್ಗರಣೆ ಬೇರೆ. ತಾನೇಕೆ ವ್ಯವಹಾರದಲ್ಲಿ ಇಷ್ಟೊಂದು ಕಠಿಣಳು.

ಟುನ್ನಿ ಊರಿಗೆ ಹಿಂತಿರುಗಿದ. ಅದೇ ವಾರ ಅಪ್ಪನಿಗೆ ಖಾಯಿಲೆ ಹೆಚ್ಚಾಯಿತು. ಎಷ್ಟೋ ಔಷಧಿಗಳಾದವು. ಡಾಕ್ಟರರು ಬಂದು ಹೋದರು. ಬ್ಯಾಂಕಿನಿಂದ ಐದು ನೂರು ತೆಗೆಯಲೇಬೇಕಾಯಿತು. ಇನ್ನೇನು ಮಾಡಲು ಸಾಧ್ಯ?

ಸಾವಿತ್ರಿಯ ಅರ್ಧ ವಾರ್ಷಿಕ ಪರೀಕ್ಷೆಯ ರಿಸಲ್ಟ್ ಬರಲಿದೆ. ಮೊದಲಿಗಿಂತಲೂ ಸುಧಾರಿಸಿದ್ದಾಳಾದರೂ ಪಾಸಾಗುವಳೆಂಬ ನಂಬಿಕೆ ಇಲ್ಲ. ಅವರಮ್ಮನಿಗೆ ಹೇಳಿದರೂ ಅವರದು ಒಂದೇ ಹಠ. 'ಹೇಗಾದ್ರೂ ಮಾಡಿ ಹತ್ತರ ತನಕ ತಲುಪಿಸ್ಬಿಡಿ.' ತಾನೇನು ಮಾಡಲು ಸಾಧ್ಯ? ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ. ರಿಸಲ್ಟ್ ಒಳ್ಳೆಯದಾಗಿಲ್ಲದಿದ್ರೆ ಅವರಮ್ಮ ಏನು ಹೇಳ್ತಾರೋ? ಅವರ ಮನೆ ತಲುಪಿದಾಗ ಮೊದಲು ತಾಯಿಯದೇ ಭೇಟಿಯಾಯಿತು. "ಓಹ್ ಬನ್ನಿ, ನಿಮ್ಮ ವಿಷಯವೇ ಮಾತಾಡ್ತಾ ಇದ್ವಿ. ನಿಮ್ಮಿಂದ

ಕುತೂಹಲಪೂರ್ಣ ದೃಷ್ಟಿಯನ್ನೆದುರಿಸುತ್ತಾ, ಆಕೆ ಮೇಜಿನ ಡ್ರಾ ಎಳೆದು ಒಂದು ಗಂಟು ಹೊರತೆಗೆದಳು. "ಅವತ್ತು ನಿಮ್ಮ ತಮ್ಮ ಹಾಕ್ಕೊಂಡಿದ್ದಂತಹ ಸ್ವೆಟರ್ ನಂಗೂ ಒಂದು ಬೇಕು. ಒಂದು ಹಾಕ್ಕೊಡಿ. ನನಗೆ ಹಾಕುಕ್ಕೆ ಬರುಲ್ಲ. ಅದು ಭಾಳ ಚೆನ್ನಾಗಿತ್ತು." ಅಷ್ಟರಲ್ಲಿ ಹೊರಗಿನಿಂದ ಯಾರೋ ಕೂಗಿದರೆಂದು ಉಲ್ಲನ್ನಿನ ಗಂಟನ್ನು ಮೇಜಿನ ಮೇಲಿಟ್ಟು ಹೋದವಳು ಪುನಃ ಬರಲೇ ಇಲ್ಲ.

ಮನೆಗೆ ಹಿಂತಿರುಗಿದಾಗ ಕೈಯಲ್ಲಿ ಉಲ್ಲನ್ನಿನ ಉಂಡೆಯಿತ್ತು. ಬರುತ್ತಿದ್ದಂತೆ ಅತ್ತೆ ಹೇಳಿದರು: "ಡಾಕ್ಟರು ಈ ಚೀಟಿ ಕೊಟ್ಟಿದಾರೆ." ಅದನ್ನು ಓದಲೂ ಇಲ್ಲ, ಪರ್ಸಿನಲ್ಲಿ ತುರುಕಿದಳು. ಅಪ್ಪನನ್ನು ನೋಡಲು ಹೋದಾಗ ಕಣ್ಮುಚ್ಚಿ ಮಲಗಿದ್ದರು. ಅವರ ಸುಕ್ಕುಗಟ್ಟಿದ ಮುಖವನ್ನು ಒಂದು ಕ್ಷಣ ನೋಡಿ ಹಿಂತಿರುಗಿದಳು. ಹಿಟೀಲು ಕಾಣಿಸಿತು. ಊಟವೂ ಸೇರಲಿಲ್ಲ. ಮಲಗಿ ಕಣ್ಮುಚ್ಚಿದ್ದಳು. ನಿದ್ರೆ ಹತ್ತಿರ ಸುಳಿಯಲಿಲ್ಲ. ಕಣ್ಣೀರು ಉರುಳಿತು.

ಕೊನೆಗೂ ಅವಳ ಧೈರ್ಯವನ್ನು ಒಳಗೇ ಕುಗ್ಗಿಸಿದ್ದು ಅಂದು ನಿಜವಾಗಿಯೇ ಪರಿಣಮಿಸಿತು. ಸಾವಿತ್ರಿ ಅರ್ಧ-ವಾರ್ಷಿಕ ಪರೀಕ್ಷೆಯಲ್ಲಿ ಫೇಲ್. ಅವರ ಮನೆಗೆ ಹೋದಾಗ ಸಾವಿತ್ರಿ ಅಳುತ್ತಿದ್ದಾಳೆ. ಅವರಮ್ಮ ರೇಗಾಡುತ್ತಿದ್ದಾಳೆ. ಕುಂತಿಯನ್ನು ಕಂಡೊಡನೆ, "ನೋಡಿ ಸಾವಿತ್ರಿ ರಿಸಲ್ಟ್. ಈಗ ಪರ್ವಾಗಿಲ್ಲ, ಪಾಸು ಮಾಡ್ತಾಳೆ ಅಂತಿದ್ರಿ. ಎಲ್ಲಾ ವಿಷಯಗ್ಳಲ್ಲೂ ಫೇಲ್. ಇಲ್ಲಮ್ಮಾ ಇಲ್ಲ. ಇವಳಿಗೆ ಓದು ಹತ್ತಲ್ಲ. ಇವಳ ಹಣೇಲೇ ಬರೆದಿಲ್ಲ. ಸುಮ್ಮನೆ ದುಡ್ಡು ದಂಡ. ಮದುವೆ ಮಾತೂ ಮುಂಗೀತು," ಎಂದು ಹಾರಾಡಿದಳು, ಕುಂತಿ ರಿಪೋರ್ಟ್ ಕೇಳುತ್ತಾ, "ಎಲ್ಲಾ ವಿಷಯಗಳಲ್ಲೂ ಫೇಲಾಗುವಷ್ಟು ಕೆಟ್ಟದಾಗಿ ಮಾಡಿರಲಿಲ್ವಲ್ಲ, ಕೊಡಿ ಇಲ್ಲಿ," ಎಂದಳು. ಆದರೆ ನಿಜ, ಸಾವಿತ್ರಿಯ ರಿಪೋರ್ಟಿನಲ್ಲಿ ಕೆಂಪು ಗುರುತಿನ ಹೊರತು ಬೇರೇನೂ ಕಾಣಲಿಲ್ಲ. ಸಾವಿತ್ರಿಯ

ಕಫದಲ್ಲಿ ಕೆಂಪು, ಎಲ್ಲಾ ಕಡೆಯೂ ಕೆಂಪು, ಕೆಂಪು, ಕೆಂಪು.................

ಅವರಮ್ಮ ಹೇಳಿದಳು: "ನೋಡಿ ನಾನು ಈಗ್ಲೂ ಹೇಳ್ತೀನಿ. ಸ್ಕೂಲಿಗೆ ಹೋಗಿ ವಿಚಾರ್ಸಿ. ಸ್ಕೂಲಿಗೆ ಹೋದ್ರೆ ಆ ಮಾತೇ ಬೇರೆ ಆಗುತ್ತೆ. ಟೀಚರರನ್ನ ನೋಡಿ. ಏನಾದ್ರೂ ಭರವಸೆ ಸಿಕ್ಕಿದ್ರೆ ಪಾಠ ಮುಂದು ವರಿಸೋಣ." ಆ ದಿನ ಮನೆಗೆ ಬಂದು ಪಾಠ ಹೇಳಿಕೊಡಲು ಬಲವಂತಪಡಿಸಿದವಳೇ ಹೀಗೆ ಹೇಳ್ತಿದಾಳೆ? ನಿಧಾನವಾಗಿ ನುಡಿದಳು; "ನಾನು ಸ್ಕೂಲಿಗೆ ಹೋಗಿ ವಿಚಾರಿಸ್ತೀನಿ. ಕೊನೇ ಪರೀಕ್ಷೆಲಂತೂ ಪಾಸು ಮಾಡಿಸಲೇ ಬೇಕು."

"ಆ ಜವಾಬ್ದಾರಿ ನೀವು ತಗೋಳೋದಾದ್ರೆ ಪಾಠ ಹೇಳ್ಸೋಣ. ಹೇಗಾದ್ರೂ ಮಾಡಿ ಪಾಸು ಮಾಡಿಸ್ಬಿಡಿ."

ಅಂತಹ ಜವಾಬ್ದಾರಿ ತೆಗೆದುಕೊಳ್ಳುವುದು, ತೆಗೆದುಕೊಂಡರೂ ನಿಭಾಯಿಸುವುದು ಅಸಾಧ್ಯ ಎಂದು ಕುಂತಿಗೆ ಗೊತ್ತು. "ನೋಡೋಣ," ಎಂದು ಮಾತ್ರ ಹೇಳಿದಳು.

ನಿಜವಾಗಿಯೂ ಕುಂತಿ ಸಾವಿತ್ರಿಯ ಸ್ಕೂಲಿಗೆ ಹೋದಳು. ಪುಣ್ಯವಶಾತ್ ಹಿಂದಿನ ಪರಿಚಯದ ಅಧ್ಯಾಪಕಿಯೊಬ್ಬಳಿದ್ದಳು. ವಿಚಾರಿಸುವುದಲ್ಲದೆ ಬೇರೇನೂ ಮಾಡಲು ಅವಳಿಂದ ಸಾಧ್ಯವಾಗಲಿಲ್ಲ. ಸಾವಿತ್ರಿಗೆ ಮತ್ತಷ್ಟು ಉತ್ಸಾಹದಿಂದ ಪಾಠ ಹೇಳಲಾರಂಭಿಸಿದಳು. ಅವಳ ಪಾಠ ನಿಂತು ಹೋದರೆ? 'ರೆ'ಯ ಬಗ್ಗೆ ಯೋಚಿಸಲೂ ಅಸಮರ್ಥಳಾಗಿದ್ದಳು ಕುಂತಿ. ರಜೆ ಪ್ರಾರಂಭವಾದಾಗ ಕುಂತಿಯ ಬೇಸರ ಮತ್ತಷ್ಟು ಹೆಚ್ಚಾಯಿತು. ಅಪ್ಪನ ಖಾಯಿಲೆಯ ಬಗ್ಗೆ ಚಿಂತಿಸುವುದಿಲ್ಲ, ಶಾಲೆಯ ಕೆಲಸದಲ್ಲಿ ಆಸಕ್ತಿ ಇಲ್ಲ, ಸಾವಿತ್ರಿಯ ಪಾಠದಲ್ಲಿ ಆಸಕ್ತಿ ಇಲ್ಲ. ಎಲ್ಲವೂ ಯಂತ್ರವತ್. ಸಾವಿತ್ರಿಯ ಅಮ್ಮನ ಮಾತು ಸಹ ಈಗೀಗ ಕೆಟ್ಟದಾಗಿ ಕಾಣಿಸುವುದಿಲ್ಲ. ತನ್ನ ಹಠಮಾರಿ ಮಕ್ಕಳನ್ನ ಬಯ್ಯುತ್ತಾ, "ನೋಡಿ ದಾರೀಲಿ ಎರಡು ನಿಮಿಷ ಇಳಿದು ಇವನಿಗೆ ಚಪ್ಪಲಿ

ಈ ಮಕ್ಕಳಂತೂ ಯಾವ ಸಾಮಾನೇ ಆಗ್ಲಿ ಬಾಯಲ್ಲಿ ಬರ್ತಿದ್ದಂತೇ ಆಗ್ಬೇಕು," ಎನ್ನುತ್ತಿದ್ದಳು. ಕುಂತಿ ಮಾತನಾಡದೆ ಆ ಕೆಲಸ ನಿರ್ವಹಿಸುತ್ತಿದ್ದಳು.

ಟುನ್ನಿ ಬರಬಹುದು, ಅವನು ಬಂದರೆ ಸ್ಥಿತಿಯೇನೂ ಬದಲಾಗುವುದಿಲ್ಲ. ಆದರೂ ನಿರೀಕ್ಷೆ, ಕಾತರ. ಎಷ್ಟೋ ಸಲ. ಯೋಚಿಸಿದ್ದಳು, ಟುನ್ನಿ ಬರುತ್ತಿದ್ದಂತೆಯೇ, "ಇಗೊ, ಟುನ್ನಿ ಒಪ್ಪಿಸಿಕೊ. ನೀನ್ ಚಿಕ್ಕೋನೊ, ದೊಡ್ಡೋನೊ ನನಗೆ ಗೊತ್ತಿಲ್ಲ. ನಿನಗೆ ತಿಳಿದ ಹಾಗೆ ಮಾಡು. ನನ್ನಲ್ಲಿ ಶಕ್ತಿಯಿದ್ದಷ್ಟು ಸುಧಾರಿಸಿದೆ. ಇನ್ನು ಒಂದು ದಿನವೂ ಸಾಧ್ಯ-ವಿಲ್ಲ." ಅಪ್ಪನ ಬಗ್ಗೆ ತನಗೇಕಿಷ್ಟು ಬೇಸರ? ತಿಳಿದೊ ತಿಳಿಯದೆಯೊ ಯೋಚಿಸುತ್ತಾಳೆ... ಅಪ್ಪ ಹುಷಾರಾಗಲಿ ಇಲ್ಲದಿದ್ದರೆ...

ಸಾವಿತ್ರಿಯನ್ನು ಪಾಸು ಮಾಡಿಸಲೇಬೇಕೆಂದು ರಾತ್ರಿ ಬಹಳ ಹೊತ್ತು ಎಚ್ಚರವಿದ್ದು ಪ್ರಶ್ನೆಗಳ ಉತ್ತರ ಬರೆದು ಗಟ್ಟಿ ಮಾಡಿಸಿದಳು. ಬೆಳಿಗ್ಗೆ ಸಂಜೆ ಪಾಠ ಹೇಳಿ ಕೊಟ್ಟಳು. ಇಷ್ಟು ಮಾಡಿದರೂ ಪಾಸಾಗುತ್ತಾಳೊ ಇಲ್ಲವೊ. ಇದ್ದಕ್ಕಿದ್ದಂತೆ ಅಪ್ಪನಿಗೆ ಒಂದು ದಿನ ಬಹಳ ವಾಂತಿಯಾಯಿತು. ಕುಂತಿ ಬೆಚ್ಚಿದಳು. ಅತ್ತೆ ಅತ್ತು ಅತ್ತು ಸಾಕಾದರು. ಡಾಕ್ಟರು, ಔಷಧಿ, ಇಂಜಕ್ಷನ್, ಓಡಾಟ...ಹುಚ್ಚಿಯಂತೆ ಕುಂತಿ ಎಲ್ಲವನ್ನೂ ಪೂರೈಸಿದಳು. ಇಷ್ಟು ಶಕ್ತಿ ಎಲ್ಲಿಂದ ಬಂತೊ ಅವಳಿಗೇ ತಿಳಿಯದು, ಡಾಕ್ಟರ ಸಲಹೆಯಂತೆ ಅಪ್ಪನನ್ನು ಆಸ್ಪತ್ರೆಗೆ ಸೇರಿಸಿದಳು. ಮನೆಗೆ ಹಿಂತಿರುಗಿದಾಗ ಭಣ ಭಣ ಎನ್ನುತ್ತಿತ್ತು. ತಾತ್ಕಾಲಿಕವಾಗಿಯಲ್ಲ, ಶಾಶ್ವತವಾಗಿಯೇ ಅಪ್ಪನನ್ನು ಆಸ್ಪತ್ರೆಗೆ ಸೇರಿಸಿದ್ದೇನೆ ಎನ್ನುವಂತೆ ಕುಂತಿ ನಡುಗಿದಳು. ಟುನ್ನಿಯನ್ನು ಟೆಲಿಗ್ರಾಂ ಕೊಟ್ಟು ಕರೆಸಲೆ? ಏಕೆ ಸುಮ್ಮನೆ? ಪರೀಕ್ಷೆ ಮುಗಿಸಿಕೊಂಡೇ ಬರಲಿ. ಅರ್ಧದಲ್ಲಿ ಬಂದರೆ ಒಂದು ವರ್ಷ ಹಾಳು. ಈಗಲೇ ಸಾವಿತ್ರಿಯ ಅಮ್ಮನಿಂದ ಐನೂರು ಸಾಲ ಮಾಡಿಯಾಯಿತು. ಬೇಗ ಹಿಂತಿರುಗಿಸುವುದಾಗಿ ಮಾತೇನೋ ಕೊಟ್ಟಿ

ಹೇಳುವ ಕೆಲಸವಿಲ್ಲ. ಅವರಮ್ಮ ಒಂದು ದಿನ, 'ಸಾವಿತ್ರಿಯ ರಿಸಲ್ಟ್ ಬರುವ ಸಮಯ. ನೀವೊಂದ್ ಸಲ ಸ್ಕೂಲಿಗೆ ಹೋಗಿ ಬನ್ನಿ. ಏನಾದ್ರೂ ಹೆಚ್ಚು ಕಡಿಮೆ ಮಾಡಬೇಕಾದ್ರೆ ಮಾಡ್ಸಿ ಬನ್ನಿ. ರಿಸಲ್ಟ್ ಬಂದ ಮೇಲೆ ಕಷ್ಟ. ಈಗಲೇ ಹೋಗೋದಾದ್ರೆ ನೋಡಿ, ಕಾರೂ ರೆಡಿಯಾಗಿದೆ," ಎಂದು ಹೇಳಿದಳು.

"ಈಗ ನಾನು ಆಸ್ಪತ್ರೆಗೆ ಹೋಗ್ಬೇಕು, ನೀವೇನೂ ಯೋಚಿಸ್ಬೇಡಿ. ಹಾಗೇ ಪಾಸಾಗ್ತಾಳೆ."

"ನನಗೇನೊ ನಂಬ್ಕೆ ಇಲ್ಲ, ನಾಳೆ ಖಂಡಿತಾ ಹೋಗಿ, ಏನಾದ್ರೂ ಕೊಡಬೇಕಾದ್ರೂ ಯೋಚಿಸ್ಬೇಡಿ. ಆ ಸ್ಕೂಲ್‌ನಲ್ಲಿ ಎಲ್ಲಾ ನಡೆಯುತ್ತೆ. ಸ್ವಲ್ಪ ಮಾತಾಡೊ ರೀತಿ ಸರಿಯಿದ್ರೆ ಆಯ್ತು, ನೋಡಿ ಎಲ್ಲಾ ನಿಮ್ ಜವಾಬ್ದಾರಿ."

"ನಾಳೆ ಹೋಗಿ ನೋಡ್ತೀನಿ, ನಂಗೇನೊ ಅವಳು ಹಾಗೇ ಪಾಸು ಮಾಡ್ತಾಳೆ ಅನ್ನುತ್ತೆ."

ಮೆಟ್ಟಲಿಳಿಯುವಾಗಲೂ ಆಕೆ ಹೇಳುತ್ತಲೇ ಇದ್ದಳು: "ನಾಳೆ ಖಂಡಿತಾ ಹೋಗಿ."

ರಾತ್ರಿ ಮಲಗಿದಾಗ ಕುಂತಿಗೆ ಒಂದೇ ಚಿಂತೆ. ಈ ಐನೂರನ್ನು ಹೇಗೆ ತೀರಿಸುವುದು? ಹಳ್ಳಿಯ ಮನೆಯನ್ನು ಮಾರಿಬಿಡು ಎಂದು ಮಾವನಿಗೆ ಕಾಗದ ಬರೆಯಲಿ? ಓಹ್ ತಾನೆಷ್ಟು ನಿಸ್ಸಹಾಯಕಳು, ಇಷ್ಟು ದೊಡ್ಡ ಪ್ರಪಂಚದಲ್ಲಿ ಅವಳಿಗೆ ಧೈರ್ಯ ಹೇಳುವ ಆಶ್ವಾಸನೆ ನೀಡುವ ಒಂದು ವ್ಯಕ್ತಿಯೂ ಇಲ್ಲವೆ? ಅತ್ತು ಸಾಕಾಯಿತು. ಹಾಗೇ ಕಣ್ಮುಚ್ಚಿ ಪ್ರಾರ್ಥಿಸಿದಳು; "ಓಹ್ ದೇವಾ ಇನ್ನು ನೀನು ಅಪ್ಪನನ್ನು ಕರೆಸಿಕೊ, ನಾನು ಸಹಿಸಲಾರೆ."

ಎದುರಿಗೆ ಧೂಳು ತುಂಬಿದ ಪಿಟೀಲು. ನುಡಿಸುವುದಂತೂ ಈ ಜನ್ಮದಲ್ಲಿ ಇನ್ನು ಇಲ್ಲ. ಆಗಾಗ್ಗೆ ಧೂಳು ಒರೆಸುತ್ತಿದ್ದಳು. ಈಗ ಅದೂ ಇಲ್ಲ. ಬರೀ ಧೂಳು ಒರೆಸಿ ಏನು ಮಾಡುವುದು, ತಾನಿನ್ನು ನುಡಿಸುವುದಾದರೂ ಉಂಟೆ?

ಫೋನ್ ಮಾಡಿ ಯಾರ್ಯಾರನ್ನೊ ವಿಚಾರಿಸಿ, ಸಾವಿತ್ರಿ ಎರಡು ವಿಷಯಗಳಲ್ಲಿ ಫೇಲ್ ಎಂಬುದನ್ನು ಅವರಮ್ಮ ಪತ್ತೆಮಾಡಿದ್ದಳು. ಒಂದು ವಿಷಯದಲ್ಲಾದರೆ ಮುಂದೆ ತಳ್ಳಬಹುದಾಗಿತ್ತು. ಈಗ ಸಾಧ್ಯವಿಲ್ಲ. ಹೇಗಾದರೂ ಮಾಡಿ ಒಂದು ವಿಷಯದಲ್ಲಿ ಪಾಸು ಮಾಡಿಸಲೇ ಬೇಕು. ಕುಂತಿಗೇ ಕುಳಿತುಕೊಳ್ಳಲೂ ಪುರುಸೊತ್ತಿಲ್ಲ. ಅವರ ಅಮ್ಮ ಕುಳಿತುಕೊಳ್ಳಲೂ ಬಿಡದೆ ಹೇಳಿದಳು: "ನೋಡಿ ನಾನು ಹೇಗೊ ತಿಳಕೊಂಡೆ. ಇಲ್ದಿದ್ರೆ ಸಾವಿತ್ರಿ ಫೇಲಾಗ್ತಿದ್ಲು. ನೀವು ಪಾಸಾಗುತ್ತೆ ಅಂತಿದ್ರಿ. ಈಗಲೇ ಹೋಗಿ, ಯಾರಾದ್ರೂ ಪರಿಚಯ ಇರೋರ್ಗೆ ಹೇಳಿ ಪಾಸು ಮಾಡ್ಸಿ. ಇಲ್ದಿದ್ರೆ ಇಷ್ಟು ಖರ್ಚು ಮಾಡಿದ್ದೂ ದಂಡ ಆಗುತ್ತೆ. ಒಂದು ವರ್ಷಾನೂ ಹಾಳಾಗುತ್ತೆ."

"ಯಾವ ಎರಡು ವಿಷಯದಲ್ಲಿ ಫೇಲಾಗಿದಾಳೆ?"

"ಅದನ್ನ ಅಲ್ಲೇ ಹೋಗಿ ವಿಚಾರ್ಸಿ. ಫೇಲಾಗಿರೋದು ಖಂಡಿತ. ನೀವು ಜವಾಬ್ದಾರಿ ತಗೊಂಡ ಮೇಲೆ ಪೂರ್ತಿ ನಿರ್ವಹಿಸ್ಬೇಕು, ಕೊನೆಗೆ..."

ಪ್ರಯತ್ನಿಸಿದರೂ ಕುಂತಿಗೆ ಮಾತನಾಡಲಾಗಲಿಲ್ಲ. ಅವರಮ್ಮ ಹೇಳುತ್ತಲೇ ಇದ್ದಾಳೆ: "ಕಾರು ಕೆಳಗಡೇನೆ ಇದೆ. ಇನ್ನು ತಡಮಾಡಿದ್ರೆ ಆಗುಲ್ಲ. ರಿಸಲ್ಟ್ ಹಾಕಿಬಿಟ್ರೆ ಆಮೇಲೆ ಸರಿಪಡಿಸೋದು ಕಷ್ಟ. ಸ್ವಲ್ಪ ದುಡ್ಡು ತಗೊಂಡ್ಹೋಗಿ. ಆ ಸ್ಕೂಲಲ್ಲಿ ಎಲ್ಲಾ ನಡೆಯುತ್ತೆ, ನಾವು ಒಂಬತ್ತಕ್ಕೆ ಹಾಗೇ ಸೇರಿಸಿದ್ದೆವು. ಹತ್ತಕ್ಕೆ ದಾಟಿಸಿಬಿಡಿ."

ಮಾತನಾಡದೆ ಕುಂತಿ ಕೆಳಗಿಳಿದಳು. ಎಲ್ಲಕ್ಕಿಂತ ಮೊದಲು ತನ್ನ ಗೆಳತಿಯ ಹತ್ತಿರ ಹೋದಳು. ಏನು ಹೇಳಬೇಕೊ, ಹೇಗೆ ಹೇಳಬೇಕೊ ತಿಳಿಯದು. ಬೇಕೆಂದೇ ಅವಳ ಗೆಳತಿ ವಿಷಯ ಬದಲಿಸುತ್ತಿದ್ದಳು..."ನೀನ್ಯಾಕೆ ಇಷ್ಟು ಸಣ್ಣ ಆಗಿದ್ದೀ? ಅಪ್ಪ ಹೇಗಿದ್ದಾರೆ?" ಇನ್ನೂ ಏನೇನೋ...

ಕುಂತಿ ಅವಳಿಗೆ ಏನು ಹೇಳಿದಳೊ, ಹೇಗೆ ಹೇಳಿದಳೊ ತಿಳಿಯದು. ಒಬ್ಬ ಅಧ್ಯಾಪಕಿಯನ್ನೂ ಮುಖ್ಯೋಪಾಧ್ಯಾಯಿನಿಯನ್ನೂ ಭೇಟಿ ಮಾಡಿದ ನೆನಪು. ಭೇಟಿ ಸಿಗಲು ಸಾಕಷ್ಟು ಹೊತ್ತು ಕಾದಿರಬೇಕಾಯ್ತು. ಅವರಿಂದ ಏನಾದರೂ ಭರವಸೆ ದೊರೆಯಿತೊ ಇಲ್ಲವೊ ಅದೂ ನೆನಪಿಲ್ಲ. ಮನೆಗೆ ಹೋಗಿ ಸಾವಿತ್ರಿಯ ಅಮ್ಮನಿಗೆ ಏನು ಹೇಳುವುದು?

ಸ್ಕೂಲಿನಿಂದ ಹೊರಡುವಾಗ ಬಾಯಾರಿ ಗಂಟಲೊಣಗಿತ್ತು. ಅಬ್ಬಾ! ಮೇ ತಿಂಗಳ ಬಿಸಿಲು ಎಷ್ಟೊಂದು ಭಯಂಕರ! ಅಲ್ಲಿದ್ದ ಜವಾನನಿಗೆ ನೀರು ತಂದುಕೊಡಲು ಹೇಳಿದಳು. ಉತ್ತರ ಪುಸ್ತಕಗಳ ಹೊರೆ ಹೊತ್ತ ಉಪಾಧ್ಯಾಯಿನಿಯ ಗುಂಪೊಂದು ಹಾದುಹೋಯಿತು. ಅದರಲ್ಲಿ ಒಬ್ಬಾಕೆ ಮಿಸೆಸ್ ನಾಥ್‌ನಂತಿದ್ದಾಳೆ ಎನ್ನಿಸಿತು. ಜವಾನ ನೀರು ತಂದುಕೊಟ್ಟ. ಒಂದೇ ಕ್ಷಣದಲ್ಲಿ ಗ್ಲಾಸು ಖಾಲಿ. ಬೇಗ ಕುಡಿದದ್ದರಿಂದಲೊ ಏನೋ ಕೆಮ್ಮು ಬಂತು. ಕೆಮ್ಮುತ್ತಲೇ ನಡೆದಳು. ಖೊಖ್...ಖೊಖ್...ಖೊಖ್... ಮುಖ ಕೆಂಪಾಗಿ ಕಣ್ಣು ತುಂಬಿಬಂದವು. ಒಂದು ಕೈಯನ್ನು ಎದೆಗೊತ್ತಿಕೊಂಡು ಮತ್ತೊಂದರಿಂದ ಕರವಸ್ತ್ರವನ್ನು ಬಾಯಿಗೆ ಹಿಡಿದು ಕಾರಿನ ಕಡೆಗೆ ನಡೆದಳು. ಕೆಮ್ಮು ನಿಂತಿತಾದರೂ ಖೊಖ್...ಖೊಖ್, ಕಿವಿಯಲ್ಲಿ ಗುಣುಗುಟ್ಟುತ್ತಿತ್ತು. ಇದ್ದಕ್ಕಿದ್ದಂತೆ ಅವಳಿಗನ್ನಿಸಿತು ಈ ಕೆಮ್ಮು ಅಪ್ಪನ ಕೆಮ್ಮನ್ನು ಹೋಲುತ್ತದೆ. ಖಂಡಿತಾ ಅದರಂತೆಯೇ. ಹೇಗೋ ಸಂಭಾಳಿಸಿಕೊಂಡು ಕಾರಿನಲ್ಲಿದ್ದ ಕನ್ನಡಿಯತ್ತ ಕಣ್ಣು ಹಾಯಿಸಿದಳು. ಎಲ್ಲಾ ತನ್ನ ಮುಖದಲ್ಲಿಯೂ ಅಪ್ಪನ ಮುಖದಲ್ಲಿರುವಂತೆ... ✡


ಬೆನ್ನು ನೋವೇ?
ಅಯೊಡೆಕ್ಸ್ ಗುಣಪಡಿಸುವ ಮುಲಾಮು ತಿಕ್ಕಿರಿ
ಬೇರೆ ಮುಲಾಮುಗಳು ನೋವನ್ನು ಉಪಶಮನ ಗೊಳಿಸಬಹುದು. ಆದರೆ ಅಯೊಡೆಕ್ಸ್ ಉಪಶಮನ ಗೊಳಿಸುತ್ತಲೇ ನೋವನ್ನು ಗುಣಪಡಿಸುತ್ತದೆ. ಏಕೆಂದರೆ ಅದರಲ್ಲಿ ಅಯೋಡಿನ್ ಇದೆ.
ಸ್ನಾಯು ಮತ್ತು ಸಂದು ನೋವುಗಳಿಗೆ ಏಕಮಾತ್ರ ಮುಲಾಮು—ಅಯೊಡೆಕ್ಸ್.
IODINE OINTMENT
IODEX
cum Methyl Salicylate
ಅಯೊಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.
ಲಿಂಟಾಸ್.IODEX.1-75 KN

ಇದುವೆ ಜೀವ ಇದು ಜೀವನ

ಕಾಲಿಗೆರಗಿದ

ನಮ್ಮ ರಾಜಣ್ಣನ ಮದುವೆಯಲ್ಲಿ ನಡೆದ ಸಂಗತಿ. ಮದುವೆಯನ್ನು ವಧುವಿನ ಮನೆಯಲ್ಲಿ ಮುಗಿಸಿಕೊಂಡು ವಧು ರಾಜೇಶ್ವರಿಯನ್ನು ಮನೆ ತುಂಬಿಸಿಕೊಳ್ಳಲು ಕರೆ ತಂದಿದ್ದರು. ಯಥಾಪ್ರಕಾರ ಅಕ್ಕಿ ತುಂಬಿದ್ದ ಸೇರನ್ನು ಉರುಳಿಸಿ ಆಕೆ ಮನೆಯೊಳಕ್ಕೆ ಕಾಲಿರಿಸಿದಳು. ನಂತರ ಸತಿ-ಪತಿಯರನ್ನು ಕುಳ್ಳಿರಿಸಿ ಆರತಿ ಮಾಡಲಾಯಿತು, ಈಗ ನಮ್ಮ ರಾಜಣ್ಣನಿಗೆ ಆರತಿ ಎತ್ತಲು ರಾಜೇಶ್ವರಿಗೆ ಆದೇಶ ಬಂತು. ಸರಿ, ಹಿರಿಯರ ಅಣತಿಯಂತೆ ಆಕೆ ಆರತಿ ಬೆಳಗಿ ಹಾಗೇ ನಿಂತುಕೊಂಡಳು.

ಆಗ ಪಕ್ಕದಲ್ಲಿದ್ದವರು "ಕಾಲಿಗೆ ಬೀಳು ರಾಜೀ..." ಎಂದರು. ಯಾವ ಲೋಕದಲ್ಲಿ ವಿಹರಿಸುತ್ತಿದ್ದನೋ ರಾಜಣ್ಣ, ಅವರು ಹಾಗಂದದ್ದು ಕೇಳಿ ಸರಕ್ಕನೇ ತನ್ನೆದುರು ನಿಂತಿದ್ದ ಮಡದಿಯ ಕಾಲಿಗೆರಗಿದ!

ತುಂಬಿದ್ದ ಜನವೆಲ್ಲಾ ಮನೆ ಹಾರಿ ಹೋಗುವಂತೆ ನಕ್ಕ ಮೇಲೆಯೇ ಮದು-ಮಗನಿಗೆ ನಿಜ ಅರಿವಾದದ್ದು!

—ಜಿ. ಆರ್ ನಾಗರಾಜ್

ಹೊಗಳಿದ್ದೇಕೆ?

ನಾನು ತುಮಕೂರ ಜಿಲ್ಲೆಯ ಒಂದು ತಾಲೂಕಿನ ಕೇಂದ್ರದಲ್ಲಿ ಈಗ್ಗೆ ಸುಮಾರು ವರ್ಷಗಳ ಹಿಂದೆ ಸರಕಾರಿ ಕೆಲಸದಲ್ಲಿದ್ದೆ. ಆಗಿನ ನನ್ನ ಕಾರ್ಯದಕ್ಷತೆ ಮತ್ತು ಸೇವಾ ತತ್ಪರತೆಯಿಂದ ಜನರು ನನ್ನನ್ನು ತುಂಬಾ ಹೊಗಳಿದ್ದರಿಂದ ಉನ್ಮತ್ತನಾಗಿದ್ದೆ. ಆದರೆ ಬಡ್ತಿಯಿಂದ ಆ ಊರು ಬಿಡಬೇಕಾದ ಪ್ರಮೇಯ ಒದಗಿತು. ಆಗ ಎಲ್ಲಾ ಕಡೆಗಳಿಂದಲೂ ಬಹಳ ಅನುತಾಪ ವ್ಯಕ್ತಪಡಿಸುವ ಸಮಯ. ಇಂತಹ ಸಂದರ್ಭದಲ್ಲಿ ಆಗಾಗ್ಗೆ ನಮ್ಮ ಕಚೇರಿಗೆ ಉಪಾಹಾರ ಮಂದಿರದ ಮಾಲೀಕರು ಆಕಸ್ಮಾತ್ ಭೇಟಿಯಾಗಿ, ಅವರೂ ಸಹ ತಮ್ಮ ಅನುಕಂಪವನ್ನು ಸೂಚಿಸಿದರು. ನನಗಂತೂ ಬಹು ಸಂತೋಷವಾಯಿತು. ಅದರಲ್ಲೂ ಫಲಾಹಾರ ಮಂದಿರದ ಮಾಲೀಕರಿಂದ ಇಂತಹ ಅನುಕಂಪ ವ್ಯಕ್ತವಾದಾಗ ಅತಿ ಸಂತೋಷದಿಂದ ಮನಸ್ಸಿನಲ್ಲಿಯೇ ಕುಣಿದಾಡಿದೆ. ಆದರೆ ಮರುಕ್ಷಣದಲ್ಲಿಯೇ ಅವರು, ಸ್ವಾಮಿ, ತಾವು ಊರು ಬಿಡುವ ಮುನ್ನ... ಅನ್ನುವಷ್ಟರಲ್ಲಿಯೇ, ನಡುವೆ ಬಾಯಿ ಹಾಕಿ, ಬಹುಶಃ ಆತಿಥ್ಯಕ್ಕೆ ಆಹ್ವಾನವೆಂದು ಭಾವಿಸಿ, 'ಖಂಡಿತ ಬರುತ್ತೇನೆ' ಎಂದೆ. ಅವರು ಈ ಮಾತಿಗೆ ಅವಾಕ್ಕಾದರೂ ತೋರಗೊಡದೆ ಶಾಂತರಾಗಿ, 'ಅದಲ್ಲಾ ಸ್ವಾಮಿ ನಿಮ್ಮಿಂದ ಸ್ವಲ್ಪ ಬಾಕಿಯಿದೆ, ಊರು ಬಿಡುವ ಮೊದಲು ಮರೆಯಬೇಡಿ' ಎಂದು ಹೇಳಿ ಮುಗಿಸಿದರು ಅದುವರೆಗೆ ಏರಿದ್ದ ಸಂತೋಷವೆಲ್ಲಾ ಸುಟ್ಟು ಬೂದಿಯಾಗಿ ಮನಸ್ಸು ತಣ್ಣಗಾಗಿ, ಇದುವೇ ಪ್ರಪಂಚ ಎಂದು ಕುಸಿದೆ. —ಎಸ್ ನಾಗರಾಜ

ಇಷ್ಟಾಪತ್ತಿ

ಕೆಲವು ವರ್ಷಗಳ ಹಿಂದೆ ನಾನು ರಾಜಸ್ಥಾನದಲ್ಲಿರುವ ಪಿಲಾನಿಯಿಂದ ದೆಹಲಿಯ ಮೂಲಕ ಬೆಂಗಳೂರಿಗೆ ಹಿಂತಿರುಗಬೇಕಾಗಿತ್ತು. ಪಿಲಾನಿಯಿಂದಲೇ ಟ್ರಾವಲ್ ಏಜಂಟರ ಮೂಲಕ ಜಿ. ಟಿ. ಎಕ್ಸ್‌ಪ್ರೆಸ್ಸಿನಲ್ಲಿ ಒಂದು Sleeper ನ್ನು ರಿಸರ್ವ್ ಮಾಡಿಸಿದೆ. ರೈಲು ಬಿಡಲು ಸ್ವಲ್ಪವೇ ಹೊತ್ತಿರಬೇಕಾದರೆ ಬಂದು ರಿಸರ್ವಾಗಿರುವ ಕಂಪಾರ್ಟ್‌ಮೆಂಟನಲ್ಲಿ ನೋಡಿದಾಗ ನನಗೋಸ್ಕರ ಒಂದು ವಿಸ್ಮಯ ಕಾದಿತ್ತು. ನನಗೆ ಸ್ತ್ರೀಯರ ಕಂಪಾರ್ಟ್‌ಮೆಂಟನಲ್ಲಿ ಜಾಗ ಕೊಟ್ಟಿದ್ದರು. ಕಾಲಾವಕಾಶ ಕಡಿಮೆಯಿದ್ದದ್ದರಿಂದ ಮತ್ತು TTE ತಕ್ಷಣ ಸಿಗದಿದ್ದರಿಂದ ಆ ಕಂಪಾರ್ಟ್‌ಮೆಂಟ

ಆಗ್ರಾ ಫಿಲ್ಲಾಣ ಹತ್ತಿರವಾದಾಗ T T E ಪ್ರತ್ಯಕ್ಷವಾಗಿ ನನ್ನನ್ನು ಪ್ರಶ್ನಾರ್ಥಕ ಭಾವದಿಂದ ನೋಡಿದ. ನಾನು ವಿಶೇಷವೇನೂ ಆಗದಿದ್ದ ರೀತಿಯಲ್ಲಿ ನನ್ನ ಟಿಕೇಟನ್ನು ಅವನಿಗೆ ತೋರಿಸಿದೆ. ಅವನು ಅದನ್ನು ಸರಿಯಾಗಿ ಪರೀಕ್ಷಿಸಿ ನನ್ನ ತಪ್ಪೇನೂ ಇರಲಾರದೆಂದು ನಿಶ್ಚಯಿಸಿ, ನನಗೆ ಬೇರೆ (ಗಂಡಸರು ಕುಳಿತುಕೊಳ್ಳುವ) ಜಾಗವನ್ನು ಹುಡುಕಿಕೊಡುವ ಭರವಸೆಯನ್ನಿತ್ತು ಮುಂದೆ ಹೊರಟ. ಸುಮಾರು ಒಂದು ಗಂಟೆಯ ನಂತರ ನನ್ನ ಬಳಿ ಪುನಃ ಬಂದು ಬೇರೆ ಎಲ್ಲೂ ಜಾಗ ಖಾಲಿಯಿಲ್ಲವೆಂದೂ ಆದ್ದರಿಂದ ನಾನು ನನ್ನ ಸ್ವಸ್ಥಾನವನ್ನೇ ಅಲಂಕರಿಸಬಹುದೆಂದೂ ಆಶ್ವಾಸನೆಯಿತ್ತ. ಮುಂದೆ ಬೆಂಗಳೂರಿನವರೆಗೂ ಆ ಲೇಡೀಸ್ ಕಂಪಾರ್ಟ್‌ಮೆಂಟಿನಲ್ಲೇ ನನ್ನ ಪ್ರಯಾಣವನ್ನು ಮುಂದುವರೆಸಬೇಕಾಯಿತು. ಪ್ರಯಾಣ ಹಿತಕರವಾಗಿಯೇ ಇತ್ತೆಂದು ಬೇರೆ ಹೇಳಬೇಕಾಗಿಲ್ಲ ತಾನೆ!

ಇಷ್ಟೆಲ್ಲಾ ಅವಾಂತರಕ್ಕೆ ಕಾರಣವೆಂದರೆ ನನ್ನ ಹೆಸರನ್ನು Mr. S. B. Rao ಎಂದು ನಾನು ಕೊಟ್ಟಿದ್ದರೂ, ಬುಕ್ಕಿಂಗ್ ಗುಮಾಸ್ತ (ಬಹುಶಃ ಆತನಿಗೆ ಅರಿವಿಲ್ಲದಂತೆಯೇ) ತನ್ನ ಚೇಷ್ಟೆ ನಡಿಸಿ ನನ್ನ ಹೆಸರನ್ನು "Mrs. B. Rao" ಎಂದು ಮಾರ್ಪಡಿಸಿದ್ದ!

—ಎಸ್. ಬಾಲಚಂದ್ರರಾವ್


ಪರಿವರ್ತನೆ

ಸುಮಾರು ನಾಲ್ಕು ವರುಷಗಳ ಹಿಂದೆ ನನ್ನ ಪರಿಚಿತನೊಬ್ಬನು ತನ್ನ ಪ್ರಾಪಂಚಿಕ ಅಡಚಣೆ ಹೇಳಿ ನನ್ನಿಂದ ೨೦ ರೂ. ಗಳನ್ನು ಕೈಗಡ ಪಡೆದುಕೊಂಡು ಹೋದನು. ಅವನಾಗಿಯೇ ಹಿಂತಿರುಗಿಸಬಹುದು ಎಂದು ಕೆಲವು ದಿನ ಕಾದೆ. ಹಣ ಮರಳಲಿಲ್ಲ. ಇಂದು-ನಾಳೆ ಎಂಬ ಹಾರಿಕೆಯ ಉತ್ತರ ನೀಡಿ ಜಾರಿಕೊಳ್ಳತೊಡಗಿದ. ಈ ವಿಷಯವನ್ನು ನನ್ನ ಆತ್ಮೀಯ ಗೆಳೆಯರೊಬ್ಬರಿಗೆ ತಿಳಿಸಿದಾಗ ಅವರೂ ಅವನನ್ನು ವಿಚಾರಿಸಿದರು. ಅವರಿಗೂ ಅವನು ಹುಸಿಗುಂಡು ಹಾರಿಸಿ ಪುಸಲಾಯಿಸಿದ. ಈ ಹಣಕ್ಕೆ ನೀರು ಬಿಟ್ಟು ಮೌನವಾದೆ.

ಇತ್ತೀಚೆಗೆ ಅವನು ಅಜಾರಿಯಿಂದ ಹಾಸಿಗೆ ಹಿಡಿದ. ವೈದ್ಯರ ಬಳಿಗೆ ಹೋಗಲು ಹಣವಿಲ್ಲದ್ದಕ್ಕೆ ವಿವಂಚನೆಗೊಳಗಾದ. ಒಂದು ದಿನ ಅಂಜುತ್ತ ಅಂಜುತ್ತ ನಮ್ಮ ಮನೆಗೆ ಬಂದು ತನ್ನ ಬೇನೆಯ ಬಗ್ಗೆ ತೋಡಿಕೊಂಡ. ಅವನು ಬೇನೆಯಿಂದ ಪೂರ್ಣ ಸೋತು ಹೋಗಿದ್ದ. ಔಷದೋಪಚಾರಕ್ಕಾಗಿ ೨೫ ರೂ ಕೈಗಡ ಕೊಟ್ಟು ಉಪಕಾರ ಮಾಡಬೇಕೆಂದು ಅತ್ಯಂತ ದೈನ್ಯದಿಂದ ವಿನಂತಿಸಿಕೊಂಡ. ಅವನ ಕರುಣಾಜನಕ ಸ್ಥಿತಿ ಕಂಡು ೨೫ ರೂ. ನೀಡಿದೆ. ಅವನು "ಉಪಕಾರವಾಯಿತು" ಎಂದು ಹೇಳಿ ಹೊರಟು ಹೋದ. ಅವನು ಹಿಂದೆ ಕೊಡಬೇಕಾಗಿದ್ದ ಹಣದ ಬಗ್ಗೆ ನಾನು ಪಿಟ್ಟೆನ್ನಲಿಲ್ಲ. ಅವನೂ ಆ ಬಗ್ಗೆ ಚಕಾರ ಎತ್ತಲಿಲ್ಲ. ಐದು ನಿಮಿಷಗಳ ನಂತರ ಅವನು ಪುನಃ ಮರಳಿ ಬಂದು ತಾನು ಹಿಂದೆ ಕೊಡಬೇಕಾಗಿದ್ದ ಹಣದ ಬಗ್ಗೆ ತನ್ನ ತಪ್ಪು ವ್ಯಕ್ತಪಡಿಸಿದ. ಕ್ಷಮೆ ಕೇಳಿದ ಅಲ್ಲದೆ ಆ ೨೦ ರೂ. ಗಳನ್ನೂ ಬೇಗನೆ ಮರಳಿ ಕೊಡುವ ಭರವಸೆ ನೀಡಿ ಹೊರಟು ಹೋದ.

ಸುಮಾರು ಒಂದು ತಿಂಗಳ ನಂತರ ಅವನು ಮತ್ತೆ ನಮ್ಮ ಮನೆಗೆ ಬಂದು ನನ್ನ ಕೈಗೆ ನಾಲ್ವತ್ತೈದು ರೂ. ಗಳನ್ನು ನೀಡಿ "ನಿಮ್ಮಿಂದ ತುಂಬ ಉಪಕಾರವಾಯಿತು. ಇದನ್ನು ನಾನು ಎಂದೂ ಮರೆಯಲಾರೆ. ಈಗ ಹಿಂದಿನ ೨೦ ರೂ. ಗಳನ್ನು ಒಳಗೊಂಡು ಒಟ್ಟು ನಾಲ್ವತ್ತೈದು ರೂ. ಗಳನ್ನು ನಿಮ್ಮ ಕೈಗಿತ್ತಿದ್ದೇನೆ," ಎಂದು ಹೇಳಿ ಕೈಮುಗಿದು ಕೃತಜ್ಞತೆ ವ್ಯಕ್ತಪಡಿಸಿದ. ಅವನ ಈ ಪರಿವರ್ತನೆಯಿಂದ ನನಗೆ ಬಹಳ ಸಂತೋಷವಾಯಿತು. ಮಾನವೀಯತೆಯ ಮಧುರ ಸ್ಪರ್ಶದಿಂದ ಮುಳ್ಳೂ ಹೂವಾಗಿ ಅರಳಬಲ್ಲದು ಎಂಬ ಮಾತು ಎಷ್ಟು ಸತ್ಯ!

—ಎಂ. ಎಸ್.


ನ್ಯಾಯವಾದ ದರದ ಎಕ್ಸರ್‌ಸೈಜ್ ಮತ್ತು
ಸ್ಟೂಡೆಂಟ್ ನೋಟ್ ಪುಸ್ತಕಗಳು
20-ಅಂಶಗಳ ಕಾರ್ಯಕ್ರಮದಲ್ಲಿ
ವಿದ್ಯಾರ್ಥಿಗಳಿಗೆ ವಿಶೇಷ ಕೊಡುಗೆ
40 ಪು ಎಕ್ಸರ್‌ಸೈಜ್ ಪುಸ್ತಕಗಳು 22 ಪೈ
60 ಪು ಎಕ್ಸರ್‌ಸೈಜ್ ಪುಸ್ತಕಗಳು 30 ಪೈ
80 ಪು ಎಕ್ಸರ್‌ಸೈಜ್ ಪುಸ್ತಕಗಳು 40 ಪೈ
100 ಪು ಎಕ್ಸರ್‌ಸೈಜ್ ಪುಸ್ತಕಗಳು 50 ಪೈ
100 ಪು ಸ್ಟೂಡೆಂಟ್ ನೋಟ್ ಪುಸ್ತಕಗಳು 65 ಪೈ
200 ಪು ಸ್ಟೂಡೆಂಟ್ ನೋಟ್ ಪುಸ್ತಕಗಳು ರೂ 1.15
300 ಪು ಸ್ಟೂಡೆಂಟ್ ನೋಟ್ ಪುಸ್ತಕಗಳು ರೂ 1.65
ವರ್ಷದ
ವಿದ್ಯಾರ್ಥಿ
ಸ್ಪರ್ಧೆಯಲ್ಲಿ ಭಾಗವಹಿಸಿರಿ.
ಜೂನ್ 1976 ರಲ್ಲಿ
ಪ್ರಾರಂಭ
ಮಾರಾಟಕ್ಕೆ ನೀಡುವವರು:
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು

ಸಂಗೀತವೇ ಉಸಿರು



ಕೃಷ್ಣ ಕೊಲ್ಹಾರ ಕುಲಕರ್ಣಿ

ಸಾವಿರದೊಂಭೈನೂರು ಮೂವತ್ತೈದೋ...ಆರೋ ಇದ್ದೀತು. ರಾಯಚೂರು ಆಗ ಮೊಗಲಾಯಿಯ ಒಂದು ಠಾಣೆ. ಊರಲ್ಲಿ ಒಂದೇ ಒಂದು ರೇಡಿಯೋ ಬಂದಿತ್ತು. ಊರ ಜನರಿಗೆಲ್ಲ ಕುತೂಹಲ. ಕಿವಿ ಹಿಂಡಿದರೆ ಆ ಡಬ್ಬಿ ಹಾಡುತ್ತಿತ್ತು. ಜನ ಜಾತ್ರೆಯಾಗಿ ಬಂದು ನೋಡುತ್ತಿದ್ದರು. ಅದರಲ್ಲೊಂದು ಹದಿನಾಲ್ಕೋ-ಹದಿನೈದರ ಮಕೆಮೀಸೆ ಚಿಗುರುತ್ತಿದ್ದ ಹುಡುಗ ಪ್ರತಿ ದಿನ ರೇಡಿಯೋದ ಮುಂದೆ ಹಾಜರು. ದಲಾಲಿ ಅಂಗಡಿಯಲ್ಲಿ ಕೆಲಸಕ್ಕಿದ್ದ ಹುಡುಗನಿಗೆ ತುಸುದಿನ ರೇಡಿಯೋ ಸಂಗೀತ ಕೇಳುವುದೇ ಕೆಲಸವಾಯಿತು. ಮನೆಯವರಿಗೆ, ಅಂಗಡಿಯ ಮಾಲೀಕರಿಗೆ ಇದು ಗೊತ್ತಾದಾಗ ಒಂದೆರಡು ಸಲ ಹುಡುಗನ ಕಿವಿ ಹಿಂಡಿ ಹೇಳಿದ್ದೂ ಆಯಿತು. ಆದರೂ ಹುಡುಗ ಕೇಳಲಿಲ್ಲ. ಹೊರಬೀಳುವ ನೆಪ ಸಿಕ್ಕರೆ ಸಾಕು. ನೇರವಾಗಿ ಗೋಲ ಠಾಣೆಯಲ್ಲಿದ್ದ ರೇಡಿಯೋದೆಡೆಗೆ ಕಾಲು ಕೀಳುತ್ತಿದ್ದ. ಅಂದು ಮಾತ್ರ ದಲಾಲಿ ಅಂಗಡಿಯ ಮಾಲೀಕರಿಗೆ ಈ ಹುಡುಗನ ಅತಿರೇಕ ಸಹಿಸುವುದಾಗಲಿಲ್ಲ. ಹೌದು, ಅದು ಹೇಗೆ ಸಹಿಸಬೇಕು; ಸಾವಿರ ರೂಪಾಯಿ ಹಾಲಿ (ನಿಜಾಮೀ ದ್ರವ್ಯ) ಹಣವನ್ನು ಇಂಗ್ರಜೀ ಹಣಕ್ಕೆ ಬದಲೀ ಮಾಡಲು ಬಂದ ಹುಡುಗ ನಾಪತ್ತೆ! ರೇಡಿಯೋ ಸಂಗೀತ ಮುಗಿದ ಮೇಲೆಯೇ ಹುಡುಗನಿಗೆ ನೆನಪು. ಜೇಬಿನಲ್ಲಿ ಮಾಲೀಕರು ಕೊಟ್ಟ ಹಣಮುಟಿ ನೋಡಿಕೊಂಡ, ಹೊರಗೆ ಕತ್ತಲೆ-ಕಮುಕಾಳು. ಆಗೆಲ್ಲಿ ಸಿಗಬೇಕು ಬದಲೀ ಹಣ. ನಿಜಾಮೀ ಹಣವನ್ನೇ ತೆಗೆದುಕೊಂಡು ತಿರುಗಿ ಅಂಗಡಿಗೆ-ಬಂದ. ಮಾಲೀಕರು ತಪ್ತರಾಗಿ ಕುಳಿತಿದ್ದರು. ಹುಡುಗನಿಂದ ಹಣ ಪಡೆದು ಮನೆಗೆ ಕಳಿಸಿದರು. ಜೊತೆಗೆ ನಾಳಿನಿಂದ ನೌಕರಿಗೆ ಬರುವ ಜರೂರಿಲ್ಲ ಎಂದೂ ಹೇಳಿದರು. ಮನೆಯವರಿಗೆ ಹುಡುಗ ಆಗಲೇ ತಲೆಬೇನೆಯಾಗಿದ್ದ;

ಈಗ ಹೊಟ್ಟೆಗೆಂದು ಮೆಟ್ಟು ಮಾಡಿದ್ದ ನೌಕರಿಯನ್ನೂ ಕಳೆದುಕೊಂಡ. ರಾತ್ರಿಯೆಲ್ಲ ಮನೆಯಲ್ಲಿ ಹಗರಣವಾಯಿತು. ಹುಡುಗನಿಗೂ ಈ ಜೀವನ ಸಾಕೆನಿಸಿತು. ಅಂದೇ ರಾತ್ರಿ ಮನೆಯಲ್ಲಿಟ್ಟ ಐನೂರು ರೂಪಾಯಿಗಳನ್ನು ಕದ್ದು ಕಾಬಿ ಕಿತ್ತಿದ. ನಿಲ್ದಾಣಕ್ಕೆ ಬಂದು ರೈಲಿನಲ್ಲಿ ಕುಳಿತ. ಅದು ಓಡುವವರೆಗೂ ಅದರ ಜೊತೆಗೆಯೇ ಇದ್ದ. ಕೊನೆಗೊಮ್ಮೆ ಅದು ಪುಣೆ ನಿಲ್ದಾಣದಲ್ಲಿ ಮುಂದೆ ಓಡದಂತೆ ನಿಂತಾಗ ಹುಡುಗ ಕೆಳಗಿಳಿದು ಹೊರಗೆ ಬಂದ. ಓಡಿ ಬಂದ ಉದ್ದೇಶವನ್ನೇನೂ ಮರೆತಿರಲಿಲ್ಲ. ಪುಣೆಯಲ್ಲಿಯ ಗಾಂಧರ್ವ ಮಹಾ ವಿದ್ಯಾಲಯದ ಪಂ. ವಿನಾಯಕರಾವ ಪಟವರ್ಧನರನ್ನು ಕಂಡು ತನ್ನ ಕಥೆಯನ್ನು ಹೇಳಿಕೊಂಡ. ಅವರೂ ಕೂಡ ಹುಡುಗನನ್ನು ಪರೀಕ್ಷಿಸಿ ನೋಡಿದರು. ಚೂಟಿಯಾಗಿದ್ದ. ಅವಕಾಶ ದೊರೆತರೆ ಚೀಜಾಗುವನೆಂಬ ಖಾತ್ರಿಯಾಯಿತು. ಆದರೆ ಪುಣೆಯಲ್ಲಿ ಆತನ ಸಂಗೀತದ ಅಭ್ಯಾಸ ನಡೆಯುವುದು ಸಮಸ್ಯೆಯಾಯಿತು. ಊಟ, ಉಡಗೆ, ಮತ್ತು ವಸತಿಗಳ ಪ್ರಶ್ನೆ ಹೇಗೆ? ಅಂತೆಯೇ ಪಟವರ್ಧನರು ಆತನನ್ನು ತಮ್ಮ ಶಿಫಾರಸಿನೊಂದಿಗೆ ಪಂಢರಪುರಕ್ಕೆ ಕಳಿಸಿದರು. ಅಲ್ಲಿ ಪಂ. ಜಗನ್ನಾಥ ಬುವಾ ಪಂಢರಪುರಕರ ಅವರ ಹತ್ತಿರ ಹುಡುಗನ ಸಂಗೀತದ ಅಭ್ಯಾಸ ನಡೆಯಿತು. ಮೊದಲ ಆರು ತಿಂಗಳು ಊಟಕ್ಕೆ ಮಧುಕರಿ ವೃತ್ತಿ. ಆ ಮೇಲೆ ಊಟ ಮತ್ತು ವಸತಿಗೆ ಬುವಾರ ಆಶ್ರಯವೇ ದೊರಕಿತು. ಸಂಗೀತ ಹಾಗೂ ಬುವಾರ ಸೇವೆ ಹುಡುಗನ ನಿತ್ಯದ ಕೆಲಸವಾಯಿತು. ಮಧ್ಯದಲ್ಲಿ ವೇಳೆ ದೊರೆತಾಗ ವಿಠಲನ ದರ್ಶನ!

ಇತ್ತ ರಾಯಚೂರಿನಲ್ಲಿ ಮನೆಯವರು ಅಲ್ಲಲ್ಲಿ ತಮಗೆ ಗೊತ್ತಿದ್ದಷ್ಟು ಸ್ಥಳಗಳಲ್ಲಿ ಹುಡುಗನನ್ನು ಹುಡುಕಿ ಸೋತರು. ಹುಡುಗನ ಕತೆ ಮುಗಿಯಿತೆಂದರು. ತಿಂಗಳುಗಳೊಂದಿಗೆ ವರುಷಗಳೂ ಉರುಳಿದವು. ಹುಡುಗನ ಪತ್ತೆ ಇಲ್ಲ. ಸುಮಾರಾಗಿ ಎಲ್ಲರೂ ಮರೆತರು. ಆದರೆ ಒಬ್ಬಳಿಗೆ ಮಾತ್ರ ಯಾವುದೋ ವಿಶ್ವಾಸ, ಆತ ಸತ್ತಿಲ್ಲ–ತಿರುಗಿ ಬರುತ್ತಾನೆಂಬ ಭರವಸೆ, ತನ್ನ ಕೈ ಹಿಡಿಯುತ್ತಾನೆಂಬ ಆಶೆ ಸೋದರ ಮಾವನ ಮಗಳಿಗೆ ಇತ್ತು. ಅವಳ ಮದುವೆಯ ಪ್ರಸ್ತಾಪ ಬಂದಾಗಲೆಲ್ಲ ಅವಳು ಹೇಳುತ್ತಿದ್ದಳು–ಮಾಣಿಕ ಮಾವ ಬರುತ್ತಾನೆಂದು. ಅವಳ ವಿಶ್ವಾಸ ಸುಳ್ಳಾಗಲಿಲ್ಲ. ಐದು ವರುಷಗಳ ನಂತರ ಒಂದು ಪತ್ರ ಬಂದಿತು–ಮಾಣಿಕ ಮಾವ ಬಂದಿರಲಿಲ್ಲ. ಆ ಪತ್ರದಲ್ಲಿ ಹೀಗೆ ಬರೆದಿತ್ತು. "೧೯೪೦ ನವಂಬರ್ ೧೧ ರಂದು ಸಾಯಂಕಾಲ ೫-೩೦ ಗಂಟೆಗೆ ಮುಂಬಯಿ ಆಕಾಶವಾಣಿ ಕೇಂದ್ರದಿಂದ ಪಂ. ಮಾಣಿಕರಾವ ರಾಯಚೂರಕರ ಅವರ ಶಾಸ್ತ್ರೀಯ ಸಂಗೀತ!"

ಪತ್ರದ ಒಕ್ಕಣೆಯನ್ನು ಓದಿ ಮನೆಯವರು, ಊರವರು ಗರಬಡಿದಂತಾದರು. ಹುಡುಗನ ಹಟಮಾರಿತನ ಒಂದು ವ್ಯಕ್ತಿತ್ವ ರೂಪಿಸಲು ಅವಕಾಶ ಮಾಡಿತ್ತು. ಅಂದು ಗಂಜದಲ್ಲಿಯ ರೇಡಿಯೋ ಒಂದರ ಮುಂದೆ ಊರವರೆಲ್ಲ ಕುಳಿತು ಮಾಣಿಕರಾವ ರಾಯ-ಚೂರಕರರ ಸಂಗೀತ ಕೇಳಿ ಸಂತೋಷಪಟ್ಟರು. ಈ ವರುಷ ರಾಜ್ಯ ಸರಕಾರದಿಂದ ಮಾನ್ಯತೆ ಪಡೆದ, ಪಂಡಿತ, ಗಾಯನಾಚಾರ್ಯ ಮಾಣಿಕರಾವ ರಾಯಚೂರಕರರ ಸಂಗೀತ ಸಾಧನೆಯ ಪ ಥಮ ಘಟ್ಟವಿದು.

೧೯೨೧ ಡಿಸೆಂಬರ್ ೨೨ ರಂದು ರಾಯಚೂರಿನಲ್ಲಿ ಜನಿಸಿದ ಮಾಣಿಕರಾವ ತುಂಬ ಬಡತನದಲ್ಲಿ ಬೆಳೆದು ಬಂದವರು. ಉರ್ದು-ಕನ್ನಡ ಭಾಷೆಗಳಲ್ಲಿ ಒಂದಿಷ್ಟು ಓದು ಬರಹ ಕಲಿತ ಅವರು ಸಂಗೀತದಲ್ಲಿ ಮಾತ್ರ ಗಳಿಸಿದ್ದು ಸಾಕಷ್ಟು—ದುಡ್ಡಲ್ಲ ಮತ್ತೆ ವಿದ್ಯೆ! ಕೃಷ್ಣವರ್ಣ, ತೆಳುವಾದ ದೇಹ, ಹೊಳಪುಗಣ್ಣಿನ ಮಾಣಿಕರಾವ ಒಂದು ಸಾಧಾರಣ ಬಟ್ಟೆಯ ಧೋತರ, ಮೈಯಲೊಂದು ಜುಬ್ಬ ಸಾಯಕಲ್ ಮೇಲೆ ರಾಯಚೂರಿನಲ್ಲಿ ಓಡಾಡುತ್ತಿರುವಾಗ ಇವರೊಬ್ಬ ಅಖಿಲ ಭಾರತ ಪ್ರಸಿದ್ಧಿ ಪಡೆದ ಸಂಗೀತಗಾರರೆಂದು ಯಾರಿಗೂ ಅನಿಸುವುದಿಲ್ಲ. ಎಷ್ಟೋ ಜನ ಕರ್ನಾಟಕ

ದವರಿಗೆ ಅದರಲ್ಲೂ ವಿಶೇಷತಃ ರಾಯಚೂರಿನವರಿಗೆ ಇವರು ರಾಯಚೂರಿನಲ್ಲಿಯೇ ಇರುತ್ತಾರೆಂಬುದೂ ಗೊತ್ತಿಲ್ಲ. ಮೊನ್ನೆ-ಮೊನ್ನೆ ಕರ್ನಾಟಕ ಸರಕಾರ ಇವರಿಗೆ ತಿಂಗಳು ವೇತನವನ್ನು ಬಹಿರಂಗಪಡಿಸಿದಾಗ ರಾಯ-ಚೂರಿನವರೇ ಇವರು ಯಾರು? ಎಂದು ಕೇಳಿದ್ದುಂಟು! ಹೌದು ಅದು ನಮ್ಮವರ ಗುಣ.

ಪಂ. ಮಾಣಿಕರಾಯರಿಗೆ ಸಂಗೀತ ಅನುವಂಶಿಕವಾಗಿ ಅಲ್ಲದಿದ್ದರೂ ಬಾಲ್ಯದಿಂದ ಬೆಳೆದು ಬಂದದ್ದರ ಕಾರಣ ಅವರ ಸೋದರ ಮಾವ ಪಂ. ಜೇ. ನಾಗೇಶ ಶಾಸ್ತ್ರಿಗಳು. ರಾಯಚೂರಿನ ಈ ಸುಪ್ರಸಿದ್ಧ ಸಂಗೀತ ಶಿಕ್ಷಕರು ಪಂ. ಬಾಲಕೃಷ್ಣ ಬುವಾ ಇಚಲ-ಕರಂಜೀಕರರಲ್ಲಿ ಕಲಿತವರು. ಅವರು ಸಂಗೀತದಲ್ಲಿ ತುಂಬಿದ ಕೊಡ. ಆದರೆ ಮೊದ-ಮೊದಲು ಸೋದರಳಿಯನ ಕುರಿತು ಆಸ್ಥೆ ತೋರಿಸಿರಲಿಲ್ಲ ಆ ಮೇಲೆ ಮಾತ್ರ ಅಂದರೆ ಆಕಾಶವಾಣಿಯ ಕಾರ್ಯಕ್ರಮದ ನಂತರ ಈ ಹುಡುಗ ಅಸಾಮಾನ್ಯನೆಂದು ಕಂಡಾಗ ತಾವು ಕಲಿತದ್ದನ್ನೆಲ್ಲ ಸೋದರಳಿಯನ ತಲೆಯಲ್ಲಿ ತುರುಕಿದರು. ಅದು ಒಂದೆರಡು ದಿನ, ತಿಂಗಳು-ವರುಷಗಳ ಕೆಲಸವಾಗಿರಲಿಲ್ಲ. ಅಖಂಡ ಇಪ್ಪತ್ತು ವರುಷ ಮಾಣಿಕರಾಯರು ಸೋದರ ಮಾವನಲ್ಲಿ ಕಲಿತಿದ್ದಾರೆ. ಅವರ ಆ ಪ್ರಯತ್ನ, ನಿಷ್ಠೆ, ಸಂಗೀತದಲ್ಲಿಯ ಆಸಕ್ತಿಯೇ ಇಂದು ಅವರು ಗ್ವಾಲಿಯರ ಮನೆತನದ ಸಂಗೀತವನ್ನು ಜೀವಂತವಾಗಿಟ್ಟಿದ್ದಾರೆಂದು ಉತ್ತರ ಭಾರತೀಯರೇ ಹೇಳಿಕೊಳ್ಳುವಂತಾಗಿದೆ.

ಸಿಹಿಯಾದ ಶ್ರೀಮಂತ ಕಂಠದಿಂದ ಪ. ಮಾಣಿಕರಾಯರು ತಂಬೂರಿಯೊಂದಿಗೆ ಬೈಠಕಿಗೆ ಕುಳಿತಾಗ ಅವರ ವ್ಯಕ್ತಿತ್ವ ಗೋಚರವಾಗುತ್ತದೆ. ತಂಬೂರಿ ಪಂಚಮ ಷಡ್ಜದಲ್ಲಿ ನಾದ ಮಾಡುತ್ತಿರುವಾಗ ಕಿವಿಯ ಹತ್ತಿರ ಕೈ ಇಟ್ಟ ಮಾಣಿಕರಾವ ಧ್ಯಾನಸ್ಥರಾಗಿ ಸಾ...ನಿ...ಧಸಾ, ಧಸಾರೆ...ಮಪಧ ಎಂದು ಸಾವಕಾಶವಾಗಿ ಪ್ರಾರಂಭಿಸುತ್ತಿದ್ದಂತೆ ತಂಬೂರಿಯ ಝೇಂಕಾರದಲ್ಲಿ ಮಾಣಿಕರಾಯರ ದನಿ ಕೂಡಿಕೊಂಡು ಹಲಿಗೆ ಸಕ್ಕರೆಯನ್ನು ಬೆರೆಸಿದಂತಾಗುತ್ತದೆ. ಇನ್ನು ಎದುರಿಗಿದ್ದವರು ಅದನ್ನು ಸವಿಯಬೇಕಷ್ಟೆ. ಗೋರಖ ಕಲ್ಯಾಣದಲ್ಲಿಯ ಖಯಾಲನ್ನು ತ್ರಿತಾಲದಲ್ಲಿ ಪ್ರಾರಂಭಿಸಿದಾಗ, 'ಬನ ಬನಮೆ ಢೂಂಡನ ಜಾವೂ ಅಪನೀ ಪಿಯಾಕೋ! ಢೂಂಢ ಢೂಂಡಕೆ ಹಾರ ಬನಾವೋ ಮನಹರಲಿಯೆ ಅಪನೆ ಪಿಯಾಕೊ' ಎಂಬ ಆಲಾಪದಲ್ಲಿ ಕೇಳುಗರೆಲ್ಲ ತಲ್ಲೀನರಾಗಿ ರಾಧೆಯ ವಿರಹವನ್ನು ಸ್ವತಃ ಅನುಭವಿಸುತ್ತಿರುತ್ತಾರೆ. ಮಾಣಿಕರಾಯರ ಒಂದು ವಿಶೇಷವೆಂದರೆ ಶುದ್ಧ ಶಬ್ದೋಚ್ಚಾರಣೆ. ಇತ್ತ ಪೂರ್ತಿ ದಕ್ಷಿಣವೂ ಅಲ್ಲದ ಅತ್ತ ಉತ್ತರಕ್ಕೆ ಸಂಬಂಧವೇ ಇಲ್ಲದ ಮಾಣಿಕರಾವ ಉತ್ತರಾದಿ ಸಂಗೀತದ ಯಾವುದೇ ರಾಗವನ್ನು ಶುದ್ಧವಾಗಿ ಸ್ಫುಟವಾಗಿ ಬಿಡಿಬಿಡಿಸಿ ನಮ್ಮೆದುರಿಗೆ ಇಡುತ್ತಿರುತ್ತಾರೆ. ಶಾಮ ಕಲ್ಯಾಣದ 'ಆಯೀ ಋತು ಫುಲವನಕಿ- ಫುಲೀ ಫುಲೀ ಫುಲವಾರೀ ಪಾಲವ ನವ ಸೋಹನಕೆ। ಮನದ ಮಂದ ಮಂದ ಬೆಹತ ಪವನ, ಅತಿ ಸುಗಂಧ ಸಕಲ ಭುವನ, ಋತು ವಸಂತ ಜೀವನಕೀ' ಎಂದು ಹಾಡುತ್ತಿರುವಾಗ ಹೂವುಗಳೆಲ್ಲ ಕಣ್ಣೆದುರಿಗೆ ಹಾರಾಡಿದಂತೆ ಭಾಸವಾಗುತ್ತದೆ. ಅವು ವಸಂತ ಋತುವಿನ ಸುಗಂಧ ಪುಷ್ಪಗಳೋ ಅಥವಾ ಮಾಣಿಕರಾಯರ ವಸಂತ ಕಂಠಶ್ರೀಯ ಸುಗಂಧ ರಾಗಪುಷ್ಪಗಳೋ ಎಂಬುದನ್ನು ಅವರ ಸಂಗೀತ ಕೇಳಿಯೇ ಅನುಭವಿಸಬೇಕು.

ಮಾಣಿಕರಾಯರದು ಅಪ್ಪಟ ಸ್ವಂತ ಪರಿಶ್ರಮ. ಹೊಟ್ಟೆಗೆ ಹಿಟ್ಟು ಇರದಿದ್ದರೂ ಶ್ರದ್ಧೆಯಿಂದ ಸಂಗೀತವನ್ನು ಸಾಧಿಸಿದ ಶ್ರೇಯಸ್ಸು ಸಂಪೂರ್ಣ ಮಾಣಿಕರಾಯರದು. ೪೫ ದಾಟಿದ ಮಾಣಿಕರಾಯರಿಗೆ ಈ ವರೆಗೂ ಯಾರ ಆಶ್ರಯವೂ ಇಲ್ಲ. ವಿಚಿತ್ರವೆಂದರೆ ಉಪಜೀವನ ಸಂಗೀತದ ಮೇಲೆಯೆ! ೧೯೪೮ರಿಂದ ನೂರು ವರುಷ ಮಾತ್ರ ಮುಂಬಯಿ ...

ಸಂಗೀತ ಸುಪರ್‌ವ್ಹಾಜರ ಎಂದು ಮಾಡಿದ ಕೆಲಸವೊಂದನ್ನು ಬಿಟ್ಟರೆ ಉಳಿದ ಆಯುಷ್ಯವನ್ನೆಲ್ಲ ಅವರು ಪೂರ್ತಿ ಸಂಗೀತದ ಮೇಲೆಯೇ ಕಳೆದಿದ್ದಾರೆ. ಆ ಬಗ್ಗೆ ಅವರ ಅನುಭವವನ್ನು ಕೇಳಿದರೆ ಸುಮ್ಮನಾಗುತ್ತಾರೆ.

"ನೋಡಿ, ನಾನು ಬೇರಾರಿಗಾಗಿಯೂ ಸಂಗೀತ ಕಲಿಯಲಿಲ್ಲ. ಅದು ನನಗೆ ಬೇಕಾಗಿತ್ತು, ಬೇಕಾಗಿದೆ..." ಎನ್ನುತ್ತಾರೆ. ಪ್ರಾರಂಭದಲ್ಲಿ ಅವರು ಐದು ವರುಷ ಇದ್ದ ಪಂಢರಪುರದ ವಾಸ ಹಾಗೂ ಅಲ್ಲಿಯ ವಿಠಲ ಬಹುಶಃ ಈ ಸಂಗೀತಗಾರನನ್ನು ಒಂದು ತರದ ಆಧ್ಯಾತ್ಮಿಕತೆಯತ್ತ ಒಲಿಸಿರಬಹುದೆಂದು ಕಾಣುತ್ತದೆ. "ಹಾಡುವುದು ನಾನಲ್ಲ ಸ್ವಾಮಿ, ಆ ವಿಠಲ ಕುಳಿತು ಹಾಡಿಸುತ್ತಾನೆ" ಎನ್ನುತ್ತಾರೆ. ದಾಸರ ಪದಗಳನ್ನು ನಿಜವಾಗಿ ಮಾಣಿಕರಾಯರಿಂದ ಕೇಳಬೇಕು. 'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ' ಹಾಡುತ್ತಿರುವಾಗ ಒಂದರೆಚಣ ರಾಮಕೃಷ್ಣರನ್ನು ಎದುರಿಗೆ ನಿಲ್ಲಿಸುತ್ತಾರೆ.

೧೯೪೦ರಲ್ಲಿ ಪ್ರಥಮ ರೇಡಿಯೋ ಸಂಗೀತ ಕಾರ್ಯಕ್ರಮದ ನಂತರ ಪಂ. ಮಾಣಿಕರಾಯರು ಕಳೆದ ೩೫ ವರುಷಗಳಿಂದ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ತಮ್ಮ ಕಂಠಶ್ರೀಯ ಜಯಭೇರಿ ಬಾರಿಸಿದ್ದಾರೆ. ಧಾರವಾಡ, ಮುಂಬಯಿ, ಔರಂಗಾಬಾದ, ಪಣಜಿ ಮುಂತಾದ ಆಕಾಶವಾಣಿ ಕೇಂದ್ರಗಳಂತೂ ಸರಿಯೆ, ಅಲ್ಲದೆ ಹೈದರಾಬಾದ, ಗ್ವಾಲೇರ, ಇಂದೂರು, ಜಳಗಾಂವ, ಜಲಂಧರ, ಬೆಳಗಾವಿ, ಬೆಂಗಳೂರು, ಮಂಗಳೂರ, ಮದ್ರಾಸ, ಗೋವೆ, ಜಯಪುರ ಅಜಮೀರ ಮತ್ತು ದಿಲ್ಲಿಯ ಲೋಕಸಭೆಯ ಸದಸ್ಯರ ಸಂಘದಲ್ಲಿಯೂ ಇವರ ಸಾರ್ವಜನಿಕ ಕಾರ್ಯಕ್ರಮಗಳಾಗಿವೆ. ೧೯೬೫ರಲ್ಲಿಯ ಹೈದರಾಬಾದ ಕಾನ್ಫರನ್ಸಿನಲ್ಲಿ ಹತ್ತು ಸಾವಿರ ಶ್ರೋತೃಗಳನ್ನು ತಮ್ಮ ಕಂಠಶ್ರೀಯಿಂದ ತಣಿಸಿದ್ದು ಉಲ್ಲೇಖನೀಯ.

ಗಿರಿಜೀಯವರು ಅವರನ್ನು ಮತ್ತೊಮ್ಮೆ ಕರೆದು ತಮ್ಮ ಮನೆಯಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಮೂರು ವರುಷಗಳ ಹಿಂದೆ ಮುಂಬಯಿಯ ದಾದರ ಮಾಟುಂಗಾ ಸೋಶಲ್ ಕ್ಲಬ್ಬಿನಲ್ಲಿ ನಡೆದ ಅವರ ಕಾರ್ಯಕ್ರಮ ಕುತೂಹಲಪೂರ್ಣವಾಗಿತ್ತು. ಅದಾಗ ಪಾಕಿಸ್ತಾನವು ಭಾರತದೊಂದಿಗೆ ಯುದ್ಧವನ್ನು ಪ್ರಾರಂಭಿಸಿತ್ತು. ಪ್ರಕಾಶಬಂದಿಯಿಂದ ಒಮ್ಮೆಲೆ ಕಾರ್ಯಕ್ರಮವನ್ನು ರಾತ್ರಿಯಿಂದ ಬೆಳಗಿಗೆ ಬದಲಿಸಿತ್ತು. ಪೂರ್ವ ಸೂಚನೆಯಿಲ್ಲದೆ ಕಾರ್ಯಕ್ರಮದ ವೇಳೆ ಬದಲಾದುದರಿಂದ ಹಾಗೂ ಯುದ್ಧಜನ್ಯ ಪರಿಸ್ಥಿತಿಯಿಂದ ಸಾಕಷ್ಟು ಜನ ಕೂಡಿರಲಿಲ್ಲವಾದರೂ ಅಂದಿನ ಕಾರ್ಯಕ್ರಮ ಕೇಳುಗರಿಗೆ ರಸದೂಟವಾಗಿತ್ತು. ಅಂತೆಯೇ ಮರುದಿನದ ಮುಂಬಯಿಯ ಪತ್ರಿಕೆಗಳೆಲ್ಲ ಮಾಣಿಕರಾಯರ ಸಂಗೀತವನ್ನು ಹೊಗಳಿ ಬರೆದಿದ್ದರೆ, ದೇಶದ ಪ್ರಮುಖ ಆಂಗ್ಲ ಪತ್ರಿಕೆ ಟಾಯಿಮ್ಸ ಆಫ್ ಇಂಡಿಯಾ ಅವರ ಸಂಗೀತದಿಂದ ಮಾರು ಹೋಗಿತ್ತು. "It was quite a surprising morning" ಎಂದು ಪ್ರಾರಂಭಿಸಿ ಅವರ ಸಂಗೀತದ ಮೇಲೆ ಸ್ತುತಿಪುಷ್ಪಗಳನ್ನು ಮುಕ್ತಹಸ್ತದಿಂದ ಚೆಲ್ಲಿತ್ತು. ಆ ಮೇಲಿನ ಕಳೆದ ವರುಷದ ದಿಲ್ಲಿಯ ಕಾರ್ಯಕ್ರಮದ ಕುರಿತು 'ಸ್ಟೇಟ್ಸಮನ್' ಕೂಡ ಪಂ. ಮಾಣಿಕರಾಯರ ಸಂಗೀತವನ್ನು ಮೆಚ್ಚಿಕೊಂಡು ಬರೆದಿದೆ. ಇವುಗಳೆಲ್ಲ ನಿಜವಾಗಿ ಕನ್ನಡಿಗರು ಹೆಮ್ಮೆ ಪಡುವ ವಿಷಯಗಳು.

ಪಂ. ಬಾಲಕೃಷ್ಣ ಬುವಾ ಈಚಲಕರಂಜೀಕರರ ಸಂಗೀತವೆಂದರೆ ಅಪ್ಪಟ ಗ್ವಾಲೇರ ಸಂಗೀತ. ಆದರೆ ಪಂ. ಮಾಣಿಕರಾವ ರಾಯಚೂರಕರರಲ್ಲಿ ಅದು ಕಾಣುವುದು ಹಾಗಲ್ಲ. ಅವರ ಸಂಗೀತದಲ್ಲಿಯ ರಾಗಾಲಾಪನೆಯ ಸುಬೋಧ ಪದ್ಧತಿಯ ಮಟ್ಟಿಗೆ ಅವರದು ಗ್ವಾಲಿಯರ ಸಂಗೀತವೆನ್ನಬಹುದು, ಉಳಿದೆಲ್ಲ ಪಂ. ಮಾಣಿಕರಾಯರದು. ಇವರ

ಸಂಗೀತಗಾರ ಪಂ. ಮಲ್ಲಿಕಾರ್ಜುನ ಮನಸೂರರ ಪ್ರಭಾರ ಸಾಕಷ್ಟು ಬಿದ್ದಿದೆ ಎನ್ನುತ್ತಾರೆ. ಆದರೆ ಅಲ್ಲಿಯೂ ಮಾಣಿಕರಾಯರು ತಮ್ಮ ಸ್ವಬಂದ್ಧಿಯಿಂದ, ಸಾಧನದಿಂದ ಪಡೆದ ಶ್ರೇಯಸ್ಸೇ ಬಹುಪಾಲೀನದಾಗಿವೆ. ಹಾಂ! ಇವರ ಮೇಲೆ ನಿಜವಾಗಿ ಪ್ರಭಾವ ಬೀರಿದವರೆಂದರೆ ಸೋದರಮಾವ ಹಾಗು ಗುರು ಪಂಡಿತ ಜೇ. ನಾಗೇಶಶಾಸ್ತ್ರಿಗಳು. ಮಾಣಿಕರಾಯರು ಪ್ರಸ್ತುತ ಪಡಿಸುವ ಬಹುತೇಕ ರಚನೆಗಳೆಲ್ಲ ಪಂ. ನಾಗೇಶಶಾಸ್ತ್ರಿಗಳದ್ದು. ಅವರು ಸ್ವತಃ ಚೀಜುಗಳನ್ನು ರಚಿಸುತ್ತಿದ್ದರು.

ಇಷ್ಟೆಲ್ಲ ಹೇಳಿಯೂ, ಮಾಣಿಕರಾಯರು ಬೆಳೆದು ಬಂದ ಜೀವದ ದಾರಿಯನ್ನು ಒಂದು ಕ್ಷಣ ನೆನೆಸಿಕೊಂಡರೆ ಅವರು ಇನ್ನೂ ಸಂಗೀತವನ್ನು ಜೀವಂತವಾಗಿಟ್ಟುಕೊಂಡ ಬಗ್ಗೆ ಯಾರಿಗೂ ಆಶ್ಚರ್ಯವಾಗುತ್ತದೆ. ಸೋದಮಾವ ಪಂ. ನಾಗೇಶಶಾಸ್ತ್ರಿಗಳು ಇವರನ್ನು ಸಾಕಿ ಸಲಹಿ ತಮ್ಮಲ್ಲಿದ್ದ ಸಂಗೀತದೊಂದಿಗೆ ಮಾಣಿಕರಾಯರಿಗೆ ಮಗಳನ್ನೂ ಧಾರೆಯೆರೆದು ಕೊಟ್ಟರಷ್ಟೆ. ಅಲ್ಲಿಯವರೆಗೂ ಚೆನ್ನಾಗಿತ್ತು. ಮುಂದೆ ಮುಂಬಯಿಗೆ ಬಂದು ನೆಲೆಸಿದಾಗ ಮಗಳು ಹುಟ್ಟಿದ್ದು...ಕೈಬಿಟ್ಟಿದ್ದು... ಆದರಿಂದ ಹೆಂಡತಿಗೆ ಮತಿಭ್ರಮೆಯಾಗಿದ್ದು—ಹೆಂಡತಿಯನ್ನು ಉಳಿಸಲು ನೌಕರಿಯನ್ನು ಬಿಟ್ಟು ರಾಯಚೂರಿಗೆ ಬಂದು ಬಾಡಿಗೆಯ ಮನೆಯಲ್ಲಿ ವಾಸವಾದಾಗ ತುಸು ದಿನಗಳಲ್ಲಿ ಹೆಂಡತಿಯೂ ಕೈಬಿಟ್ಟಳು...ಬೆನ್ನಹಿಂದೆ ಸೋದರ ಮಾವಂದಿರೂ ಹೋದರು. ನಡು ನೀರಿಯಲ್ಲಿ ಕಾಲು ಜಾರಿ ನಿಂತ ಮಾಣಿಕರಾವ ಧೈರ್ಯದಿಂದ ಮತ್ತೆ ಎದ್ದುನಿಂತರು. ಮರು ಮದುವೆಯಾಗಿ ಐದು ಮಕ್ಕಳ ತಂದೆಯಾಗಿ ಸದ್ಗೃಹಸ್ಥರೆನಿಸಿದರು. ಅಂದಿನಿಂದ ಇಂದಿನವರೆಗೂ ಮನೆ ಹೆಂಡತಿ ಮಕ್ಕಳು ಇದ್ದದ್ದು ರಾಯಚೂರಿನಲ್ಲಿಯೇ. ನಾಲ್ಕಂಕಣಗಳ ಎರಡೋ ಮೂರೋ ಕೋಣೆಗಳ ಬಾಡಿಗೆಯ ಮನೆಯಲ್ಲಿ ಮಾಣಿಕರಾಯರು ಯಾವಾಗ ಸಂಗೀತವನ್ನು ಅಭ್ಯಸಿಸುತ್ತಾರೆಂಬುದು ಯಾರಿಗೂ ಗೊತ್ತಿಲ್ಲ. ಆ ಮಟ್ಟಿಗೆ ರಾಯಚೂರಿನ ಮಂಡ್ಡಿಪೇಟೆಯಲ್ಲಿರುವ ಮಾಣಿಕರಾಯರು ಬುವಾಗಳೇ ಅಲ್ಲ. ಅವರು ಬರೀ ಮಾಣಿಕರಾಯರು! "ಹೌದು ಏನು ಮಾಡಬೇಕು ಸ್ವಾಮಿ? ಇಂಥ ಮನೆಯಲ್ಲಿ ಅಭ್ಯಾಸ ಹೇಗೆ ಮಾಡಲಿ? ಹೇಗೆ ಕೂಡಲಿ? ಮನೆ ತುಂಬ ಮಕ್ಕಳು, ಗದ್ದಲದ ಓಣಿ, ಸಂಗೀತದ ಅಭ್ಯಾಸ ಹೇಗಾದೀತು?" ಎನ್ನುತ್ತಾರೆ. ಅದೂ ನಿಜ. ಆದರೆ ಬೈಠಕಿಗೆ ಕುಳಿತಾಗ ಯಾರನ್ನೂ ಮೀರಿಸುತ್ತೀರಲ್ಲ? ಎಂದರೆ "ಅದು ಮೊದಲು ಮಾಡಿದ ಸಾಧನ. ಜೊತೆಗೆ ವಿಠಲದ ಕೃಪೆ," ಎನ್ನುತ್ತಾರೆ. ಹಾಗೆನ್ನುವಾಗ ಇರುವಿಕೆಯ ಬಗ್ಗೆ ಜಿಗುಪ್ಸೆ ಏನೂ ಇಲ್ಲ. "ಸುಖವಾಗಿದ್ದೇನೆ," ಎನ್ನುತ್ತಾರೆ. "ನಾಳಿನ ಚಿಂತೆ ನನಗಿಲ್ಲ—ಇಂದಿನದನ್ನು ವಿಠಲ ನಡೆಸಿದ್ದಾನೆ" ತಿಂಗಳ ಖರ್ಚಿಗೆ ಭಾರತದ ಯಾವುದೋ ಮೂಲೆಯಲ್ಲಿ ಕರೆದಿರುತ್ತಾರೆ. ನಡೆದು ಹೋಗುತ್ತದೆ. ಇನ್ನಷ್ಟು ಅವಕಾಶ, ಜನ-ಧನಗಳ ಸಹಾಯ ಸಹಕಾರಗಳ ಅಭಾವ ಮಾಣಿಕರಾಯರನ್ನು ಮೇಲೆ ಎತ್ತಬೇಕಾದಷ್ಟು ಎತ್ತಿಲ್ಲ ಎನಿಸುತ್ತದೆ,

ಐವತ್ತರ ನಂತರ ಯಾವೊಂದು ವಿದ್ಯೆ ಪಕ್ವವಾಗಿರುತ್ತದಂತೆ. ಇದೀಗ ಆ ಕಾಲವೂ ಪಕ್ವವಾಗಿದೆ. ಕನ್ನಡದ ಈ ಮಾಣಿಕವನ್ನು ಎತ್ತಿಹಿಡಿಯುವುದು ಕನ್ನಡಿಗರ ಧರ್ಮ. ಆದರಿಂದ ಉಭಯಂತರಿಗೂ ಹಿತ. ✡

ಕಲ್ಲಿನಲ್ಲಿ ಕಠಿಣ, ಖುಲ್ಲರಲ್ಲಿ ದುರ್ಗುಣ
ಬಲ್ಲವರಲ್ಲಿ ಸುಗುಣ ಉಂಟೆಂದೆಲ್ಲರೂ ಬಲ್ಲರು.
ಇಂತೀ ಇವು ಎಲ್ಲರ ಗುಣ.
ಅಲ್ಲಿಗಲ್ಲಿಗೆ ಸರಿಯೆಂದು ಗೆಲ್ಲ ಸೋಲಕ್ಕೆ ಹೋರದೆ
[illegible]

ನಗೆಮಲ್ಲಿಗೆ

ಬರ್ತಿದ್ದೆ ಆದರೆ........

ಉಪಾಧ್ಯಾಯರು ಪಾಠಕ್ಕೆ ಪೀಠಿಕೆ ಹಾಕುತ್ತ ವಿದ್ಯಾರ್ಥಿಗಳಿಗೆ ಕೇಳಿದರು,- "ಸ್ವರ್ಗಕ್ಕೆ ಹೋಗಬಯಸುವವರು ಕೈ ಮೇಲೆತ್ತಿ!"

ಎಲ್ಲರ ಕೈಗಳೂ ಮೇಲೆ ಹೋದವು; ಒಬ್ಬ ವಿದ್ಯಾರ್ಥಿ ಸುಮ್ಮನೇ ಕುಳಿತಿದ್ದ. "ಏನಪ್ಪಾ! ನೀನು ಬರುವುದಿಲ್ಲವೆ ಸ್ವರ್ಗಕ್ಕೆ?" ಎಂದರು ಉಪಾಧ್ಯಾಯರು.

ಆ ವಿದ್ಯಾರ್ಥಿ ನಿಧಾನವಾಗಿ ಹೇಳಿದ, "ನಮ್ಮ ತಂದೆ ಮುಂದಿನ ವಾರ ಮದ್ರಾಸಿಗೆ ಹೋಗೋಣ ಎಂದಿದ್ದಾರೆ. ಇಲ್ಲವಾದರೆ ಬರ್ತಿದ್ದೆ."

—ಮ. ಸು. ಭಟ್ಟ

ಚಿಲ್ಲರೆ ಇದೆ ಸ್ವಾಮಿ

ಭಿಕ್ಷುಕ:- "ಮೂರು ದಿನದಿಂದ ಉಪವಾಸ ಸ್ವಾಮಿ, ನಾಲ್ಕಾಣೆ ದಾನ ನೀಡಿ.",

ಶ್ರೀಮಂತ:- "ಅಯ್ಯೋ ಪಾಪ, ಆದರೆ ನನ್ನಹತ್ರ ಚಿಲ್ಲರೇನೆ ಇಲ್ಲವಲ್ಲಯ್ಯಾ, ಬರೀ ಐದು ರೂ. ನೋಟು ಇದೆ."

ಭಿಕ್ಷುಕ:- "ತನ್ನಿ ಸ್ವಾಮಿ, ಐದಲ್ಲ ಹತ್ತು ರೂಪಾಯಿಗೆ ಬೇಕಾದರೂ ಚಿಲ್ಲರೆ ಕೊಡುತ್ತೇನೆ."

ಶ್ರೀ ರಾಮನ್

ಅಮ್ಮ ಅಮ್ಮ

ನರ್ಸರಿ ತರಗತಿಯ ಮೇಡಂ. ಆ ಪುಟಾಣಿಗಳಿಗೆ ಪದಗಳ ಬಗ್ಗೆ ಹೇಳಿ ಕೊಡುತ್ತಿದ್ದರು. ಮಧ್ಯೆ ಒಂದು ಪ್ರಶ್ನೆ ಕೇಳಿದರು.

-"ಅನ್ನವನ್ನು ಮಾಡಲು ಬೇಕೇ ಬೇಕಾದ, 'ಅ' ದಿಂದ ಪ್ರಾರಂಭವಾಗುವ ವಸ್ತು ಯಾವುದು?"

ತಕ್ಷಣವೇ ಆ ಪುಟಾಣಿಗಳೆಲ್ಲವೂ ಒಟ್ಟಿಗೇ ಕೂಗಿದವು.

- "ಅಮ್ಮ!" —ಸಿ. ಮಾಲಿನಿ ವಾಮನರಾವ

"ಪರಮ ಮೂರ್ಖ"

"ಈ ದಿನ ಎಪ್ರಿಲ್ ಒಂದನೇ ದಿನಾಂಕ. ಹುಷಾರಾಗಿರಯ್ಯ. ಎಲ್ಲಾದರೂ ಫೂಲ್ ಆಗಿಬಿಟ್ಟೀಯಾ." ಎಚ್ಚರಿಸಿದ ಗಂಡನನ್ನು ಗೆಳೆಯ.

"ಅಯ್ಯೋ ಬಿಡಯ್ಯಾ. ನಾನು ಎಂದೋ ಮೂರ್ಖನಾಗಿದ್ದೇನೆ. ಮತ್ತೆ ಹೊಸತಾಗಿ ಫೂಲ್ ಆಗುವುದೆಲ್ಲಿ ಬಂತು." ನಿರಾಸಕ್ತಿಯಿಂದ ನುಡಿದ ಗಂಡ.

"ಅದೇಕಯ್ಯಾ ಹಾಗೆ ಹೇಳುತ್ತೀ?" ಆಶ್ಚರ್ಯದಿಂದ ಪ್ರಶ್ನಿಸಿದ ಗೆಳೆಯ.

"ನಾನು ಮದುವೆಯಾದ ದಿನವೇ ಪರಮ ಮೂರ್ಖನಾದೆ. ಏಕೆಂದರೆ ನಾನು ಮದುವೆಯಾದದ್ದೇ ಏಪ್ರಿಲ್ ಒಂದನೇ ದಿನಾಂಕದಂದು." ಉತ್ತರಿಸಿದ ಗಂಡ.

—ವಿ. ಜಿ. ಅರಸೀಕೆರೆ

ಗುರು-ಶಿಷ್ಯ

ಮೇಷ್ಟ್ರು:- ಏಯ್, ಸತೀಶ. ಯಾಕೋ ಮಾತಾಡ್ತಿದ್ದೀಯ?

ಸತೀಶ:- ಮಾತಾಡ್ತಾ ಇಲ್ಲಾ ಸಾರ್.

ಮೇಷ್ಟ್ರು:- ಈಗ ನಾನೇನ್ಹೇಳ್ದೆ ಅಂತ ಗೊತ್ತೇನೋ?

ಸತೀಶ:- ಮಕ್ಕಳು ಯಾರಿಗೆ ಜಾಸ್ತಿ? ಯಾಕೆ ಜಾಸ್ತಿ ಅಂತ ಹೇಳ್ತಿದ್ದೀರಿ?

ಮೇಷ್ಟ್ರು:- ಯಾರಿಗೋ ಜಾಸ್ತಿ?

ಸತೀಶ:- ಮೇಷ್ಟ್ರಿಗೆ.

ಮೇಷ್ಟ್ರು:- ಯಾಕೆ?

ಸತೀಶ:- ಅವರಿಗೆ ರಜಾ ಜಾಸ್ತಿ.

ಮೇಷ್ಟ್ರು:- ಹೋಗಲಿ, ಗಣಿತದಲ್ಲಿ ಕರ್ಣ ವ್ಯಾಸ ಎಂದರೇನು?

ಸತೀಶ:- ಮಹಾಭಾರತದ ಕರ್ಣ, ವ್ಯಾಸ ಇಲ್ಲಿಗ್ಯಾಕೆ ಬರ್ತಾರೆ ಸಾರ್?

ಮೇಷ್ಟ್ರು:- ನೋಡೋ ನಾ ಕೇಳೋ ಪ್ರಶ್ನೇಗೆಲ್ಲಾ ತಲೆಹರಟೆ ಉತ್ತರಾನೇ ಕೊಡ್ತಿಯಾ. ನಾನೇನಾದರೂ ನಿಮ್ಮ ತಂದೆ ಆಗಿದ್ದರೆ ಚೆನ್ನಾಗಿ ಬುದ್ಧಿ ಕಲಿಸ್ತಿದ್ದೆ?

ಸತೀಶ:- ಆಗಲಿ ಸಾರ್. ನಮ್ಮ

ತಾಯೀನ ಕೇಳ್ಕೊಂಡು ಬಂದು ಹೇಳ್ತೀನಿ.

—ಶಿಡ್ಲಘಟ್ಟದ ಪದ್ಮಾವತಿ

ಅಂಟಿಯೂ ಅಂಟದಂತೆ

"ವೇದಾಂತ ಹೇಳುವಂತೆ—ಸಂಸಾರಕ್ಕೆ ಅಂಟಿಯೂ ಅಂಟದಂತೆ ಇರುವುದು ಅಂದರೆ ಹೇಗೆ? ಅದು ಅಷ್ಟು ಸುಲಭವೇ? ಅದರಿಂದ ಮೋಕ್ಷ ಸಾಧ್ಯವೇ?"

ಶಿಷ್ಯನನ್ನು ಒಬ್ಬರು ಕೇಳಿಯೇ ಬಿಟ್ಟರು. ಆತ ಹೇಳಿಯೇ ಬಿಟ್ಟ ಹೀಗೆ,

"ಬಹು ಸುಲಭ ಸ್ವಾಮಿ ಅದು. ಹೇಗೆ ಅನ್ನುತ್ತೀರೋ? ಅಡಿಗೆ ತಯಾರಾದ ಕೂಡಲೇ ಸೀದಾ ಹೋಗಿ ತಟ್ಟೆ ಇಟ್ಟು ಕೊಂಡು ಕುಳಿತುಕೊಳ್ಳಿ ಊಟಕ್ಕೆ. ಇದು ಸಂಸಾರಕ್ಕೆ ಅಂಟಿಕೊಂಡಿರುವುದು. ನಂತರ ನೀವು ಹೊರಗಡೆ ಹೋಗಲು ಹೊರಟಾಗ ಹೆಂಡತಿ ಸಾಮಾನಿನ ಪಟ್ಟಿ ಎದುರು ಹಿಡಿಯುತ್ತಾಳೆ. ಕಣ್ಣೆತ್ತಿಯೂ ನೋಡದೆ ಹೋಗಿಬಿಡಿ ನೀವಾಗ. ಇದು ಸಂಸಾರಕ್ಕೆ ಅಂಟದಂತಿರುವುದು. ಮತ್ತೆ ರಾತ್ರಿ ಊಟಕ್ಕೆ ಬನ್ನಿ ಅಡಿಗೆ ಮನೆಗೆ. ಈಗ ನಿಮ್ಮ ಧರ್ಮಪತ್ನಿ ಅಲ್ಲೇ ಇದ್ದ ಸಟ್ಟುಗವನ್ನೋ, ಲಟ್ಟಣಿಗೆಯನ್ನೋ ಎತ್ತುತ್ತಾಳೆ ನಿಮ್ಮ ಮೇಲೆ. ಆಗಲೇ ಮೋಕ್ಷ ಎಂದು ತಿಳಿದುಬಿಡಿ!"

—ಸ್ಕಂದ

ಎಲ್ಲಿವೆ?

ರೋಗಿ: (ಹಾದಿಕಾರನನ್ನು) ಡಾಕ್ಟರ ಸಾಹೇಬರ ಮನೆ ಎಲ್ಲಿದೆ?

ಹಾದಿಕಾರ: ಡಾಕ್ಟರ ಸಾಹೇಬರ ದವಾಖಾನೆಯ ಎದುರಿಗೆ ಇದೆ.

ರೋಗಿ: ಹಾಗಾದರೆ ಅವರ ದವಾಖಾನೆ ಎಲ್ಲಿದೆ?

ಹಾದಿಕಾರ: ಡಾಕ್ಟರ ಸಾಹೇಬರ ಮನೆ ಎದುರಿಗೆ.

ರೋಗಿ: ಮತ್ತೆ ಅವೆರಡು ಎಲ್ಲಿವೆ?

ಹಾದಿಕಾರ: ಎದುರು–ಬದುರು.

—ಡಿ. ಎಚ್. ರಾಜೇಂದ್ರ

ವಿಪರೀತ

ಡಾಕ್ಟರ್: "ರಸ್ತೇಲಿ ಸುಮ್ನೆ ಬರ್ತಿದ್ದೇಂತ ಹೇಳ್ತೀಯ. ಹಾಗಾದ್ರೆ ನಾಯಿ ಏಕೆ ಕಚ್ಚಿತು ಮತ್ತೆ ನಿನಗೆ?"

ವಿದ್ಯಾರ್ಥಿ: ಇಲ್ಲ ಸಾರ್, ನಾನಂತು ರಸ್ತೇಲಿ ಸುಮ್ನೆ ಬರ್ತಿದ್ದೆ. ಆ ನಾಯಿಯಂತು ಒಂದೇ ಸಮ್ನೆ ಬೊಗಳ್ತಾ ಇತ್ತು. ಅದನ್ನು ನೋಡಿದ ತಕ್ಷಣ ನಮ್ಮ ಮೇಷ್ಟ್ರು ಹೇಳಿದ್ದ 'ಬೊಗಳೋ ನಾಯಿ ಕಚ್ಚೋದಿಲ್ಲ, ಕಚ್ಚೋ ನಾಯಿ ಬೊಗಳೋದಿಲ್ಲ' ಎಂಬ ಗಾದೆ ನೆನಪಿಗೆ ಬಂತು. ಸರಿ, ಪರೀಕ್ಷೆ ಮಾಡೇ ಬಿಡೋಣ ಎಂದು ಬಾಯಿಗೆ ಕಾಲು ಹಾಕಿದ್ರೆ ಕಚ್ಚೇ ಬಿಡೋದೆ ಸಾರ್!" —ಎಂ. ಕೆಂಪರಾಜು

ಸೇಠ್‌ಜಿ ಲೆಕ್ಕ

ಸೇಠ್: ನೋಡಪ್ಪ, ನೀನೇನೂ ನನ್ನ ಹಣಕ್ಕೆ ಬಡ್ಡಿ ಕೊಡಬೇಡ. ನನ್ನ ಅಸಲು ಎರಡು ಸಾವಿರ ರೂಪಾಯಿ ಕೊಟ್ಟು ಬಿಡು ಸಾಕು.

ಗಿರಾಕಿ: ಅಯ್ಯೋ. ನೀವು ದೇವರಂತಹವರು ಸೇಠ್‌ಜಿ. ಬಡ್ಡಿ ಬೇಡ ಅಂತಿದೀರಿ ಸದ್ಯ ಒಳ್ಳೆಯದು. ಆದರೆ ನಾನು ನಿಮ್ಮಿಂದ ತೆಗೆದುಕೊಂಡಿದ್ದು ಸಾವಿರ ರೂಪಾಯಿ. ಮಾತ್ರ.

ಸೇಠ್: ಹೌದಪ್ಪ ಇದನ್ನೇ ನಾನೂ ಹೇಳೋದು. ನಾನು ಕೊಟ್ಟದ್ದು ಒಂದು ಸಾವಿರ ರೂಪಾಯಿ. ನೀನು ಇಟ್ಟುಗೊಂಡಿದ್ದು ಒಂದು ಸಾವಿರ ರೂಪಾಯಿ ಒಟ್ಟು ಅಲ್ಲಿಗೆ ಎರಡು ಸಾವಿರ ರೂಪಾಯಿ ಆಯಿತಲ್ಲಾ. —ಸೇ. ವೇ. ನಾದಿರಾಜ

కడలి



మూల : విశ్వసమ్మ

ಕರಾವಳಿ

[ಕರಾವಳಿಯ ಹೊಸಾದ ಶ್ರೀ ವಿಶುಕುಮಾರರು ಕಡಲ ತಡಿಯ ಮೊಗವೀರರ ಜೀವನ ದರ್ಶನವನ್ನು ತಮ್ಮ 'ಕರಾವಳಿ' ಕಾದಂಬರಿಯಲ್ಲಿ ಮನೋಜ್ಞವಾಗಿ ಮಾಡಿಸಿದ್ದಾರೆ. ಅವರ ನೋವು-ನಲಿವು, ಆಸಕ್ತಿ-ಅಭಿಲಾಷೆ, ಕಾಯಕ-ನಂಬಿಕೆಗಳು ಇವೆಲ್ಲ ಈ ಕಾದಂಬರಿಯಲ್ಲಿ ಯಥಾವತ್ತಾಗಿ ಮೂಡಿ ಬಂತಿವೆ ಮೊಗವೀರರು ಧೀರರಾಗಿರುವಂತೆ ಮಹತ್ವಾಕಾಂಕ್ಷಿಗಳೂ ಆಗಿದ್ದಾರೆ. ಆದರೆ ತಕ್ಕ ಶಿಕ್ಷಣದ ಅಭಾವದಿಂದ ಹಿಂದುಳಿದವರಾಗಿದ್ದಾರೆ ಇದರಿಂದಾಗಿ ಅವರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಈ ಜೀವಂತ ಸಮಾಜದ ತದ್ರೂಪ ದರ್ಶನ 'ಕರಾವಳಿ'ಯಲ್ಲಿ ಆಗುತ್ತದೆ. ಶ್ರೀ ವಿಶುಕುಮಾರರು ತಮ್ಮ ಈ ಕಾದಂಬರಿಯನ್ನು ಚಲಚ್ಚಿತ್ರವಾಗಿಯೂ ತಯಾರಿಸಿದ್ದಾರೆ. ಆ ಸ್ವಾರಸ್ಯಪೂರ್ಣ ಕಾದಂಬರಿಯ ಸಂಗ್ರಹ ಇಲ್ಲಿದೆ.]

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯುದ್ದಕ್ಕೂ ತೆಂಗಿನ ಮರಗಳ ಕೆಳಗೆ ಬೆಸ್ತರು ವಾಸಿಸುತ್ತಾರೆ. 'ಬೆಸ್ತರು' ಎಂಬ ಶಬ್ದ ತೀರ ಕೆಳಮಟ್ಟದ್ದಾಯಿತು. ಇವರು ಮೊಗವೀರರು. ಮೊಗದಲ್ಲೇ ವೀರರ ಲಕ್ಷಣಗಳನ್ನು ಪೊಂದಿದವರು. ತುಳುಭಾಷೆಯಲ್ಲಿ ಇವರು ಮರಕಾಲರು. ಇತಿಹಾಸದಲ್ಲಿ ಇವರು ಮರದ ಕಾಲನ್ನು ಉಪಯೋಗಿಸಿ ಹೋರಾಡುತ್ತಿದ್ದ ಪರಾಕ್ರಮಶಾಲಿ ಸೈನಿಕರಾಗಿದ್ದರು. ಮೊಗವೀರರು ಮರಕಾಲರೂ ಹೌದು. ಇವರು ನಡೆದಾಗ ನೆಲ ಅದರುತ್ತದೆ. ನೀರಿಗಿಳಿದಾಗ ಕಡಲು ಅಲ್ಲೋಲ ಕಲ್ಲೋಲವಾಗುತ್ತದೆ.

ಮೊಗವೀರರು ಹಗಲಿಡೀ ಉಪ್ಪು ನೀರಿನಲ್ಲಿ ಕಡು ಬಿಸಿಲಿನಲ್ಲಿ ಮೀನು ಹಿಡಿಯುವದರಲ್ಲಿಯೂ ತೊಡಗಿರುವವರಾದ್ದರಿಂದ ಉಕ್ಕಿನ ಬೊಂಬೆಗಳಂತಿರುತ್ತಾರೆ. ಈ ಮೊಗವೀರರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರು ತುಂಬ ಮುಂದುವರೆದವರು.

ಅಂದು, ಒಂದು ಬೆಳಿಗ್ಗೆ ಬಕ್ಕಪಟ್ಣದ ಮೊಗವೀರರೆಲ್ಲ ಕಡಲತಡಿಯಲ್ಲಿ ಸೇರಿದ್ದಾರೆ. ಅವರಲ್ಲಿ ಇಬ್ಬರು ಕೊಂತಲ (ಸಣ್ಣ ಡೋಣಿ) ದಲ್ಲಿ ಕುಳಿತು ಕಡಲಿನಲ್ಲಿ ಮೀನುಗಳ ಬೇಟೆಗಾಗಿ ಹೊರಡಬೇಕು. ಇವರ ಕಣ್ಣಿಗೆ ಮೀನುಗಳ ಗುಂಪು ಬಿದ್ದ ಕೂಡಲೇ 'ನಿಶಾನೆ' ತೋರಿಸುತ್ತಾರೆ. ಆ ಸಂಕೇತ ಬಂದೊಡನೆ ಇತರ ಬೆಸ್ತರು ಕಡಲಿಗಿಳಿದು ಬಲೆ ಬೀಸಲು ತೊಡಗಬೇಕು. ಆರೆಂಟು ತಾಸು ಇವರು ಕಡಲಲ್ಲಿ ಕಳೆದು ಮೀನು ಹಿಡಿದು ತಂದ ಬಳಿಕ ತಡಿಯಲ್ಲಿ ಅವುಗಳ ರಾಶಿ ಹಾಕುತ್ತಾರೆ. ತಂಡೇಲರು ಅವನ್ನು ಹರಾಜು ಮಾಡುತ್ತಾರೆ. ಮಾಪ್ಳೆಗಳೂ ಮರಕಾಲ್ದಿಯರೂ ಹರಾಜಿನಲ್ಲಿ ಅವನ್ನು ಕೊಂಡು ತಮ್ಮ ತಮ್ಮ ಪೇಟೆಯಲ್ಲಿ ಮಾರಬೇಕು.

ಕಡಲಿಗಿಳಿದ ಬೆಸ್ತರ ನಿಶಾನೆ ಇನ್ನೂ ಬಂದಿರಲಿಲ್ಲ. ಸಂಜೀವ ಸುವರ್ಣನೆಂಬ ಮೊಗವೀರನೊಬ್ಬ ಅಂದು ರಂಪಣಿ ಬಲೆ ತಂಡ ಸೇರಲೆಂದು ಕಡಲಿಗೆ ಬಂದಿದ್ದ. ಮ್ಯಾಟ್ರಿಕ್ ವರೆಗೆ ಓದಿದ್ದ ಸಂಜೀವನಿಗೆ ನೆರೆಹಳ್ಳಿಯ ಹಂಸಾ ಎಂಬವಳೊಡನೆ ವಿವಾಹವಾಗಿದ್ದಿತು. ಆದರೆ ಸಂಜೀವನ ತಂದೆ ಸೊಸೆ ಮನೆಗೆ ಬರುವಷ್ಟರೊಳಗೆ ತೀರಿ ಹೋದ. ಸಂಜೀವನಿಗೂ

ಟಾಯಿಫಾಯ್ಡ್ ಆಗಿ ಕೆಲ ದಿನ ನಿಶ್ಶಕ್ತಿಯಿಂದ ಬುದ್ಧಿ ಸ್ತಿಮಿತದಲ್ಲಿರಲಿಲ್ಲ. ಇದರಿಂದಾಗಿ ಸಂಜೀವಗೆ 'ಹುಚ್ಚು' ಎಂದು ಹೆಸರಿಟ್ಟು ಹಂಸಾಳ ತಾಯ್ತಂದೆಯರು ಹಂಸಾಳನ್ನು ಗಂಡನ ಮನೆಗೆ ಕಳಿಸಲಿಲ್ಲ. ತಾಯಿ ಐತಕ್ಕ ತಾನು ಮೀನು ಮಾರಿಯಾದರೂ ಮಗ ಸಂಜೀವನಿಗೆ ಓದು ಕಲಿಸಬೇಕೆಂದು ಧಡಪಡಿಸಿದರೂ ಸಂಜೀವ ಮ್ಯಾಟ್ರಿಕ್‌ನಲ್ಲಿ ಗೋತ ಹೊಡೆದು ತಾಯಿಗೆ ನಿರಾಶೆಯನ್ನೇ ಉಂಟು ಮಾಡಿದ. ಸಂಜೀವ ಹತಾಶನಾಗಿ ತಾನೂ ಕಡಲಿಗಿಳಿದು ನಾಲ್ಕು ಕಾಸು ಸಂಪಾದಿಸಬೇಕೆಂಬ ಆಶಯದಿಂದ ಅಂದು ರಂಪಣಿ ಬಲೆ ಗುಂಪಿಗೆ ಸೇರಲು ಬಂದಿದ್ದ.

ಮೊಗವೀರರಲ್ಲಿ ಅಷ್ಟಿಷ್ಟು ಕಲಿತವರೆಲ್ಲ ಮುಂಬಯಿಗೆ ಹೋಗಿ ನೌಕರಿಗೆ ಸೇರಿಕೊಂಡದ್ದುಂಟು. ಅಂಥದರಲ್ಲಿ ಈ ಸಂಜೀವ ರಂಪಣಿ ಬಲೆ ಗುಂಪು ಸೇರಲು ಬಂದದ್ದರಿಂದ ಎಲ್ಲ ಮರಕಾಲರಿಗೆ ಆಶ್ಚರ್ಯ. ಆದರೂ ಸಂಜೀವ ಹಟ ಹಿಡಿದದ್ದರಿಂದ ಆತನನ್ನು ಹಿರಿಯ ಮೊಗವೀರರು ರಂಪಣಿ ಬಲೆ ಗುಂಪಿಗೆ ಸೇರಿಸಿಕೊಂಡರೂ ಕಡಲಿಗಿಳಿಯಲು ಬಿಡಲಿಲ್ಲ. ದಡದಲ್ಲಿ ಬಲೆ ತೊಳೆಯುವದು, ರಂಪಣಿ ಬಲೆ ಫಂಡಿನ ಲೆಕ್ಕ ಬರೆಯುವದು ಮುಂತಾದ ಕೆಲಸಕ್ಕೆ ಹಚ್ಚಿದರು.

ಅಂದೇ ಸಂಜೀವ ಕೆಲಸಕ್ಕೆ ಸೇರಿದ್ದರಿಂದ ಇತರ ಮೊಗವೀರರು ಆತನೊಡನೆ ಆತನ ವಿವಾಹದ, ಹೆಂಡತಿ ಕರೆತರುವ ಕುರಿತು ಸಾಕಷ್ಟು ಚರ್ಚಿಸಿ, ಹಂಸಳನ್ನು ಕರೆತರುವದಕ್ಕೆ ಅಗತ್ಯಬಿದ್ದರೆ ಗುರಿಕಾರರ ವರೆಗೂ ದೂರು ಒಯ್ಯಬೇಕು ಎಂದು ಒಂದು ಅಭಿಮತಕ್ಕೆ ಬಂದರು.

ಅಂದು ಅವರ ಪಡವಿಗೆ ಸುಮಾರು ಎರಡೂವರೆ ಸಾವಿರ ರೂ. ಗಳ ಮೀನು ಸಿಕ್ಕದ್ದರಿಂದ ಸಂಜೀವನ ಕಾಲ್ಗುಣವನ್ನು ಅವರು ಕೊಂಡಾಡಹತ್ತಿದರು. ಮೀನೆಲ್ಲ ಹರಾಜಾಗಿ ಹೋದ ನಂತರ ಬೆಸ್ತರೆಲ್ಲ ತಂತಮ್ಮ ಮನೆಗೆ ಹಿಂತಿರುಗಿದರು. ಅಂದಿನ ಕಾಯಕ ಮುಗಿ

ವರೆಗೂ ಅವರಿಗೆ ಬಿಡುವು.

ಸಂಜೀವನೂ ಮನೆಗೆ ಬಂದು, ತಾಯಿ ಮನೆಯಲ್ಲಿರುವದನ್ನು ಗಮನಿಸಿ,

“ಏನಮ್ಮ, ಮೀನು ಮಾರಾಟಕ್ಕೆ ಹೋಗಿಲ್ವೇ?”

“ಇಲ್ಲಪ್ಪ, ಸೊಂಟ ನೋವು”

“ಹಾಗಾದರೆ ಸೊಸೆಯನ್ನಾದರೂ ಕರೆಸಬಹುದಿತ್ತಲ್ಲ. ಯಾಕೆ, ಸೊಸೆಯನ್ನು ಕರೆಸುವದಿಲ್ಲವೇ?”

“ನಿನ್ನ ತಂದೆ ಹೋದ ನಂತರ, ಈಗ ಅವರು ತುಂಬ ಸಿರಿವಂತರು ಕಣೋ. ಅವಳಿಗೆ ನಮ್ಮ ಮನೆಗೆ ಬರುವ ಇಷ್ಟವಿದೆಯೋ ಇಲ್ಲವೋ ಸಂಜೀವ? ನಾವು ಹೋದ ಕೂಡಲೇ ಮಗಳನ್ನು ಅಡಗಿಸಿಡತಾರೆ ಇಲ್ಲವೇ ದೂರ ಕಳಿಸ್ತಾರೆ.”

“ನನ್ನ ಹೆಂಡತೀನ್ನ ಮನೆಗೆ ಕಳಿಸದಿದ್ದರೆ ಊರ ಸಭೆಯಲ್ಲಿ ದೂರು ಕೊಡ್ತೇನೆ.”

“ಕೊನೆಗೆ ನಮಗೆ ಸಭೆಯೇ ಗತಿ ಬಂತಾ?”

“ಹೌದು, ಇನ್ನು ಅದೇ ಗತಿ.”

“ಆಗಲಿ, ಆದರೆ ಮೊದಲು ನಿನ್ನ ತ್ಯಾಂಪ ಮಾವನನ್ನು ಕಳಿಸಿ, ಹೆಣ್ಣು ಕಳಿಸ್ತೀರಾ ಅಂತ ಬೀಗರಲ್ಲಿ ವಿಚಾರಿಸುವಾ.”

“ನಾನೂ ಮಾವ ಎಲ್ಲಿ ಅಂತ ಅದಕ್ಕೆ ಕೇಳಿದ್ದು.”

ಸಂಜೀವ ಬಕ್ಕಪಟ್ಣದಿಂದ ನಾಲ್ಕು ಫರ್ಲಾಂಗ ದೂರದ ಕುದ್ರೋಳಿಗೆ ಹೋಗಿ ತ್ಯಾಂಪ ಮಾವನನ್ನು ಕಂಡು, ತನ್ನ ಹೆಂಡತಿಯನ್ನು ಕರೆತರುವ ಕಾರ್ಯಭಾರ ಆತನಿಗೆ ಒಪ್ಪಿಸಿದ. ತ್ಯಾಂಪ ಕನಕಂಪಾಡಿಗೆ ಹೋಗಿ ಅಲ್ಲಿ ಬೀಗರನ್ನು ಭೆಟ್ಟಿಯಾಗಿ, ತನ್ನ ಸೋದರಿ ಐತಕ್ಕಗೆ ಹುಷಾರಿಲ್ಲದಿರುವದರಿಂದ ಹಂಸಾಳನ್ನು ಕಳಿಸಬೇಕೆಂದು ಕೇಳಿಕೊಂಡ. ಹಂಸಾಳ ತಾಯಿ ಸೋಮಕ್ಕ ಅತ್ತೆ ಮನೆಯಲ್ಲಿ ಕತ್ತೆ ಹಾಗೆ ದುಡಿಯಲು ತನ್ನ ಮಗಳನ್ನು ಖಂಡಿತ ಕಳಿಸುವದಿಲ್ಲ ಎಂದು ಹೇಳಿಬಿಟ್ಟಳು.

ತ್ಯಾಂಪ ನಿರಾಶನಾಗಿ ಅಲ್ಲಿಂದ ಹೊರಟಾಗ ಹಂಸಳ ತಂದೆ ತಿಮ್ಮಪ್ಪ ಭೆಟ್ಟಿಯಾದ. ತ್ಯಾಂಪ ಆತನನ್ನು ವಿಚಾರಿಸಲಾಗಿ, ತನ್ನ

ಮಗಳನ್ನು ಒಂದು ವಾರದಲ್ಲಿ ಕಳಿಸಿ ಕೊಡುವದಾಗಿ ಹೇಳಿದ. ಬಂದ ದಾರಿಗೆ ಸುಂಕ ಇಲ್ಲ ಎಂಬಂತೆ ತ್ಯಾಂಪ ಹಿಂತಿರುಗಿದ.

ತ್ಯಾಂಪ ಈ ವರದಿಯನ್ನು ಐತಕ್ಕನಿಗೆ ಒಪ್ಪಿಸಿದ. ಅಲ್ಲದೆ ಒಂದು ವಾರ ದಾರಿ ಕಾಯೋಣ ಅಷ್ಟರಲ್ಲಿ ಪಂಸಾ ಬರದಿದ್ದರೆ ಕೊಟದವರಲ್ಲಿ ಫಿರ್ಯಾದು ಕೊಡಬೇಕು ಎಂದೂ ಸಲಹೆ ಇತ್ತ. ಆದರೆ ಸಂಜೀವನ ಮನಸ್ಸಿನಲ್ಲಿ ತನ್ನ ಹೆಂಡತಿ ಬರುತ್ತಾಳೆ ಎಂಬ ಆಸೆ ಗರಿಗೆದರಿ ನಿಂತಿತು. ಒಂದು ವಾರದ ವರೆಗಂತೂ ದಾರಿ ಕಾಯಬೇಕಲ್ಲ.

*

ಮಂಗಳೂರಿನ ಮೀನು ಕಟ್ಟೆಯಲ್ಲಿ ರೈಲು ಮೀನಿನ ಹಾವಳಿ ಬಹಳ. ಕೇರಳದಿಂದ ರೈಲಿನಲ್ಲಿ ಮೀನಿನ ಬುಟ್ಟಿಗಳು ಬಂದಿಳಿದರೆ ಸ್ಥಳಿಕ ಮೀನುಗಳಿಗೆ ಧಾರಣೆಯೇ ಬರುವದಿಲ್ಲ. ರೈಲಿನಿಂದ ಮೀನು ತರಿಸಿ ಮಾರುವವರಲ್ಲಿ ಮಮ್ಮದೆ ಬ್ಯಾರಿ ಅಗ್ರೇಸರ. ಮರಕಾಲ್ದಿ (ಬೆಸ್ತರ ಹೆಣ್ಣು ಮಕ್ಕಳು)ಯರು ಈತನಿಂದ ಮೀನು ಖರೀದಿಸಿ ಪೇಟೆಯಲ್ಲಿ ಮಾರಾಟ ಮಾಡುತ್ತಿದ್ದರು. ಇಂಥವರಲ್ಲಿ ಪದ್ಮ ಎಂಬವಳು ಪ್ರಮುಖಳು. ಈ ತರುಣಿಯ ಚಾಕಚಕ್ಯತೆಯಿಂದಾಗಿಯೆ ಈಕೆಯ ಮೀನುಗಳೆಲ್ಲ ಬೇಗನೆ ಮಾರಿ ಹೋಗುವವು. ಮಮ್ಮದೆ ಬ್ಯಾರಿಯ ಕೈಯಲ್ಲಿ ಹಸನಬ್ಬ ಎಂಬ ತರುಣನೊಬ್ಬ ಮೀನು ಎಣಿಸಿ ಹಾಕುವ ಕೆಲಸದಲ್ಲಿದ್ದ. ಆತನಿಗೆ ಪದ್ಮಾಳ ಮೇಲೆ ಕಣ್ಣು. ಬೆಸ್ತರ ಹೆಣ್ಣನ್ನು ಯಾರೂ ಕೆಣಕುವಂತಿರಲಿಲ್ಲ. ಅದರಲ್ಲೂ ಮಾಪ್ಳೆಗಳೇನಾದರೂ ಈ ಮರಕಾಲ್ದಿಯರ ತಂಟೆಗೆ ಬಂದರೆ ಅವರನ್ನು ಮರಕಾಲರು ಹುಟ್ಟಡಗಿಸಿಬಿಡುವರು. ಆದರೂ ಮಾರುಕಟ್ಟೆಯಲ್ಲಿ ಮರಕಾಲ್ದಿಯರು ಮಾಪ್ಳೆಗಳೊಡನೇ ವ್ಯವಹರಿಸಬೇಕು. ಹೀಗಾಗಿ ಅವರವರ ಸಂಬಂಧ ಅವರು ವ್ಯಾಪಾರದ ಮಟ್ಟಿಗೇ ಮರ್ಯಾದಿತವಾಗಿರಿಸಿಕೊಳ್ಳುತ್ತಿದ್ದರು.

ಇಂಥದರಲ್ಲಿ ಒಂದಿನ ಮಮ್ಮದೆಯಲ್ಲಿ ಹಸನಬ್ಬ ಆಕೆಗೆ ಮುನ್ನೂರು ಮೀನ ಎಣಿಸಿ ಹಾಕಿದ; ಕಣ್ಸನ್ನೆ ಮಾಡಿದ. ಆಕೆ ಬುಟ್ಟಿ ಎತ್ತಿಕೊಂಡು ಹೊರಟು ಹೋದಳು. ಇದೇ ಕ್ರಮ ನಿತ್ಯ ನಡೆಯುತ್ತ ಬಂತು. ಮಮ್ಮದೆ ಬ್ಯಾರಿಗೆ ಇವರಿಬ್ಬರ ಕೈಚಳಕ ಗೊತ್ತಾಗದೆ ಇದ್ದರೂ ಇವರಲ್ಲಿ ಆಕರ್ಷಣೆ ಬೆಳೆದು ಬರುತ್ತಿರುವದು ಗೊತ್ತಾಗಿತ್ತು.

ಮುಂದೆ ಒಂದಿನ ಪದ್ಮಾ ಬರುತ್ತಿದ್ದಾಗ ಎದುರಿಗೆ ಹಸನಬ್ಬ ಸಿಕ್ಕ.

'ಹಸನ, ನೀನು ದಿನಾ ನನ್ನ ಬುಟ್ಟಿಗೆ ಹೆಚ್ಚು ಮೀನು ಹಾಕ್ತೀಯಾ. ಒಂದಿನವಾದರೂ ಅದರಲ್ಲಿ ಪಾಲನ್ನು ಕೇಳಿಲ್ಲ," ಎಂದು ಕೇಳಿದಳು.

"ನೀನು ಹೀಗೇ ನನ್ನ ಜೊತೆ ಮಾತಾಡ್ತಾ ಇದ್ದರೆ ನನ್ನ ಪಾಲು ಬಂದಂತಾಯಿತು," ಎಂದ ಆತ ಕಿರುನಗೆಯಿಂದ

"ಏ, ಹೋಗೊ"- ಎಂದ ಪದ್ಮ ನಾಚಿಕೆಂಪಾದಳು.

"ನಿನ್ನ ಲಾಭದಲ್ಲಿ ಪಾಲುಗಳಿಸಬೇಕೂಂತ ಹೆಚ್ಚಿಗೆ ಮೀನು ಹಾಕುವದಿಲ್ಲ ಪದ್ಮಾ"

"ಮತ್ತೆ"

"ಮತ್ತೆ ಅದು ನಿನಗೆ ಗೊತ್ತಾಗುವದಿಲ್ಲ."

"ಏ ಮಾಪ್ಳೆ, ನಾನು ಹೆಣ್ಣು ಮಗಳು. ನೆಟ್ಟಗೆ ಮಾತಾಡು," ಎಂದು ಪದ್ಮ ಉತ್ತರಿಸಿದರೂ ಕೋಪಿಸಿಕೊಳ್ಳಲಿಲ್ಲ.

"ಹೌದು ನಾನು ಗಂಡು ಮಗ. ಹೆಣ್ಣಿಗೆ ಗಂಡು."

"ಥೂ ನಿನ, ಯಾರಿಗಾದರೂ ಕೇಳಿಸೀತು," ಎಂದು ಪದ್ಮಾ ಜಾರಿಕೊಂಡಳು.

ಅಂದು ಮೀನು ಮಾರಾಟದಲ್ಲಿ ಹಸನಬ್ಬ ಹೆಚ್ಚಿಗೆ ಹಾಕಿದ ಮೀನದಿಂದ ಹನ್ನೆರಡು ರೂಪಾಯಿ ಲಾಭವಾಗಿತ್ತು. ಪದ್ಮ ಅದರಲ್ಲಿ ಆರು ರೂ. ಗಳನ್ನು ಹಸನಬ್ಬನಿಗೆ ಕೊಡ ಹೋದಾಗ ಹಸನಬ್ಬ ಕೊಡಲೇ ಸ್ವೀಕರಿಸದೆ, ಹೊಟೆಲ್ಲಿನಲ್ಲಿ ಭೆಟ್ಟಿಯಾಗುವುದಾಗಿ ತಿಳಿಸಿದ. ಕಾಮತರ ಹೊಟೆಲ್ಲಿನಲ್ಲಿ ಹಸನಬ್ಬ ಆರು ರೂಪಾಯಿಗಳನ್ನು ಪದ್ಮಳಿಂದ ಸ್ವೀಕರಿಸಿದ.

ಒಂದು ದಿನ, ವಾಡಿಕೆಯಂತೆ ಗೈಲು ಮೀನು ಬಂದಾಗ, ಪದ್ಮಾ ಮಮ್ಮದೆಗೆ ಇನ್ನೂರು ಮೀನು ಕೇಳಿದಳು. ಹಸನಬ್ಬ ವಾಡಿಕೆಯಂತೆ ಒಂದು ನೂರು ಮೀನು ಹೆಚ್ಚು ಹಾಕಿದ.

"ಎಷ್ಟಿದೆಯೊ ಮೀನು ?" ಮಮ್ಮದೆ ಕೇಳಿದ.

"ಇನ್ನೂರು"

ಮಮ್ಮದೆಗೆ ಸಂಶಯ ಬಂದು ಆತ ಆ ಬುಟ್ಟಿಯನ್ನು ಸುರುವಿ, ತಾನೇ ಮೀನನ್ನು ಎಣಿಸಿ ಹಾಕಿದ.

"ಇದೇನೊ ಕತ್ತೆ ಮಗನೆ" ! ಎಂದು ಮಮ್ಮದೆ ಹಸನಬ್ಬನನ್ನು ಹೊಡೆಯಲು ಎದ್ದ. ಹಸನಬ್ಬ ತಪ್ಪಿಸಿಕೊಳ್ಳಲು ಹೋಗಿ ಜಾರಿ ಬಿದ್ದ. ಪದ್ಮ ಮಮ್ಮದೆಯ ಅಂಗಿ ಹಿಡಿದು, "ಏ, ಕಾಕಾ ಯಾಕೆ ಹೊಡೆಯುತ್ತೀರಿ. ನಾನು ಕೇಳಿದ್ದೇ ಮುನ್ನೂರು," ಎಂದಳು.

"ಇಲ್ಲ, ಇನ್ನೂರೆ" ಎಂದು ಮಮ್ಮದೆ ಅರಚಿದ.

ಹಸನನ ಗುಟ್ಟು ರಟ್ಟಾಯಿತು. ಅಷ್ಟರಲ್ಲಿ ಸೇರಿಕೊಂಡ ಮಾಪ್ಳೆಗಳೂ ಮರಕಾಲ್ದಿಯರೂ ತುದಿಮೊದಲಿಲ್ಲದಂತೆ ಹಸನಬ್ಬ- ಪದ್ಮಳನ್ನು ಆಡಿಕೊಳ್ಳತೊಡಗಿದರು.

ಮನೆಯವರಿಗೆ ಇದು ಗೊತ್ತಾಗದಿರಲಿ ದೇವರೆ ಎಂದು ಪದ್ಮಾ ದೇವರಿಗೆ ಹರಕೆ ಹೊತ್ತಳು.

*

ಒಂದು ವಾರ ಕಳೆಯಿತು. ಎರಡನೆ ವಾರವೂ ಉರುಳಿತು. ಹಂಸಾ ಬಾರದೆ ಇದ್ದಾಗ ಸಂಜೀವ ಒಂದು ಸಂಜೆ ತನ್ನ

ತಾಯಿಗೆ, ತಾನೇ ಕನಕಂಪಾಡಿಗೆ ಹೋಗಿ ಬರುವದಾಗಿ ಹೇಳಿ ಸೈಕಲೇರಿ ಹೊರಟು ಬಿಟ್ಟ. ಮದುವೆಯಾಗಿ ಎರಡೂವರೆ ವರ್ಷಗಳ ನಂತರ ಆತ ಹೆಂಡತಿಯನ್ನು ನೋಡಲು ಹೊರಟಿದ್ದ. ಆತ ಕನಕಂಪಾಡಿಗೆ ಬಂದಾಗ ಗಂಟೆ ರಾತ್ರಿ ಏಳೂವರೆ ಆಗಿತ್ತು. ಮಾವನ ಮನೆ ತಲುಪಿ, ಸೈಕಲ್ ಗೋಡೆಗೆ ಒರಗಿಸಿ, ಒಳಗೆ ಹೋದಾಗ ಹಂಸಾ ಓದುತ್ತ ಕುಳಿತಿದ್ದಳು.

ಸಂಜೀವನೇ ಮಾತಾಡಿಸಿದ.

"ಹಂಸಾ, ನನ್ನ ಗುರುತು ಸಿಕ್ಕಿತೆ? ನಾನು ಸಂಜೀವ."

"ಹೌದು, ನೀವೆಷ್ಟು ಬದಲಾಯಿಸಿ ಬಿಟ್ಟಿದ್ದೀರಿ."

"ನೀನೂ ಬದಲಾಯಿಸಿರುವೆ? ಗುರುತೇ ಸಿಕ್ಕಲಿಲ್ಲ. ಯಾಕೆ, ಮನೆಯಲ್ಲಿ ಯಾರೂ ಇಲ್ಲವೇ ?"

"ಅಣ್ಣ ಚುವ್ವ ಪಟ್ಟೆಬಲೆಯವರ ಲೆಕ್ಕ ತೀರಿಸಲು ಹೋಗಿದ್ದಾನೆ. ಅತ್ತಿಗೆ ನೀರಿಗೆ ಹೋಗಿದ್ದಾಳೆ. ತಂದೆ ತಾಯಿ ಪೇಟೆಯಿಂದ ಬರಲು ತಡವಾಗುತ್ತದೆ. ಬನ್ನಿ, ಕುಳಿತುಕೊಳ್ಳಿ."

ಇಬ್ಬರೂ ಒಂದು ಕ್ಷಣ ಮೌನವಾಗಿ ಕುಳಿತಿರುವಷ್ಟರಲ್ಲಿ ಚುವ್ವ ಬಂದ. ಸಂಜೀವನನ್ನು ನೋಡಿದವನೇ ಏನೂ ಮಾತಾಡದೆ ಹಂಸಾಳನ್ನು ಒಳಗೆ ಎಳೆದೊಯ್ದು ಕೋಣೆಯೊಂದರಲ್ಲಿ ದಬ್ಬಿ ಬಾಗಲು ಭದ್ರಪಡಿಸಿದ.

ಆ ಪರಿಸ್ಥಿತಿಯಲ್ಲಿ ಕುಳಿತುಕೊಳ್ಳಲು ಸಂಜೀವನಿಗೆ ತುಂಬ ಅಸಾಧ್ಯವಾಯಿತು. ಹೆಂಡತಿಯನ್ನು ಒಂದು ಮಾತು ಕೇಳಿ ಹೊರಡಬೇಕೆಂದರೆ ಆಕೆಯ ಸುಳಿವೇ ಇಲ್ಲ.

ಮತ್ತೊಂದು ಅರ್ಧ ಗಂಟೆಯ ನಂತರ ಅತ್ತೆ ಸೋಮಕ್ಕ ಬಂದಳು.

ಸಂಜೀವನೇ ಮಾತನಾಡಿಸಿದ. ಆದರೆ ಆಕೆ ಮರುಮಾತಾಡದೆ ಒಳಗೆ ಹೋಗಿಬಿಟ್ಟಳು. ಸಂಜೀವ ದೈನ್ಯದಿಂದ.

"ಅತ್ತೆ, ಸೈಕಲ್ ತುಳಿದುಕೊಂಡು ಬಂದು ತುಂಬಾ ಆಯಾಸವಾಗಿದೆ. ನೀರು

ಕೊಡ್ತೀರಾ?" ಎಂದು ಕೇಳಿದ. ಚಾನು ತಂದಿತ್ತ. ನೀರು ಕುಡಿದ ನಂತರ,

"ಅತ್ತೇ ನಾನು ಹೋಗುತ್ತೇನೆ."

"ಒಳ್ಳೇದು."

"ಜತೆಯಲ್ಲಿ ಹೆಂಡತಿಯನ್ನು ಕಳಿಸಿ ಕೊಡ್ತೀರಾ ?"

"ಏನಂದೆ ?" ಎನ್ನುತ್ತ ಸೋಮಕ್ಕ ಹೊರಗೆ ಬಂದರು.

"ನನ್ನ ಹೆಂಡತಿಯನ್ನು ಕಳಿಸಿ ಅಂದೆ"

"ಅವಳೀಗ ಓದುತ್ತಿದ್ದಾಳೆ. ಕಳಿಸುವದಕ್ಕಾಗುವದಿಲ್ಲ."

"ಇಷ್ಟ ಇದ್ದರೆ ನಾನು ಓದಿಸುತ್ತೇನೆ. ಕಳಿಸಿಕೊಡಿ."

"ನನ್ನ ಮಗಳನ್ನು ಓದಿಸುವದಕ್ಕೆ ನೀನ್ಯಾರೊ."

"ನಾನು ಆಕೆಯ ಗಂಡ ಅಲ್ವೆ?"

"ಮತ್ತೊಮ್ಮೆ ಹೇಳಬೇಡ. ಕಡಲಿಗೆ ಹೋಗಿ ದುಡಿಯುವ ಹುಡುಗನಿಗೆ ನಮ್ಮ ಹುಡಿಗೆಯನ್ನು ಕೊಡುವದಿಲ್ಲ."

"ಮತ್ಯಾವ ಜಾತಿಯವನಿಗೆ ಕೊಡುತ್ತೀರಿ?"

"ನನ್ನ ಜಾತಿಯಲ್ಲಿ ನಿನಕಿಂತಲೂ ಹೆಚ್ಚು ಓದಿದ ಗಂಡು ನೋಡುತ್ತೇನೆ. ನಿನ್ನ ಮನೆಗಂತೂ ಕಳಿಸುವುದಿಲ್ಲ."

"ಆಗಲಿ, ಹೆಂಡತಿಯನ್ನು ಕೊಂಡು ಹೋಗಲು ಆಗುತ್ತದೆಯೊ ಇಲ್ಲವೊ ನಾನೂ ನೋಡುವೆ" ಎನ್ನುತ್ತ ಸಂಜೀವ ಸೈಕಲ್ ತಳ್ಳಿಕೊಂಡು ಹೋದ.

ಸಂಜೀವ ಈ ವಿವಾದವನ್ನು ತಮ್ಮ ಗ್ರಾಮದ ಗುರಿಕಾರರಲ್ಲಿ ಒಯ್ದ. ಇನ್ನು ಎರಡೂ ಗ್ರಾಮಗಳ ಗುರಿಕಾರರು ಸೇರಿ ಈ ವಿವಾದ ಇತ್ಯರ್ಥ ಮಾಡಬೇಕು. ಬೆಸ್ತರು ತಮ್ಮ ವಿವಾದಗಳನ್ನೆಲ್ಲ ತಮ್ಮ ಗ್ರಾಮಕೂಟಗಳ ನೆರವಿನಿಂದ ಬಗೆ ಹರಿಸಿಕೊಳ್ಳುತ್ತಾರೆ. ಅಲ್ಲಿ ನ್ಯಾಯ ಸಿಗದಿದ್ದವರು ನಾಲ್ಕು ಗ್ರಾಮಗಳ ಕೂಟಕ್ಕೆ ದೂರು ಒಯ್ಯುತ್ತಾರೆ. ಅಲ್ಲಿಯೂ ತೃಪ್ತಿಯಾಗದಿದ್ದವರು ಏಳು ಪಟ್ಟಣಗಳ ಕೂಟಕ್ಕೆ ಫಿರ್ಯಾದು ಒಯ್ಯು

ನಿರ್ಣಯ ನೀಡುವವರು ಹದಿನಾಲ್ಕು ಪಟ್ಟಣಗಳ ಕೊಟಗದವರು. ಮಂಜೇಶ್ವರದಿಂದ ಬಾರಕೂರು ವರೆಗಿನ ಪ್ರದೇಶವನ್ನು ಈ ಮೊಗವೀರರು ಹೀಗೆ ಹದಿನಾಲ್ಕು ಪಟ್ಟಣಗಳಾಗಿ ವಿಂಗಡಿಸಿಕೊಂಡಿದ್ದಾರೆ.

ಸಂಜೀವ ಗುರಿಕಾರರಲ್ಲಿಗೆ ಒಯ್ದ ದೂರಿನ ಪರಿಣಾಮವಾಗಿ ಬಕ್ಕಪಟ್ಣ ಕನಕಂಪಾಡಿ ಗುರಿಕಾರರು ಸೇರಿ ಪ್ರಶ್ನೆಯನ್ನು ಸಾಕಷ್ಟು ಬಿಸಿಬಿಸಿಯಾಗಿ ಚರ್ಚಿಸಿ ಕೊನೆಗೆ ಹಂಸಾಳನ್ನು ಗಂಡನ ಮನೆಗೆ ಕಳಿಸಬೇಕೆಂಬ ಅಭಿಪ್ರಾಯಕ್ಕೆ ಬಂದರೂ ಕನಕಂಪಾಡಿಯ ಭೈರ ಗುರಿಕಾರ ಮಾತ್ರ ಹಂಸಾಳ ಓದು ಮುಗಿಯುವವರೆಗೆ ಅತ್ತೆ ಮನೆಗೆ ಕಳಿಸಬಾರದು ಎಂದು ಅಪಸ್ವರ ಹೊರಡಿಸಿದನು. ತನ್ನ ಈ ತೀರ್ಮಾನದಿಂದ ಉಭಯಪಕ್ಷಕ್ಕೂ ನ್ಯಾಯ ದೊರೆತಿದೆ ಎಂದೇ ಭೈರ ಗುರಿಕಾರನ ಭಾವನೆ. ಆತ ಸೋಮಕ್ಕದ ಅತಿಥ್ಯದ ಆಮಿಷಕ್ಕೆ ಒಳಗಾಗಿದ್ದು ಹುಡುಗಿಯನ್ನು ಉಳಿಸಿಕೊಡಬೇಕಾಗಿತ್ತು. ಹಾಗೆ ಮಾಡಿದ. ಆದರೆ ಓದು ಮುಗಿಸಿದ ನಂತರ ಕಳಿಸಿಕೊಡುವದಾಗಿ ಹೇಳಿ ಬಕ್ಕಪಟ್ಣದವರಿಗೂ ಸಮಾಧಾನ ನೀಡಿದೆ ಎಂದೂ ಅಂದುಕೊಂಡ.

ಭೈರ ಗುರಿಕಾರನ ಈ ತೀರ್ಮಾನದಿಂದ ಸಂಜೀವ ತೀರ ಕುಗ್ಗಿ ಹೋದ. ಹಂಸಾ ಇನ್ನು ತನ್ನ ಮನೆಗೆ ಬರುವದಿಲ್ಲ ಎಂದು ಆತನಿಗೆ ಖಚಿತವಾಯಿತು. ಈ ವಿಚಾರದ ಸುಳಿಯಲ್ಲೇ ಸಿಕ್ಕ ಆತ ತನ್ನ ಭವಿತವ್ಯ ನಿರ್ಧರಿಸಿಕೊಳ್ಳುವದಕ್ಕಾಗಿ ಮುಂಬಯಿಗೆ ಹೋಗಬೇಕು ಎಂದು ನಿರ್ಧರಿಸಿದ. ತನ್ನ ರಂಪಣಿ ಬಲೆ ಗುಂಪಿನ ತಂಡೇಲನಿಗೆ ತನ್ನ ನಿರ್ಣಯ ತಿಳಿಸಿದ. ತನ್ನ ಹಳೆಯ ಶಾಲಾ ಸ್ನೇಹಿತರಿಗೂ ತಿಳಿಸಿದ, ಅವರಲ್ಲೊಬ್ಬ ಜೋಕಿ ಎಂಬವನು ಸಂಜೀವನನ್ನು ಕ್ರಿಕೆಟ ಪಂದ್ಯವೊಂದಕ್ಕಾಗಿ ಉಳಿಸಿಕೊಂಡ. ಸಂಜೀವ ಆ ಪಂದ್ಯದಲ್ಲಿ ಚನ್ನಾಗಿಯೆ ಆಡಿ, ಜೋಕಿಯ ತಂಡಕ್ಕೆ ಜಯತಂದು ಕೊಟ್ಟ.

ಸಂಜೀವ ಮುಂಬಯಿಯಲ್ಲಿದ್ದ ತನ್ನ ಮಾವ

ಬರೆದ, ಆತನಿಂದ ನಿರುತ್ತೇಜಕ ಉತ್ತರ ಬಂದರೂ ಸಂಜೀವ ಮುಂಬಯಿಗೆ ಹೋಗಿಯೆ ಬಿಡಲು ನಿರ್ಧರಿಸಿದ.

ರಂಪಣಿಬಲೆ ಫಂಡಿನವರು ತಮ್ಮ ಲೆಕ್ಕ ಮಾಡಿ ಸಂಜೀವನಿಗೆ ಇನ್ನೂರು ರೂಪಾಯಿಗಳು ಬರುವವೆಂದು ತಿಳಿಸಿ, ಆತ ಮುಂಗಡ ಪಡೆದಿದ್ದ ನೂರು ರೂ. ಗಳನ್ನು ಮುರಿದುಕೊಂಡು ಒಂದು ನೂರು ರೂ. ಗಳನ್ನು ಆತನ ಕೈಗೆ ಹಾಕಿದರು. ಅಲ್ಲದೆ ಫಂಡಿನ ಸದಸ್ಯರು ತಲಾ ಒಂದೆರಡು ರೂ. ಗಳಂತೆ ವಂತಿಗೆ ಹಾಕಿ ನೂರಿಪ್ಪತ್ತು ರೂ. ಗಳನ್ನು ಕೂಡಿಸಿ ಆತನ ದಾರಿವೆಚ್ಚಕ್ಕೆಂದು ಕೊಟ್ಟು ಉತ್ಸಾಹದಿಂದ ಬೀಳ್ಕೊಟ್ಟರು. ಸಂತೋಷದಿಂದಲೇ ಸಂಜೀವ ಹೊರಟ. ತಾಯಿಯ ಯೋಗಕ್ಷೇಮದ ಹೊಣೆಯನ್ನು ತಿಮ್ಮಪ್ಪ ಮಾವನ ಮೇಲೆ ಹೊರಿಸಿದ್ದ.

ಅಲ್ಲದೆ, ಸ್ನೇಹಿತ ಜೋಕಿ ತನ್ನ ಭಾವನಿಗೆ ಕೊಟ್ಟ ಪತ್ರವೂ ಆತನ ರಕ್ಷೆಗಿತ್ತು.

*

ಈ ಮೊಗವೀರರಿಗೆ ಕಡಲಿಗಿಳಿದು ದುಡಿಯುವದು ಕಾಯಕವಾಗಿದ್ದರೆ ಕಣಕ್ಕಿಳಿದು ಕುಸ್ತಿ ಮಾಡುವದು ಅತ್ಯಂತ ಪ್ರೀತ್ಯಾಸ್ಪದವಾದ ಮನರಂಜನೆಯಾಗಿತ್ತು. ಅಂದರೆ ಎಲ್ಲರೂ ಮಲ್ಲಯುದ್ಧದಲ್ಲಿ ಪಳಗಿದವರೇ ಎಂದೇನಲ್ಲ. ಆದರೆ ಬಹುತೇಕ ಮೊಗವೀರರು ಕಡ್ಡಾಯವಾಗಿ ವ್ಯಾಯಾಮ ಮಾಡಿ ತಮ್ಮ ಉಕ್ಕಿನ ಮೈಕಟ್ಟನ್ನು ಕಾಪಾಡಿಕೊಂಡು ಬರುವವರೇ ಸೈ. ಇವರಿಗೆ ಇರುವ ಗರಡಿಗಳಲ್ಲಿ 'ಮುಖ್ಯಪ್ರಾಣ' ಗರಡಿ ಮುಖ್ಯ. ಅಲ್ಲಿಯ ಗುರು ಪೈಲವಾನ ಗುಡ್ಡ ಸಾಕಷ್ಟು ಖ್ಯಾತಿ ಗಳಿಸಿದವನು. ಈತನ ಶಿಷ್ಯರಲ್ಲಿ ಪುರಂದರ ಎಂಬ ಬಿಸಿ ನೆತ್ತರದ ತರುಣ ಗುರುವಿನ ನೆಚ್ಚಿನ ಶಿಷ್ಯನಾಗಿ ಮುಂದೆ ಬರುತ್ತಿದ್ದ.

ಹೀಗಿರುವಾಗ ಬೆಸ್ತರೇತರರ ಪುರಸ್ಕಾರದಿಂದ ಮಂಗಳೂರಿಗೆ ಬಂದಿದ್ದ ಕೊಲ್ಲಾಪುರದ ಪೈ. ಕೋಲಪ್ಪನು "ಪೈ. ಗುಡ್ಡನೊಂದಿಗೆ ಯಾವ ಶರತ್ತಿನ ಮೇಲೂ ತಾನು ಕುಸ್ತಿ ಮಾಡಲು ಸಿದ್ಧ" ಎಂದು ಪತ್ರಿಕೆಗಳಲ್ಲಿ ಜಾಹಿರಾತು ಹಾಕಿಸಿದ. ಇದರಿಂದ ಮಂಗಳೂರಿನ ಮೊಗವೀರರಿಗೆ ಹೊಡೆದೆಬ್ಬಿಸಿದಂತಾಯಿತು. ಅವರೂ ಗುಡ್ಡನನ್ನು ಹುರಿದುಂಬಿಸಿ ಕುಸ್ತಿಗೆ ಒಪ್ಪಿಸಿದರು.

ಸಾಕಷ್ಟು ಪ್ರಚಾರಮಾಡಿದ್ದರಿಂದ ಕುಸ್ತಿಯ ಮೈದಾನೆಲ್ಲ ಮೊಗವೀರರಿಂದಲೂ ಇತರರಿಂದಲೂ ತುಂಬಿ ಹೋಗಿತ್ತು. ಅಟ್ಟಹಾಸದಿಂದ ಪ್ರೇಕ್ಷಕರ ಕೂಗಾಟ–ಚೀರಾಟಗಳ ನಡುವೆ ಕುಸ್ತಿಯಲ್ಲಿ ಗುಡ್ಡನ ಕೈ ಮೇಲಾದಂತೆ ತೋರಿದರೂ ಕೋಲಪ್ಪ ಯಾವದೋ ಚಮತದಿಂದ ಗುಡ್ಡನನ್ನು ನೆಲಕ್ಕೊರಗಿಸಿದನು. ತನ್ನ ಗುರುವಿನ ಸೋಲಿನಿಂದ ಸಿಡಿದೆದ್ದ ಪುರಂದರ ಕೂಡಲೆ ಕಣಕ್ಕಿಳಿದು ಕೋಲಪ್ಪನನ್ನು ಆಹ್ವಾನಿಸಿದ. ಆದರೆ ಪಂಚರು ಆತನನ್ನು ಸಮಾಧಾನಪಡಿಸಿ ಮರುವಾರದಲ್ಲಿ ಅವರ ಕುಸ್ತಿ ಇಟ್ಟರು. ಆ ಕುಸ್ತಿಯಲ್ಲಿ ಪುರಂದರ ತನಗಿಂತ ಅನುಭವಸಾಮರ್ಥ್ಯಗಳಲ್ಲಿ ಮಿಗಿಲಾದ ಕೋಲಪ್ಪನನ್ನು ಸೋಲಿಸಿ ಖ್ಯಾತಿ ಪಡೆದ.

ಪುರಂದರ ಮಲ್ಲನೆಂದು ಎಷ್ಟೇ ಖ್ಯಾತಿ ಗಳಿಸಿದರೂ ವೃತ್ತಿಯಲ್ಲಿ ಬೆಸ್ತನೆ. ಕುಸ್ತಿಯಿಂದ ಸಿಗುವ ಹಣವು ಆತನ ಹೊಟ್ಟೆಗೇ ಅಲ್ಲದೆ ಮನೆಯವರ ಹೊಟ್ಟೆಗೆ ದಕ್ಕುವದಿಲ್ಲ, ಹೀಗಾಗಿ ಆತನು ತನ್ನ ಮನೆಯವರಿಗಾಗಿ ಕಡಲಿಗಿಳಿದು ಕಾಯಕ ಎಸಗಬೇಕಾಗುತ್ತದೆ. ಆತನ ತಂದೆಯೂ ಕಡಲಿಗೆ ಹೋಗುತ್ತಾನೆ. ತಾಯಿ, ತಂಗಿಯರು ಪೇಟೆಗೆ ಹೋಗಿ ಮೀನು ಮಾರಿ ಸಂಪಾದಿಸುತ್ತಾರೆ ಆದರೂ ಅವರ ಬಡತನ ತೊಲಗುವದಿಲ್ಲ. ಇಪ್ಪತ್ತು ವರ್ಷದ ತನ್ನ ತಂಗಿಯನ್ನು ಲಗ್ನಮಾಡಿ ಹೊರಗೆ ಹಾಕಬೇಕಾಗಿದೆ. ಇಂಥದರಲ್ಲಿ ತಾನು ಲಗ್ನವಾಗುವದು ಹೇಗೆ? ಲಗ್ನವಾದರೆ ಜಗತ್ಪ್ರಖ್ಯಾತ ಜಟ್ಟಿಯಾಗುವ ಆಸೆಗೂ ತಿಲಾಂಜಲಿ ಬಿಡಬೇಕಾದೀತು. ಇದು ಪುರಂದರನ ಚಿಂತೆ.

ಕನಕಂಪಾಡಿಯ ಗುರಿಕಾರ ಭೈರ ಉಳ್ಳಾಲದಲ್ಲಿಯ ವಿವಾಹವೊಂದಕ್ಕೆ ಬಂದಿದ್ದಾಗ ಚುರುಕಿನಿಂದ ಓಡಾಡುತ್ತಿದ್ದ ಪುರಂದರನ ಬಗ್ಗೆ ಮಂಜು ಗುರಿಕಾರನೊಡನೆ ವಿಚಾರಿಸಿದ. ತನ್ನ ಮಗಳಿಗೆ ಸರಿಯಾದ ವರ ಆಗಬಹುದೆಂದು ಆಲೋಚಿಸಿದ. ಭೈರ ಗುರಿಕಾರನ ಮಗಳು ಬೇರಾರೂ ಅಲ್ಲ, ದಿಟ್ಟ ಬೆಸ್ತ ಕನ್ನೆ ಪದ್ಮಾ. ಮಂಜು ಗುರಿಕಾರನೂ ಜೋಡಿ ಚನ್ನಾಗುವದು ಎಂದು ಹುಂ ಗುಟ್ಟಿದ. ಪುರಂದರನನ್ನು ಮಂಜು ಗುರಿಕಾರ ಆ ಸಮಯದಲ್ಲೇ ವಿಚಾರಿಸಲಾಗಿ 'ವಿಚಾರಿಸಿ ಹೇಳುತ್ತೇನೆ' ಎಂದು ಪುರಂದರ ಅನುಕೂಲ ಉತ್ತರವಿತ್ತ.

ಕೆಲದಿನಗಳ ನಂತರ ಭೈರ ಗುರಿಕಾರ ಪುರಂದರನ ಮನೆಯ ವರೆಗೂ ಹೋಗಿ ಆತನ ತಂದೆಯನ್ನು ಕಂಡು ತನ್ನ ಮನೀಷೆಯನ್ನು ಅವರಿಗೆಲ್ಲ ತಿಳಿಸಿ ಒಪ್ಪಿಸಿಕೊಂಡು ಬಂದ.

ಪದ್ಮಾಳ ದಿನಚರಿ ಯಥಾಪ್ರಕಾರ ಸಾಗಿತ್ತು. ಹಸನಬ ... [illegible]

ಹೊಡೆತ ತಿಂದ ನಂತರ ಬಹಳ ದಿನಗಳ ವರೆಗೆ ಪದ್ಮಳಿಗೆ ಭೆಟ್ಟಿಯಾಗಿರಲಿಲ್ಲ. ಒಂದಿನ ಅಕಸ್ಮಾತ್ತಾಗಿ ಆತ ಪದ್ಮಳಿಗೆ ಭೆಟ್ಟಿಯಾದ.

"ಏನೋ, ಬಹಳ ಇಳಿದು ಹೋಗಿದ್ದೀ."

"ಹೌದು, ಚಿಂತೆ ಹತ್ತಿದೆ." ಎಂದ ಆತ.

"ಮದುವೆಯ ಚಿಂತೆಯೆ ?"

"ಇಲ್ಲ, ವ್ಯಾಪಾರದ ಚಿಂತೆ. ಮೀನಿನ ವ್ಯಾಪಾರ ಮಾಡಬೇಕೆನ್ನುತ್ತೇನೆ. ತಾಯಿಯ ಚಿನ್ನ ಅಡವಿಟ್ಟು ಮುನ್ನೂರು ರೂ.ಪಡೆದೆ"

"ಬೀಡಾ ಅಂಗಡಿ ಇಟ್ಟುಕೊ, ಆ ಹಣದಲ್ಲಿ ಖಂಡಿತವಾಗಿಯೂ ವ್ಯಾಪಾರ ಮಾಡಬೇಕೆಂಬ ಆಸೆ ಇದೆಯೆ ನಿನಗೆ ?"

"ತಾಯಿಯ ಆಭರಣಗಳನ್ನೇ ಅಡವಿಟ್ಟೇನೆ.."

"ಹಾಗಾದರೆ ನನ್ನ ಹತ್ತಿರ ಸ್ವಲ್ಪ ಚಿನ್ನ ಇದೆ. ಕೊಡುತ್ತೇನೆ. ವ್ಯಾಪಾರ ಸುರು ಮಾಡು."

"ಬೇಡ ಪದ್ಮ, ನಿನಗೇಕೆ ತೊಂದರೆ."

"ಹಾಗಾದರೆ ನಿನ್ನ ವ್ಯಾಪಾರ ಸುರು ಆಗಬೇಡವೆ ?"

"ಯಾವ ನಂಬಿಗೆಯ ಮೇಲೆ ನೀನು ಚಿನ್ನ ಕೊಡುತ್ತೀಯಾ?"

"ನಿನ್ನದೇ ನಂಬಿಕೆಯ ಮೇಲೆ."

"ವ್ಯಾಪಾರದಲ್ಲಿ ಸೋತು ಚಿನ್ನ ಹಿಂತಿರುಗಿಸುವದಕ್ಕೆ ಆಗದಿದ್ದರೆ?"

"ಹೋಗಲಿ, ಐದಾರು ನೂರು ರೂಗಳ ಚಿನ್ನ ಹೆಚ್ಚೋ? ವಿಶ್ವಾಸ ಹೆಚ್ಚೋ?"

ಹಸನಬ್ಬ ಕೃತಜ್ಞತೆಯಿಂದ ಮೂಕನಾದ. ಹೇಗೋ ಸಾವರಿಸಿಕೊಂಡು

"ಚಿನ್ನ ಎಲ್ಲಿ ಕೊಡುತ್ತೀ? ಎಂದ.

"ನೀನೇ ಹೇಳು."

"ಮಾರ್ಕೆಟ ಕಟ್ಟಡದಲ್ಲಿ ಐದ್ರೋಸ ಬ್ಯಾರಿ ಇದ್ದಾನಲ್ಲ. ಆತನ ರೂಮಿಗೆ ಬಾ"

"ನಾಳೆ ಮಧ್ಯಾಹ್ನ ಬರುತ್ತೇನೆ. ಆದರೆ ಐದ್ರೋಸು ಯಾರಿಗೆಲ್ಲ ಹೇಳಿಬಿಟ್ಟರೆ"

"ಆತ ಮಮ್ಮದೆ ತರಹ ಅಲ್ಲ. ಅಲ್ಲದೆ ನಾನು ವ್ಯಾಪಾರ ಮಾಡಿದರೆ ಆತ ಲಾರಿ ಕೊಡುವ

"ಹಾಗಿದ್ದರೆ ನಾಳೆ ಬರುತ್ತೇನೆ..." ಎಂದು ಪದ್ಮ ಹೊರಟಳು. ಮುಂದೆ ಮುಂದೆ ಹೋಗುತ್ತಿದ್ದರೂ ಹಿಂದೆ ಹಿಂದೆ ತಿರುಗಿ ನೋಡುತ್ತಿದ್ದಳು. ಹಸನಬ್ಬನದೂ ಅದೇ ಗತಿ... ಅದೇನು ಆಕರ್ಷಣೆಯೋ!

ಮರುದಿನ ಪದ್ಮಾ ತಂದ ಚಿನ್ನವನ್ನು ಹಸನಬ್ಬ ಸ್ವೀಕರಿಸಿ ಯಾರಲ್ಲಿ ಅಡವು ಇಡುವದೆಂದು ವಿಚಾರ ಮಾಡುತ್ತಿದ್ದಾಗ ಐದ್ರೋಸಬ್ಯಾರಿ ತಾನೆ ಅವನ್ನಿಟ್ಟುಕೊಂಡು ಹಸನಬ್ಬನಿಗೆ ಐದುನೂರು ರೂ. ಗಳನ್ನು ಕೊಟ್ಟ. ಅಲ್ಲದೆ ವ್ಯಾಪಾರ ಮಾಡಲು ಹುರಿದುಂಬಿಸಿದ. ಸಾಧ್ಯವಿದ್ದ ಸಹಾಯ ನೀಡುವದಾಗಿಯೂ ಹೇಳಿದ.

ಪದ್ಮಾ ಎಷ್ಟೇ ಕದ್ದು ಮುಚ್ಚಿ ಈ ವ್ಯವಹಾರ ಮಾಡಿದರೂ ಆಕೆಯ ಜೊತೆಗಾರ್ತಿಯರಿಗೆ ಗೊತ್ತಾಗದಿರಲಿಲ್ಲ. ಆ ಮರಕಾಲ್ದಿಯರು ಪದ್ಮಾ—ಹಸನಬ್ಬರ ಮೇಲೆ ಪ್ರಾರಂಭದಿಂದಲೂ ಕಣ್ಣಿಟ್ಟಿದ್ದರು. ಮಮ್ಮದೆ ಬ್ಯಾರಿ ಹಸನಬ್ಬನನ್ನು ಹೊಡೆದು ಹೊರಗೆ ಹಾಕಿದ ದಿನದಿಂದಂತೂ ಇವರು ಪದ್ಮಾಳನ್ನು ಕೊಂಕು ಮಾತುಗಳಿಂದ ಹಿಂಸಿಸುವದು ಹೆಚ್ಚಿತ್ತು. ಆದರೂ ಪದ್ಮ ಸಂಯಮದಿಂದಲೇ ಇದ್ದಳು. ಈಗ ಮನೆಯ ಚಿನ್ನವನ್ನು ಹಸನಬ್ಬನಿಗೆ ಕೊಟ್ಟಿರುವದು ಈ ಮರಕಾಲ್ದಿಯರಿಗೆ ಗೊತ್ತಾದರೆ ತನ್ನ ಗೋಳು ಹೊಯ್ದುಕೊಳ್ಳದೆ ಬಿಡರು ಎಂಬ ಅಳುಕು ಪದ್ಮಾಳಿಗೆ. ಆ ದಿನ ಬಂದೇ ಬಿಟ್ಟಿತು. ನೆರೆ ಮನೆಯ ಹೆಂಗಸರು ಬಂದು,' "ಸೀತಕ್ಕ ನಾಳೆ ದೇವಸ್ಥಾನಕ್ಕೆ ಹೋಗಬೇಕು. ಸ್ವಲ್ಪ ನಿಮ್ಮ ಚಿನ್ನದ ಸರ ಕೊಡ್ತೀಯಾ" ಎಂದು ಯಾಚಿಸಿದರು. ಸೀತಕ್ಕ ಪದ್ಮಳನ್ನು ಕೇಳಿದಳು. ಪದ್ಮಾ "ಇಲ್ಲ, ಚಿನ್ನ ಹೂಗ್ಯಬಜಾರಿನ ಮುಂತ್ರಕ್ಕನಿಗೆ ಕೊಟ್ಟಾಗಿದೆ· ಅದರ ಒಂದು ಕೊಂಡಿ ಮುರಿದಿತ್ತಂತೆ ಸರಿಪಡಿಸಿಕೊಡ್ತೇನೆ ಅಂದಿದ್ದಾಳೆ" ಎಂದು ನೆವ ಹೇಳಿ ಜಾರಿಕೊಂಡಳು.

ಹಸನಬ್ಬನಿಂದ ಬೇಗನೆ ಚಿನ್ನ ಬಿಡಿಸಿಕೊಂಡು ಬರಬೇಕೆಂದರೆ ಇತ್ತಿತ್ತ ಆತನ ಹೋಬಳಿಯಲ್ಲಿ ಮೀನಿನ ವ್ಯಾಪಾರದಲ್ಲಿ ಕೈ ಸುಟ್ಟುಕೊಂಡ ಆತ ಎಲ್ಲೊಲ್ಲೆ ಕರಾವಳಿಯಲ್ಲಿ ತಿರುಗಾಡುತ್ತಿದ್ದಾನೆ. ದೈವ ಪರೀಕ್ಷೆಗಾಗಿ. ಪದ್ಮಾಳಿಗೆ ರೋಸಿ ಹೋಗಿ ಒಂದಿನ ಐದ್ರೋಸಬ್ಯಾರಿಯಲ್ಲಿಗೆ ತೆರಳಿ, ಹಸನಬ್ಬನ ಬಗೆಗೆ ವಿಚಾರಿಸಿದಳು. "ನಿಮ್ಮ ವ್ಯಾಪಾರ ಹಾಳಾಯಿತು, ನನ್ನ ಚಿನ್ನ ನನಗೆ ಬೇಕು" ಎಂದೂ ಐದ್ರೂಸಬ್ಯಾರಿಗೆ ದಬಾಯಿಸಿದಳು. ಆತ ತನಗೆ ಯಾವ ವಿಚಾರ ತಿಳಿಯದು, ಮರುದಿನ ಸಂಜೆಗೆ ಬಂದರೆ ಹಸನಬ್ಬ ಸಿಗಬಹುದು ಎಂದಿಷ್ಟೇ ಹೇಳಿ ಜಾರಿಕೊಂಡ.

ಮರುದಿನ ಸಂಜೆಗೆ ಬಂದಾಗ ಹಸನಬ್ಬ ಅಲ್ಲಿದ್ದ. ಹಸನಬ್ಬ ಸೋತ ವಿಷಯ ಆತನಿಂದಲೇ ತಿಳಿದು, ಬೇರೆ ಕಡೆಗೆ ಹೋಗಿ ಮೀನು ವ್ಯಾಪಾರ ಮಾಡಲು ಆತನಿಗೆ ಸಲಹೆ ನೀಡಿದಳು. ಚಿನ್ನದ ಬಗ್ಗೆ ಇನ್ನೂ ಸ್ವಲ್ಪ ಕಾಲ ಕಾಯುವದಾಗಿ ಹೇಳಿದಳು.

"ಅಲ್ಲವೋ ಇಂದು ಸಂಜೆಗೇ ಚಿನ್ನ ಬೇಕೆಂದು ಹಾರಾಡಿದವಳು ನಿನ್ನ ಕುಡ ಕೊಡಲೆ ಹಾಗೇ ತೆರಳಿದಳಲ್ಲೊ" ಎಂದು ಐದ್ರೋಸ ಬ್ಯಾರಿ ನಗತೊಡಗಿದ.

ದಿನಗಳು ಉರುಳ ತೊಡಗಿದವು. ಮರಕಾಲ್ದಿಯರು ಪೇಟೆಗೆ ಹೋಗಿ ಮೀನು ಮಾರಾಟ ಮಾಡಿಕೊಂಡು ಬರುವದು ನಡೆದೇ ಇತ್ತು. ಮೀನಗಳು ಪೇಟೆಯಲ್ಲಿ ಕಡಿಮೆ ಇದ್ದಾಗ ಮರಕಾಲ್ದಿಯರಲ್ಲೂ ಸ್ಪರ್ಧೆ ಇರುತ್ತಿರಲಿಲ್ಲ. ಮೀನು ಪೇಟೆಗೆ ಹೆಚ್ಚಿಗೆ ಬಾದಾಗ ಇವರಿಗೆ ಗೋಳು. ಕೊಂಡ ಎಲ್ಲ ಮೀನು ಮಾರಾಟ ಮಾಡಿಯೇ ಹೋಗಬೇಕು ಎಂಬ ಗೀಳು ಇವರಿಗೆ. ಹಾಗೇ ತಿರುಗಿ ಮನೆಗೆ ಒಯ್ದರೆ ಅವನ್ನು ಒಣಗಿಸುವ, ಕುದಿಸುವ ತಾಪತ್ರಯ. ಆದ್ದರಿಂದ ಅವರು ಆದಷ್ಟು ಹೆಚ್ಚು ಹೊತ್ತು ಕುಳಿತಾಗಲಿ ಎಲ್ಲ ಮೀನು ಮಾರಾಟಮಾಡಿಕೊಂಡೇ ಮನೆಗೆ ತೆರಳುತ್ತಿದ್ದರು. ಹೀಗೆ ಒಂದಿನ ಮೀನು ಹೆಚ್ಚಾಗಿ ಮಾರಾಟವಾಗದಿದ್ದಾಗ ನಾಲ್ಕಾಣೆಗೆ

ಬೇಗ ಮಾರಾಟವಾಗಲಿ ಎಂದು ಪದ್ಮಾ "ನಾಲ್ಕಾಣೆಗೆ ಇಪ್ಪತ್ತೈದು" ಎಂದು ಕೂಗತೊಡಗಿದಳು.

ಗೌರಿ ಎಂಬ ಮರಕಾಲ್ದಿ "ಏನೇ ವ್ಯಾಪಾರ ಹಾಳು ಮಾಡುತ್ತಿದ್ದೀ. ಐದ್ರೋಸು ಬ್ಯಾರಿಯಲ್ಲಿ ಕಲಿತದ್ದೇನು ಇದು?" ಎಂದು ಮೂದಲಿಸಿದಳು. ಪದ್ಮಳ ದನಿಯೂ ಜೋರಾಯಿತು. ಮರಕಾಲ್ತಿಯರು ಹೊಡೆದಾಟಕ್ಕಿಳಿದರೆ ಪರಿಸರ ಬ್ರಹ್ಮರಿಗೂ ಅವರನ್ನು ಬಿಡಿಸಲಾಗುವದಿಲ್ಲ.

"ಮುಂಡೇ ಹೆಚ್ಚಿಗೆ ಮಾತಾಡದೆಯೆಂದರೆ ಮರಕಾಲ ವಂಶದಿಂದಲೇ ಬಹಿಷ್ಕಾರ ಹಾಕಿಸೇನು" ಎಂದು ಗೌರಿ ಅರಚಿದಳು,

"ಆಗ ನಾನೂ ನೋಡಿಕೊಂಡೇನು" ಎಂದು ಪದ್ಮಾ ಕಾಲಪ್ಪಳಿಸುತ್ತ ಹೋಗಿ ಬಿಟ್ಟಳು. ಅಂದಿನಿಂದ ಗೌರಿಗೆ ಪದ್ಮಾಳ ಮೇಲೆ ದ್ವೇಷ ಹುಟ್ಟಿಕೊಂಡಿತು.

ಗೌರಿ, ಪುರಂದರನ ಗ್ರಾಮಕ್ಕೆ ಸಮೀಪದ ಗ್ರಾಮದವಳು. ಈ ಘಟನೆ ನಡೆದ ಒಂದೆರಡು ದಿನಗಳಲ್ಲಿಯೇ ಗೌರಿ ಪುರಂದರನನ್ನು ಭೆಟ್ಟಿಯಾಗಿ ಪದ್ಮಾ-ಹಸನಬ್ಬರ ವಿಷಯದಲ್ಲಿ ಹಲವಾರು ಕಟ್ಟುಕತೆ ಹೇಳಿ ಮರಕಾಲ್ದಿ ಹೆಣ್ಣುಮಕ್ಕಳಿಗೆ ಇನ್ನು ಉಳಿಗಾಲ ಇಲ್ಲ ಎಂದು ದೂರಿಕೊಂಡಳು. ತತ್ಪರಿಣಾಮವಾಗಿ ಪುರಂದರ ತನ್ನ ಗರಡಿಯಾಳುಗಳನ್ನು ಕಟ್ಟಿಕೊಂಡು ಒಂದು ರಾತ್ರಿ ಹಸನಬ್ಬನನ್ನು ನಡುದಾರಿಯಲ್ಲಿ ತಡೆದು ದರ್ಪದಿಂದ ಎಚ್ಚರಿಕೆ ನೀಡಿದ್ದೂ ಆಯಿತು. ಈ ಘಟನೆ ಮಾಪ್ಳೆಗಳನ್ನು ಹೊಡೆದೆಬ್ಬಿಸಿತು. ಗುಟ್ಟಾಗಿ ಅವರೂ ಸಂಘಟನೆ ನಡೆಸತೊಡಗಿದರು. ಆದರೆ ತಾವಾಗಿಯೇ ಕೆಣಕುವದು ಬೇಡ ಎಂದು ಹಸನಬ್ಬ ಎಲ್ಲರಿಗೂ ತಾಕೀದು ಮಾಡಿದ್ದ.

ಪದ್ಮಾ ಚಿನ್ನವನ್ನು ಅಡವಿಟ್ಟ ವಿಚಾರ ಅವರಿವರಿಂದ ತಾಯಿ ಸೀತಕ್ಕನಿಗೆ ತಿಳಿದು ದಿನವೂ ಚಿನ್ನ ಹಿಂತಿರುಗಿಸುವದಕ್ಕೆ ಆಕೆಯನ್ನು ಗೋಳಾಡಿಸಹತ್ತಿದಳು. ಪದ್ಮಾ ಒಂದಿನ ಕಂಗಾಲಾಗಿ ಐದ್ರೋಸುಬ್ಯಾರಿಯಲ್ಲಿಗೆ ಹೋದಾಗ ಹಸನಬ್ಬನೂ ಅಲ್ಲಿದ್ದ. ಪದ್ಮಾ ತನ್ನ ಕತೆಯನ್ನೆಲ್ಲ ತೋಡಿಕೊಂಡಾಗ ಹಸನಬ್ಬ ಆಕೆಯ ಚಿನ್ನವನ್ನು ಹಿಂತಿರುಗಿಸಿದ. ಮಲ್ಪೆ ಗಂಗೊಳ್ಳಿ ಮುಂತಾದ ಕಡೆಗಳಲ್ಲೆಲ್ಲ ಹಸನಬ್ಬ ತನ್ನ ಮೀನಿನ ವ್ಯಾಪಾರ ಕುದುರಿಸಿಕೊಂಡು ತುಸು ಚೇತರಿಸಿಕೊಂಡಿದ್ದ. ಆತ ಚಿನ್ನ ಹಿಂತಿರುಗಿಸಿದ ನಂತರವೇ ಪುರಂದರ ಆತನನ್ನು ಭೆಟ್ಟಿಯಾಗಿ ಕೆಣಕಿದ ಘಟನೆ ನಡೆದದ್ದು.

*

ಬಕ್ಕಪಟದಿಂದ ಹೊರಟ ಸಂಜೀವನಿಗೆ

ಮುಂಬಯಿ ಮುಟ್ಟುವ ವರೆಗೆ ದಾರಿಯುದ್ದಕ್ಕೂ ವಿಚಿತ್ರ ಹೊಸಹೊಸ ಅನುಭವಗಳು. ಕಡೂರ ವರೆಗೆ ಬಸ್ಸಿನಲ್ಲಿ, ಮುಂದೆ ರೈಲಿನಲ್ಲಿ ಪ್ರಯಾಣಿಸಿದ ಸಂಜೀವ ಮುಂಬಯಿ ತಲಪುವಾಗ ನುಗ್ಗಾಗಿ ಹೋಗಿದ್ದ. ಕಲ್ಯಾಣ ನಿಲ್ದಾಣಕ್ಕೆ ಬಂದಾಗ ಆತನಿಗೆ ತಾನು ಮುಂಬಯಿಗೆ ಬಂದ ಅರಿವು ಮೂಡಿತ್ತು. ಅಲ್ಲಿಂದ ಗಾಡಿ ಮುಂದೆ ಸಾಗಿ ದಾದರ ನಿಲ್ದಾಣದಲ್ಲಿ ನಿಂತಾಗ ಬಹಳಷ್ಟು ಜನ ಇಳಿದದ್ದರಿಂದ ತಾನೂ ಇಳಿದು ಬಿಟ್ಟ. ಸಂಜೀವ ತನ್ನ ಮಾವನಿಗಾಗಿ ಹುಡುಕಾಡತೊಡಗಿದ. ಆತನ ತಲೆ ಎಲ್ಲೂ ಕಾಣಲಿಲ್ಲ. ಆತನ ಹತ್ತಿರ ಮಾವ ಜಗನ್ನಾಥನ ಆಫೀಸಿನ ವಿಳಾಸ ಇತ್ತಾದರೂ ಯಾರನ್ನು ಕೇಳಬೇಕು? ಎಲ್ಲರಿಗೂ ಗಡಿಬಿಡಿ. ಒಬ್ಬರಾದರೂ ಸಾವಧಾನದಿಂದ ನಡೆದಿಲ್ಲ. ಕಡೆಗೆ ಸಂಜೀವ ಧೈರ್ಯ ಮಾಡಿ, ಒಬ್ಬ ತರುಣನನ್ನು ತಡೆದು, ಮಾವನ ವಿಳಾಸ ತೋರಿಸಿ, "ಇದೆಲ್ಲಿದೆ ಗೊತ್ತೆ. ದಯವಿಟ್ಟು ತಿಳಿಸಿ" ಎಂದು ಗೋಗರೆದ.

"ಇಲ್ಲಿಂದ ಫೋರ್ಟಿಗೆ ಹೋಗಿ. ಅಲ್ಲಿ ಯಾರನ್ನಾದರೂ ವಿಚಾರಿಸಿ" ಎಂದು ಹೇಳಿ ಹೊರಟಿದ್ದ ಆ ತರುಣ ಮತ್ತೆ ಅದೇಕೋ ತಡೆದು,

"ನೀವು ಮಂಗಳೂರಿನವರೋ? ಮೊಗವೀರರೋ? ಇಲ್ಲಿ ಅವರು ಕಾಯುತ್ತೇನೆಂದು ಹೇಳಿದ್ದರೇ?" ಎಂದು ಸಹಾನುಭೂತಿಯಿಂದ ವಿಚಾರಿಸಿದ.

ಸಂಜೀವ ತನ್ನ ಮಾವನ ಟೆಲಿಗ್ರಾಮನ್ನು ಆ ತರುಣನಿಗೆ ತೋರಿಸಿದ.

"ನೀವು ವಿ. ಟಿ. ಯಲ್ಲಿಳಿಯಬೇಕಿತ್ತು ನಿಮ್ಮ ಮಾವ ಅಲ್ಲಿ ಇಷ್ಟು ಹೊತ್ತು ದಾರಿ ಕಾಯ್ದು ಮನೆಗೆ ಹೋಗಿರಬಹುದು. ಈಗ ನಮ್ಮ ಮನೆಗೆ ನಡೆಯಿರಿ. ನಾಳೆ ಬೆಳಿಗ್ಗೆ ಅವರ ಆಫೀಸಿಗೆ ಮುಟ್ಟಿಸುತ್ತೇನೆ." ಎಂದು ಸಂಜೀವನನ್ನು ಆತ ತನ್ನ ಮನೆಗೆ ಕರೆದೊಯ್ದ. ಆತನೂ ಮೊಗವೀರನೇ. ಹೆಸರು ಸದಾನಂದ. ಅಲ್ಲಿ ಕಾರ್ಪೊರೇಶನ್ನಿನಲ್ಲಿ ಕೆಲಸಕ್ಕಿದ್ದವ. ಮನೆಯಲ್ಲಿ ತಾಯ್ತಂದೆ,

ಆತನ ಮನೆಯಲ್ಲಿಯೂ ಸ್ನಾನ ಊಟವಾಯಿತಾದರೂ ಪಕ್ಕದ ಕನ್ನಡ ಸಂಘದ ಕೋಣೆಯಲ್ಲಿ ಆತ ಮಲಗಬೇಕಾಯಿತು.

ಮರುದಿನ ಸದಾನಂದ ಸಂಜೀವನನ್ನು ಅವರ ಮಾವ ಕೆಲಸ ಮಾಡುತ್ತಿದ್ದ ಕೆಮಿಕಲ್ ಫ್ಯಾಕ್ಟರಿಗೆ ಕರೆದೊಯ್ದು ಜಗನ್ನಾಥನನ್ನು ಹುಡುಕಿ, ಅಳಿಯನನ್ನು ಆತನಿಗೆ ಒಪ್ಪಿಸಿದ. ಜಗನ್ನಾಥ ಅವರಿಬ್ಬರನ್ನೂ ಕ್ಯಾಂಟೀನಿಗೆ ಒಯ್ದು ಕಾಫೀ ಕುಡಿಸಿದರೂ "ಬರಬೇಡ ಅಂದರೂ ಬಂದಿದ್ದೀಯಾ. ಇನ್ನು ಬೇಕಾರಿತನದ ಕಷ್ಟ ಇಲ್ಲಿ ಅನುಭವಿಸು" ಎಂದು ಉಪದೇಶದ ಮಾತ್ರ ನೀಡದೆ ಇರಲಿಲ್ಲ. ಸದಾನಂದ ತೆರಳಿದ. ಜಗನ್ನಾಥ ಸಂಜೀವನನ್ನು ಸಂಜೆಗೆ ಮನೆಗೆ ಕರೆದೊಯ್ದ.

ಮುಂಬಯಿಯಲ್ಲಿ ಸಾಕಷ್ಟು ವಿದ್ಯಾರ್ಹತೆಗಳಿದ್ದವರೇ ನೌಕರಿ ಇಲ್ಲದೆ ಅಲೆಯುತ್ತಿರುವಾಗ ಸಂಜೀವನಿಗೆ ಅದು ಸುಲಭ ಸಾಧ್ಯವೆ? ನಿತ್ಯ ಮಾವ ಕಚೇರಿಗೆ ಹೋದ ಕೂಡಲೇ ಸಂಜೀವನೂ ನೌಕರಿಯ ಬೇಟೆಗಾಗಿ ಹೊರಟು ಅಲೆಯುತ್ತಿದ್ದ. ಆದರೆ ಎಲ್ಲಿಯೂ ಆಶಾಕಿರಣವೇ ಗೋಚರವಾಗಲಿಲ್ಲ. ಆತ ಮುಂಬಯಿಗೆ ಬಂದು ತಿಂಗಳಾಗುತ್ತ ಬಂದಿದ್ದರೂ ಜೋಕಿಯ ಭಾವನನ್ನು ಕಾಣಲು ಸಾಂತಾಕ್ರೂಜಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. ಒಂದು ದಿನ ಮುಂದಾಗಿ ಸಾಂತಾಕ್ರೂಜಕ್ಕೆ ಹೋಗಿ, ತನ್ನ ಹತ್ತಿರ ಇದ್ದ ವಿಳಾಸ ಹುಡುಕಿ ತೆಗೆದು, ಜೋಕಿಯ ಭಾವನ ಭೆಟ್ಟಿಗಾಗಿ ಕಾದ. ಅರ್ಧ ಗಂಟೆಯ ನಂತರ ಕರೆಬಂದು ಸಂಜೀವ ಒಳಗೆ ಹೋದಾಗ ಅಲ್ಲಿ ಪೆರೇರಾ ಕುಳಿತಿದ್ದರು. ದೊಡ್ಡ ಸಂಸ್ಥೆಯ ಮ್ಯಾನೇಜರರಾಗಿದ್ದರೂ ಸಂಜೀವನನ್ನು ಗೌರವದಿಂದ ವಿಚಾರಿಸಿಕೊಂಡರು. ಆತ ಕೊಟ್ಟ ಪತ್ರದಲ್ಲಿ ತನ್ನ ಮೈದುನ ಬರೆದ ಶಿಫಾರಸನ್ನು ಓದಿ, ಸಂಜೀವನ ವಿದ್ಯಾರ್ಹತೆ ವಿಚಾರಿಸಿದರು. ಅವಾವವೂ ಇಲ್ಲವೆಂದು ತಿಳಿದರೂ ಇಲ್ಲಿ ಆಟಗಾರರಿಗೂ ನೌಕರಿ ಸಿಗುತ್ತವೆ. ನೀನು ಕಾಯಬೇಕು ಎಂದು ಹೇಳಿದರು.

ಗಿದ. ಮುಂದೆ ಮತ್ತೆ ಮೂರು ಸಲ ಪೆರೇರಾರಲ್ಲಿ ಹೋಗಿಬಂದರೂ ಸಂಜೀವನಿಗೆ ನಿರಾಶೆಯೇ ಕಾದಿತ್ತು. ಸಂಜೀವನ ಕಣ್ಣಿಂದ ಹನಿ ಉದುರಿದ್ದನ್ನು ಕಂಡ ಪೆರೇರಾ ಸಂಗತಿ ಏನೆಂಬುದನ್ನು ತಿಳಿದುಕೊಂಡು ಆತನ ಕೈಗೆ ಐವತ್ತು ರೂ. ಗಳನ್ನು ಹಾಕಿದರು.

ಮುಂದಿನ ವಾರ ಸಂಜೀವ ಮತ್ತೆ ಪೆರೇರಾರ ಭೆಟ್ಟಿಗೆ ಹೋದಾಗ ಅವರು ಸಂಜೀವನಿಗೆ ಒಂದು ಅವಕಾಶ ದೊರೆತಿರುವದಾಗಿ ಹೇಳಿ, ಒಂದು ವಿಳಾಸ ನೀಡಿ ಕೂಡಲೇ ಅಲ್ಲಿಗೆ ಹೋಗಬೇಕಾಗಿ ತಿಳಿಸಿದರು. ಸಂಜೀವ ಅವರಿಗೆ ಥ್ಯಾಂಕ್ಸ ಹೇಳಿ ಹೊರಗೆ ಬಂದು ವಿಳಾಸ ನೋಡಿದರೆ ತನ್ನ ಮಾವನ ಕಚೇರಿಯ ವಿಳಾಸವೇ ಅದಾಗಿತ್ತು. ಮರುದಿನ ಅಲ್ಲಿಗೆ ಹೋಗುವದೆಂದು ನಿರ್ಧರಿಸಿ ಮನೆಗೆ ಬಂದ. ಮಾವನಿಗೆ ವಿಚಾರಿಸಲಾಗಿ ತನಗೆ ಏನೊಂದೂ ಗೊತ್ತಿಲ್ಲದವನಂತೆ ನಟಿಸಿದ.

ಮರುದಿನ ಸಂಜೀವ ಕೆಮಿಕಲ್ ಸಂಸ್ಥೆಗೆ ಹೋಗಿ ಮ್ಯಾನೇಜರ ಮೊಹತಾರನ್ನು ಕಾಣಲಾಗಿ, ಅವರು ಆತನ ಕ್ರೀಡಾಸಕ್ತಿಯ ಬಗ್ಗೆ ವಿಚಾರಿಸಿ, ಆತನಿಂದಲೇ ಅರ್ಜಿ ಬರೆಸಿಕೊಂಡ ಮರುದಿನದಿಂದ ಕೆಲಸಕ್ಕೆ ಬರಲು ಹೇಳಿದರು.


ಮರುದಿನ ಮತ್ತೆ ಕಚೇರಿಗೆ ಹೊರಟು ನಿಂತಾಗ ಬಂತು ಮಾವನ ಎಚ್ಚರಿಕೆ. 'ಆಫೀಸಿನಲ್ಲಿ ನಾನು ನಿನ್ನ ಮಾವ ಎಂದು ಯಾರಿಗೂ ಗೊತ್ತಾಗಬಾರದು.'

ಜವಾನ ಸಂಜೀವ ಅಚ್ಚುಕಟ್ಟಾಗಿ ಕೆಲಸ ಮಾಡುತ್ತ, ಕೆಲಸದ ಅವಧಿ ನಂತರ ಸಂಜೆಯಲ್ಲಿ ಮೊಹತಾರ ಕ್ರಿಕೆಟ ಆಸಕ್ತಿಯನ್ನು ತಣಿಸುತ್ತ ಅವರ ವಿಶ್ವಾಸ ಸಂಪಾದಿಸಿದ. ಮನೆಯಲ್ಲಿ ಮಾವಿಯ ಎದ್ದಲಗಾಟ ಸುರುವಾಯಿತು. ಮನೆ ಚಿಕ್ಕದು, ನಿನಗೆ ನೌಕರಿ ಆಗಿದೆ, ಬೇರೊಂದು ಕೋಣೆ ಹುಡುಕಿಕೊ ಎಂದು. ಸಂಜೀವ ತನ್ನ ಸಂಕಟವನ್ನು ಮೊಹತಾರೆದುರು ತೋಡಿಕೊಂಡಾಗ, ಶಾಲಾವಕಾಶದಲ್ಲಿ ಜವಾನರ ಕ್ವಾರ್ಟರ್ಸದಲ್ಲಿ

ಅಂದೇ ರಾತ್ರಿ ಸಂಜೀವ ಬಂದು ಮಾವನಿಗೆ ಹೇಳಿದ, "ಮಾವ, ನನ್ನ ಮನೆ ಸಾಕಷ್ಟು ದೊಡ್ಡದಾಗಿದೆ. ನೀವೆಲ್ಲ ಅಲ್ಲೇ ಬರಬಹುದಲ್ಲ" ಎಂದು. ಆದರೆ ಜಗನ್ನಾಥ ಆತನ ಮನೆಗೆ ಹೋಗಲಿಲ್ಲ. ಏನು ಮಾತ್ಸರ್ಯವೊ? ಮತ್ತೇನು ಕಾರಣವೊ ?

ಸಂಜೀವ ತಾಯಿಗೆ ಓಲೆ ಬರೆದು ತನಗೆ ನೌಕರಿಯಾದ ಸುದ್ದಿ ತಿಳಿಸಿದ್ದ. ಮೊದಲನೆ ಸಂಬಳ ಬಂದ ಕೂಡಲೆ ಪೆರೇರಾರಿಗೆ ಅವರ ೫೦ ರೂ. ಗಳನ್ನು ಹಿಂತಿರುಗಿಸಲು ಹೋದಾಗ, "ನನಗೆ ಹಣ ಬೇಡ, ನಿನಗೆ ಪ್ರಸಂಗದಲ್ಲಿ ಅನುಕೂಲವಾಯಿತಲ್ಲ ಅಷ್ಟೇ ಸಾಕು." ಎಂದು ಹಣ ಆತನಿಗೇ ಹಿಂತಿರುಗಿಸಿದರು. ಸಂಜೀವ ಅವರಿಗೂ, ಸದಾನಂದನ ಮನೆಯವರಿಗೂ ಮಾವನ ಮನೆಯವರಿಗೂ ಸಿಹಿ ತಿಂಡಿ ಮುಟ್ಟಿಸಲು ಮರೆಯಲಿಲ್ಲ.

ಸಂಜೀವ ತನಗೆ ದೊರೆತ ಅವಕಾಶ ಚನ್ನಾ



ಗಿಯೆ ಉಪಯೋಗಿಸಿಕೊಂಡ. ನೌಕರಿಯನ್ನು ಸಂಬಾಳಿಸಿ ಮ್ಯಾಟ್ರಿಕ್ ಪರೀಕ್ಷೆ ದಾಟಿ ಕಾಲೇಜ ಕಟ್ಟೆ ಹತ್ತಿದ. ಸದಾನಂದನ ಮನೆಯಲ್ಲಿಯೂ ಸಲುಗೆ ಬೆಳೆಯುತ್ತಿತ್ತು. ಈತನ ವಿನಮ್ರ ವರ್ತನೆಯಿಂದ ಸದಾನಂದನ ತಾಯ್ತಂದೆಗಳು ಶಾರದಕ್ಕ–ಶ್ರೀನಿವಾಸರು– ತುಂಬ ಸಂತುಷ್ಟರಾಗಿದ್ದರು. 'ಸುಖ ಬರುವಾಗ ಗುಳೆ ಎತ್ತಿ ಬರುವದು' ಎಂಬಂತೆ ಸಂಜೀವ ಬಿ. ಎ. ಉತ್ತೀರ್ಣನಾದ. ಆತನಿಗೆ ಕ್ಲಾರ್ಕ ಹುದ್ದೆಗೆ ಬಡತಿ ದೊರೆಯಿತು.

ಸಂಜೀವನ ಏಳಿಗೆಯನ್ನು ಗಮನಿಸುತ್ತಿದ್ದ ಶ್ರೀನಿವಾಸ–ಸದಾನಂದರು ತಮ್ಮ ಸಂಧ್ಯೆಯನ್ನು ಸಂಜೀವನಿಗೆ ಕೊಟ್ಟು ಲಗ್ನ ಮಾಡಬಹುದು ಎಂದು ಎಣಿಕೆ ಹಾಕಿದರು. ಹಿರಿಯರಾದ ಶ್ರೀನಿವಾಸರು ಈ ವಿಷಯ ಸಂಜೀವನೊಂದಿಗೆ ಪ್ರಸ್ತಾಪಿಸಿದರು ಕೂಡ. ಆದರೆ ಸಂಜೀವ ಸದಾನಂದನನ್ನು ಕಳಿಸಲು ಕೇಳಿಕೊಂಡ.

ಸದಾನಂದನೊಡನೆ ಸಂಜೀವ ತನ್ನ ಪೂರ್ವಾಪರವನ್ನೆಲ್ಲ ಹೇಳಿಕೊಂಡ. ಸದಾನಂದ ಇದೆಲ್ಲವನ್ನೂ ತಂದೆಗೆ ತಿಳಿಸುವದಾಗಿಯೂ ಕೊನೆಯ ನಿರ್ಣಯ ಅವರಿಗೆ ಬಿಡುವದಾಗಿಯೂ ಹೇಳಿದ. ಸಂಜೀವನಿಗೆ ಈಗಾಗಲೇ ವಿವಾಹವಾಗಿರುವ ವಿಷಯ ತಿಳಿದು ತಾಯಿ ಶಾರದಕ್ಕ ನಿರುತ್ಸಾಹಗೊಂಡಳು. ಸಂಧ್ಯಾಳಿಗೆ ಸಂಜೀವನ ಮೇಲಿರುವ ಆಸಕ್ತಿ ಗಮನಿಸಿದ ತಂದೆ ಶ್ರೀನಿವಾಸ ಬಕ್ಕಪಟ್ಟಣದ ತನ್ನ ಸ್ನೇಹಿತರಿಂದ ಸತ್ಯಸಂಗತಿ ತಿಳಿದು ನಿರ್ಣಯ ಕೈಕೊಳ್ಳುವದಾಗಿ ಹೇಳಿದ. ಕೊನೆಗೂ ಸಂಧ್ಯಾ ಸಂಜೀವರ ವಿವಾಹ ನಿಶ್ಚಿತಾರ್ಥ ನಡೆದೇ ಬಿಟ್ಟಿತು.

ಇತ್ತ ಕನಕಂಪಾಡಿಯಲ್ಲಿ ಹಂಸಾ ಸಂಜೀವನ ಪ್ರಗತಿಯ ಸುದ್ದಿಗಳನ್ನು ಕೇಳುತ್ತಲೇ ಇದ್ದರೂ ತಾಯಿಯ ದಬ್ಬಾಳಿಕೆಯಿಂದಾಗಿ ತನ್ನ ಮನೋಗತವನ್ನು ತಿಳಿಸಲೂ ಹೆದರುತ್ತಿದ್ದಳು. ತನ್ನ ಗಂಡನ ಕಡೆಗೆ ಹೋಗಬೇಕೆಂದು ಆಕೆಗೆ ಅನಿಸಿದರೂ ಆ ಸ್ವಾತಂತ್ರ್ಯ

ಮರುಮದುವೆ ಮಾಡಬೇಕು ಎಂಬ ಸೋಮಕ್ಕನ ಅಬ್ಬರಕ್ಕೆ ಬೇಸತ್ತು ಹಂಸಾ ಒಂದಿನ ಕಡಲಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದಾಗ ತಂದೆಯ ಕೈಗೆ ಸಿಕ್ಕು ಬಿದ್ದು ಈಗಂತೂ ಕೈದಿಯಾದಂತಾಗಿದ್ದಳು. ಮಂಕಾಗಿದ್ದಳು.

*

ಗೌರಿ ಮರಕಾಲ್ತಿಯ ಚಾಡಿ ಪ್ರಚಾರ ಸಾಗಿಯೇ ಇತ್ತು. ಆಕೆ ಕೆಲವರನ್ನು ಕಟ್ಟಿಕೊಂಡು ಬಂದು ಬಾಬೂ ಗುರಿಕಾರನಲ್ಲಿ ಹೋಗಿ ಪದ್ಮಾಳ ಚಟುವಟಿಕೆಗಳನ್ನು ಅತಿರಂಜಿಸಿ ಬಣ್ಣಿಸಿ ಆಕೆಗೆ ಬಹಿಷ್ಕಾರ ಹಾಕಬೇಕು ಅಂದಳು. ಮರಕಾಲ್ತಿಯರು ಪೇಟೆಯಲ್ಲಿ ವ್ಯವಹರಿಸಲು ಸಂಗಮವಾದೀತು ಎಂದು ದೊಂದೆ ಬಿಚ್ಚಿಬಿಟ್ಟಿದ್ದಳು. ಆತ ಪದ್ಮಳ ತಾಯಿಯನ್ನು ಕಂಡು ತಿಳಿಹೇಳುವದಾಗಿ ನುಡಿದು ಅವರನ್ನು ಸಮಾಧಾನ ಮಾಡಿ ಕಳಿಸಿದ. ಹಾಗೆ ಬಾಬೂ ಗುರಿಕಾರ ಸೀತಕ್ಕನಿಗೆ ಎಲ್ಲ ಸಮಾಚಾರ ತಿಳಿಸಿ ಮಗಳು ಪದ್ಮಾಳ ಮದುವೆ ಆದಷ್ಟು ಬೇಗ ಮುಗಿಸಬೇಕಾಗಿ ಸೂಚಿಸಿದ.

ಹೆಂಡತಿ ಸೀತಕ್ಕನಿಂದ ಸೂಚನೆ ಪಡೆದ ಭೈರ ಗುರಿಕಾರ ಮಂಜು ಗುರಿಕಾರನೊಂದಿಗೆ ಪುರಂದರನ ಮನೆಗೆ ಬಂದು ಮದುವೆಯ ದಿನ ನಿರ್ಧರಿಸುವ ಮಾತುಕತೆ ಪ್ರಸ್ತಾಪಿಸಿದಾಗ, ಪುರಂದರ ಖುದ್ದಾಗಿ ತನಗೆ ಈ ಮದುವೆ ಕೂಡದು, ನಿಮ್ಮ ಮಗಳ ಜಾತಕ ಹದಿನಾಲ್ಕು ಪಟ್ಟಣಗಳಿಗೆ ಜಾಹೀರಾಗಿದೆ ಎಂದು ಕಾರಿಕೊಂಡ.

ಭೈರ ಗುರಿಕಾರ ಅದೇನು ಸಂಗತಿ ತಿಳಿಯಬೇಕು ಅಂದಾಗ, ಅನಿವಾರ್ಯವಾಗಿ ಮಂಜು ಗುರಿಕಾರ ಪದ್ಮಾಳ ಬಗೆಗೆ ಹರಡಿದ ಕತೆಯನ್ನು ತಿಳಿಸಬೇಕಾಯಿತು. ತನ್ನ ಮಗಳು ಮಾಪಿಳ್ಳೆಯೊಡನೆ ಸಂಬಂಧ ಇಟ್ಟುಕೊಂಡಿರುವ ಸುದ್ದಿ ಕೇಳಿ ಭೈರ ಕೆಂಡವಾದ. ಮಗಳನ್ನು ಸಿಗಿದು ಹಾಕಿಬಿಡುತ್ತೇನೆ ಎಂದು ಅಲ್ಲಿಂದ ಸಿಟ್ಟಿನಲ್ಲೇ ಹೊರಟು ತನ್ನ ಮನೆಗೆ

ಬಂದವನೇ ಪದ್ಮಾ ಎಲ್ಲಿ ಎಂದು ಹೆಂಡತಿ ಸೀತಕ್ಕನನ್ನು ಕೇಳಿದ. ಗಂಡನ ಕೋಪಾಟೋಪ ನೋಡಿ, ನಡೆದಿರಬಹುದಾದ ಸಂಗತಿನಲ್ಲಿ ಊಹಿಸಿ, ಈಗ ಮಗಳು ಇವನ ಕಣ್ಣಿಗೆ ಬಿದ್ದರೆ ಕೊಂದೇ ಹಾಕುತ್ತಾರೆ ಎಂದು ಹೆದರಿದಳು. ಪದ್ಮಾ ಮನೆಯಲ್ಲಿಲ್ಲ ಎಂದು ಹೇಳಿದಳು.

ಭೈರ ಬುಟ್ಟಿ ಹೊತ್ತಿಸಿ ವಿಶ್ರಮಿಸುತ್ತಿದ್ದಾಗ ಸೀತಕ್ಕ ಮೆಲ್ಲಗೆ ಹೊರಬಿದ್ದು ಪೇಟೆಯ ಕಡೆಗೆ ಸಾಗಿದ್ದಳು. ತುಸು ದೂರದಲ್ಲಿಯೆ ಪದ್ಮಾ ತಲೆಯ ಮೇಲೆ ಬುಟ್ಟಿ ಹೊತ್ತು ಬರುತ್ತಿರುವದು ಕಾಣಿಸಿತು. ಆಕೆ ಸಮೀಪ ಬಂದೊಡನೆ

"ಪದ್ಮಾ, ಇಂದು ನೀನು ಮನೆಗೆ ಬರಬೇಡ. ರಾತ್ರಿ ಎಲ್ಲಿಯಾದರೂ ಕಳೆದು ನಾಳೆ ಬಾ. ನಿನ್ನ ತಂದೆ ನಿನ್ನ ಬಗ್ಗೆ ಕೆಂಡವಾಗಿ ಬಂದಿದ್ದಾರೆ," ಎಂದಳು.

"ಎಲ್ಲಿ ಹೋಗಲಿ, ಈ ರಾತ್ರಿಯಲ್ಲಿ?"

"ಎಲ್ಲಿಯಾದರೂ ನಮ್ಮವರ ಮನೆಯಲ್ಲಿದ್ದು ಬಾ. ಈಗ ಬಂದರೆ ನಿನ್ನನ್ನು ಸಿಗಿದು ಹಾಕಿಬಿಡುತ್ತಾರೆ," ಎಂದು ಪದ್ಮಾಳ ತಲೆ ಮೇಲಿನ ಬುಟ್ಟಿಯನ್ನು ಇಸಿದುಕೊಂಡು ದುರುದುರನೆ ಹೋಗಿ ಬಿಟ್ಟಳು.

ಪದ್ಮಾ ಆ ರಾತ್ರಿ ಎಲ್ಲಿ ಹೋಗಬೇಕು?

ಗೌರಿ ಮರಕಾಲ್ದಿ ಮತ್ತವಳ ಬೆಂಬಲಿಗರ ಚಾಡಿಯ ಪ್ರಚಾರದಿಂದ ಪದ್ಮಾ ತನ್ನ ಕುಲದವರ ಬಗೆಗೇ ರೋಸಿ ಹೋಗಿದ್ದಳು ತಾನು ಹಸನಬ್ಬನೊಡನೆ ವಿಶ್ವಾಸದಿಂದ ಇದ್ದದ್ದು ತಪ್ಪೇ? ಇವರ ವಿವೇಕವೆಲ್ಲ ಹಾಳಾಯಿತೆ. ಎಲ್ಲಿಗೆ ಹೋಗಬೇಕು ಎಂದುಕೊಳ್ಳುತ್ತಿದ್ದಾಗ ಐದ್ರೋಸ ಬ್ಯಾರಿಯು ನೆನಪಾಯಿತು.

ಪದ್ಮಾಳಿಗೆ ಐದ್ರೋಸಬ್ಯಾರಿಯು ನೆನಪು ಬಂದುದು ಆಕಸ್ಮಿಕವೇನಲ್ಲ. ತನ್ನ ಸಮಾಜದ ಬಗ್ಗೆ ಆಕೆಗೆ ರೋಷವೇ ಉಂಟಾಗಿತ್ತು. ಅದು ಮೊದಲು ತನ್ನನ್ನು ಹಸನಬ್ಬನೊಡನೆ ತಳಕು ಹಾಕಿತು. ತನ್ನ ವಿವಾಹಕ್ಕೆ ಆತಂಕ ತಂದೊಡ್ಡಿತು. ಗುರಿಕಾರರಲ್ಲಿ ತನ್ನ ವಿರುದ್ಧ ದೂರು ಒಯ್ದಿತು. ಬಹಿಷ್ಕಾರ ಹಾಕುವ [illegible] ಹಾಗೇನಾದರೂ ಸಮಾಜದಿಂದ ಸಾರಾಸಾರ ವಿಚಾರವಾಗದೆ ತನಗೆ ಬಹಿಷ್ಕಾರ ಬಿದ್ದುದೇ ಆದರೆ, ಸಮಾಜ ತನ್ನ ಪಾಡು ನಾಯಿ ಪಾಡು. ಇದಕ್ಕಿಂತ ತಾನೇ ಸಮಾಜವನ್ನು ಬಹಿಷ್ಕರಿಸಿದರೆ ಹೇಗೆ ಎಂಬ ವಿಚಾರಚಕ್ರ ಆಕೆಯ ಮನಸ್ಸಿನಲ್ಲಿ ತಿರುಗಹತ್ತಿದ್ದರಿಂದಲೇ ಆಕೆಗೆ ಐದ್ರೋಸ ಬ್ಯಾರಿಯ ನೆನಪಾಯಿತು.

ಪದ್ಮಾ ಐದ್ರೋಸ ಬ್ಯಾರಿಯ ಕೋಣೆ ಹೊಕ್ಕಾಗ ಹಸನಬ್ಬನೂ ಅಲ್ಲಿಯೇ ಇದ್ದ. ಹಠಾತ್ತಾಗಿ ಬಂದ ಈಕೆಯನ್ನು ಕಂಡು ಆತನಿಗೆ ಅಚ್ಚರಿ.

"ಯಾಕೆ ಪದ್ಮಾ! ಎಷ್ಟೊಂದು ಇಳಿದು ಹೋಗಿರುವೆ? ಮೈಯಲ್ಲಿ ಹುಷಾರಿಲ್ವೇ?"

"ನಾನು ಉಳಿಯುವದೇ ಸಂದೇಹ ಹಸನಬ್ಬ."

"ಅಂದರೆ...ಮೊದಲು ಕುಳಿತುಕೋ."

"ನೀನು ನನ್ನನ್ನು ಮರೆತಿದ್ದೀಯೋ ಇಲ್ಲವೋ?"

"ಒಂದು ದೃಷ್ಟಿಯಿಂದ ಮರೆತಿದ್ದೇನೆ ಆದರೆ ನಿನ್ನ ಉಪಕಾರ ಹೇಗೆ ಮರೆಯಲಿ"

"ನಿನ್ನ ದೆಸೆಯಿಂದಾಗಿ ನನ್ನ ಜಾತಿ ಈಗ ನನ್ನನ್ನು ದ್ವೇಷಿಸುತ್ತಿದೆ. ಈಗ ಮನೆಗೆ ಹೋದರಂತೂ ನನ್ನ ತಂದೆ ನನ್ನನ್ನು ಕಡಿದು ಕೊಲ್ಲುತ್ತಾರೆ."

"ಹಾಗೇನೂ ಅನಾಹುತ ಮಾಡಿಕೊಳ್ಳಬೇಡ. ನಿನ್ನ ಜಾತಿಯವರು ನಿನ್ನನ್ನು ಹೊರದಬ್ಬಿದರೆ ನಾನಿದ್ದೇನೆ."

"ಈಗ ನಡೆದದ್ದಾದರೂ ಏನು?" ಎಂದು ಐದ್ರೋಸು ಬ್ಯಾರಿ ಕೇಳಿದ.

ಪದ್ಮಳಿಗೆ ಅಳು ಬಂದು ಬಿಟ್ಟಿತು. ವೃತ್ತಾಂತವನ್ನೆಲ್ಲ ಸಾದ್ಯಂತವಾಗಿ ನಿವೇದಿಸಿದಳು.

"ಏನು ನೋಡುತ್ತೀಯಾ? ಹುಡುಗಿ ನಿನ್ನನ್ನೇ ನಂಬಿಕೊಂಡು ಬಂದಿದೆ. ಮನೆಗೆ ಕರೆದುಕೊಂಡು ಹೋಗುತ್ತೀಯೋ? ಏನು ಹಿಂದಕ್ಕೆ ಅಟ್ಟುತ್ತೀಯೋ?" ಎಂದ ಐದ್ರೋಸ.

"ಶಾಕೆ, ನಾನು ಸಂತೋಷದಿಂದಲೇ ಈಕೆ

ಯನ್ನು ಕರೆದುಕೊಂಡೇ ಹೋದೇನು ಆದರೆ ಪರಿಣಾಮ?"

"ಏನಾಗುತ್ತೆ? ನಾಲ್ಕು ಜನ ಮರಕಾಲರು ಬಂದು ಗಲಾಟೆ ಮಾಡಿಯಾರು? ಇಲ್ಲವೆ ಈಕೆಗೆ ಬಹಿಷ್ಕಾರ ಹಾಕಿ ತೆಪ್ಪಗಿದ್ದಾರು. ಈಗ ನೀನು ಈಕೆಯನ್ನು ಕರೆದುಕೊಂಡು ಹೋದರೆ ಗುಂಪಾಗುತ್ತಿ; ಇಲ್ಲದಿದ್ದರೆ..."

"ನಾನು ಮನೆಗೆ ಕರೆದುಕೊಂಡು ಹೋಗಬಲ್ಲೆ. ಆದರೆ ನೀನು ಒಮ್ಮೆ ನಮ್ಮ ಜಾತಿಗೆ ಮತಾಂತರಗೊಂಡ ಮೇಲೆ ತಂದೆ-ತಾಯಿಗಳ ಆಸೆ ಬಿಡಬೇಕಾಗುತ್ತದೆ."

"ನಾನೀಗ ಎಲ್ಲ ಆಸೆಗಳನ್ನು ಬಿಟ್ಟೇ ಬಂದಿದ್ದೇನೆ. ನನಗೆ ನನ್ನ ಜಾತಿಯ ಮೇಲೆ ದ್ವೇಷ. ಅದನ್ನು ತೀರಿಸಿಕೊಳ್ಳುವ ಆಸೆ. ನೀನು ಪೂರೈಸಿ ಕೊಡಬೇಕು" ಎಂದು ಪದ್ಮಾ ಗೋಗರೆದಳು.

ಹಸನಬ್ಬ ಪದ್ಮಾಳನ್ನು ಜೊತೆಗೆ ಐದ್ರೋಸು ಬ್ಯಾರಿಯನ್ನೂ ಕರೆದುಕೊಂಡು ಉಳ್ಳಾಲದ ತನ್ನ ಮನೆಗೆ ಬಂದ. ಪದ್ಮಾಳನ್ನು ಮನೆಯಲ್ಲಿ ಬಿಟ್ಟು, ಆಕೆಯನ್ನು ಚನ್ನಾಗಿ ನೋಡಿಕೊಳ್ಳಲು ತನ್ನ ತಾಯಿಗೆ ಹೇಳಿದ. ತಾವು ತಂದ ಟ್ಯಾಕ್ಸಿಯಲ್ಲೇ ಐದ್ರೋಸು ಬ್ಯಾರಿ ಜೊತೆಗೆ ತಮ್ಮ ಜಾತಿಯ ಹತ್ತಾರು ಪ್ರಮುಖರ ಮನೆಗಳಿಗೆ ತೆರಳಿ ತಾನು ಒಂದು ಹೆಣ್ಣನ್ನು ತಂದಿರುವದಾಗಿಯೂ ನಾಳೆ ಪ್ರಸಂಗ ಬಿದ್ದರೆ ಪ್ರಾಣಕ್ಕೆ ಪ್ರಾಣ ಕೊಡಬೇಕು ಎಂದೂ ವಿನಂತಿಸಿಕೊಂಡು ಬಂದ.

ಬೆಸ್ತರು-ಮಾಪ್ಪೈಗಳ ನಡುವೆ ಹೆಣ್ಣಿಗಾಗಿ ಆಗೀಗ ಘರ್ಷಣೆ ನಡೆಯುತ್ತಿರುತ್ತವೆ. ಈಗಂತೂ ಹಸನಬ್ಬ ಪದ್ಮಾಳನ್ನು ಮತಾಂತರಿಸಿ ವಿವಾಹವಾಗಲಿದ್ದ. ಮರುದಿನ ಬೆಳಿಗ್ಗೆ ಮಾಪ್ಪೈ ತರುಣರೆಲ್ಲ ಸಾಯುಧರಾಗಿ ಹಸನಬ್ಬನ ಮನೆಗಳಲ್ಲಿ ಅಡಗಿ ಕುಳಿತಿದ್ದರು. ಮರಕಾಲರು ಉದ್ರಿಕ್ತರಾಗಿ ಅಲ್ಲಿಯವರೆಗೆ ಬರಬಹುದೆಂಬ ನಿರೀಕ್ಷೆಯಲ್ಲಿದ್ದರು. ಪದ್ಮಾಳನ್ನು ಮತಾಂತರಿಸುವ ಸಿದ್ಧತೆ ನಡೆಯುತ್ತಿತ್ತು.

ರಾತ್ರಿ ಕಾಣದಂತಾದ ಪದ್ಮಾ ಮರುದಿನ

ವೀರರು ಆಕೆಗಾಗಿ ಹುಡುಕಾಡಹತ್ತಿದರು. ಆಕೆ ನಿನ್ನೆ ರಾತ್ರಿ ಐದ್ರೋಸು ಬ್ಯಾರಿಯ ಕೋಣೆಗೆ ಹೋಗಿದ್ದಾಗಿ ಯಾರೊ ಹೇಳಿದರು. ಅಲ್ಲಿ ಹೋಗಿ ನೋಡಿದರೆ ಆತನ ಕೋಣೆಗೆ ಇಡೀ ದಿನ ಕೀಲಿಯಿತ್ತು. ಮರಕಾಲರು ಊಹಿಸಬೇಕಾದದ್ದನ್ನು ಊಹಿಸಿ ಉಳ್ಳಾಲಕ್ಕೆ ಡೋಣಿ ಬಿಟ್ಟರು. ಅವರಿಗೆ ನಾಯಕ ಪುರಂದರ. ಭೈರ, ಸೀತಕ್ಕ ಅಂತೂ ಕಂಗಾಲಾಗಿ ಮುಂಗಾಣದೆ ಕುಳಿತಿದ್ದರು.

ಪುರಂದರ ಹಸನಬ್ಬನ ಮನೆಗೆ ತನ್ನ ತಂಡದೊಂದಿಗೆ ಬಂದು ಅಲ್ಲಿ ಹೊರಗಿದ್ದವರನ್ನು "ನಮ್ಮ ಜಾತಿಯ ಹೆಣ್ಣನ್ನು ಹಾರಿಸಿಕೊಂಡು ಬಂದಿದ್ದೀರಿ. ಸುಮ್ಮನೆ ಒಪ್ಪಿಸಿರಿ. ಇಲ್ಲದಿದ್ದರೆ ರಕ್ತದ ಓಕುಳಿ ಹರಿದೀತು" ಎಂದು ಕಾಲು ಕೆದರಿ ಜಗಳ ಪ್ರಾರಂಭಿಸಿದ ಕೂಡಲೆ, ಮಾಪ್ಪೈ ತರುಣರೂ.

"ನಿಮ್ಮ ಹುಡುಗಿ ತಾನಾಗಿ ಬಂದಿದ್ದಾಳೆ. ನಾವೇನೂ ಕದ್ದು ತಂದಿಲ್ಲ" ಎಂದುತ್ತರಿಸಿದರು.

"ಹೊಡೆಯಿರೊ ರಂಡೇಮಕ್ಕಳಿಗೆ" ಎಂದು ಬೊಬ್ಬೆ. ಅವರಿಗೆ ಕೈಗೆ ಕೈ ಹತ್ತಿ ಹೊಡೆದಾಟ ಬಡಿದಾಟ ನಡೆದವು. ಮಾಪ್ಪೈಗಳು ಹೆಚ್ಚು ಹೆಚ್ಚಾಗಿ ಬರಹತ್ತಿದ್ದರಿಂದ ಪುರಂದರನೂ ಆತನ ಗುಂಪಿನವರೂ ಕಾಲಿಗೆ ಬುದ್ಧಿ ಹೇಳಿದರು. ಈ ಘರ್ಷಣೆಯ ಸುದ್ದಿ ಮಂಗಳೂರು ತಲುಪಿ ಸಂಜೆಯೊಳಗಾಗಿ ಉಳ್ಳಾಲ ಪೇಟೆ ತುಂಬ ಪೋಲೀಸರೇ ತುಂಬಿದರು.

ಹೊರಗೆ ಇಷ್ಟೆಲ್ಲ ಹಗರಣ ನಡೆಯುತ್ತಿರುವಾಗಲೇ ಒಳಗೆ ಪದ್ಮಾ ಬೀಪಾತುಮ್ಮಾ ಆಗಿ ಪರಿವರ್ತಿತಳಾಗಿದ್ದಳು.

ಇತ್ತ ಮೊಗವೀರರು ತಮ್ಮ ಗುರಿಕಾರರ ಸಭೆ ಸೇರಿಸಿ ಪದ್ಮಾ ಹಾಗೂ ಆಕೆಯ ತಾಯ್ತಂದೆಗಳ ಮೇಲೆ ಬಹಿಷ್ಕಾರ ಹಾಕಬೇಕೆಂದು ಚರ್ಚಿಸಿದರೂ, ಪದ್ಮಾ ಜಾತಿಯಿಂದ ಹೋಗಿ ಬಿಟ್ಟಿರುವದರಿಂದ ಆಕೆಗೆ ಬಹಿಷ್ಕಾರ ಹಾಕಿ ಪ್ರಯೋಜನವಿಲ್ಲ ಅಲ್ಲದೆ ಆಕೆಯ [illegible]

ಅಭಿಪ್ರಾಯಕ್ಕೆ ಬಂದರು. ಹೀಗಾಗಿ ಭೈರನ ಗುರಿಕಾರನ ಸ್ಥಾನ ಉಳಿದುಕೊಂಡಿತು.

ಕಡಲಕರಾವಳಿಯಲ್ಲಿ ಹಕ್ಕಿಯ ಹಾಗೆ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಪದ್ಮ ಉರ್ಫ್ ಬೀಪಾತುಮ್ಮ ಈಗ ಮನೆಯ ಹೊರಗಡೆ ಕಾಲಿಡುವಂತಿಲ್ಲ. ಮೀನಗಳ ಒಡನಾಟದಲ್ಲಿ ಕಾಲ ಕಳೆದಿದ್ದ ಆಕೆಗೆ ಇಂದು ಕೋಳಿ ಕುರಿಗಳೇ ಸಂಗಾತಿಗಳು. ಆದರೆ ಹಸನಬ್ಬನ ಮುಖ ನೋಡಿ ಆಕೆ ಎಲ್ಲವನ್ನೂ ಸಹಿಸುತ್ತಿದ್ದಳು. ಹಸನಬ್ಬನಿಗೂ ಮೀನು ವ್ಯಾಪಾರದ ಗುಟ್ಟು ಕರಗತವಾಗಿತ್ತು. ತಾನು ಸಂಪಾದಿಸಿದ ಲಾಭದ ಹಣದಿಂದ ಒಂದಿಷ್ಟು ಚಿನ್ನದ ಆಭರಣಗಳನ್ನು ಬೀಪಾತುಮ್ಮನಿಗೆ ಮಾಡಿಸಿ ಹಾಕಿದ್ದ. ಆದರೂ ಆಕೆಗೆ ಆಗಾಗ ತಾಯಿಯ ನೆನಪು ಬರುವದು. ತನ್ನನ್ನು ಬೀಳ್ಕೊಂಡ ದೃಶ್ಯವಂತೂ ಆಕೆಯ ಕಣ್ಣಿಗೆ ಕಟ್ಟಿದಂತಿತ್ತು. ಈಕೆಯ ಕೊರಗನ್ನು ಮರೆಸಲೆಂಬಂತೆ ಸುಕುಮಾರನೊಬ್ಬ ಜನಿಸಿ ಬಂದ. ಹಸನಬ್ಬನ ವ್ಯಾಪಾರವೂ ಚನ್ನಾಗಿ ಸಾಗಿತ್ತು. ಆದರೆ ಜೀವನದಲ್ಲಿ ಏರಿಳಿತಗಳು ಇರಲೇಬೇಕಲ್ಲ. ಹಸನಬ್ಬನಿಗೆ ಬೀಪಾತುಮ್ಮ ಎರಡನೇ ಗಂಡು ಮಗುವನ್ನು ನೀಡಿದ ದಿನದಿಂದ ಆತನ ವ್ಯಾಪಾರದಲ್ಲಿ ಮುಗ್ಗಟ್ಟು ಉಂಟಾಯಿತು. ಆದರೂ ದೂರದ ಸ್ಥಳಗಳಿಗೆ ಐದ್ರೋಸ್ ಬ್ಯಾರಿಯ ಲಾರಿ ಕೊಂಡೊಯ್ದು ಮಂಗಳೂರಿಗೆ ಮೀನು ತಂದು ಮಾರುತ್ತ ಜೀವನ ಸಾಗಿಸಿದ್ದ.

ಒಂದಿನ ಮಲ್ಪೆಯಿಂದ ಮೀನು ಹೇರಿಕೊಂಡು ರಾತ್ರಿ ಉಳ್ಳಾಲಕ್ಕೆ ಹೊರಟ ಹಸನಬ್ಬ. ಆದರೆ ಡ್ರಾಯವ್ಹರನ ಪ್ರಚೋದನೆಗೆ ಒಳಗಾಗಿ ಆತ ಅಲ್ಲೇ ಊಟ ಮುಗಿಸಿ ಕಂಠಪೂರ್ತಿ ಮದ್ಯಪಾನ ಮಾಡಿ ಹೊರಟ. ಡ್ರಾಯವ್ಹರನೂ ಪೂರ್ತಿ ಕುಡಿದದ್ದರಿಂದ ದಾರಿಯಲ್ಲಿ ಪಾಂಗಾಳ ಸೇತುವೆಯ ಹತ್ತರ ಎದುರಿಗೆ ಬಂದ ಕಾರ್ ಒಂದನ್ನು ತಪ್ಪಿಸಲು ಹೋಗಿ ಲಾರಿಯನ್ನು ಹಳ್ಳಕ್ಕಿಳಿಸಿಬಿಟ್ಟ.

ಈ ಅಪಘಾತದಲ್ಲಿ ಕ್ಲೀನರ್ ಸತ್ತು ಡ್ರಾಯವ್ಹರ್ ಮತ್ತು ಹಸನಬ್ಬ ಉಳಿದುಕೊಂಡರು. ಹಸನಬ್ಬ ಎರಡು ವಾರ ಕಾಲ ಆಸ್ಪತ್ರೆಯಲ್ಲಿರಬೇಕಾಯಿತು. ಆ ಲಾರಿ ಐದ್ರೋಸ ಬ್ಯಾರಿಯದಾಗಿದ್ದರಿಂದ ಆತನೇ ಪೋಲೀಸರಲ್ಲಿಗೆ ಓಡಾಡಿ ತನ್ನ ಮುರಿದು ಬಿದ್ದ ಲಾರಿಯನ್ನು ಬಿಡಿಸಿಕೊಂಡು ಬಂದ. ಲಾರಿ ಹಾಳಾಗಿ ಐದ್ರೋಸನಿಗೆ ಉಂಟಾದ ಹಾನಿಯನ್ನು ತಾನು ತುಂಬಿಕೊಡಬೇಕಾದ್ದು ತನ್ನ ಕರ್ತವ್ಯ ಎಂದು ಬಗೆದ ಹಸನಬ್ಬ ತನ್ನ ಹೆಂಡತಿಯ ಮೈಮೇಲೆ ತಾನು ಹಾಕಿದ್ದ ಚಿನ್ನಾಭರಣಗಳನ್ನೆಲ್ಲ ತಂದು ಒಪ್ಪಿಸಿದ. ಐದ್ರೋಸು ಬ್ಯಾರಿ ಮೀನ ಮೇಷ ಮಾಡಿದಂತೆ ತೋರಿಸಿ ಆ ಅಭರಣಗಳನ್ನೆಲ್ಲ ಇಟ್ಟುಕೊಂಡ.

ತಿಂಗಳೊಪ್ಪತ್ತಿನಲ್ಲಿ ಹಸನಬ್ಬ ಹುಷಾರಾದ. ಉದ್ಯೋಗದ ಪ್ರಶ್ನೆ ಧುತ್ತೆಂದು ಎದುರಾಯಿತು. ಮತ್ತೆ ಯಾರ ಕೈಕೆಳಗಾದರೂ ಕೆಲಸಕ್ಕೆ ಹೋಗುವದು ಪ್ರತಿಷ್ಠೆಗೆ ಒಗ್ಗದು. ಐದ್ರೋಸು ಬ್ಯಾರಿಯಲ್ಲಿಗೇ ಸಲಹೆ ಕೇಳಲು ಹೋದ. ಈ ಸಲ ಆತ ಸೂಚಿಸಿದ್ದು ಬೇರೆ ಧಂದೆಯೆ. ಗೋವೆಯಿಂದ ಮದ್ಯದ ಕಳ್ಳ ಸಾಗಾಟ ನಡೆಯುತ್ತಿದೆ. ಅದರಲ್ಲಿ ನೀನೂ ಸೇರಿಕೊಳ್ಳಬಹುದು ಎಂದ. ಹಸನಬ್ಬ ಅನಿವಾರ್ಯವಾಗಿ ಅದಕ್ಕೇ ಅಂಟಿಕೊಂಡ. ಟೊರ್ಪೆಡೊ ಹಡಗದಲ್ಲಿ ಬರುತ್ತಿದ್ದ ಮದ್ಯದ ಶೀಶೆಗಳನ್ನು ಮಚವೆಯಲ್ಲಿ ದಡಕ್ಕೆ ತಂದು, ಗಿರಾಕಿಗಳಿಗೆ ಕಳ್ಳತನದಿಂದ ಮಾರುವದು ಹಸನಬ್ಬನ ದಿನಚರಿಯಾಯಿತು. ಪೋಲೀಸರ, ಅಬಕಾರಿ ಇಲಾಖೆಯವರ ಕಣ್ಣು ತಪ್ಪಿಸಿ ಈ ಕಾಯಕ ನಡೆಯಬೇಕಾದ್ದರಿಂದ ಇದರಲ್ಲೂ ಸಾಕಷ್ಟು ಸಾಹಸ ಇದೆ ಎಂದು ಆತನಿಗೆ ಅನಿಸಿತು.

ಅದೊಂದು ಬೆಳದಿಂಗಳ ರಾತ್ರಿ. ಟೊರ್ಪೆಡೊ ಅಂದು ಮಧ್ಯಾಹ್ನವೇ ಬಂದರನ್ನು ತಲುಪಿದ್ದರೂ ಹಸನಬ್ಬ ತನ್ನ ಕಾಯಕಕ್ಕಾಗಿ ರಾತ್ರಿವರೆಗೂ ಕಾಯಬೇಕಾಯಿತು. ರಾತ್ರಿ ಹತ್ತು ಗಂಟೆಯ ಸುಮಾರಿಗೆ ದೋಣಿಯೊಂದು ಕಂಡಾಗ ಹಸನಬ್ಬ ಆ ದೋಣಿಯವನನ್ನು ಕೂಗಿದ. ಆತ ಬರಲು

ಪ್ರತ್ಯಕ್ಷ ಪರೀಕ್ಷಣಗಳು ಪ್ರಮಾಣಪಡಿಸುತ್ತವೆ...




ರುಚಿ, ವಿಟಮಿನ್‌ಗಳು ಮತ್ತು ಪೋಷಣೆ–
ಇವುಗಳಿಗಾಗಿ ಅಪ್ಪಟ ಬಿಸ್ಕಿಟ್

ಬ್ರಿಟಾನಿಯಾ

ಗ್ಲೂಕೋಸ್-ಡಿ



ತುಲನಾತ್ಮಕ ಪರೀಕ್ಷಣಗಳು ಸಿದ್ಧಪಡಿಸಿವೆ: ಗ್ಲೂಕೋಸ್ ಡಿ ಯಲ್ಲಿ ವಿಟಮಿನ್ ಮತ್ತು ಪೋಷಕಾಂಶಗಳು ಅಧಿಕ ಪ್ರಮಾಣದಲ್ಲಿವೆ. ಮತ್ತು ಅದರ ರುಚಿ, ಸಿಹಿ ಹಾಗೂ ಗರಿಮುರಿತನಕ್ಕಾಗಿ ಜನ ಮೆಚ್ಚುತ್ತಾರೆ.



ಆದ್ದರಿಂದಲೇ ಬೇರೆ ಯಾವುದೇ ಗ್ಲೂಕೋಸ್ ಬಿಸ್ಕಿಟ್‌ಗಿಂತ ಅಧಿಕವಾಗಿ ಬ್ರಿಟಾನಿಯಾ ಗ್ಲೂಕೋಸ್ ಡಿ ಜನರನ್ನು ಆಕರ್ಷಿಸುತ್ತದೆ.

ಬ್ರಿಟಾನಿಯಾ ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ

ಒಪ್ಪಲಿಲ್ಲ. ಮತ್ತಷ್ಟು ಹಣದ ಆಮಿಷ ತೋರಿಸಿ ಆತನನ್ನು ಟೊರ್ಪೆಡೊ ಇದ್ದಲ್ಲಿಗೆ ಒಯ್ದು ಮದ್ಯದ ಶೀಶೆಗಳನ್ನು ಡೋಣಿಯಲ್ಲಿ ತುಂಬಿಕೊಂಡು ದಡಕ್ಕೆ ಬರಲು ಹಿಂತಿರುಗಿದ.

ನಡುದಾರಿಯಲ್ಲೇ ಡೋಣಿಯವ ಟಾರ್ಚ್ ಉರಿಸಿ ನೀರಲ್ಲಿ ನೋಡಿದ. ಹಸನಬ್ಬ ಅದೇನೆಂದು ವಿಚಾರಿಸಲಾಗಿ ಏನೋ ಹೆಣ ಕಂಡಂತಾಯ್ತು, ಬಿದ್ದು ಎಂದು ಉತ್ತರಿಸಿದ. ಅಷ್ಟರಲ್ಲಿ ಸುಂಕದ ಇಲಾಖೆಯವರ ಯಾಂತ್ರಿಕ ಡೋಣಿ ಭರದಿಂದ ಇವರ ಕಡೆಗೇ ಬರಹತ್ತಿತು. ತಾನು ಸಿಕ್ಕುಬಿದ್ದಿರುವದಾಗಿ ಹಸನಬ್ಬನಿಗೆ ಹೊಳೆಯಿತು. ಶೀಶೆಗಳನ್ನು ಒಂದೊಂದಾಗಿ ಕಡಲಿಗೆಸೆಯ ತೊಡಗಿದ.

"ಮಿಸ್ಟರ, ನಿನ್ನ ಆಟ ಏನೂ ನಡೆಯುವುದಿಲ್ಲ. ವ್ಯರ್ಥ ಶೀಶೆಗಳನ್ನು ಏಕೆ ಎಸೆಯುತ್ತಿ" ಎಂದು ಡೋಣಿಯವನೇ ಗದ್ದರಿಸಿದಾಗ ಹಸನಬ್ಬನ ಕೈಕಾಲುಗಳೇ ಹೋದಂತಾದವು. ಇನ್ನು ಅರ್ಧ ಫರ್ಲಾಂಗದಷ್ಟೇ ದೂರ ಇರುವ ದಡ ಸೇರುವದು ಕಠಿಣವಾಗಲಾರದೆಂದು ಹಸನಬ್ಬ ನೀರಿಗೆ ಧುಮುಕಿದ. ಧುಮುಕಿದವ ಮತ್ತೆ ಮೇಲೇಳಲೇ ಇಲ್ಲ.

ಕುಲಗೆಟ್ಟರೂ ಸುಖವಿಲ್ಲದಂತಾಯಿತು. ಪದ್ಮಾಳಿಗೆ, ಅಲ್ಲ ಬೀ ಪಾತುಮ್ಮಾಳಿಗೆ. ಆಕೆಯ ಸ್ಥಿತಿಯನ್ನು ಕಂಡು ಕನಿಕರ ಪಟ್ಟವರೆಂದರೆ ಐದ್ರೋಸು ಬ್ಯಾರಿ ಮಾತ್ರ. ಆತನೇ ಒಂದಿನ ಏನೇನೊ ಯೋಚನೆ ಹಾಕಿ ಪುರಂದರನ ಭೆಟ್ಟಿಗೆ ಹೋದ. ಪದ್ಮಾಳ ಕರುಣಾಜನಕ ಕತೆಯನ್ನು ನಿವೇದಿಸಿದ. ಆಕೆ ಮಾಪ್ಳೆ ಜಾತಿಗೆ ಹೋಂಸಿರಲಿಲ್ಲ. ಆದರೆ ಹಸನಬ್ಬನನ್ನು ಮೆಚ್ಚಿ ನಂಬಿಕೆಟ್ಟಳು. ನೀನಂತೂ ಆಗ ಆಶ್ರಯ ಕೊಡಲಿಲ್ಲ. ಈಗ ಆಕೆ ಎರಡು ಮಕ್ಕಳ ತಾಯಿ, ಗಂಡನನ್ನು ಕಳೆದುಕೊಂಡ ಅನಾಥೆ; ಆಕೆಗೇನಾದರೂ ನಿಮ್ಮ ಜಾತಿಯಿಂದ ಸಹಾಯ ಒದಗೀತೆ ಎಂದು ಕೇಳಿಕೊಂಡ.

"ನಮ್ಮಿಂದ ಏನೂ ಸಹಾಯ ಸಾಧ್ಯವಿಲ್ಲ. ಅವಳ ಕರ್ಮ ಅವಳು ಅನುಭೋಗಿಸುತ್ತಾಳೆ" ಎಂದು ಪುರಂದರ ಖಡಾಖಂಡಿತವಾಗಿ ಹೇಳಿಬಿಟ್ಟ. ಐದ್ರೋಸ್ ಬ್ಯಾರಿ ನಿರಾಶೆಯಿಂದ ಹಿಂತಿರುಗಿದ.

ಮರುದಿನ ಪುರಂದರನೇ ಐದ್ರೋಸನನ್ನು ಹುಡುಕಿಕೊಂಡು ಆತನ ಕೋಣೆಗೆ ಬಂದ. ಪದ್ಮಾಳಿಗೆ ನೆರವಾಗಲು ತನ್ನದೊಂದು ಸೂಚನೆ ಇದೆ ಎಂದ.

"ನೀವು ಕುಸ್ತಿ ಪಂದ್ಯ ಏರ್ಪಾಡು ಮಾಡಿ ಅದರಿಂದ ಬರುವ ಕಲೆಕ್ಶನ್ನಿನಲ್ಲಿ ಎರಡು ಮೂರು ಸಾವಿರ ಉಳಿಸಿ ಪದ್ಮಾಳಿಗೆ ಕೊಟ್ಟರೆ ಆಕೆಗೆ ಪ್ರಯೋಜನಕ್ಕಾದರೂ ಬಂದೀತು".

"ನಿಮ್ಮ ಸಲಹೆ ಚೆನ್ನಾಗಿದೆ, ನೀವು ಕಣಕ್ಕೆ ಇಳಿದರೆ ನಾನೂ ಪ್ರಯತ್ನಿಸೇನು"

"ಛೇ, ಆ ಕೋಲಪ್ಪನ ಮಗ ಭೂಲನ ಕೈಯಿಂದ ಸೋತ ಮೇಲೆ ನಾನು ಕಣಕ್ಕಿಳಿಯಬಾರದು ಎಂತೇ ನಿರ್ಧರಿಸಿಬಿಟ್ಟಿದ್ದೇನೆ"

"ಆದರೆ ನೀವೇ ಕಣಕ್ಕೆ ಇಳಿದರೆ ಚೆನ್ನು. ಕಲೆಕ್ಶನ್ನೂ ಆಗುತ್ತೆ" ಎಂದು ಐದ್ರೋಸು ಆತನನ್ನು ಹುರಿದುಂಬಿಸಿ ಒಪ್ಪಿಸಿದ. ಬೆಂಗಳೂರಿನ ಪ್ರಸಿದ್ಧ ಪೈಲವಾನ ಬೋರನನ್ನು ಆಹ್ವಾನಿಸುವದು ಎಂದೂ ಗೊತ್ತಾಯಿತು. ಕುಸ್ತಿಯ ಉದ್ದೇಶವನ್ನು ಆತನಿಗೆ ಮುಂಚಿತವಾಗಿಯೆ ತಿಳಿಸುವದು ಎಂದೂ ಗೊತ್ತಾಯಿತು.

ಪಂದ್ಯದ ದಿನ ಕುಸ್ತಿ ಚನ್ನಾಗಿ ಕಳೆಕಟ್ಟಿತಾದರೂ ಕೊನೆಗೆ 'ಸಮ ಕುಸ್ತಿ' ಆಯಿತೆಂದು ಬಿಡಿಸಲಾಯಿತು. ಎಲ್ಲ ಖರ್ಚು ಕಳೆದು ಎರಡು ಸಾವಿರ ರೂಗಳ ಉಳಿತಾಯವಾಯಿತು. ಐದ್ರೋಸ ಬ್ಯಾರಿ ಆ ಹಣವನ್ನು ಪದ್ಮಾಳಿಗೆ ಒಯ್ದು ಅರ್ಪಿಸಿದ. ಅದಕ್ಕೆ ಪುರಂದರನ ಬೆವರಿನ ವಾಸನೆಯೂ ಸೇರಿದೆ ಎಂದು ಸಂತೋಷದಿಂದ ಹೇಳಿದ.

ಪದ್ಮ ಬಿಕ್ಕಿ ಬಿಕ್ಕಿ ಅತ್ತಳು.

*

ಕನಕಂಪಾಡಿಯ ಮಾರಿಗುಡಿ ತೀರ ಶಿಥಿಲವಾಗಿತ್ತು. ಅದರ ಜೀರ್ಣೋದ್ಧಾರದ ವಿಚಾರ ಗ್ರಾಮಸ್ಥರಲ್ಲಿ ಮೂಡಿ ಒಂದಿನ ಗ್ರಾಮಸ್ಥರ ಸಭೆ ಕರೆದರು. ದೇವಾಲಯದ ಜೀರ್ಣೋದ್ಧಾರಕ್ಕಾಗಿ ಇಪ್ಪತ್ತು ಸಾವಿರಕ್ಕೂ

ಮಿಕ್ಕ ಹಣ ಬೇಕಾಗಿತ್ತು. ಊರಲ್ಲೇ ಆಗಲಿ ಕರಾವಳಿಯಲ್ಲೇ ಆಗಲಿ, ಅಷ್ಟು ಹಣ ಸಂಗ್ರಹಿಸುವದು ಸಾಧ್ಯವಿಲ್ಲ ಎಂದು ಸಭೆಯಲ್ಲಿ ವ್ಯಕ್ತವಾದ ನಂತರ, ಸಭೆಯು ಮುಂಬಯಿಗೆ ತಮ್ಮವರನ್ನು ಕಳಿಸಿ, ಅಲ್ಲಿ ತಮ್ಮವರಿಂದ ವಂತಿಗೆ ಎತ್ತಿದರೆ ಹಣ ಕೂಡಬಹುದು ಎಂಬ ಅಭಿಪ್ರಾಯಕ್ಕೆ ಬಂದಿತು. ಭೈರ ಗುರಿಕಾರ, ನರ್ಸೀಮ ಗುರಿಕಾರರನ್ನು ಮುಂಬಯಿಗೆ ಕಳಿಸುವದು ಎಂದು ತೀರ್ಮಾನಿಸಿತು. ಸಭೆಯಲ್ಲಿಯ ಕೆಲವು ವಿದ್ಯಾವಂತ ಯುವಕರು ದೇವಸ್ಥಾನಕ್ಕೆ ಸೇರಿದ ಎರಡು ಸಾವಿರ ರೂಗಳು ಎಲ್ಲಿವೆ ಎಂದು ಪ್ರಶ್ನೆ ಎತ್ತಿದರು. ಭೈರ ತನ್ನಲ್ಲಿವೆ ಎಂದು ಹೇಳಿ ಸಕಾಲಕ್ಕೆ ಕೊಡುವದಾಗಿ ತಿಳಿಸಿದ. ಆಗ ಆತನ ಹತ್ತರ ದೇವಾಲಯದ ಹಣ ಇದ್ದಿರಲೇ ಇಲ್ಲ; ತಿಂದು ಹಾಕಿದ್ದ. ಮುಂಬಯಿಯಲ್ಲಿ ವಂತಿಗೆ ಹೇಗೆ ಸಂಗ್ರಹಿಸುವದು ಎಂಬ ಬಗ್ಗೆ ಕೂಡ ಚರ್ಚೆ ಆಗಿ, ರಶೀತಿ ಕೊಟ್ಟೇ ವಂತಿಗೆ ಸಂಗ್ರಹಿಸಬೇಕೆಂದಾಯಿತು. ಭೈರ ನರ್ಸೀಮರ ಕೈಕಟ್ಟಿ ಹಾಕಿದಂತಾಯಿತು. ಆದರೆ ಇವರು ಇಬ್ಬರೂ ಕದೀಮರು. ತಮಗೆ ಕೊಟ್ಟಂಥ ರಶೀತಿ ಪುಸ್ತಕಗಳಂತೇ ಇರುವ ಬೇರೆ ರಶೀತಿ ಪುಸ್ತಕಗಳನ್ನು ಬೇರೆಡೆ ಮುದ್ರಿಸಿಕೊಂಡು ಕಳ್ಳ ಸಂಗ್ರಹ ಮಾಡುವದಾಗಿ ತೀರ್ಮಾನಿಸಿಕೊಂಡರು. ತಾವಿಬ್ಬರೇ ಮುಂಬಯಿಗೆ ಹೋಗುವವರಾದ್ದರಿಂದ ಈ ಕಾಯಕ ಬಹಿರಂಗವಾಗಲಾರದೆಂದೂ ಭಾವಿಸಿದರು.

ಇವರು ಮುಂಬಯಿಗೆ ಹೊರಟು ನಿಂತ ಸುದ್ದಿ ಕೇಳಿದ ಸೋಮಕ್ಕ ಭೈರ ಗುರಿಕಾರನಲ್ಲಿಗೆ ಬಂದಳು. ಮುಂಬಯಿಯಲ್ಲಿ ಹೇಗಾದರೂ ಮಾಡಿ ಸಂಜೀವನ ವಿಳಾಸ ಪತ್ತೆ ಹಚ್ಚಿ, ಆತ ಹಂಸಾಳನ್ನು ಒಪ್ಪಿಸಿಕೊಳ್ಳುವಂತೆ ಮಾಡು ಎಂದು ದುಂಬಾಲ ಬಿದ್ದು ದಾರಿ ಖರ್ಚಿಗೆಂದು ಐವತ್ತು ರೂಗಳನ್ನು ಆತನ ಕೈಗೆ ತುರುಕಿದಳು. ಅಲ್ಲದೆ ನರ್ಸೀಮನಿಗೂ ಇಪ್ಪತ್ತೈದು ರೂ. ಕೊಟ್ಟಳು.

ಭೈರ—ನರ್ಸೀಮ ಇಬ್ಬರೂ ಮುಂಬಯಿಯನ್ನೇನೋ ತಲುಪಿದರು. ಆದರೆ ಸಂಜೀವನ ವಿಳಾಸ ಪತ್ತೆ ಹಚ್ಚಲು ಎರಡು ವಾರಗಳ ಕಾಲವೇ ಬೇಕಾಯಿತು. ವಿಳಾಸ ತಿಳಿದ ಕೂಡಲೇ ಅವರು ಸಂಜೀವನ ಆಫೀಸಿಗೆ ತೆರಳಿದರು. ಜವಾನ ಅವರನ್ನು ಸಂಜೀವನ ಕೋಣೆಯಲ್ಲಿ ಕರೆತಂದ ಕೂಡಲೇ ಸಂಜೀವ ಅವರನ್ನು ಸ್ವಾಗತಿಸಿದ.

"ಏನು ಗುರಿಕಾರರಿಬ್ಬರೂ ಬಂದಿದ್ದೀರಿ ?"

"ಹೀಗೆ ನಿಮ್ಮನ್ನೆಲ್ಲ ನೋಡಿಕೊಂಡು ಹೋಗೋಣ ಅಂತ ಬಂದಿದ್ದೇವೆ."

"ಬಂದು ಎಷ್ಟು ದಿನ ಆಯಿತು."

"ಎರಡು ವಾರ ಆಗ್ತಾ ಬಂತು."

"ಇಲ್ಲಿ ಏನು ತೊಂದರೆ ಆಗ್ಲಿಲ್ವಲ್ಲ ?"

"ಇಲ್ಲಪ್ಪ, ಎಲ್ಲಿ ಹೋದಲ್ಲಿ ನಮ್ಮ ಹುಡುಗರು ಆದರದ ಸ್ವಾಗತಾನೆ ನೀಡತಾರೆ."

"ಸರಿ, ಉದ್ದೇಶ ಇನ್ನೂ ಸ್ಪಷ್ಟವಾಗಲಿಲ್ಲ ?"

"ಕನಕಂಪಾಡಿಯ ಮಾರಿಗುಡಿಯ ಜೀರ್ಣೋದ್ಧಾರಕ್ಕಾಗಿ ಹಣ ಸಂಗ್ರಹಿಸಲು ಬಂದಿದ್ದೇವೆ. ನಿಮ್ಮ ಆಫೀಸಿನಲ್ಲಿ ಆದಷ್ಟು ಕೂಡಿಸಿಕೊಡಬೇಕು."

"ಹೀಗೊ" ಎಂದು ಸಂಜೀವ ತಾನು ಹತ್ತು ರೂ.ಗಳನ್ನು ತೆಗೆದಿತ್ತು. ಅವರು ರಶೀತಿ ಕೊಟ್ಟರು. ಜಗನ್ನಾಥಮಾವನ ಹತ್ತರ ಇವರನ್ನು ಸಂಜೀವ ಕರೆದೊಯ್ದರೆ, ಆತ ಇವರನ್ನು ಟೀಕಿಸಿ ನಾಲ್ಕು ರೂ. ಕೊಟ್ಟ. ಗುರಿಕಾರರಿಗೆ ಜಗನ್ನಾಥನ ವರ್ತನೆಯಿಂದ ಬೇಜಾರಾಗಿ ಹೊರಡುವದರಲ್ಲಿದ್ದಾಗ ಸಂಜೀವ ಅವರನ್ನು ಮ್ಯಾನೇಜರ ಮುಹತಾರ ಹತ್ತರ ಒಯ್ದ. ಅವರು ಇಪ್ಪತ್ತೈದು ರೂ.ಗಳನ್ನು ಕೊಟ್ಟರು. ನರ್ಸೀಮ ಕೊಟ್ಟ ರಶೀತಿ ನೋಡಿ ನಕ್ಕರು, ಅದರ ನಂಬರು ೪೨೦ ಇದ್ದದ್ದರಿಂದ.

ಅಲ್ಲಿಂದ ಹೊರ ಬಂದ ಕೂಡಲೆ ಭೈರ "ಸಂಜೀವ, ನೀನು ನಮ್ಮೂರ ಹುಡುಗಿಯನ್ನು ಲಗ್ನವಾಗಿದ್ದು ಮರೆತೇ ಬಿಟ್ಟೆಯಾ?" ಎಂದು ಕೇಳಿದ.

"ನಾಲ್ಕೈದು ವರ್ಷಗಳ ನಂತರ ಏಕೆ ನಿಮಗೆ ಈ ಆಸಕ್ತಿ" ಎಂದು ಸಂಜೀವ ವಿಚಾರಿಸಿದ.



ರುಚಿಕರ, ಪುಷ್ಟಿಕರ
ಬ್ರಿಟಾನಿಯಾ ಗ್ಲಾಕ್ಸೋ ಬಿಸ್ಕಿಟ್
BRITANNIA
Glaxo
BISCUITS
ಬೆಳೆಯುವ
ಮಕ್ಕಳಿಗೆ ಸ್ವಾದಿಷ್ಟ
ಸಂಗಾತಿ
ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ

"ಹೆಂಡತಿ ಇದ್ದಾಳೆ. ಅತ್ತೆ ಮಾವ ಇದ್ದಾರೆ ಯೋಗಕ್ಷೇಮ ಕೇಳಬೇಕೊ ಬೇಡವೊ?"

"ನಾನದೆಲ್ಲ ಮರೆತು ಬಿಟ್ಟಿದ್ದೇನೆ. ವೃಥಾ ನನ್ನನ್ನು ಕೆಣಕಬೇಡಿ."

"ಹಾಗೆಂದರೆ ಹೇಗೆ ಸಂಜೀವಾ! ನೀನು ಒಲ್ಲೆ ಎಂದರೆ ನಿನ್ನ ಅತ್ತೆಮಾವ ನಿನ್ನ ಹೆಂಡತಿಯನ್ನು ನಿನ್ನ ಮನೆಬಾಗಿಲಿಗೆ ತಂದಿಳಿಸಿ ಹೋಗುತ್ತಾರೆ ತಿಳೀತಾ."

ಸಂಜೀವನಿಗೂ ಸಿಟ್ಟು ತಡೆಯಲಾಗಲಿಲ್ಲ. ಮೇಜಿನ ಡ್ರಾಅರ್‌ನ್ನು ಎಳೆದು ಎರಡು ಆಮಂತ್ರಣ ಪತ್ರಿಕೆಗಳನ್ನು ತೆಗೆದು ಇವರ ಕೈಗಿತ್ತು.

"ನಾನು ನನ್ನ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಲಿದ್ದೇನೆ. ಹಳೆಯದನ್ನು ಕೆದಕಬೇಡಿ, ನನಗೆ ಹೊತ್ತಾಯಿತು. ಕ್ಷಮಿಸಿ ಎಂದು ಹೊರಟೇ ಹೋದ.

ಗುರಿಕಾರರಿಬ್ಬರೂ ಅವಾಕ್ಕಾದರು.

ಅವರು ಆ ಆಮಂತ್ರಣಪತ್ರಿಕೆ ಓದಿಸಿ ನೋಡಿದ ನಂತರ ಸಂಜೀವನ ಈ ಲಗ್ನವನ್ನು ನಿಲ್ಲಿಸ ಬೇಕಾದರೆ ಊರಿಂದ ಹಂಸಾಳನ್ನು ಆಕೆಯ ತಾಯ್ತಂದೆಗಳನ್ನು ಇಲ್ಲಿಗೆ ಕರೆಸಬೇಕು ಎಂದು ನಿರ್ಧರಿಸಿ ಊರಿಗೆ ತಿಮ್ಮಪ್ಪನಿಗೆ ಎಲ್ಲ ವಿಷಯ ತಿಳಿಸಿ, ಹಂಸಾಳೊಂದಿಗೆ ಬೇಗನೆ ಮುಂಬಯಿಗೆ ಬಂದು ಬಿಡಬೇಕು ಎಂದು ಪತ್ರ ಬರೆದರು.

ಅಲ್ಲಿಗೇ ಅವರ ಚಟುವಟಿಕೆ ನಿಲ್ಲಲಿಲ್ಲ. ಸಂಜೀವನ ಬೀಗರಾದ ಶ್ರೀನಿವಾಸನ ಮನೆಯನ್ನು ಹುಡುಕಿಕೊಂಡು ಹೋದರು. ಇವರನ್ನು ಕಂಡಾಗಲೇ ಶ್ರೀನಿವಾಸನ ಮನೆಯವರಿಗೆ ಭಯ ಉಂಟಾಯಿತು. ಸದಾನಂದನೇ ಮುಂದಾಗಿ ವಿಚಾರಿಸಿಕೊಂಡಾಗ ಮಾರಿಗುಡಿ ಜೀರ್ಣೋದ್ಧಾರ ನಿಧಿ ಸಂಗ್ರಹಕ್ಕಾಗಿ ತಾವು ಬಂದಿರುವದಾಗಿ ಅವರು ತಿಳಿಸಿದರು. ಸದಾನಂದ ಹತ್ತು ರೂಪಾಯಿ ನೋಟನ್ನು ಕೊಟ್ಟ. ನಶೀಮ ರಶೀತಿ ಕೊಟ್ಟರೂ ಇವರು ಅಲ್ಲಿಂದ ಏಳುವ ಲಕ್ಷಣ ಕಾಣಲಿಲ್ಲ.

ವಿಚಾರ ಕೆದರಿ ಕೆದರಿ ಕೇಳಿ ಆತನಿಗೆ ಈಗಾಗಲೇ ವಿವಾಹವಾಗಿದೆ. ಆ ಹುಡಿಗೆಯ ತಂದೆಗೆ ಯಾರೊ ಸಂಜೀವನ ಈ ಲಗ್ನ ವಿಚಾರ ತಿಳಿಸಿರುವದರಿಂದ ಅವರು ಹುಡಿಗೆಯೊಂದಿಗೆ ಇಷ್ಟರಲ್ಲೇ ಮುಂಬಯಿಗೆ ಬರುವ ನಿರೀಕ್ಷೆ ಇದೆ ಎಂದೆಲ್ಲ ಹೇಳಿ ಹೊರಟು ನಿಂತರು. ತಮ್ಮ ಕೆಲಸ ಮಾಡಿದ ಸಮಾಧಾನ ಅವರಿಗೆ.

ಅವರು ತೊಲಗಿದ ಕೂಡಲೆ ಶ್ರೀನಿವಾಸ— ಸದಾನಂದರು ಗಾಬರಿಯಿಂದಲೇ ಸಂಜೀವನ ಮನೆಗೆ ಬಂದರು. ಇವರು ಹೀಗೆ ಹಠಾತ್ತಾಗಿ ಬಂದುದನ್ನು ನೋಡಿ ಸಂಜೀವನಿಗೆ ದಿಗಿಲು.

"ಕನಕುಪಾಡಿಯ ಇಬ್ಬರು ಗುರಿಕಾರರು ನಮ್ಮ ಮನೆಗೆ ಬಂದಿದ್ದರು." ಎಂದು ಸದಾನಂದ ತನ್ನ ಜೇಬಿನಿಂದ ರಶೀತಿ ತೆಗೆದು ಸಂಜೀವನಿಗಿತ್ತ.

"ನಮ್ಮಲ್ಲಿಗೂ ಬಂದಿದ್ದರು. ನಂತರವೇ ನಿಮ್ಮಲ್ಲಿ ಬಂದಿರಬೇಕು. ಎಂಥ ಚಂಡಾಲರು"

"ಅವರು ಏನೇನೊ ಹೇಳಿದರು. ನಿಮ್ಮ ಮೊದಲ ಹೆಂಡತಿ ಮುಂಬಯಿಗೆ ಬಂದು ನಿಮ್ಮ ವಿವಾಹ ನಿಲ್ಲಿಸಬಹುದು ಎಂದೂ ಆಡಿದರು. ಹಾಗಾದರೆ ನಮಗೆ ಅವಮಾನ ಅಲ್ಲವೆ?"

"ನನ್ನಿಂದ ಮದುವೆ ನಿಂತು ಹೋಗುವದಿಲ್ಲ. ನಾನು ಅಂಥ ಹೇಡಿ ಅಲ್ಲ, ಪುನಃ ಅವರೇನಾದರೂ ಬಂದರೆ ಅವರ ಮುಖಕ್ಕೆ ಚನ್ನಾಗಿ ಮಂಗಳಾರತಿ ಮಾಡಿ ಕಳಿಸಿ. ಸದಾನಂದ, ಈ ರಶೀತಿ ನನ್ನಲ್ಲಿರಲಿ"

"ಏಕೆ."

"ಅವರು ನಮ್ಮ ಮೊಹತಾರಿಗೂ ಇದೇ ನಂಬರಿನ ರಶೀತಿ ಕೊಟ್ಟಿದ್ದಾರೆ. ಇದರಲ್ಲೇನೊ ಗೂಢ ಇದೆ. ದೇವಾಲಯ ಜೀರ್ಣೋದ್ಧಾರ ಸಮಿತಿಯವರಿಗೆ ಬರೆದು ತಿಳಿಸೋಣ," ಹಾಗೇ ಆಗಲೆಂದು ಅವರು ಸಮಾಧಾನದಿಂದ ತೆರಳಿದರು.

ಗುರಿಕಾರರಿಬ್ಬರೂ ಮುಂಬಯಿವರೆಗೆ ಬಂದು ಇಂಥ ದ್ರೋಹ ಮಾಡ್ತಾರೆಯೆ ಎಂದು, ಸಂಜೀವನ ತಾಯಿ ಐತಕ್ಕ ಬೆರಗಾದಳು.

ಸಂಜೀವನ ಮದುವೆ ಇನ್ನೂ ಎರಡು ದಿನ

ಇದೆ ಎನ್ನುವಾಗ ಭೈರ, ನರ್ಸೀಮ, ತಿಮ್ಮಪ್ಪ ಸೋಮಕ್ಕ. ಹಂಸಾ ಬೆಳಗಿನಲ್ಲಿಯೇ ಸಂಜೀವನ ಮನೆಗೆ ಪ್ರತ್ಯಕ್ಷರಾದರು.

ಸಂಜೀವ ಅವರನ್ನು ಒಳಗೆ ಕರೆದ. ಅವರಾಗಿಯೇ ತಮ್ಮ ಮನೆವರೆಗೆ ಬಂದಿದ್ದರಿಂದ ಅವರ ಸಾಂಖಿಕ್ಕೆ ಉಳಿಯಲು ಇದೇ ಸುಸಂದರ್ಭ ಎಂದು ಐತಕ್ಕ ಅಂದುಕೊಂಡಳು. 'ಅವರೇನೆ ಅಂದರೂ ನೀನು ಮಾತಾಡಬೇಡ' ಎಂದು ಸಂಜೀವ ತನ್ನ ತಾಯಿಗೆ ಎಚ್ಚರಿಸಿದ. ಆಕೆ ಒಳಗೆ ಕಾಫೀ ಸಿದ್ಧತೆಗಾಗಿ ಹೋದಳು.

"ಸಂಜೀವಾ ನೀನು ಅಗ್ನಿ ಸಾಕ್ಷಿಯಾಗಿ ಕೈಹಿಡಿದವಳನ್ನು, ಕೆಲ ಕಾರಣಗಳಿಗಾಗಿ ನಾವು ನಿಮ್ಮ ಮನೆಗೆ ಕಳಿಸಿಕೊಟ್ಟಿರಲಿಲ್ಲ. ಅದು ನಮ್ಮ ತಪ್ಪು. ಈಗ ಆಕೆಯನ್ನು ಬಿಡುವದು ಸಮಾಜದ ದೃಷ್ಟಿಯಿಂದ ಅಪರಾಧ. ಆಕೆಯನ್ನು ಸಂತೋಷದಿಂದ ಸ್ವೀಕರಿಸುವದೂ ಇಲ್ಲವೆ ಕೆಳಗೆ ತಳ್ಳುವದೂ ನಿನಗೇ ಸೇರಿದ್ದು," ಎಂದು ತಿಮ್ಮಪ್ಪ ದೈನ್ಯದಿಂದ ಬೇಡಿಕೊಂಡ.

"ಹೌದು, ಈಗ ಹಾಗೇ ಕೆಲವು ಕಾರಣಗಳಿಗಾಗಿ ನಾನೂ ಆಕೆಯನ್ನು ಸ್ವೀಕರಿಸಲು ಅಸಮರ್ಥ. ಅಷ್ಟು ದೂರದಿಂದ ನಿಮ್ಮನ್ನು ಯಾರೋ ಕರೆಸಿದ್ದಾರೆ. ಬಂದಿದ್ದೀರಿ. ನಾಡದು ನನ್ನ ಮದುವೆ. ನೀವೆಲ್ಲ ಹಿರಿಯರು ಇದ್ದು ಆಶೀರ್ವದಿಸಿ ಹೋಗಬಹುದು."

"ಮಗಾ, ನೀನು ನನ್ನನ್ನು ಇನ್ನೂ ಅರ್ಥ ಮಾಡಿಕೊಂಡಿಲ್ಲ" ಎಂದು ಸೋಮಕ್ಕ ಮೆಲ್ಲಗೆ ಪ್ರಾರಂಭಿಸಿದಳು.

"ನನಗೆಲ್ಲ ಅರ್ಥವಾಗಿದೆ"

"ಮದುವೆ ಆದಾಗ ಯಾಕೆ ನಾವು ಹುಡುಗೀನ್ನ ಕಳಿಸಲಿಲ್ಲ ಅಂದರೆ..."

"ಆಗ ನಾನು ಹುಚ್ಚನಾಗಿದ್ದೆ."

"ಹಾಗೇ ಹೇಳಬೇಡ ಸಂಜೀವ. ಆಗ ನಿನ್ನ ಹೆಂಡತಿ ಓದುತ್ತಿದ್ದಳಲ್ಲವೆ? ಓದು ಮುಗಿದ ಮೇಲೆ..."

"ನೋಡಿ ತಾಯಿ, ಮಾತಾಡ್ತಾ ಹೋದರೆ [illegible] ಹೇಳಬೇಕಾಗ್ತದೆ."

"ನೀನು ಏನು ಹೇಳಿದರೂ ನಾವು ಕೇಳ್ತೇವೆ ಸಂಜೀವಾ. ನಮ್ಮ ಮಗಳನ್ನು ಸ್ವೀಕರಿಸು. ನೀನೂ ಕೈಬಿಟ್ಟಿಯಾದರೆ..."

ಅಷ್ಟರಲ್ಲಿ ಕೋಣೆಯಲ್ಲಿ ಹಂಸಾ ಬಿಕ್ಕಿ ಬಿಕ್ಕಿ ಅಳುವ ದನಿ ಕೇಳಿತು. ಸಂಜೀವ ಆಕೆಯ ದುಃಖದಿಂದ ಕರಗಿದವನಾಗಿ, ಆಕೆಯನ್ನು ಒಪ್ಪಿಕೊಂಡು ನಾಡಿದಿನ ಮದುವೆ ನಿಲ್ಲಿಸಿಬಿಡೋಣವೆ ಎಂದು ಒಮ್ಮೆ ಆಲೋಚಿಸಿದ. ಆದರೆ ಸಂಧ್ಯಾಳತ್ತ ಮನಸು ಎಳೆಯುತ್ತಿತ್ತು. ಅಷ್ಟರಲ್ಲಿ ತಾಯಿ ಕಾಫಿ ತಂದಿಟ್ಟಳು. ಆದರೆ ಅವರೆಲ್ಲರ ಗಮನ ಸಂಜೀವನ ಮೇಲಿತ್ತೇ ವಿನಾ ಕಾಫಿ ಮೇಲಿರಲಿಲ್ಲ.

"ಸಂಜೀವ, ನಮ್ಮ ಮಾತು ಕೇಳದೆ ನೀನು ಲಗ್ನ ಮಾಡಿಕೊಂಡರೆ ಮದುವೆ ಮಂಟಪಕ್ಕೇ ಬಂದು ಬಿಡುತ್ತೇವೆ. ಆಗ ನಿನಗೂ ಶ್ರೇಯಸ್ಸಿಲ್ಲ. ಬಂದವರಿಗೂ ಚಂದವಲ್ಲ," ಎಂದು ಭೈರ ಅಬ್ಬರಿಸಿದ.

"ಇದು ಕನಕಂಪಾಡಿಯಲ್ಲ, ಮುಂಬಯಿ



"ನನ್ನ ಕಡೇ ಆಸೆ ಒಂದಿದೆ ಡಾಕ್ಟ್ರೇ... ಸಾಯೋ ಮುಂದೆ ಇನ್ನೊಬ್ಬ ಒಳ್ಳೇ ಡಾಕ್ಟ್ರನ್ನ ನೋಡಬೇಕು ಅನ್ನೋದು..."

ಗುರಿಕಾರರೇ."

"ಇಲ್ಲೂ ನಮ್ಮ ಧರ್ಮವೇ ಅಲ್ಲವೇನೊ. ನೀನು ಒಪ್ಪದಿದ್ದರೆ ಹದಿನಾಲ್ಕು ಪಟ್ಣಗಳಿಂದ ಬಹಿಷ್ಕಾರ ಹಾಕಿಸ್ತೇವೆ."

"ಹದಿನಾಲ್ಕು ಪಟ್ಣಗಳಿಗೇ ಬಹಿಷ್ಕಾರ ಹಾಕಿ ಬಂದವ ನಾನು."

"ನೀನು ಎಲ್ಲ ಮೀರಿ ಮದುವೆ ಆದರೆ ಹೆಣ್ಣನ್ನು ನಿನ್ನ ಬಾಗಿಲಲ್ಲೇ ಬಿಟ್ಟು ಹೋಗ್ತೇವೆ," ಎಂದು ಆರ್ಭಟಿಸಿದಳು ಸೋಮಕ್ಕ.

"ಹಾಗಿದ್ದರೆ ಕಟ್ಟಿ ಮಾತಾಡಿಯೇ ಬಿಟ್ಟು ಹೋಗಬೇಕೇ?" ಎಂದ ತಿಮ್ಮಪ್ಪ.

"ಈಗ ಕಠೋರಳಾಗದಿದ್ದರೆ ನಿನ್ನ ಮಗಳ ಭವಿಷ್ಯ ಹಾಳಾಗುತ್ತೆ. ಗುರಿಕಾರನಾಗಿ ನಾನು ಹೇಳುತ್ತೇನೆ, ಸಂಜೀವ ಒಪ್ಪಿಕೊಳ್ಳದಿದ್ದರೆ ನಿನ್ನ ಮಗಳನ್ನು ಇಲ್ಲೇ ಬಿಟ್ಟು ಹೋಗೋಣ."

"ಗುರಿಕಾರ, ನಿಮ್ಮ ಹೆಣ್ಣನ್ನು ಬಿಟ್ಟು ಹೋದರೆ ಬೀದೀ ಪಾಲಾಗ್ತಾಳೆಯೋ ಪೊರ್ತಾ ನಮಗೇನೂ ಆಗುವದಿಲ್ಲಾಂತ ಈಗಲೇ ಹೇಳಿ ಬಿಡ್ತೇನೆ" ಎಂದು ಐತಕ್ಕ ಉತ್ತರಿಸಿದಳು.

"ನಾವು ಹಂಸಳನ್ನು ಈಗ ಬಿಟ್ಟು ಹೋಗ್ತೇವೆ. ನೀವು ತೊಂದರೆಕೊಟ್ಟರೋ ಹಣ ಕಲೆಕ್ಶನ್ ಮಾಡಿ ಹೈಕೋರ್ಟ ವರೆಗೂ ಹೋರಾಡ್ತೇನಿ. ಬನ್ನಿ ತಿಮ್ಮಪ್ಪ, ಸೋಮಕ್ಕ" ಎಂದು ಭೈರ ಎದ್ದ. ಆದರೆ ಅವರು ಏಳಲಿಲ್ಲ. ಹಂಸಾ ಬಿಕ್ಕುತ್ತ ಅಳುತ್ತಿದ್ದಳು.

ತಿಮ್ಮಪ್ಪ ಮತ್ತೆ ಎದ್ದು ಸಂಜೀವನ ಹತ್ತಿರ ಏನೋ ಹೇಳಬೇಕೆಂದ. ಹಂಸಾ ನಿಧಾನವಾಗಿ ಎದ್ದು ಹೊರಗೆ ಬಂದು,

"ಬಾ, ಅಪ್ಪ ಹೋಗೋಣ" ಎಂದು ಹೊರಟಳು.

"ಎಲ್ಲಿಗೆ ಮಗೂ?"

"ಊರಿಗೆ ಅಪ್ಪಾ. ಇದುವರೆಗೂ ಇಲ್ಲಿ ನಡದದ್ದೆಲ್ಲ ನೋಡಿದೆ. ಇಂದಿಗೆ ನನ್ನ ದುಃಖ ಶಮನವಾಯಿತಪ್ಪ."

"ಮಗಾ..." ಎಂದ ಭೈರ.

ಬೇಡ. ನೀವು ಏನೇನೋ ಹೇಳಿದಿರಿ. ಇವರು ಹುಚ್ಚ ಅಲ್ಲ ಅಂತ ಇಂದಿಗೆ ಖಂಡಿತವಾಯಿತು. ಈ ಮದುವೆ ನಿಲ್ಲಿಸಿದರೆ ಇನ್ನೊಬ್ಬ ಹೆಣ್ಣಿಗೆ ನೋವಾಗುತ್ತದೆ. ನನ್ನ ಗಂಡ ಸುಖವಾಗಿದ್ದರೆ ಅದೇ ನನಗೆ ಸಂತೋಷ. ಹೋಗೋಣ, ಬನ್ನಿ" ಎಂದು ಹಂಸಾ ಹೊರಟೇ ಬಿಟ್ಟಳು.

ಅವರೆಲ್ಲ ಕಣ್ಮರೆಯಾಗುತ್ತಲೇ ಸಂಜೀವ ತಲೆ ನೋವು ಸಹಿಸದೆ ಮೇಜಿನ ಹಲಗೆಗೆ ತಲೆ ಚಚ್ಚಿಕೊಂಡ.

*

ತಿಮ್ಮಪ್ಪ, ಸೋಮಕ್ಕ, ಹಂಸಾ ಕೂಡಲೇ ಊರಿಗೆ ಹಿಂತಿರುಗಿ ಬಿಟ್ಟರು. ಗುರಿಕಾರರಿಬ್ಬರೂ ಒಂದೆರಡು ವಾರ ಹಣ ಸಂಗ್ರಹದ ನೆವದಿಂದ ಮುಂಬಯಿಯ ಬೀದಿಗಳಲ್ಲಿ ಅಲೆದಾಡಿ ಊರಿಗೆ ಹಿಂತಿರುಗಿದರು. ಸಂಜೀವನ ಸಂಭ್ರಮದ ವಿವಾಹದ ಸುದ್ದಿಯೂ ಇವರ ಕಿವಿಗೆ ಬೀಳದಿರಲಿಲ್ಲ.

ಗುರಿಕಾರರಿಬ್ಬರೂ ಊರು ಸೇರಿದ ನಂತರ ಸಮಿತಿಯವರಿಗೆ ಲೆಕ್ಕ ಒಪ್ಪಿಸಲೆಂದು ಸಭೆ ಸೇರಿಸಿದರು. ಎಲ್ಲ ವಿವರಗಳನ್ನೂ ಒಪ್ಪಿಸಿ ಲೆಕ್ಕಚಾರ ಮುಗಿಸುತ್ತಿದ್ದಾಗ ಒಬ್ಬ ತರುಣ ಎದ್ದ.

"ನನಗೆ ಮಾತಾಡಲು ಅವಕಾಶ ಬೇಕು," ಎಂದು ವಿನಯದಿಂದಲೇ ಕೇಳಿಕೊಂಡ.

"ಎಲ್ಲರೂ ಮಾತಾಡಬಹುದು."

"ಇವರು ಮುಂಬಯಿಗೆ ಹೋಗಿ ಹಣ-ಸಂಗ್ರಹಿಸಿಕೊಂಡು ಬಂದದ್ದಕ್ಕೆ ಕೃತಜ್ಞತೆಗಳು. ಒಂದು ಸಂದೇಹ..."


"ಏನು ಹೇಳಿಬಿಡೊ..."

"ಮುಂಬೈಯಿಂದ ಒಂದು ರಶೀತಿ ನನಗೆ ಬಂದಿದೆ. ಅದರ ಪ್ರಕಾರ ಇಪ್ಪತ್ತೈದು ರೂ. ಜಮಾ ಆಗಬೇಕು. ಆಗಿದೆಯೆ ಅಂತ."

"ಏನು ನಂಬರು ?"

"ನಾಲ್ಕು ನೂರಾ ಇಪ್ಪತ್ತು."

ನರ್ಸಿಮ್ಮ ಗುರಿಕಾರ ಪಾವತಿಪುಸ್ತಕ ಹುಡುಕಾಡಿದ. ಅದರಲ್ಲಿ ಆ ನಂಬರಿನ


ಪ್ರಸಾಧನಗಳು ನಿಮ್ಮ
ತ್ವಚೆಯ ದೋಷಗಳನ್ನು
ಬರಿಯ ಮರೆಮಾಚಬಹುದು.

ಜವಾ ಇತ್ತು. ನರ್ಶೀಮ ನಡುಗಹತ್ತಿದ.

"ಏನಾಗಿದೆಯೊ ನರ್ಶೀಮ ?" ಎಂದ ಭೈರ

"ಏನೋ ತಪಾವತಿ ಆಗಿದೆ."

"ತಪಾವತಿ ಹೇಗಾಗುತ್ತೆ ಗುರಿಕಾರರೆ. ಈ ರಶೀತಿ ಮೆಹತಾರಿಗೆ ಬರೆದಿದ್ದೀರಿ. ನಿಮ್ಮ ಕೈಲಿರುವದು ಶ್ರೀನಿವಾಸಗೆ ಎಂದು. ಎರಡೂ ರಶೀತಿಗಳು ಬೇರೆಬೇರೆ ಕಡೆ ಪ್ರಿಂಟಾಗಿವೆ."

ಉಳಿದವರಿಗೆ ಇನ್ನೂ ಅರ್ಥವಾಗದಿದ್ದರೂ ಭೈರ–ನರ್ಶೀಮರಿಬ್ಬರೂ ಕಂಗಾಲಾಗಿದ್ದರು. ಆ ತರುಣನನ್ನು ಉಳಿದವರು ಹಲವಾರು ಪ್ರಶ್ನೆಗಳಿಂದ ವಿಚಾರಿಸಿದಾಗಲೆ ಸತ್ಯ ಬಯಲಾಗುತ್ತ ಬಂತು. ಆಗ ಅವರು ನೇರವಾಗಿ ಗುರಿಕಾರನನ್ನೇ ಪ್ರಶ್ನಿಸತೊಡಗಿದರು.

"ನಿಮ್ಮಂಥವರಿದ್ದದ್ದರಿಂದಲೇ ಗ್ರಾಮಕ್ಕೆ ಒಳ್ಳೆಯದಾಗಲಿಲ್ಲ. ಎಷ್ಟು ಹಣ ತಿಂದು ಹಾಕಿದ್ದೀರಿ."

"ಯಾವ ಪ್ರೆಸ್ಸಿನಲ್ಲಿ ಎಷ್ಟೆಷ್ಟು ರಶೀತಿ ಪ್ರಿಂಟು ಮಾಡಿಸಿದ್ದೀರಿ"?

ಭೈರ ದಿಕ್ಕೆಟ್ಟವನಾಗಿ "ನನಗೇನೂ ಗೊತ್ತಿಲ್ಲಪ್ಪೊ, ಎಲ್ಲಿ ನರ್ಶೀಮನ್ನ ಕೇಳಿ" ಎಂದು ಕೂಗಿದ.

"ನನಗೇನು ಗೊತ್ತು, ಭೈರ ಹೇಳಿದ ಹಾಗೇ ನಾನು ಮಾಡಿದೆ," ಎಂದ ನರ್ಶೀಮ.

ಕೊನೆಗೆ ಸಭೆಯವರೇ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದರು. ಅವರೆಲ್ಲ ಗುರಿಕಾರರನ್ನು ಸುತ್ತುಗಟ್ಟಿದರು. ಒಬ್ಬ ಕೂಗಿ ಹೇಳಿದ.

"ಗುರಿಕಾರರೇ, ನೀವಿಬ್ಬರೂ ಸುಳ್ಳ ಲೆಕ್ಕ ತಯಾರಿಸಿ, ನಕಲಿ ರಶೀತಿ ಪುಸ್ತಕ ಪ್ರಿಂಟ ಮಾಡಿಸಿ ಸಾವಿರಾರು ರೂ.ಗಳನ್ನು ತಿಂದು ಹಾಕಿದ್ದೀರಿ. ಒಂದು ವಾರದೊಳಗಾಗಿ ಎಲ್ಲ ಪುಸ್ತಕಗಳನ್ನೂ ಹಣವನ್ನೂ ಗ್ರಾಮ ಸಭೆಗೆ ಒಪ್ಪಿಸಬೇಕು. ಇಲ್ಲದಿದ್ದರೆ ನಿಮ್ಮನ್ನು ಪೋಲೀಸರಿಗೆ ಒಪ್ಪಿಸಲಾಗುವದು. ನೀವಿಬ್ಬರೂ ಗುರಿಕಾರರಾಗಲು ಅಯೋಗ್ಯರಿದ್ದೀರಿ. ನಿಮಗೆ ಈ ಸಭೆ ಬಹಿಷ್ಕಾರ ಹಾಕುತ್ತದೆ. ಊರಿನ ಯಾವ ಸಭೆ–ಕೂಟ–ಜಾತ್ರೆ–ಸಮಾರಂಭಗಳಿಗೂ ನಿಮಗೆ ಪ್ರವೇಶವಿಲ್ಲ. ಹದಿನಾಲ್ಕು ಪಟ್ಟಣಗಳಿಗೆ ಈ ವಿಷಯ ತಿಳಿಸುತ್ತೇವೆ. ನಮ್ಮ ಗ್ರಾಮದ ಮಾರಿಯಮ್ಮ ಎಲ್ಲ ಸೇರಿ ನಿಮಗೆ ಒಳ್ಳೆಯದನ್ನು ಮಾಡಲಿ..."

ತೋಳ ಕುಣಿಗೆ ಬಿದ್ದರೆ ಆಳಿಗೊಂದು ಕಲ್ಲು !

✡



ಹುಡುಗಿ ಕಣ್ಣು ಮಿಟುಕಿಸುತ್ತಾಳೆಂದರೆ ಏನರ್ಥ? ಅವಳ ಕಣ್ಣಲ್ಲಿ ಏನಾದರೂ ಬಿದ್ದಿರಬೇಕು. ಇಲ್ಲವೆ ಯಾರಾದರೂ ಇರಬೇಕು. —ಫಿಬ್ಬರಿ ಮ್ಯಾಗಿ

ನಾಲ್ಕು ಜನರು ನಿಮ್ಮನ್ನು ಮೆಚ್ಚಬೇಕೆಂದು ಇಚ್ಛಿಸುವ ಮೊದಲು ನಾಲ್ಕು ಜನರನ್ನು ಮೆಚ್ಚುವುದನ್ನು ನೀವೇ ಮೊದಲು ಕಲಿತುಕೊಳ್ಳಿ. ಗಾಬ್‌ಸನ್

This magazine owned by the Karnataka Patrika Private Ltd. is printed & published by Bhomeshwar Das Kohli at the Samyukta Karnatak Press· Koppikar Road, Hubli. Representatives: Bombay: V. S. Mani, Phone: 472794. Calcutta H· Muzamdar: Phone: 46–4238; Madras: P. N. Srinivasan, Phone: 83748; New Delhi: P. P. Chopra, Phone: 324130





CLICK-II

KASTURI PRICE: 1·25 Regd. No. KRNG 43
Registered with the Registrar of Newspapers for India under No. 3633/57